TIGHT BINDING BOOK

UNIVERSAL LIBRARY
OU_200110
UNIVERSAL LIBRARY

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ

# ಭೀಷಣ ಸಾಹಸ!

( ಪತ್ತೇದಾರಿ ಕಥೆ )

ಲೇಖಕ:

ಜಿ. ಆರ್. ಮಹಾಬಲಭಟ್ಟ,

ವೇದಾಂತ ಶಿರೋಮಣಿ, ವೇದಾಂತ ವಿಶಾರದ,

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳಬಾಗಿಲು.

ಪ್ರಕಾಶಕ:

ಭಿ. ಪ. ಕಾಳೆ,

ಶ್ರೀ ಶೇಷಾಚಲ ಗ್ರಂಥಮಾಲೆ,

ಆನಂದವನ-ಅಗಡಿ

೧೯೪೦

ಬೆಲೆ ೧೪ ಆಣೆ

# ಭೀಷಣ ಸಾಹಸ

## ಇದರಲ್ಲೇನಿದೆ?


| ಪ್ರಕರಣ | | ಪುಟ |
|---|---|---|
| ೧ | ನೋಟ ಬುಕ್ಕಿನ ಕಳವು | ೧ |
| ೨ | ರತ್ನಗಳ ಕಳವು | ೩೧ |
| ೩ | ಕೈಬೆರಳುಗಳ ರಹಸ್ಯಮಯ ಅಚ್ಚು | ೩೯ |
| ೪ | ಹಾರ್ಕರನ ಫಜೀತಿ | ೫೪ |
| ೫ | ಮೋಡಿನನ ಮನೆ | ೮೧ |
| ೬ | ನೋರಳ ಆಪತ್ತಿ | ೮೭ |
| ೭ | ರೇಡಿಯಮ್ಮಿನ ಅಪಹರಣ | ೯೭ |
| ೮ | ದಿ ಓಲ್ಡ್ ಸ್ವೈನ | ೧೧೮ |
| ೯ | ಗಾಯಗೊಂಡ ಮನುಷ್ಯ | ೧೨೭ |
| ೧೦ | ರೇಡಿಯಮ್ಮಿನ ಪ್ರಾಪ್ತಿ | ೧೩೮ |
| ೧೧ | ಒಬ್ಬ ಸಾಕ್ಷಿದಾರನ ಕೊಲೆ | ೧೪೨ |
| ೧೨ | ಟಾಮಿಯ ಪಲಾಯನ | ೧೫೨ |
| ೧೩ | ರಹಸ್ಯಭೇದ | ೧೬೬ |
| ೧೪ | ಉಪಸಂಹಾರ | ೧೭೪-೧೮೦ |

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ.

# ಭೀಷಣ ಸಾಹಸ!

( ಪತ್ತೇದಾರಿ ಕಥೆ )

## (೧)

"ಅದಾರು ನಿಂತಿರುವವರು ಅಲ್ಲಿ? ಇಬ್ಬರಿರುವರು. ಹುಂ, ಒಬ್ಬಳು ಹೆಂಗಸು, ಇನ್ನೊಬ್ಬನು ಗಂಡಸು. ಓಹೋ! ತಿಳಿಯಿತು. ಡಾಕ್ಟರ ಜೆಫ್ರೈಗ್ರೆ ಮತ್ತು ನರ್ಸ್ ನೋರಾ ಎಂಡರ್ಬಿ. ಏನೋ ಗುಟ್ಟಿರಬಹುದು; ಆದುದರಿಂದಲೇ ಆಚೆ ಈಚೆ ನೋಡುತ್ತಾ ಎಚ್ಚರವಿಟ್ಟು ಮಾತಾಡುತ್ತಿರುವರು. ಹುಂ, ಇದೊಂದು ಒಳ್ಳೇದೇ ಆಯಿತು. ಇವರಿಬ್ಬರ ಗುಟ್ಟೇನೆಂಬುದನ್ನು ನಾನು ಬಲ್ಲೆನು. ಇಲ್ಲಿಯೇ ಅಡಗಿ ಕುಳಿತು ಎಲ್ಲವನ್ನೂ ಆಲಿಸುವೆನು." ಎಂದು ಮನದೊಳಗೇ ಹೇಳಿಕೊಳ್ಳುತ್ತ, ಒಂದು ವ್ಯಕ್ತಿಯು ಬೇಗ ಬೇಗನೆ ನಡೆದು ಮೂಲೆಯೊಂದರಲ್ಲಿ ಅಡಗಿ ಕುಳಿತಿತು.

"ಆತನು ದೊಡ್ಡ ವಿದ್ವಾಂಸನು ಮತ್ತು ಕೆಲಸದಲ್ಲಿ ಬಹಳ ಜಾಣನು; ಆದರೆ ನಾನು ಮಾತ್ರ ಅವನನ್ನು ತಿರಸ್ಕರಿಸದಿರಲಾರೆನು." ಹೀಗನ್ನುತ್ತಾ ಜೆಫ್ರೈ ಗ್ರೇ ಏನೋ ಒಂದು ತರಹದಲ್ಲಿ ಮುಖವನ್ನು ತಿರುಗಿಸಿದನು.

ಆಗಲವನು ವೆಂಟ್‌ವರ್ತ್ ಫೌಂಡೇಷನ್ ಆಸ್ಪತ್ರೆಯ ಉದ್ಯಾನವನದ ಉಪ್ಪರಿಗೆಯಲ್ಲಿ ನಿಂತು ನಟ್ಟದೃಷ್ಟಿಯಿಂದ ಎದುರಿಗಿರುವ ಥೇಮ್ಸ್ ನದಿಯ ಕಡೆಗ ನೋಡುತ್ತಿದ್ದನು. ಸಿಟ್ಟಿನಿಂದ ಅವನ ಎರಡು ಕಣ್ಣುಗಳೂ ಕೆಂಪಾಗ ತೊಡಗಿದ್ದವು.

ನರ್ಸ್ ನೋರಾ ಎಂಡರ್ಬಿಯು ಅವನ ಬಳಿಯಲ್ಲಿಯೇ ನಿಂತಿದ್ದಳು. ಡಾಕ್ಟರ್ ಗ್ರೇಯಂತೆ ಅವಳೂ ಆಸ್ಪತ್ರೆಯ ಕೆಲಸಗಾರಳಾಗಿದ್ದಳು.

ಮೇಲಿನ ಮಾತನ್ನು ಕೇಳಿದೊಡನೆಯೇ ಅವಳು ತನ್ನ ಗಂಭೀರ ಮುಖಮಂಡಲವನ್ನು ಡಾಕ್ಟರನ ಕಡೆಗೆ ತಿರುಗಿಸಿ ಬಹಳ ಮೃದುಮಧುರವಾದ ಸ್ವರದಿಂದ ಹೇಳಿದಳು:— 'ಯಾಕೆ, ಜೆಫ್ರೈ! ಹೀಗೇಕೆ ಹೇಳುತ್ತೀ? ಅವನೆಂದರೆ ಒಬ್ಬ ಪ್ರಸಿದ್ಧ ಡಾಕ್ಟರನಿರುವನು. ಅವನ ಕೈಕೆಳಗೆ ಇರುವ ರೋಗಿಗಳೆಲ್ಲರೂ

ಪ್ರಾಯಶಃ ಕ್ರಮವಾಗಿ ಗುಣಹೊಂದದೆ ಹಿಂದಿರುಗುವದಿಲ್ಲ; ಅದಲ್ಲದೆ ಆ ಹನ್ನೊಂದನೆ ನಂಬರಿನ ಮನುಷ್ಯನೂ ಕೂಡ ಇತ್ತೀಚೆಗೆ ಮೆಲ್ಲಮೆಲ್ಲನೆ ಆರೋಗ್ಯದ ದಾರಿಗೆ ಬರತೊಡಗಿರುವನು. ಆ ರೋಗಿಯು ಇನ್ನು ಳಿಯುವ ಆಶೆಯೇ ಇಲ್ಲವೆಂಬ ಅಭಿಪ್ರಾಯವು ಮುಂಚೆ ಡಾಕ್ಟರ್ ಸ್ಟೆಂಟನರಿಗಿದ್ದಿತೆಂದು ನೀನೇ ತಿಳಿದಿರುವಿಯಷ್ಟೆ?''

ಡಾಕ್ಟರ್ ಗ್ರೇ—''ಹೌದು, ಅದರ ಜೊತೆಗೇ ಡಾಕ್ಟರ್ ಸ್ಟೆಂಟನ್ ಹಾಗೆ ಯಾಕೆ ಅಭಿಪ್ರಾಯಪಟ್ಟಿದ್ದರೆಂಬುದನ್ನೂ ನಾನು ಅರಿತಿರುವೆನು. ಅದನ್ನು ನಿನಗೆ ತಿಳಿಸುವದಕ್ಕಾಗಿಯೇ ನಾನೀಗ ನಿನ್ನನ್ನಿಲ್ಲಿಗೆ ಬರಲು ಹೇಳಿದೆನು, ಕೇಳು.

ಇಷ್ಟು ಮಾತನಾಡುತ್ತಿರುವಾಗಲೇ ಡಾಕ್ಟರ್ ಗ್ರೇಯ ಸ್ವರವು ಮೊದಲಿಗಿಂತ ಎಷ್ಟೋ ತೀವ್ರತೆಯನ್ನು ತಾಳಿತು. ಆವೇಶಪೂರ್ಣನಾಗಿ ಹೇಳತೊಡಗಿದನು:—''ಮೋ ಡೀನನು ಈ ಆಸ್ಪತ್ರೆಗೆ ಬರುವದಕ್ಕಿಂತ ಮುಂಚೆಯೇ ಆ ಹನ್ನೊಂದನೇ ನಂಬರಿನ ರೋಗಿಯು ಈ ಆಸ್ಪತ್ರೆಗೆ ಹಾಜರಾಗಿದ್ದನು. ಆಗ ಅವನು ಡೀ ೩ ಜಾತಿಯ ಕೆನ್ಸರ್ ರೋಗಕ್ಕೆ ಸಿಲುಕಿರಲಿಲ್ಲ. ಆಗ ನಾನೇ ಅವನಿಗೆ ಚಿಕಿತ್ಸೆ ನಡೆಸುತ್ತಿದ್ದರಿಂದ ನಾನಿದನ್ನು ಚೆನ್ನಾಗಿ ಅರಿತಿರುವೆನು. ಆಗ ಅವನು ಕೇವಲ...........'' ಹೇಳುತ್ತ ಹೇಳುತ್ತ ಡಾಕ್ಟರ್ ಗ್ರೇಯ ಸ್ವರವು ಕರ್ಕಶವಾಗತೊಡಗಿದ್ದಿತು. ನೋರಳು ಅವನ ಪ್ರತಿಯೊಂದು ಮಾತನ್ನೂ ಧ್ಯಾನವಿಟ್ಟು ಆಲಿಸುತ್ತಿದ್ದಳು. ಕ್ರಮವಾಗಿ ನೋರಳ ಮುಖದಲ್ಲಿ ಅವಿಶ್ವಾಸದೊಡನೆ ಆಶ್ಚರ್ಯದ ಭಾವವೂ ತೋರತೊಡಗಿತು.

ಗ್ರೇ ತನ್ನ ಮಾತನ್ನು ಮುಗಿಸಿದೊಡನೆ ನೋರಳು ಹೇಳಿದಳು--''ಆದರೆ, ಜೆಫ್ರ್! ನೀನು ಖಂಡಿತವಾಗಿಯೂ ತಪ್ಪುದಾರಿಯನ್ನು ಹಿಡಿದಿರುವಿ. ನೀನೀಗ ಎಂತಹ ಆರೋಪವನ್ನು ಅವನಿಗೆ ವಿರುದ್ಧವಾಗಿ ಮಾಡುತ್ತಿರುವಿ ಎಂಬುದನ್ನು ಅರಿತಿರುವೆಯಾ? ಡಾಕ್ಟರ್ ಮೋ ಡೀನನು ತಿಳಿದು ತಿಳಿದೇ ಆಸ್ಪತ್ರೆಯ ರೋಗಿಯೊಬ್ಬನ ಶರೀರದಲ್ಲಿ ಒಂದು ದೊಡ್ಡ ಭಯಂಕರ ಜಾತಿಯ ಕೆನ್ಸರ್ ರೋಗವನ್ನು ಪ್ರವೇಶಗೊಳಿಸಿರುವನೆಂದು ಹೇಳುತ್ತಾ ನೀನು ಅವನನ್ನು ದೊಡ್ಡ ತಪ್ಪುಗಾರನೆಂದು ನಿಶ್ಚೈಸುತ್ತಿರುವಿ''

ಗ್ರೇ—''ಹೌದು-ಹೌದು, ನೋರಾ! ಇದೇ ವಿಚಾರ. ಆ ಕಾರ್ಯವನ್ನೂ ಕೂಡ ಅವನು ಇತರ ಕಾರ್ಯಗಳಂತೆಯೇ ಬಹಳ ಚೊಕ್ಕಟವಾಗಿ ಮಾಡಿ ಬಿಟ್ಟಿರುವನು ಆದರೆ, ನೋರಾ! ನಾನೀಗ ಏನು ಹೇಳುತ್ತಿರುವೆನೋ ಅದೆಲ್ಲವೂ ಖಂಡಿತವಾಗಿಯೂ ಸತ್ಯವಾದುದೆಂದು ನಾನು ಚೆನ್ನಾಗಿ ಅರಿತಿರುವೆನು. ಯಾಕಂದರೆ ರಸಾಯನ ಶಾಲೆಯಲ್ಲಿಟ್ಟಿರುವ ಡೀ ೩ ಎಂಬ ಭಯಂ

ಕರ ವಿಷದ ಮೇಲೆ ಯಾವಾಗಲೂ ನಾನು ಬಹಳ ಎಚ್ಚರಿಕೆಯಿಂದ ದೃಷ್ಟಿ ಯಿಟ್ಟಿರುತ್ತಿದ್ದೆನು. ಡಾಕ್ಟರ್ ಮೇ ಡೀನನು ರೋಗಿಗಳ ಬಳಿಗೆ ಹೋಗುವುದ ಕ್ಕಿಂತ ಸ್ವಲ್ಪ ಮುಂಚೆ ನಾನು ರಸಾಯನ ಶಾಲೆಯಲ್ಲಿ ಅವನನ್ನು ಕಂಡಿದ್ದೆನು. ಡೀ ೩ರ ವಿಷದಲ್ಲಿ ಯಾರಾದರೂ ಕೈ ಹಾಕಿ, ಆ ಸಂಗತಿಯನ್ನು ನನಗೆ ತಿಳಿಯ ದಿರುವಂತೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ; ಯಾಕಂದರೆ ಕೇವಲ ಡಾಕ್ಟರ್ ಮೇ ಡೀನ, ಸ್ಟೆಂಟನ್ ಮತ್ತು ನಾನು ಇಷ್ಟು ಜನರಿಗೆ ಮಾತ್ರ ರಸಾಯನ ಶಾಲೆಯೊಳಗೆ ಹೋಗುವ ಅಧಿಕಾರವಿರುವದು. ಡಾಕ್ಟರ್ ಸ್ಟೆಂಟ ನರು ರೋಗಿಗಳ ಬಳಿಗೆ ಹೋಗುವುದಕ್ಕಿಂತ ಮುಂಚೆ ರಸಾಯನ ಶಾಲೆ ಯನ್ನು ಪ್ರವೇಶಿಸಿರಲಿಲ್ಲ ಅದನ್ನು ನಾನೇ ನೋಡಿದ್ದೆನು. ಹನ್ನೊಂದನೇ ನಂಬರಿನ ರೋಗಿಯು ಸ್ವಲ್ಪ ಸಮಯದಲ್ಲಿಯೇ ಭಯಂಕರ ಕೆನ್ಸರ್ ರೋ-ಗಕ್ಕೆ ತುತ್ತಾದನು. ಈ ಭೀಷಣ ಕಾರ್ಯವು ಡಾಕ್ಟರ್ ಮೇ ಡೀನನಿಂದಲ್ಲದೆ ಇನ್ನಾರಿಂದಲೂ ಆಗಿಲ್ಲೆಂಬುದಕ್ಕೆ ಕಾರಣವಿದೆ. ಡೀ ೩ ರ ರೋಗವು ಪ್ರಪಂಚದಲ್ಲಿ ಬಹಳ ಕಡಿಮೆ ಎಂಬ ವಿಚಾರವು ನಿನಗೂ ತಿಳಿದಿರಬಹುದು."

ನಡುಗುವ ಧ್ವನಿಯಿಂದ ನೋರಾ ಹೇಳಿದಳು—"ಆದರೆ, ಆದರೆ.... ಅವನು ಇಂತಹ ಭಯಂಕರ ದುಷ್ಕರ್ಮವನ್ನು ಯಾವ ಪ್ರಯೋಜನಕ್ಕಾಗಿ ಮಾಡುವನೆಂಬ ವಿಚಾರವು ನನ್ನ ಬುದ್ಧಿಗೆ ಹೊಳೆಯುವುದಿಲ್ಲ. ಡೀ ೩ ಜಾತಿಯ ಕೆನ್ಸರ್ ರೋಗವು ಅಸಾಧ್ಯ ರೋಗಗಳಲ್ಲೊಂದಾಗಿ ಪರಿಗಣಿಸಲ್ಪಟ್ಟಿರುವುದು; ಆದರೆ ಮೇ ಡೀನನು ಅಂತಹ ಆ ಅಸಾಧ್ಯಕಾರ್ಯದಲ್ಲಿಯೂ ಸಫಲತೆಯನ್ನು ಪಡೆದಿರುತ್ತಾನೆಂಬದು ಆಶ್ಚರ್ಯವಾಗಿದೆ. ಆ ಹನ್ನೊಂದನೇ ನಂಬರಿನ ರೋಗಿ ಯು ಈಗ ಗುಣಹೊಂದುತ್ತಿರುವುದನ್ನು ನಾನೂ ನೋಡುತ್ತಿರುವೆನು."

ಗ್ರೇ ಹೇಳಿದನು—"ಅದರ ಕಾರಣವೇನೆಂಬುದು ನನ್ನ ಬುದ್ಧಿಗೇನೋ ಹೀಗೆ ತೋರುತ್ತಿದೆ ಹೀಗೆ ಮಾಡಿ ಆತನು ಈ ರೋಗವನ್ನು ಕಲಿತುಕೊಳ್ಳು ತ್ತಿರುವನು. ಈ ರೋಗವಿರುವ ಯಾವ ರೋಗಿಯೂ ಇದುವರೆಗೆ ಅವನ ಕೈಗೆ ಸಿಕ್ಕಿರಲಿಲ್ಲ ಈಗವನು ತಿಳಿದು-ತಿಳಿದೇ ಒಬ್ಬ ರೋಗಿಯನ್ನು ತಯಾರಿ ಸಿದನು. ಈ ಭಯಂಕರ ರೋಗವನ್ನು ಗುಣಪಡಿಸುವ ಶಕ್ತಿಯುಳ್ಳವನಾದು ದಕ್ಕಾಗಿ ನಾನು ನಿಜವಾಗಿಯೂ ಮೇ ಡೀನನನ್ನು ಪ್ರಶಂಸಿಸುತ್ತೇನೆ; ಆದರೆ ನನ್ನ ದೃಷ್ಟಿಯು ಆ ರೋಗಿಯ ಕಡೆಗೆ ಹೋದೊಡನೆಯೇ ನನ್ನ ಶರೀರವೆಲ್ಲವೂ ಒಂದೇಸಾರೆಗೆ ನಡುಗಿ ಹೋಗುತ್ತದೆ. ಆಹಾ! ಆ ಭೀಷಣ ರೋಗದ ಆಕ್ರ ಮಣದಿಂದ ಪಾಪ! ಆ ರೋಗಿಯು ಎಷ್ಟೆಷ್ಟು, ಎಂತೆಂತಹ ಭಯಂಕರ ಯಾತನೆ ಗಳನ್ನನುಭವಿಸಬೇಕಾಯಿತು? ಡಾಕ್ಟರ್ ಮೇ ಡೀನನು ಕೆನ್ಸರ್ ರೋಗವನ್ನು

ಚನ್ನಾಗಿ ಕಲಿತುಕೊಳ್ಳುವುದಕ್ಕಾಗಿ ಮತ್ತು ಆ ರೋಗವನ್ನು ಪರಿಹರಿಸಿ ಪ್ರಪಂಚದಲ್ಲಿ ಹೆಚ್ಚಿನ ಕೀರ್ತಿಯನ್ನು ಹೊಂದುವುದಕ್ಕಾಗಿ ಈ ರೋಗಿಯು ಅಂತಂತಹ ಸಂಕಟವನ್ನು ಸಹಿಸಿಕೊಳ್ಳಬೇಕಾಗಿ ಬಂದಿತು.''

ಸ್ವಲ್ಪ ಹೊತ್ತು ಯೋಚಿಸಿ ನೋರಳು ಹೇಳಿದಳು-''ಡಾಕ್ಟರ್ ಮೋಡೀನನು ಬಹು ವಿಚಿತ್ರ ಮನುಷ್ಯನೆಂಬುದರಲ್ಲಿ ಸಂಶಯವೇನೂ ಇಲ್ಲ. ಅವನೊಬ್ಬ ಕ್ರೂರ ಹೃದಯದವನಾದ ವೈಜ್ಞಾನಿಕನಿರುವನು. ಈಗಿನ ಪ್ರಪಂಚದಲ್ಲಿ ಅವನಿಗೆ ಹೋಲುವವರು ಇನ್ನಾರೂ ಇಲ್ಲ; ಆದರೆ ಒಂದು ಪ್ರಾಣಿಗೆ ಕಷ್ಟವಿತ್ತು, ಇಡೀ ಜಗತ್ತಿಗೇ ಉಪಕಾರ ಮಾಡುವುದಕ್ಕಾಗಿ ಅವನು ಈ ಭಯಂಕರ ದುಷ್ಕೃತ್ಯವನ್ನು ಮಾಡಿರಬಹುದಾಗಿದೆ''

ಗ್ರೆ—''ನಿನ್ನ ಈ ಮಾತನ್ನು ಒಪ್ಪಲು ನಾನು ಸಿದ್ಧನಿಲ್ಲ. ಕೆನ್ಸರ್ ರೋಗವು ಪ್ರಪಂಚದಲ್ಲಿ ಬಹಳ ಕಡಿಮೆ. ಹಾಗಿರುವುದರಿಂದ ಇಡೀ ಪ್ರಪಂಚಕ್ಕೇ ಹೇಗದರಿಂದ ಉಪಕಾರವಾಗಬಲ್ಲುದು? ತನ್ನ ಯಾವುದೋ ಒಂದು ವಿಶೇಷ ಕಾರ್ಯವನ್ನು ನಡೆಸುವದಕ್ಕಾಗಿಯೇ ಅವನು ಹೀಗೆ ಮಾಡಿರುವನಲ್ಲದೆ ಇನ್ನಾವ ಕಾರಣವೂ ಇಲ್ಲ. ಪ್ರಪಂಚಕ್ಕೊಂದು ಉಪಕಾರ ಮಾಡತಕ್ಕ ಭಾವನೆಯು ಎಂದೂ ಆ ದುಷ್ಟಪ್ರಾಣಿಯ ಹೃದಯದಲ್ಲಿ ಉದ್ಭವಿಸಲಾರದೆಂದು ನಾನು ದೃಢವಾಗಿ ಹೇಳುತ್ತೇನೆ.''

ನೋರಾ—''ನಿನ್ನ ಅಭಿಪ್ರಾಯವನ್ನು ನಾನು ಒಪ್ಪಲಾರೆನು. ಅದಿರಲಿ. ನಿನ್ನ ಈ ಅಭಿಪ್ರಾಯವನ್ನು ಇದಕ್ಕೆ ಮುಂಚೆ ಎಂದಾದರೂ ಯಾರ ಹತ್ತಿರನಾದರೂ ಪ್ರಕಟಿಸಿದ್ದೆಯಾ?''

ಗ್ರೆ.''ಇಲ್ಲ-ಇಲ್ಲ. ಇದನ್ನಿದುವರೆಗೆ ಯಾರ ಬಳಿಯಲ್ಲಿಯೂ ಬಾಯ್ಬಿಟ್ಟು ನುಡಿದಿರಲಿಲ್ಲ; ಆದರೆ ಅದರ ಸಂಪೂರ್ಣ ವಿವರಣೆಯನ್ನು ನನ್ನ ನೋಟ್ ಬುಕ್ಕಿನಲ್ಲಿ ಬರೆದಿಟ್ಟಿರುವೆನು; ಅದಲ್ಲದೆ ಇದರ ಮೇಲೆ ನಾನು ಕಂಡುಹಿಡಿದ ನಿಷ್ಕರ್ಷವನ್ನೂ ಅದರ ಜೊತೆಗೇ ಬರೆದುಬಿಟ್ಟಿರುವೆನು. ನಾನು ಈ ವಿಚಾರವನ್ನು ಮೆಡಿಕಲ್ ಕೌನ್ಸಿಲ್ಲಿನ ಕಮೀಟಿಯ ಎದುರಿಗೆ ಇಡಬೇಕೆಂದು ದೃಢನಿಶ್ಚಯ ಮಾಡಿಕೊಂಡಿರುವೆನು; ಮತ್ತು....''

ಅವನ ಮಾತನ್ನು ಬಲವಾಗಿ ತಡೆದು, ನೋರಳು ಹೇಳಿದಳು:—''ಬೇಡ-ಬೇಡ, ಜೆಫ್ರೆ! ನೀನೀ ವಿಚಾರವನ್ನು ಇನ್ನು ಮನಸ್ಸಿನೊಳಗೂ ತಂದುಕೊಳ್ಳಲಾಗದು. ಆ ಮನುಷ್ಯನು ಬಹಳ ಭಯಂಕರನಿರುವನು. ಅವನ ಕಣ್ಣುಗಳನ್ನು ನೋಡಿಯೇ ನಾನು ಅವನ ಹೃದಯದ ಭಯಂಕರತೆಯನ್ನು ತಿಳಿದಿರುವೆನು. ಅವನ ನುಡಿ-ನಡೆಗಳೇ ಅವನ ಹೃದಯದ ಕ್ರೌರ್ಯವನ್ನು

ಬಿಚ್ಚಿ ತೋರಿಸುತ್ತವೆ. ಮರೆತೂ ಕೂಡ ನೀನೀ ವಿಚಾರವನ್ನು ಎಂದೂ ಪ್ರಕಟಿಸಬಾರದು. ಅವನಿಗೆ ತಿಳಿದುಬಿಟ್ಟಿತೆಂದರೆ, ಒಂದೇಸಾರೆಗೆ ಅವನು ನಿನ್ನನ್ನು ಪಾತಾಳದ ವರೆಗೆ ಮೆಟ್ಟಿಬಿಡಬಹುದು. ನಿನ್ನ ಸ್ಥಿತಿಯ ಮೇಲೆಯೂ ಸ್ವಲ್ಪ ಧ್ಯಾನವಿಟ್ಟು ನೋಡಿಕೋ. ನೀನಿನ್ನೂ ಇಲ್ಲಿಗೆ ಬಂದು ಬಹಳ ಕಾಲವಾಗಲಿಲ್ಲ. ಅವನಾದರೋ ಮೆಡಿಕಲ್ ಜರ್ನಲಿನಲ್ಲಿ ತಕ್ಕಷ್ಟು ಖ್ಯಾತಿಯನ್ನು ಗಳಿಸಿರುವನು; ಅದಲ್ಲದೆ ಡಾಕ್ಟರೀ ಪ್ರಪಂಚದಲ್ಲಿ ಅವನಿಗೊಂದು ವೈಶಿಷ್ಟ್ಯವೂ ಇದೆ. ಇಲ್ಲ, ಜೆಫ್ರೆ! ಹಾಗೆ ಪ್ರಕಟಿಸಲು ನಿನ್ನನ್ನೆಂದೂ ನಾನು ಬಿಡಲಾರೆನು. ನಿನ್ನ ಈ ಅಭಿಪ್ರಾಯದ ಮೇಲೆ ಯಾರೂ ವಿಶ್ವಾಸವಿಡಲಾರರು, ಅದಲ್ಲದೆ ಅದರಿಂದ ನಿನ್ನ ಮೇಲೆಯೇ ಕೆಟ್ಟ ಮಾತು ಬಂದರೂ ಬರಬಹುದು. ನೀನೀಗ ನಿನ್ನ ವಿಚಾರದ ಮೇಲಲ್ಲದೆ ಇತ್ತ ನನ್ನ ವಿಚಾರದ ಮೇಲೂ ಧ್ಯಾನವಿಟ್ಟಿರಬೇಕಾಗಿದೆ. ಆ ನಿನ್ನ ನೋಟ್‌ಬುಕ್ಕನ್ನು ಎಲ್ಲಿ ಇಟ್ಟಿರುವಿ?''

ಗ್ರೇ ಹೇಳಿದನು:—''ನಾನದನ್ನು ರಸಾಯನ ಶಾಲೆಯೊಳಗಿನ ನನ್ನ ಡ್ರಾದಲ್ಲಿ ಮುಚ್ಚಿಟ್ಟಿರುವೆನು; ಆದರೆ....''

ಅವನ ಮಾತನ್ನು ತಡೆಯುತ್ತ ನೋರಳು ಹೇಳಿದಳು:—''ಇಲ್ಲ-ಇಲ್ಲ, ನಾನಿನ್ನೇನೂ ಈಗ ಕೇಳುವದಿಲ್ಲ. ಹೋಗು, ಈಗಿಂದೀಗಲೇ ಅದನ್ನು ತೆಗೆದು ಕೊಂಡು ಇಲ್ಲಿಗೆ ಬಾ. ಹುಂ, ಹೋಗು. ವಿಲಂಬಿಸದಿರು''

ಗ್ರೇ ಒಂದು ಕ್ಷಣಕಾಲ ಹಿಂದೆ ಮುಂದೆ ನೋಡಿದನು. ನೋರಳನ್ನು ಅವನು ಮನಮುಟ್ಟಿ ಪ್ರೀತಿಸುತ್ತಿದ್ದನು. ವಿದ್ಯಾಬುದ್ಧಿಗಳಲ್ಲಿ ಗ್ರೇ ನೋರಳಿಗಿಂತ ಎಷ್ಟೋ ಪಾಲು ಮುಂದುವರಿದವನಾಗಿದ್ದರೂ ಕೂಡ ಆತನ ಹೃದಯದ ಮೇಲೆ ನೋರಳ ಪೂರ್ಣ ಅಧಿಕಾರವಿದ್ದಿತು. ಅವಳ ಮಾತನ್ನು ಮೀರುವ ಸಾಮರ್ಥ್ಯವು ಅವನಲ್ಲಿರಲೇ ಇಲ್ಲ. ನಿರುಪಾಯನಾಗಿ ಗ್ರೇ :— ''ಇದೇ ನಿನ್ನ ಅಭಿಪ್ರಾಯವಿರುವುದಾದರೆ ಈಗಲೇ ರಸಾಯನ ಶಾಲೆಗೆ ಹೋಗಿ ಆ ಪುಸ್ತಕವನ್ನು ತಂದು ಕೊಡುವೆನು.'' ಎಂದು ನುಡಿಯುತ್ತ ಅಲ್ಲಿಂದ ಹೊರಟುಹೋದನು.

ನೋರಳು ಮನದೊಳಗೆ ಹೇಳಿಕೊಂಡಳು:—''ಇವನು ಹೇಳುತ್ತಿರುವುದೆಲ್ಲವೂ ನಿಜವೆಂದು ನನ್ನ ಹೃದಯವೂ ನುಡಿಯುತ್ತದೆ; ಆದರೆ ಹಾಗಿದ್ದರೂ ಕೂಡ ಡಾಕ್ಟರ್ ಮೇ ಡೀನನಿಗೆ ವಿರುದ್ಧವಾಗಿ ಹೀಗೆ ಪ್ರತ್ಯಕ್ಷವಾಗಿ ಆರೋಪಿಸುವುದೆಂಬದು ಹುಚ್ಚುತನವಲ್ಲದೆ ಮತ್ತೇನೂ ಇರಲಾರದು. ಒಂದು ವೇಳೆ ಈ ಮಾತಿನ ಮೇಲೆ ಕಮಿಟಿಯು ವಿಶ್ವಾಸತಾಳಿದರೂ ಕೂಡ ಮೇಡೀನನಂಥವನ ಮೇಲೆ ಏನನ್ನೂ ಮಾಡಲಾರದು. ಜೆಫ್ರೆ ಗ್ರೇಗೇ ಸ್ವಲ್ಪ ಬುದ್ಧಿವಾದ

ವನ್ನು ಹೇಳಿ ಸುಮ್ಮನಿರಿಸಿಬಿಡಬಹುದು; ಅಥವಾ ಈ ವಿಚಾರಕ್ಕೆ ತಕ್ಕ ಪ್ರಮಾಣವೂ ಸಾಲದೆಂದು ಕಮಿಟಿಯು ಹೇಳಿಬಿಡಬಹುದು. ನನ್ನ ಮನಸ್ಸಿಗೆ ಈಗ ತೋರುವದೇನಂದರೆ, ಈ ಆರೋಪವನ್ನು ಯಾವ ತರಹದಿಂದಲೂ ಮೇ ಡೀನನ ಮೇಲೆ ಸಿದ್ಧಗೊಳಿಸಲು ಈ ವೇಳೆಯಲ್ಲಿ ಸಾಧ್ಯವಿಲ್ಲ ಇದು ಕೇವಲ ದ್ವೇಷಮೂಲಕವಾಗಿ ಬಂದುದೆಂದು ಕಮಿಟಿಯು ಗ್ರೇಯ ಮೇಲೆಯೇ ವಿಪರೀತ ಭಾವನೆಯನ್ನು ತಾಳಬಹುದು. ಹೀಗಿರಲು, ಸುಮ್ಮ ಸುಮ್ಮನೆ ಗ್ರೇಯ ಭವಿಷ್ಯವನ್ನೂ, ಅದರೊಂದಿಗೇ ಇರುವ ನನ್ನ ಭವಿಷ್ಯವನ್ನೂ ಭಯಂಕರ ಗೊಂದಲದಲ್ಲಿ ಕೆಡಹಲು ನಾನೆಂದೂ ಬಿಡಲಾರೆನು.''

ಸ್ವಲ್ಪ ಹೊತ್ತಿನೊಳಗೇ ಗ್ರೇ ಹಿಂದಿರುಗಿ ಬಂದನು; ಆದರೆ ಈಗವನು ಬಲು ಗಾಬರಿಯಾಗಿರುವಂತೆ ತೋರುತ್ತಿದ್ದನು. ನೋರಳ ಬಳಿಗೆ ಬಂದೊಡನೆ ಗ್ರೇ ಕ್ಷೀಣಸ್ವರದಿಂದ ಹೇಳಿದನು:—"ಆ ನೋಟ್ ಬುಕ್ ಕಳವಾಗಿ ಹೋಗಿದೆ, ನೋರಾ! ಡ್ರಾ ಇದ್ದಂತೆಯೇ ಇದೆ. ಇತರ ವಸ್ತುಗಳೂ ಇದ್ದಂತೆಯೇ ಇವೆ. ನೋಟ್ ಬುಕ್ ಮಾತ್ರ ಎಲ್ಲಿಯೂ ಇಲ್ಲ. ನಾನು ಆ ನೋಟ್‌ಬುಕ್ಕನ್ನು ಹೆಚ್ಚಾಗಿ ಉಪಯೋಗಿಸುತ್ತಿರಲಿಲ್ಲ. ಆದರಲ್ಲಿ ಈ ವಿಚಾರವಲ್ಲದೆ ಒಂದು ಸಮಯದಲ್ಲಿ ನಾನು ಕಂಡುಹಿಡಿದಿದ್ದ ರೇಡಿಯಮ್ ಪರೀಕ್ಷಾಫಲವನ್ನೂ ಬರೆದಿಟ್ಟಿದ್ದೆನು. ಹೀಗೆ ಅದೀಗ ಅಕಸ್ಮಾತ್ತಾಗಿ ಕಾಣೆಯಾಗಿರಲು ಏನು ಕಾರಣವೋ, ನನ್ನ ಬುದ್ಧಿಗಂತೂ ತೋಚುವುದಿಲ್ಲ. ನನ್ನ ಡ್ರಾಯರೊಳಗಿಂದ ಯಾರಾದರು ಎತ್ತಿ ಹಾಕಿರಬಹುದು?''

ಬಹು ಮೆಲ್ಲನೆ ನೋರಳು ನುಡಿದಳು-"ಇದು ಒಳ್ಳೆಯದಾಗಲಿಲ್ಲ, ಜೆಸ್ರಿ! ಮೇ ಡೀನನಿಂದಲ್ಲದೆ ಇನ್ನ್ಯಾರಿಂದಲೂ ಈ ಕೆಲಸವಾಗಿರಲು ಸಾಧ್ಯವಿಲ್ಲ. ಖಂಡಿತವಾಗಿ ನಿನ್ನಮೇಲೆ ಮೇ ಡೀನನಿಗೆ ಸಂಶಯವುಂಟಾಗಿರಬಹುದು. ಅದರಿಂದಲೇ ಆತನು ನಿನ್ನ ನೋಟ್‌ಬುಕ್ಕನ್ನೂ ನೋಡಲು ಪ್ರಯತ್ನಿಸಿರಬಹುದು. ಅನಂತರ ಡ್ರಾದಿಂದ ಅದನ್ನು ಕದ್ದಿರಲೂ ಬಹುದು.''

ಗ್ರೇ ಹೇಳಿದನು—"ಡ್ರಾದ ಬೀಗವು ಇದ್ದಂತೆಯೇ ಇದೆ. ಅದಕ್ಕಿರುವುದು ಒಂದೇ ಕೈ. ಅದು ನನ್ನ ಹತ್ತಿರವೇ ಯಾವಾಗಲೂ ಇರುತ್ತದೆ. ಇದೀಗ ನನಗೇನೂ ತಿಳಿಯದಾಗಿದೆ, ಹೇಗೆ....''

ನೋರಳೆಂದಳು—"ನೀನಿನ್ನು ಆಲೋಚಿಸುವುದು ವ್ಯರ್ಥ. ಮೇ ಡೀನನೆಂದರೆ ಸಾಮಾನ್ಯ ವ್ಯಕ್ತಿಯಲ್ಲ. ನಿನ್ನ ಡ್ರಾಕ್ಕೆ ಆಗತಕ್ಕ ಇನ್ನೊಂದು ಬೀಗದ ಕೈಯನ್ನು ತಯಾರಿಸಿಟ್ಟುಕೊಳ್ಳುವುದು ಅವನಿಗೇನೂ ಕಠಿಣ ಕಾರ್ಯವಲ್ಲ.

ಈಗ ಬಂದಿರುವ ಪ್ರಶ್ನೆ ಏನೆಂದರೆ—ಆ ನೋಟ್‌ಬುಕ್ಕನ್ನು ಕದ್ದು ಇನ್ನು ಅವನು ಮಾಡುವ ಕಾರ್ಯಕ್ರಮವೇನಿರಬಹುದು? ಇರಲಿ.

ನೀನೀಗ ಆ ವಿಚಾರವನ್ನೆಲ್ಲಾ ನೆನಪುಮಾಡಿಕೊಂಡು ಆಲೋಚಿಸಿ ಹಿಂದಿನಂತೆ ವಿವರವಾಗಿ ಸಂಪೂರ್ಣ ಬರೆಯಬಲ್ಲೆಯಾ?"

ಗ್ರೇ ಸ್ವಲ್ಪಹೊತ್ತಿನವರೆಗೆ ಆಲೋಚನಾ ಸಾಗರದಲ್ಲಿ ಮುಳುಗೇಳುತ್ತಾ ಆ ಮೇಲೆ ದುಃಖಿತ ಹೃದಯನಾಗಿ ತಲೆಯನ್ನಾಡಿಸಿ ಹೇಳಿದನು—"ಇಲ್ಲ, ಇನ್ನು ಹಾಗೆ ಯೋಚಿಸಿ ಬರೆದಿಡುವದು ನನ್ನಿಂದ ಸಾಧ್ಯವಿಲ್ಲ. ಬಹಳ ಗಹನ ವಿಚಾರಗಳಿವೆ. ಅವುಗಳನ್ನೆಲ್ಲಾ ಈಗ ಆಲೋಚಿಸಿ ಸರಿಯಾಗಿ ಬರೆದಿಡುವುದೆಂಬುದು ಆಗದ ಮಾತೇ ಸರಿ. ಈಗಿನ ಪರಿಸ್ಥಿತಿಯಲ್ಲಿ ಆ ವಿಚಾರವನ್ನೆಲ್ಲಾ ಸಂಪೂರ್ಣವಾಗಿ ಮರೆತುಬಿಡುವದೊಂದಲ್ಲದೆ ಇನ್ನ್ಯಾವ ಉಪಾಯವೂ ಇಲ್ಲ. ಒಳ್ಳೇದು, ನೋರಾ! ನಾನೀಗ ಹೊರಡಬೇಕಾಗಿದೆ. ಇಂದು ನನ್ನ ಭೇಟಿಗಾಗಿ ಒಬ್ಬ ಮನುಷ್ಯನು ನನ್ನ ಬಿಡಾರಕ್ಕೆ ಬರತಕ್ಕವನಿರುವನು."

ನೋರಳು ಪ್ರಶ್ನಿಸಿದಳು—"ಯಾರವರು? ಯಾಕೆ ಬರುವರು? ಎಲ್ಲಾದರೂ ತಿರುಗಿ ನೀನೀಗ ಷೇರ್ ಮಾರಾಟದ ಗೊಂದಲದಲ್ಲಿ ಬೀಳಲಿಚ್ಛಿಸಿರುವದಿಲ್ಲವಷ್ಟೆ? ಊಹುಂ, ಇನ್ನೆಂದೂ ಆ ಕಾರ್ಯಕ್ಕಿಳಿಯಲು ನಾನು ಬಿಡಲಾರೆನು. ಹಿಂದೆ ನೀನೀ ಕಾರ್ಯದಲ್ಲಿ ತಕ್ಕಷ್ಟು ಹಾನಿಹೊಂದಿರುವ ಅನುಭವವನ್ನು ಇಷ್ಟರೊಳಗೇ ಮರೆತೆಯಾ?"

ಗ್ರೇ. ಹೇಳಿದನು:-"ಇಲ್ಲ ನೋರಾ! ಖಂಡಿತವಾಗಿಯೂ ನೀನೀ ಸಂಶಯವನ್ನು ನಿನ್ನ ಹೃದಯದಿಂದ ಕಿತ್ತೊಗೆದುಬಿಡು. ನಾನು ಇನ್ನೆಂದೂ ಷೇರು ಮಾರಾಟದ ಗೊಂದಲಕ್ಕೆ ಸಿಲುಕುವದಿಲ್ಲ. ಈಗ ನಾನು ನನ್ನ ಹಣವನ್ನು ಯಾವ ಕಾರ್ಯದಲ್ಲಿ ಉಪಯೋಗಿಸಬೇಕೆಂದಿರುವೆನೋ, ಅದರಲ್ಲಿ ಯಾವ ತರಹದ ಸಂಶಯಕ್ಕೂ ಎಡೆಯಿಲ್ಲ. ಆ ಕಾರ್ಯವೆಂದರೆ, ಇಂತಿಹುದು.... ಅದನ್ನನುಭವಿಸುವದರಲ್ಲಿ ನೀನು ಸ್ವಲ್ಪವೂ ಹಿಂದೆಗೆಯಲಾರೆ. ತಿಳಿಯಿತೇ ಈಗ? ನೀನೇನೂ ಚಿಂತಿಸದಿರು ಪ್ರಿಯೇ!"

ಮಂದಸ್ವರದಿಂದ ನೋರಾ ನುಡಿದಳು:-"ಇನ್ನು ಮೇಡೀನಾ? ನೀನು ಅವನ ಮೇಲೆ ಸಂಶಯಪಟ್ಟಿರುವದನ್ನು ಅವನೀಗ ಪೂರ್ಣ ತಿಳಿದುಬಿಟ್ಟಿರುವನು; ನಿನ್ನ ಡ್ರಾದಿಂದ ನೋಟ್‌ಬುಕ್ಕನ್ನು ಎತ್ತಿಹಾಕಲುಇದೊಂದಲ್ಲದೆ ಇನ್ನ್ಯಾವ ಕಾರಣವಿರಬಲ್ಲುದು? ಈ ಸಂಬಂಧವಾಗಿ ಏನು ನಿಶ್ಚೈಸಿರುವಿ?"

ಗ್ರೇ ಹೇಳಿದನು:—ನಿಶ್ಚೈಸುವುದೇನು? ಆ ನೋಟ್‌ಬುಕ್ಕನ್ನು ಓದಿದ ಮೇಲೆ ಅವನ ಹೃದಯದಲ್ಲಿ ಯಾವ ಯಾವ ತರಹದ ಭಾವನೆಗಳುಂಟಾಗ

ಬಹುದೆಂಬುದು ಸ್ಪಷ್ಟವಾಗಿಯೇ ಇದೆ; ಆದರೆ ಇನ್ನೇನೆಂದರೆ, ನಾನಿನ್ನು ಈ ಆಸ್ಪತ್ರೆಯಲ್ಲಿ ಕೆಲಸಮಾಡಲಾರೆನು. ಅವನ ಕೈಕೆಳಗೆ ನಿಂತು ಇನ್ನು ಕೆಲಸ ಮಾಡುವದು ಯಾವ ತರಹದಿಂದಲೂ ಸಾಧ್ಯವಿಲ್ಲ."

ನೋರಾ ಕಂಪಿತಸ್ವರದಿಂದ ಹೇಳಿದಳು:—"ಜೆಫ್ರಿ! ಏನು ಮಾಡಲಿಚ್ಛಿಸುವಿಯೋ ಅದೆಲ್ಲವನ್ನೂ ಆಲೋಚಿಸಿ ವಿಮರ್ಶಿಸಿಯೇ ಮಾಡು. ಅವನಿನ್ನು ಯಾವ ರೀತಿಯಿಂದಾದರೂ ನಿನಗೆ ಹಾನಿಯುಂಟಾಗುವಂತೆ ಪ್ರಯತ್ನಿಸದೆ ಇರಲಾರನೆಂಬುದು ನನಗೆ ನಿಶ್ಚಯವಾಗಿದೆ. ನಾನೀಗ ಮುಖ್ಯವಾಗಿ ನಿನಗೆ ತಿಳಿಸುವುದೇನೆಂದರೆ, ಮೇಡೀನನು ಈ ಆಸ್ಪತ್ರೆಯೊಳಗೆ ಇದ್ದಾಗಲೆಲ್ಲ ನೀನು ಅವನಿಂದ ಸ್ವಲ್ಪ ದೂರವಿರುವದಕ್ಕೇ ಪ್ರಯತ್ನಿಸಬೇಕು."

ಗ್ರೇ —"ಓಃ! ಅವನು ನನಗೇನು ಹಾನಿಯುಂಟುಮಾಡಬಲ್ಲನು? ಈ ವಿಷಯದಲ್ಲವನು ತನ್ನ ಬಾಯಿಂದ ಒಂದು ಶಬ್ದವನ್ನೂ ಹೊರಗೆಡವಲಾರನು; ಯಾಕಂದರೆ, ಬಾಯ್ಬಿಟ್ಟರೆ ನನ್ನ ನೋಟ್‍ಬುಕ್ಕನ್ನು ಕದ್ದ ಮನುಷ್ಯನು ಅವನೇ ಸರಿ, ಎಂದು ಪ್ರಕಟವಾಗಿಬಿಡುವದು. ನನ್ನ ಸ್ಥಾನಕ್ಕೆ ಅವನು ಯಾವ ತರಹದ ಕೆಡಕನ್ನಾದರೂ ಮಾಡುವ ಸಂಭವವಿಲ್ಲ. ನಾನು ಅಂತಹುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ನಾಳೆಯೇ ನಾನು ರಾಜೀನಾಮೆ ಒಪ್ಪಿಸುವೆನು. ನೋರಾ! ಇದೆಲ್ಲವನ್ನೂ ನೀನಿನ್ನು ಮರೆತುಬಿಡು. ನಾನು ಶೀಘ್ರದಲ್ಲಿಯೇ ನಿನಗೊಂದು ಕೈಗಾಣಿಕೆಯನ್ನು ತಂದೊಪ್ಪಿಸಬೇಕೆಂದಿರುವೆನು. ಅದನ್ನು ನೋಡಿದೊಡನೆಯೇ ನಿನ್ನ ಕಣ್ಣುಗಳು ಆನಂದಾತಿಶಯದಿಂದ ಬೆಳಗದಿರಲಾರವು. ಗುಡ್‍ನೈಟ್, ಪ್ರಿಯೆ! ಈ ವಿಚಾರದಲ್ಲಿ ನೀನಿನ್ನೇನೂ ಚಿಂತಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿಕೋ."

ಇಷ್ಟನ್ನು ಹೇಳಿ ಗ್ರೇ ಪ್ರೇಮದಿಂದ ನೋರಳ ಕೈಹಿಡಿದು ಕುಲುಕಿಸಿ ಅಲ್ಲಿಂದ ಹೊರಟನು. ಸ್ವಲ್ಪ ದೂರ ನಡೆದು ಒಂದು ಬಾರಿ ಹಿಂತಿರುಗಿ ನೋಡಿ ನಸುನಕ್ಕನು; ಆದರ ಆ ನಸುನಗೆಯಲ್ಲೀಗ ಹೊಳಪಿರಲಿಲ್ಲ; ಯಾಕೆಂದರೆ ಅದು ಆಂತರಿಕವಾದ ನಗೆಯಾಗಿರಲಿಲ್ಲ.

ದೂರ ದೂರವಾದಂತೆ ಗ್ರೇಯ ತಲೆಯಲ್ಲಿ ವಿಧವಿಧವಾದ ಹೊಸಹೊಸ ವಿಚಾರಗಳು ಒಳಹೊಕ್ಕು ಅವನ ಮಸ್ತಿಷ್ಕವನ್ನು ತಲ್ಲಣಗೊಳಿಸತೊಡಗಿದವು. ಗ್ರೇ ನಿಧಾನವಾಗಿ ಹೋಗುತ್ತ ತನ್ನೊಳಗೇ ಯೋಚಿಸತೊಡಗಿದನು:-"ಕೊನೆಗೆ ಮೇಡೀನನು ಏನು ಮಾಡುವನು? ಹಂ! ಒಂದುವೇಳೆ ಅವನು ಮಾಡುವುದಾದರೂ ಏನು? ಏನು ಮಾಡಲು ಸಾಧ್ಯವಿದೆ? ಉಹುಂ, ಏನು ಮಾಡಲೂ ಸಾಧ್ಯವಿಲ್ಲ."

ಆದರೂ ಕೂಡ ಒಂದು ವಿಧವಾದ ಅನಿಶ್ಚಿತ ಭಾವನೆಯು ಅವನ ಹೃದಯುವನ್ನು ಚುಚ್ಚುತ್ತಿದ್ದಿತು. ಇನ್ನೂ ಅವನು ಅದೇ ವಿಚಾರಸಾಗರ ದಲ್ಲಿ ತೇಲಾಡುತ್ತಿದ್ದನು; ಯಾವ ನಿಷ್ಕರ್ಷದ ಕಡೆಗೂ ತಲುಪಲಾಗಲಿಲ್ಲ.

ಟ್ರಾಮ್ ಗಾಡಿಯನ್ನು ಹತ್ತಿ ಕುಳಿತು ವೆಸ್ಟ್ ಮಿನಿಸ್ಟರ್ ಸೇತುವೆ ಯನ್ನು ದಾಟಿ ಪಾರ್ಕ್‌ರೋಡ್ ತಿರುಗುವ ಸ್ಥಳದಲ್ಲ ಟ್ರಾಮ್‌ಗಾಡಿಯಿಂದಿಳಿ ದನು. ಅಲ್ಲಿಂದ ಕಾಲ್ನಡಿಗೆಯಿಂದಲೇ ಫೇನ್ ಸ್ಟ್ರೀನ್ ಮೆನ್ಶನ್ನಿಗೆ ತಲ್ಪಿ ದನು. ಅಲ್ಲಿ ಗ್ರೇ ಒಂದೆರಡು ಕೋಣೆಗಳನ್ನು ವಾಸಕ್ಕಾಗಿ ಬಾಡಿಗೆಗೆ ತೆಗೆದು ಕೊಂಡಿದ್ದನು.

ದ್ವಾರರಕ್ಷಕನು ಗ್ರೇಯನ್ನು ನೋಡಿದೊಡನೆಯೇ ಹೇಳಿದನು—"ಯಾರೋ ಇಬ್ಬರು ನಿಮ್ಮ ಕೋಣೆಯಲ್ಲ ಕುಳಿತು ನೀವು ಹಿಂದಿರುಗಿ ಬರು ವುದನ್ನೇ ಎದುರು ನೋಡುತ್ತಿದ್ದಾರೆ, ಸ್ವಾಮೀ! ನೀವು ಹಿಂದಕ್ಕೆ ಬರುವ ವೇಳೆಯನ್ನು ನಾನವರಿಗೆ ತಿಳಿಸಿದ್ದೆನು. ಅದಕ್ಕವರು ಉತ್ತರವಾಗಿ "ಡಾಕ್ಟರರು ಬರುವವರೆಗ ನಾವಿಲ್ಲಿಯೇ ನಿರೀಕ್ಷಿಸುತ್ತ ಕುಳಿತಿರುತ್ತೇವೆ" ಎಂದು ಹೇಳಿದರು.

ಇಷ್ಟು ಮಾತನ್ನು ಹೇಳಿ ದ್ವಾರರಕ್ಷಕನು ಲಿಫ್ಟಿನ ಕೀಲನ್ನು ಕಟ್ಟಡದ ಮೇಲಿನ ಅಂತಸ್ತಿಗೆ ತಗಲಿಸಿದ ನಂತರ ಯಂತ್ರವನ್ನು ತಿರುಗಿಸಿದನು. ಲಿಫ್ಟ್ ಆ ವೇಳೆಯಲ್ಲಿ ವೇಗವಾಗಿ ಮೇಲೆದ್ದು ಹೋಗುತ್ತಿದ್ದಿತು. ದ್ವಾರರಕ್ಷಕನ ಮಾತಿಗುತ್ತರವಾಗಿ ಗ್ರೇ ಹೇಳಿದನು—"ಒಬ್ಬ ಮನುಷ್ಯನು ಮಾತ್ರ ಈ ವೇಳೆಯಲ್ಲಿ ನನ್ನನ್ನು ಭೇಟಿಮಾಡುವ ವಿಚಾರವಿದ್ದಿತು; ಆದರೆ ಅದೂ ಕೂಡ ಸ್ವಲ್ಪಹೊತ್ತಿನ ಮೇಲೆ"

ಆದರೆ ಕೋಣೆಯ ಬಾಗಿಲಿನಲ್ಲಿ ಒಬ್ಬನೇ ಕಾಣಿಸಿದನು. ಅವನೂ ಕೂಡ ಗ್ರೇಗೆ ಅಪರಿಚಿತನೇ ಆಗಿದ್ದನು.

ಗ್ರೇಯನ್ನು ನೋಡಿದೊಡನೆಯೇ ಆ ಅಪರಿಚಿತ ಮನುಷ್ಯನು ಹೇಳಿ ದನು—"ನೀವೇ ಅಲ್ಲವೇ ಡಾಕ್ಟರ್ ಗ್ರೇ ಎಂಬವರು? ನಾನೀಗ ನಿಮ್ಮೊ ಡನೆ ಕೆಲವು ವಿಚಾರಗಳನ್ನು ಚರ್ಚಿಸಬೇಕಾಗಿರುವುದು. ದಯವಿಟ್ಟು ಒಳಗೆ ಬನ್ನಿರಿ."

"ಆದರೆ ತಾವು ಯಾವ ವಿಚಾರದ ಮೇಲೆ ಮಾತಾಡಲಿಚ್ಛಿಸುತ್ತೀರೆಂಬ ವಿಷಯವು ನನ್ನ ಬುದ್ಧಿಗೆ ಸರ್ವಥಾ ಹೊಳೆಯದಾಗಿದೆ." ಎಂದು ಹೇಳುತ್ತಾ ಗ್ರೇ ಕೋಣೆಯೊಳಗೆ ಹೋದನು. ಎದುರಿಗಿದ್ದ ಒಂದು ಕುರ್ಚಿಯ ಮೇಲೆ ಕುಳಿತು ಮಾತಾಡಿದನು—"ಹೇಳಿರಿ, ನಾನು ತಮಗಾಗಿ ಯಾವ ಕಾರ್ಯ ವನ್ನು ಮಾಡಬೇಕಾಗಿದೆ?"

ಅಪರಿಚಿತನು ಹೇಳಿದನು--"ನಾನು ಪತ್ತೇದಾರಿ ಇಲಾಖೆಯ ಇನ್ಸ್ಪೆಕ್ಟರ್ ಹಾರ್ಕರ್. ನಿಮ್ಮನ್ನೀಗ ಸೆರೆಹಿಡಿಯಬೇಕಾದ ವಾರಂಟ್ ನನ್ನ ಹತ್ತಿರವಿದೆ. ಇದರ ಜೊತೆಗೇ ನಿಮ್ಮ ಕೋಣೆಯನ್ನು ಹುಡುಕಿ ಪರೀಕ್ಷಿಸುವ ವಾರಂಟ್ ಕೂಡ ನನ್ನ ಬಳಿಯಲ್ಲಿ ಇದೆ. ನೀವು ಕಳವಿನ ಮಾಲನ್ನು ಕೊಂಡಿಟ್ಟಿರುವಿರೆಂದು ನಿಮ್ಮ ಮೇಲೆ ಆರೋಪ ಬಂದಿದೆ."

ಅಪರಿಚಿತನ ಈ ಗಂಭೀರ ಭಾಷಣವನ್ನು ಆಲಿಸಿದೊಡನೆಯೇ ಗ್ರೇಯ ಶರೀರದ ರಕ್ತವೆಲ್ಲವೂ ನೀರುನೀರಾಯಿತು! ಗ್ರೇ ತಡವರಿಸುತ್ತ ಮಾತಾಡಿದನು--"ಇಲ್ಲ-ಇಲ್ಲ, ಸ್ವಾಮೀ! ತಾವು ನಿಶ್ಚಯವಾಗಿ ಏನೋ ಮೋಸ ಹೋಗಿರುವಿರಾಗಿ ಕಾಣಿಸುತ್ತದೆ. ಇಂತಹ ಕೆಲಸವನ್ನು ನಾನೆಂದೂ ಮಾಡತಕ್ಕವನಲ್ಲ. ಕಳವಿನ ಮಾಲನ್ನು ಕೊಂಡುಕೊಳ್ಳುವಷ್ಟು ಅಗತ್ಯವು ನನಗೇನಿರುವದು? ತಾವು ನನ್ನ ಬಗ್ಗೆ ಹಾಗೆಲ್ಲಾ ಭಾವಿಸಬಾರದು."

ಇನ್ಸ್ಪೆಕ್ಟರ್ ಹಾರ್ಕರನು ಹೇಳಿದನು:—"ಇಷ್ಟು ಆವೇಶಗೊಳ್ಳುವ ಅವಶ್ಯಕತೆಯೇನೂ ಇಲ್ಲ. ಡಾಕ್ಟರ್! ಅಗತ್ಯಬೀಳುವದಕ್ಕಿಂತ ಮುಂಚೆ ನೀವು ಯಾವ ಹೆಚ್ಚು ಮಾತನ್ನೂ ನಿಮ್ಮ ಬಾಯಿಂದ ಹೊರಡಿಸಲೇ ಬಾರದು. ನೀವಂದಂತೆ ಇದರಲ್ಲೀಗ ಯಾವುದಾದರು ಮೋಸವಿದ್ದರೂ ಇರಬಹುದಾದ ಸಂಭವವಿದೆ; ಆದರ ಈಗ ನಮಗ ದೊರಕಿರುವ ಸೂಚನೆಯಂತೆ ಇದು ಸ್ಪಷ್ಟವಾಗಿ ನಿಜವೇ ಇರುವುದು. ನಾವದನ್ನು ಅನುಸರಿಸಿಯೇ ಕೆಲಸ ನಡೆಸಬೇಕಾದುದು ಉಚಿತವಾಗಿದೆ. ನಾನೀಗ ನಿಮ್ಮ ಕೋಣೆಯನ್ನು ಹುಡುಕಿಸಲೇಬೇಕಾಗಿದೆ. ಈ ವಿಚಾರದಲ್ಲಿ ನೀವೇನಾದರೂ ತಿಳಿಸುವದಿದ್ದರೆ ಹಾಗೆ ತಿಳಿಸಲು ನಿಮಗೆ ಸಂಪೂರ್ಣ ಅಧಿಕಾರವಿದೆ; ಆದರೆ ಈ ಸಮಯದಲ್ಲಿ ನಿಮ್ಮ ಎಲ್ಲ ಮಾತೂ ನಿಮ್ಮ ಮೇಲಿನ ಆರೋಪದಲ್ಲಿ ಪ್ರಮಾಣವಾಗಿ ಎಣಿಸಲ್ಪಡುವುವೆಂಬುದನ್ನು ಮರೆಯಲಾಗದು."

ಡಾಕ್ಟರ್ ಗ್ರೇ ಉತ್ತರವಿತ್ತನು:—"ಆದರೆ ಈ ವಿಚಾರದಲ್ಲಿ ನಾನೇನು ತಿಳಿಸಲಿ? ಹಚ್ಚೇನ.? ಇದು ಯಾವ ವಿಚಾರವೆಂಬದೇ ನನ್ನ ಬುದ್ಧಿಗೆ ಹೊಳೆಯುವುದಿಲ್ಲ."

ಹಾರ್ಕರ್ ಹೇಳಿದನು:—"ವಿಚಾರವಿದು--ನಿನ್ನೆ ಸಂಜೆ ಒಬ್ಬ ಮನುಷ್ಯನು ನಿಮ್ಮ ಭೇಟಿಗಾಗಿ ಬಂದಿದ್ದನು. ಆ ಮನುಷ್ಯನ ವಿಷಯವಾಗಿ ನಡೆದ ಎಲ್ಲ ಸಂಗತಿಯನ್ನೂ ನೀವೀಗ ಸ್ಪಷ್ಟವಾಗಿ ವಿವರಿಸಿದರೆ ಒಳ್ಳೆಯದು" ಹೀಗೆ ಹೇಳಿ, ಇನ್ಸ್ಪೆಕ್ಟರನು ಅದೇ ವೇಳೆಯಲ್ಲಿ ಬಾಗಿಲಿಗೆ ಬಂದು ನಿಂತಿದ್ದ ಇನ್ನೊಬ್ಬ ಮನುಷ್ಯನನ್ನು ನೋಡಿ, ತಿರುಗಿ ಹೇಳಿದನು—"ಡಾಕ್ಟರ್! ಈ

ವಿಷಯವನ್ನು ನಾನು ನಿಮ್ಮ ಹತ್ತಿರ ಹೇಳಲು ಮರೆತಿದ್ದೆನು. ನನ್ನ ಸಂಗಡಿಗ ನಾದ ಈ ಸಾರ್ಜೆಂಟ್ ಬ್ರೌನ್ ಕೂಡ ನನ್ನೊಡನೆಯೇ ಇಲ್ಲಿಗೆ ಬಂದಿದ್ದನು, ನೀವಿಲ್ಲದಿರುವಾಗಲೇ ಇವನು ನಿಮ್ಮ ಇನ್ನೊಂದು ಕೋಣೆಯನ್ನು ಪರೀಕ್ಷಿಸ ತೊಡಗಿದ್ದನು. ಒಳ್ಳೇದು. ನಿನ್ನೆ ನಿಮ್ಮನ್ನು ಭೇಟಿಮಾಡಿದ್ದ ಮನುಷ್ಯನ ವಿಷಯವಾಗಿ ನೀವೇನಾದರೂ ಈಗ ತಿಳಿಸಲಿಚ್ಛಿಸುತ್ತೀರಾ?”

ಗ್ರೇ ಹೇಳಿದನು—“ತಿಳಿಸುವೆನು. ಆ ಮನುಷ್ಯನ ಹೆಸರು ಜೋನ್ಸ್. ಅವನು ಯಾವುದೋ ಒಂದು ದೊಡ್ಡ ಜ್ಯುಯೆಲರಿ ಫರ್ಮಿನ ಟ್ರಾವಲಿಂಗ್ ಏಜಂಟನಿರುವನು. ಇಂದು ಈ ವೇಳೆಯಲ್ಲಿ ಇನ್ನೊಂದು ಗಂಟೆಯ ನಂತರ ಅವನು ಇಲ್ಲಿಗೆ ಬರತಕ್ಕವನೂ ಇರುವನು. ಅವನು ನನಗೆ ಒಂದು ವಜ್ರ ದುಂಗುರವನ್ನು ಮಾರಲು ಒಪ್ಪಿರುವನು. ನನಗೆ ಶೀಘ್ರದಲ್ಲಿಯೇ ಮದು ವೆಯಾಗುವುದಿದೆ. ನನ್ನ ಭಾವೀ ಪತ್ನಿಗೆ ಅದೇ ಉಂಗುರವನ್ನು ಕೊಡ ಬೇಕೆಂದು ನಾನು ನಿಶ್ಚೈಸಿದ್ದೆನು. ವ್ಯಾಪಾರೀ ಭಾವದಿಂದ ನಾನದನ್ನು ಅವ ನಿಂದ ಕೊಂಡುಕೊಳ್ಳಲು ಯಾವ ತಗಹದ ತೊಂದರೆಯೂ ಇದ್ದಂತೆ ನಾನು ಭಾವಿಸಿರಲಿಲ್ಲ ಆ ಉಂಗುರವಿನ್ನೂ ನನ್ನ ಕೈಗೆ ಬಂದಿರುವುದಿಲ್ಲ. ನನ್ನ ಬಳಿ ಯಲ್ಲಿ ಇನ್ನಾವ ಆಭರಣವೂ ಇಲ್ಲ. ಇನ್ನು ಒಂದು ವೇಳೆ ಆ ವ್ಯಾಪಾರೀ ಮನುಷ್ಯನಾದ ಜೋನ್ಸನು ಸಂಶಯಾಸ್ಪದನಾದವನಿರುವನೆಂದು ನಿಶ್ಚಿತವಾ ದರೂ ಕೂಡ ಅದರಿಂದ ನನಗ್ಯಾವ ತರಹದ ಕೆಡುಕಾಗುವ ಸಂಭವವೂ ಇಲ್ಲ. ಆದರೆ ಅವನು ನಿನ್ನೆ ರಾತ್ರಿ ನನ್ನನ್ನು ಭೇಟಿಮಾಡಲು ಬಂದಿದ್ದನೆಂಬ ವಾರ್ತೆ ಯು ತಮಗೆ ಹೇಗೆ ತಿಳಿಯಿತು?”

ಪಾರ್ಕರನು ನಸುನಗುತ್ತಾ ಹೇಳಿದನು—“ನಮಗೆ ಈ ತರಹದ ವಾರ್ತೆ ಗಳೆಲ್ಲವೂ ಅನಾಯಾಸವಾಗಿಯೂ ಹೇಗೋ ತಿಳಿದು ಬರುತ್ತವೆ. ಅದರಲ್ಲೇನೂ ಸೋಜಿಗವಿಲ್ಲ. ಮಿಸ್ಟರ್ ಜಫ್ರೆ! ಆ ಮನುಷ್ಯನ ವಿಷಯವಾಗಿ ನಿಮಗೆ ಇನ್ನು ಯಾವ ಯಾವ ಸಂಗತಿಗಳು ಗೊತ್ತಿವೆ? ಅವನು ಕೆಲಸ ಮಾಡುತ್ತಿಪ್ಪ ಆ ಫರ್ಮಿನ ಹೆಸರೇನು? ನೀವು ಅವನೊಡನೆ ಭೇಟಿಯಾದ ಬಗೆ ಹೇಗೆ?”

ಗ್ರೇ ಹೇಳಿದನು—“ಸುಮಾರು ಮೂರು ದಿನಗಳ ಹಿಂದಿನ ಸಂಗತಿ ಯಿದು—ವಾರ್ಡರ್ ಸ್ಟ್ರೀಟಿನ ಸೋಹೋ ಸ್ಕ್ವಯರ್‌ನಲ್ಲಿನ ಹೋಟೆಲಿನಲ್ಲಿ ನನಗೂ ಅವನಿಗೂ ಭೇಟಿಯಾಯಿತು. ಆ ವೇಳೆಯಲ್ಲಿ ಹೋಟಲಿನ ಊಟದ ಕೋಣೆಯಲ್ಲಿ ಬಹಳ ಜನಸಂದಣಿ ಇದ್ದಿತು. ಸಂಯೋಗವಶಾತ್ತಾಗಿ ನನ್ನ ಟೇಬಲಿನ ಬಳಿಯಲ್ಲಿಯೇ ಅವನ ಜೊತೆಯಾಯಿತು. ಅಲ್ಲಿಯೇ ನಮ್ಮಿಬ್ಬರ ಸಂಭಾಷಣೆಯೂ ನಡೆಯಿತು. ಆಗ ಅವನು ಇತ್ತ ಕೆಲವು ದಿನಗಳಿಂದ ತನ್ನ

ವ್ಯಾಪಾರದ ವ್ಯವಸ್ಥೆಯು ಬಹಳ ಹೀನಾವಸ್ಥೆಗಿಳಿದಿರುವುದೆಂದೂ, ನಿಮಗೆ ಯಾವುದಾದರೂ ಆಭರಣದ ಅಗತ್ಯವಿದ್ದರೆ ಅದನ್ನು ವ್ಯಾಪಾರೀಭಾವದಿಂದ ಮಾರುವೆನೆಂದೂ, ಈ ಸಂಗತಿಯನ್ನು ಮಾತ್ರ ಯಾರ ಬಳಿಯಲ್ಲಿಯೂ ಪ್ರಕಟಿಸಬಾರದೆಂದೂ ಹೇಳಿದ್ದನು.''

ಹಾರ್ಕರ್ ವ್ಯಂಗ್ಯವಾಗಿ ಹೇಳಿದನು—''ನಿಮ್ಮ ಮೇಲೆ ಆತನು ಬಹಳ ದಯೆಯನ್ನು ತೋರಿಸಿದನಲ್ಲವೇ? ಇರಲಿ. ಆಗ ನೀವು ಅವನ ಮಾತನ್ನು ನಂಬಿ ಒಪ್ಪಿದಿರಿ; ಮತ್ತು ನಿಮ್ಮ ಬಿಡಾರದ ವಿಳಾಸವನ್ನು ತಿಳಿಸಿ, ಅಲ್ಲಿಗೆ ಬರುವುದಕ್ಕೂ ತಿಳಿಸಿದಿರಿ ಅಲ್ಲವೇ? ನಿನ್ನೆ ರಾತ್ರಿ ಅವನು ಕೆಲವು ಆಭರಣಗಳನ್ನು ಚುನಾಯಿಸಿ ತೆಗೆದುಕೊಂಡು ಬಂದದ್ದು ನಿಜವಷ್ಟೆ?''

ಡಾಕ್ಟರ್ ಗ್ರೇ ಹೇಳಿದನು—''ಹೌದು. ಅವನು ಕೆಲವು ವಜ್ರಗಳನ್ನೂ ಎಷ್ಟೋ ತರಹದ ಉಂಗುರಗಳ ಪಟ್ಟಿಯೊಂದನ್ನೂ ತಂದಿದ್ದನು. ನಾನು ಅವುಗಳಲ್ಲಿ ಒಂದು ವಜ್ರವನ್ನೂ, ಒಂದು ಉಂಗುರವನ್ನೂ ತೆಗೆದುಕೊಳ್ಳಲು ಒಪ್ಪಿದೆನು. ಅವನು ಅದನ್ನು ಈ ದಿನ ಇನ್ನೊಂದು ಗಂಟೆಯ ನಂತರ ಇಲ್ಲಿಗೆ ಬಂದು ಕೊಟ್ಟು ಹೋಗುವೆನೆಂದು ಒಪ್ಪಿ ಹೋದನು.''

ಗ್ರೇ ಜೇಬಿನಿಂದ ಒಂದು ಕಾರ್ಡನ್ನು ಹೊರತೆಗೆದು ಕೊಟ್ಟು ಹೇಳಿದನು—''ಇಗೋ, ನೋಡಿರಿ. ಇದು ಅವನ ವ್ಯಾಪಾರದ ಕಾರ್ಡ್. ಡೆಬೆನ್ ಹೆಮ್ ಎಂಡ್ ಸ್ಕ್ರೂಥರ್ಸ್ ಎಂಬುದು ಆ ಫರ್ಮಿನ ಹೆಸರು. ನನ್ನ ಬುದ್ಧಿಗೇನೋ ಅವನು ದುಷ್ಟನಲ್ಲವೆಂದು ತೋರುತ್ತದೆ. ಮುಂದೇನೋ ದೇವರೇ ಬಲ್ಲ!''

ಇನ್‌ಸ್ಪೆಕ್ಟರ್ ಹಾರ್ಕರನು ಹೇಳಿದನು—''ನಿನ್ನೆ ರಾತ್ರಿ ನಿಮ್ಮೊಡನೆ ಮಾತಾಡಲು ಬಂದ ಆ ಮನುಷ್ಯನು ಹಿಂದಿನ ಒಬ್ಬ ಬದ್ಮಾಷನಿರುವನು. ಕಡಿಮೆ ಪಕ್ಷ ಅವನು ಆರು ಹೆಸರಿನಿಂದ ಇದುವರೆಗೆ ಎಷ್ಟೋ ಕಳವುಗಳನ್ನು ಮಾಡಿ ಬಿಟ್ಟಿರುವನು. ಇತ್ತೀಚೆಗೆ ಒಂದು ಕಳವಿನ ಆರೋಪಕ್ಕೆ ಸಿಲುಕಿ ಜೈಲು ಮನೆಯ ಶಿಕ್ಷೆಯನ್ನು ಅನುಭವಿಸಿ ಹೊರಬಂದಿರುವನು. ಈ ಸಮಯದಲ್ಲಿ ಅವನಿಗೆ ವಿರುದ್ಧವಾದ ಯಾವ ಪ್ರಮಾಣವೂ ನಮ್ಮ ಹತ್ತರ ಇಲ್ಲ. ಆದರೂ ಸಂಶಯವಿದೆ. ಇದೇ ಮೊನ್ನೆ ಹತ್ತು ದಿನಗಳ ಹಿಂದೆ ನಡೆದ ಒಂದು ಕಳವಿನಲ್ಲಿ ಅವನ ಕೈವಾಡವೂ ಇರುವ ಸಂಭವವಿದೆ. ನಿಮ್ಮ ಮೇಲೆ ಸಂಶಯ ಪಡಲು ನಮ್ಮ ಬಳಿಯಲ್ಲೀಗ ಸಮುಚಿತವಾದ ಪ್ರಮಾಣಗಳಿವೆ, ಎಂದು ನೀವು ಈಗ ತಿಳಿದಿರಬಹುದು.''

ಗ್ರೇ ಹೇಳಿದನು—''ಆದರೆ-ಆದರೆ, ನಾನು ಕನಸಿನಲ್ಲಿಯೂ ಊಹಿಸ

ಲಾಗದಿರುವ ಇಂತಹ ಭಯಂಕರ ಆರೋಪವು ನನ್ನ ತಲೆಯ ಮೇಲೆ ಹೇಗೆ ಬಂದಿತೋ? ನನ್ನ ಬುದ್ಧಿಯು ಸ್ವಲ್ಪವೂ ತಿಳಿಯಲಾರದಾಗಿದೆ. ನನ್ನ ಎದುರಿಗೆ ಉಜ್ವಲ ಭವಿಷ್ಯವಿರುವಾಗ ಈ ಅಪರಾಧಿ ಪ್ರಪಂಚದೊಡನೆ ನಾನ್ಯಾಕೆ ಸಂಪರ್ಕವಿಟ್ಟೇನು? ಇತ್ತೀಚೆಗೆ ನಾನು ಡಾಕ್ಟರೀ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಡಿಗ್ರಿ...."

ಮಾತಿಗೆ ತಡೆಯನ್ನುಂಟುಮಾಡುತ್ತ ಹಾರ್ಕರ್ ಹೇಳಿದನು:-"ಹುಂ, ಇರಲಿ. ನಿಮ್ಮ ವಿಷಯವಾಗಿ ನಾವೀಗ ಇಷ್ಟರೊಳಗೆ ಬಹಳ ಸಂಗತಿಗಳನ್ನು ಗೊತ್ತುಹಚ್ಚಿರುವೆವು. ಆದ್ದರಿಂದಲೇ ಈ ವಿಚಾರದಲ್ಲಿ ಯಾವುದಾದರೊಂದು ಮೋಸನಡೆದಿರಬಹುದಾದ ಸಂದೇಹವು ನನಗೀಗ ತಲೆದೋರುತ್ತಿದೆ."

ಇಷ್ಟು ಮಾತನ್ನು ಹೇಳಿ, ಇನ್ಸ್ಪೆಕ್ಟರನು ತನ್ನ ಸಂಗಡಿಗನ ಕಡೆಗೆ ನೋಡಿ ಹೇಳಿದನು:—"ಏನು ಬ್ರಾನ್! ವಿಶೇಷವೇನು?"

ಗಂಭೀರಭಾವದಿಂದ ಬ್ರಾನ್ ಉತ್ತರವಿತ್ತನು:—"ಡ್ರಾ ಇರುವ ಬೀರಿನ ಹಿಂಭಾಗದಲ್ಲೊಂದು ಕಡೆ ಮುಚ್ಚಿಟ್ಟಿದ್ದ ಒಂದು ತೂತಿನಲ್ಲಿ ಸಂದೇಹಾಸ್ಪದವಾದ ಕೆಲವು ವಸ್ತುಗಳು ಕಾಣಿಸಿವೆ. ನೀವು ನನ್ನೊಡನೆ ಒಂದು ಸಾರೆ ಅಲ್ಲಿಯ ವರೆಗೆ ಬಂದು ನೋಡುವುದು ಒಳ್ಳೆಯದೆಂದು ಕಾಣುತ್ತದೆ."

ಇನ್ಸ್ಪೆಕ್ಟರನು ಒಡನೆಯೇ ತನ್ನ ಸ್ಥಾನದಿಂದ ಎದ್ದು ನಿಂತು ಡಾಕ್ಟರ್ ಗ್ರೇಯ ಮುಖದ ಕಡೆಗೆ ನೋಡುತ್ತ ಹೇಳಿದನು:—"ನೀವೂ ನಮ್ಮೊಂದಿಗೆ ಬರುವುದಾದರೆ ಇನ್ನೂ ವಿಶೇಷ."

ಗಾಬರಿಪಡುತ್ತ ಡಾಕ್ಟರನು ಇನ್ಸ್ಪೆಕ್ಟರ ಮಾತಿಗೊಪ್ಪಿ, ಅವನೊಡನೆ ತಾನು ಮಲಗುವ ಕೋಣೆಗೆ ಹೋದನು.

ಅದೊಂದು ಚಿಕ್ಕ ಕೋಣೆ. ಗೋಡೆಯ ಪಕ್ಕದಲ್ಲಿದ್ದ ಬೀರನ್ನು ಮುಂದಕ್ಕೆ ಎಳೆದಿದ್ದುದರಿಂದ ಕೋಣೆಯು ಇನ್ನೂ ಚಿಕ್ಕದಾಗಿ ತೋರುತ್ತಿದ್ದಿತು. ಹಾರ್ಕರನು ಬಗ್ಗಿ ಬೀರುವಿನ ಹಿಂಭಾಗದ ಕಡೆಗೆ ನೋಡಿದನು. ಮೊದಲನೇ ಸಾರೆ ಏನೂ ಕಾಣಿಸಲಿಲ್ಲ. ಅದೇ ವೇಳೆಯಲ್ಲಿ ಬ್ರಾನ್ ಮುಂದೆ ಹೋಗಿ ಗೋಡೆಯಲ್ಲಿದ್ದ ಒಂದು ಕಾಗದದ ತುಂಡನ್ನು ಮೇಲಕ್ಕೆತ್ತಿದನು. ಈಗ ಇನ್ಸ್ಪೆಕ್ಟರನ ದೃಷ್ಟಿಯು ಗೋಡೆಯೊಳಗಿನ ವಸ್ತುವಿನ ಮೇಲೆ ಬಿದ್ದು ಅವನ ಬಾಯಿಂದ ಈ ಮಾತು ಹೊರಟಿತು:—"ವಾಹವ್ವಾ! ಕೆಲಸವನ್ನೇನೋ ಬಹಳ ಚೊಕ್ಕಟವಾಗಿ ಮಾಡಲಾಗಿದೆ. ಗೋಡೆಯಿಂದ ಒಂದು ಇಟ್ಟಂಗಿಯನ್ನು ತೆಗೆಯಲಾಗಿದೆ. ವಿಧಾನವಾದರೋ ಬಹಳ ಪ್ರಾಚೀನವಾದುದು ಡಾಕ್ಟರ್! ಆದರೆ ಬಹಳ ಎಚ್ಚರಿಕೆಯದಾಗಿದೆ. ಇದರಲ್ಲಿ ಸಂಶಯ

ವಿಲ್ಲ. ಬಹಳ ಧ್ಯಾನವಿಟ್ಟು ಗೋಡೆಯು ಈ ಭಾಗವನ್ನು ಚೆನ್ನಾಗಿ ಪರೀಕ್ಷಿಸುವ ವರೆಗೆ ಇದರ ಮೇಲೆ ಯಾರ ದೃಷ್ಟಿಯೂ ಬೀಳುವ ಸಂಭವವಿಲ್ಲ. ನೀವೆಂದಾದರೂ ಇಂತಹ ಕಾರ್ಯವನ್ನು ಈ ಮುಂಚೆ ನೋಡಿರುವಿರಾ ಡಾಕ್ಟರ್!"

ಹೀಗೆ ಹೇಳಿ ಥಟ್ಟನೆ ಡಾಕ್ಟರನ ಕಡೆಗೆ ತಿರುಗಿ, ಡಾಕ್ಟರನ ಆ ವೇಳೆಯ ಮುಖಭಂಗಿಯನ್ನು ನೋಡಿದನು.

ಡಾಕ್ಟರ್ ಗ್ರೇ ಆ ಸಮಯದಲ್ಲಿ ಕಕ್ಕಾವಿಕ್ಕಿಯಾಗಿ ಎದುರಿಗಿನ ಗೋಡೆಯ ಕಡೆಗೆ ನೋಡುತ್ತಿದ್ದನು. ಅವನ ಹಣೆಯ ಮೇಲೆ ಬೆವರಿನ ಹನಿಗಳು ಒಂದೊಂದಾಗಿ ಒಡಮೂಡತೊಡಗಿದ್ದವು. ಗೋಡೆಯ ಒಂದು ತೂತಿನಲ್ಲಿ ಯಾವುದೋ ಒಂದು ವರ್ತಮಾನಪತ್ರಿಕೆಯಲ್ಲಿ ಸುತ್ತಿಟ್ಟಿದ್ದ ಕೆಲವು ಆಭರಣಗಳು ಈಗ ಹೊರಗೆಳೆಯಲ್ಪಟ್ಟಿದ್ದವು. ಅವುಗಳ ಮೇಲ್ಗಡೆಯಲ್ಲಿ ಚಿನ್ನದ ಒಂದು ಸಿಗರೇಟ್ ಕೇಸು ಇಡಲ್ಪಟ್ಟಿದ್ದಿತು. ಅಲ್ಲಿರುವ ಎಲ್ಲ ವಸ್ತುಗಳಿಗಿಂತಲೂ ಆ ಸಿಗರೇಟ್ ಕೇಸೇ ಹೆಚ್ಚು ಬೆಲೆಯುಳ್ಳದ್ದಾಗಿ ಕಾಣಿಸುತ್ತಿದ್ದಿತು.

ಇನ್ಸ್ಪೆಕ್ಟರ್ ಹಾರ್ಕರ್ ಹೇಳಿದನು:—"ಚೆನ್ನಾಗಿದೆ ಇಲ್ಲಿ ಮಾಲುಗಳು ಸಾಕಾದಷ್ಟು ಇಡಲ್ಪಟ್ಟಿವೆ. ಬ್ರೌನ್, ಇವುಗಳಲ್ಲಿ ಯಾವುದರ ಮೇಲೆಯೂ ನಿನ್ನ ಕೈ ತಗಲಿರುವದಿಲ್ಲವಷ್ಟೆ?"

ಬ್ರೌನ್ ಹೇಳಿದನು—ಇಲ್ಲ. ಈ ಆಭರಣಗಳನ್ನು ಸುತ್ತಿಟ್ಟಿರುವ ವರ್ತಮಾನ ಪತ್ರಿಕೆಯನ್ನು ಮಾತ್ರ ನಾನು ಮುಟ್ಟಿ ಬಿಡಿಸಿರುವೆನಲ್ಲದೆ ಇನ್ನಾವುದನ್ನೂ ಮುಟ್ಟಿರುವದಿಲ್ಲ. ಈ ಸಿಗರೇಟ್ ಕೇಸಿನ ಮೇಲೆ ಅದನ್ನಿಲ್ಲಿ ತಂದು ಇಟ್ಟಿರುವವರ ಕೈ ಬೆರಳುಗಳ ಗುರುತು ಅವಶ್ಯ ಬಿದ್ದಿರುವುದೆಂದು ನನಗನಿಸುತ್ತದೆ."

ಇನ್ಸ್ಪೆಕ್ಟರ್ ಹಾರ್ಕರ್ ಹೇಳಿದನು—"ನನ್ನ ಅಭಿಪ್ರಾಯವೂ ಹಾಗೆಯೇ ಇರುವುದು. ಇವುಗಳನ್ನೆಲ್ಲಾ ತಿರುಗಿ ಅದೇ ಕಾಗದದಲ್ಲಿ ಸುತ್ತಿ ಇಡು; ಹಾಗು ಸಾಧ್ಯವಾದಷ್ಟು ಬೇಗನೆ ಇದರ ಪರೀಕ್ಷೆಯನ್ನು ಮಾಡಿಸು."

ಇದೇ ಸಮಯದಲ್ಲಿ ಡಾಕ್ಟರ್ ಗ್ರೇ ಕನಸಿನಿಂದ ಎಚ್ಚೆತ್ತವನಂತೆ ಮಾತಾಡಿದನು—"ನಾನು ಈ ಸಾಮಾನುಗಳಲ್ಲಿ ಒಂದನ್ನೂ ಕೂಡ ಇಷ್ಟರ ವರೆಗೆ ಎಲ್ಲಿಯೂ ನೋಡಿರಲಿಲ್ಲ. ಗೋಡೆಯಲ್ಲಿರುವ ಈ ತೂತೂ ಕೂಡ ನನ್ನಿಂದ ಮಾಡಲ್ಪಟ್ಟಿರುವುದಿಲ್ಲ. ಅದು ಮಾತ್ರವಲ್ಲ; ಈ ಗೋಡೆಯಲ್ಲಿ ಹೀಗೊಂದು ತೂತು ಇರುವುದೆಂಬ ಸಂಗತಿಯೂ ಕೂಡ ನನಗೆ ತಿಳಿದಿರಲಿಲ್ಲ.

ನಾನು ನಿಶ್ಚಯವಾಗಿ ಹೇಳುತ್ತೇನೆ.—ನಾನು ಇದರಲ್ಲಿ ನಿರಪರಾಧಿ ಇರುವೆನು: ಗೋಡೆಯಲ್ಲಿನ ಈ ತೂತು ಕೂಡ ನಾನಿಲ್ಲಿಗೆ ವಾಸವಿರಲು ಬರುವುದಕ್ಕಿಂತ ಮುಂಚೆಯೇ ಮಾಡಲ್ಪಟ್ಟಿರಬೇಕು. ನನಗಾದರೋ ಇಷ್ಟರ ವರೆಗೆ...."

ಗ್ರೇಯ ಮಾತಿಗೆ ತಡೆಯನ್ನುಂಟು ಮಾಡುತ್ತ ಹಾರ್ಕನ್ ಹೇಳಿದನು: "ಎಷ್ಟು ದಿನಗಳಿಂದ ನೀವಿಲ್ಲಿ ವಾಸವಿರುವಿರಿ?"

ಗ್ರೇ ಹೇಳಿದನು-"ಸುಮಾರು ಎರಡು ವರ್ಷಗಳಾಗಿರಬಹುದು; ಆದರೆ ನಾನು ತಮಗ ವಿಶ್ವಾಸವುಂಟು ಮಾಡುತ್ತೇನೆ ...."

ಡಾಕ್ಟರನ ಮಾತಿನ ಕಡೆಗೆ ಲಕ್ಷ್ಯವಿಡದೆ ಇನ್ಸ್ಪೆಕ್ಟರ್ ಹೇಳಿದನು— ಈ ವಸ್ತುಗಳೆಲ್ಲವೂ ಇಂದಿಗ ಕೇವಲ ಹತ್ತು ದಿನಗಳ ಹಿಂದೆ ಓಲ್ಡ್ ಹರ್ಸ್ಟ್ ಗ್ರ್ಯಾಂಜ್‌ನಲ್ಲಿ ನಡೆದ ಕಳವಿಗೆ ಸಂಬಂಧಿಸಿದವುಗಳಾಗಿವೆ. ಡಾಕ್ಟರ್ ಗ್ರೇ, ನಿಮ್ಮನ್ನೀಗ ಕ್ಯಾನನ್ ರೋವರೆಗೆ ನಾವು ಒಯ್ಯಲೇಬೇಕಾಗಿದೆ. ನಾನು ಕೊಂಚ ನಿಮ್ಮನ್ನು ಅರಿತಿದ್ದರೂ ಕೂಡ ಕಳವಿನ ಈ ಮಾಲನ್ನು ತೆಗೆದಿಟ್ಟಿರುವ ತಪ್ಪಿನ ಮೇಲೆ ನಿಮ್ಮನ್ನು ಸೆರೆಹಿಡಿಯಲೇಬೇಕಾಗಿದೆ."

ಬಡಬಡಿಸುತ್ತಾ ಗ್ರೇ ಹೇಳಿದನು—"ಆದರೆ...., ತಾವೀಗ ದಯವಿಟ್ಟು ವೆಂಟ್‌ವರ್ತ್ ಆಸ್ಪತ್ರೆಗೆ ಸ್ವಲ್ಪ ಸಮಾಚಾರ ತಿಳಿಸೋಣಾಗಲಿ. ಅಲ್ಲಿಂದ ಡಾಕ್ಟರ್ ಸ್ಟೆಂಟನ್ ಮತ್ತು ಸೆಕ್ರೆಟರಿ ಫೆಂಟನ್ ಇವರನ್ನು ಕರೆಸೋಣಾಗಲಿ. ಅವರು ನಿಮಗೆ ತಿಳಿಸುವರು....."

ಗ್ರೇಯ ಮಾತಿಗೆ ಮುಂದೆ ಅವಕಾಶವೀಯದೆ ಇನ್ಸ್ಪೆಕ್ಟರ್ ಹೇಳಿದನು—"ಡಾಕ್ಟರ್ ಗ್ರೇ, ನಾನು ನನ್ನ ಡ್ಯೂಟಿಯನ್ನು ಮಾಡಬೇಕಾಗಿದೆ. ನಿಮ್ಮನ್ನೀಗ ಸೆರೆಹಿಡಿಯಲು ತಕ್ಕಷ್ಟು ಕಾರಣಗಳು ನನ್ನ ಕೈಯಲ್ಲಿ ಬಂದಿವೆ. ಈ ವಿಷಯದಲ್ಲಿ ಈಗ ಹೆಚ್ಚಿನ ಟೀಕಾ-ಟಿಪ್ಪಣಿಗಳನ್ನೇನೂ ನಾನು ಬಯಸುವದಿಲ್ಲ. ಯಾವ ಮನುಷ್ಯನು ಜೋನ್ಸ್ ಎಂಬ ಹೆಸರಿನಿಂದ ನಿಮಗೆ ಪರಿಚಿತನಾದನೋ ಮತ್ತು ಅದಕ್ಕಿಂತ ಮುಂಚೆ ಎಷ್ಟೋಬಾರಿ ವಿಲ್ಸನ್, ಸೇಜ್, ಪ್ಯಾಸ್ಟನ್, ಸೈಕ್ಸ್ ಮುಂತಾದ ಹೆಸರಿನಿಂದ ಪ್ರಖ್ಯಾತನಾಗಿದ್ದನೋ, ಆ ಮನುಷ್ಯನೇ ನಿಮಗೀಗ ಕೈ ತೋರಿಸಿರುವನೆಂದು ಊಹಿಸಬಹುದಾಗಿದೆ. ನಾವು ಅವನನ್ನು ಪ್ರಾಯಿಕವಾಗಿ ಸೇಜ್ ಎಂಬ ಹೆಸರಿನಿಂದಲೇ ಕರೆಯುತ್ತೇವೆ. ಸೇಜಿನ ಬೆರಳುಗಳ ಅಚ್ಚು ನಮ್ಮ ಫೈಲಿನಲ್ಲಿ ಹಾಜರಿರುವುದು. ಈ ಸಾಮಾನುಗಳನ್ನು ಪರೀಕ್ಷಿಸುವಾಗ ಇವುಗಳಲ್ಲಿ ಯಾವುದಾದರೊಂದರಲ್ಲಿಯಾದರೂ ಅವನ ಬೆರಳುಗಳ ಗುರುತು ದೊರೆತರೆ ಆಗ ನಿಮ್ಮ ಮೊಕದ್ದಮೆಯಲ್ಲಿ ನಿಮಗೆ ತಕ್ಕಷ್ಟು ಅನುಕೂಲ ದೊರೆಯುವುದೆಂದು ಹೇಳು

ವುದೇ ಬೇಕಾಗಿಲ್ಲ. ನೀವು ನಂಬಿರಿ. ನಿಮ್ಮ ಮೇಲೆ ಅಗತ್ಯಕ್ಕಿಂತ ಹೆಚ್ಚಿನ ಕಾಠಿಣ್ಯವು ಬರಬಾರದೆಂದು ನನ್ನ ಇಚ್ಛೆಯಿದೆ. ಒಳ್ಳೇದು. ಬ್ರೌನ್, ಇನ್ನೇನು?''

ಕೂಡಲೆ ಬ್ರೌನ್ ಉತ್ತರವಿತ್ತನು:—''ಅರ್ಧ ಸುಟ್ಟುಹೋದ ಒಂದು ಕಾಗದದ ಚೂರು ಅಗ್ಗಿಷ್ಟಿಕೆಯಲ್ಲಿ ದೊರೆತಿದೆ. ಡಾಕ್ಟರ್ ಗ್ರೇಯ ಹೆಸರಿಗೆ ಈ ಕಾಗದವು ಬರೆಯಲ್ಪಟ್ಟಿದೆ. ಇದರ ಹೆಚ್ಚಿನ ಭಾಗವು ಸುಟ್ಟುಹೋಗಿದೆ; ಆದರೂ ಸುಟ್ಟುಳಿದ ಭಾಗವನ್ನು ಓದಬಹುದು. ನೋಡಿರಿ.''

ಇಷ್ಟು ಮಾತನ್ನು ಹೇಳಿ ಬ್ರೌನ್ ಅರ್ಧಸುಟ್ಟುಹೋದ ಆ ಕಾಗದದ ತುಂಡೊಂದನ್ನು ಇನ್‌ಸ್ಪೆಕ್ಟರನ ಕೈಗೆ ಕೊಟ್ಟನು. ಇನ್‌ಸ್ಪೆಕ್ಟರನು ಓದಿ ಡಾಕ್ಟರನಿಗೆ ತೋರಿಸಿದನು. ಕಪ್ಪುಮಶಿಯಿಂದ ಬರೆಯಲ್ಪಟ್ಟಿದ್ದ ಆ ಕಾಗದದ ಬರೆವಣಿಗೆಯನ್ನು ಗ್ರೇ ಓದಿದನು:—''ಪ್ರಿಯ ಡಾಕ್ಟರ್ ಗ್ರೇ! ದಯವಿಟ್ಟು ಈ ಮಾಲುಗಳನ್ನೆಲ್ಲ ಸಾಧ್ಯವಾದಷ್ಟು ಬೇಗನೆ ಮುಚ್ಚಿ ಇಡಿರಿ. ಇವುಗಳ ಬೆಲೆ ಹೆಚ್ಚಾಗಿ ಎಷ್ಟು ಕೊಡಲು ಸಾಧ್ಯವೋ ಅಷ್ಟು ಒಳ್ಳೆಯದು. ಕಳುಹಿಸಿರಿ. ಸ್ಥಾನ—ಸರಿಯಾದ ಸಮಯ—ಹೆಚ್ಚು ದೊರೆಯಬೇಕು, ರೂಪಾಯಿಗಳನ್ನು ನೀವು ನನ್ನ ಬಳಿ............''

ಬಡಬಡಿಸುತ್ತ ಡಾಕ್ಟರ್ ಗ್ರೇ ಹೇಳಿದನು:—''ಇದು ಬಲು ಸೋಜಿಗವೇ ಸರಿ. ಈ ಕಾಗದದ ಮೇಲೂ ಕೂಡ ಇದಕ್ಕಿಂತ ಮೊದಲು ಎಂದೂ ನನ್ನ ದೃಷ್ಟಿಯು ಬಿದ್ದಿರಲಿಲ್ಲ. ಕೊನೆಗೆ ಈ ಕಾಗದವು ಅಗ್ಗಿಷ್ಟಿಗೆಯ ವರೆಗೆ ಹೇಗೆ ಬಂದಿತೆಂಬುದೇ ನನ್ನ ಬುದ್ಧಿಗೆ ಹೊಳೆಯುವದಿಲ್ಲ. ನನಗೀಗ ತೋ-ರುವದೇನಂದರೆ—ಈ ಸಂಕಟವನ್ನು ನನ್ನ ತಲೆಯ ಮೇಲೆ ತಂದೊಡ್ಡುವುದಕ್ಕಾಗಿ ಏನೋ ಒಂದು ದೊಡ್ಡ ಫಿತೂರಿಯು ಏರ್ಪಾಡು ನಡೆಯುತ್ತಿದೆ. ನನ್ನ ಬುದ್ಧಿಯು ಈಗ ಏನೂ ಕೆಲಸ ಮಾಡಲಾರದಾಗಿದೆ........—''

ಗ್ರೇಯ ಮಾತನ್ನು ತಡೆಯುತ್ತಾ ಇನ್‌ಸ್ಪೆಕ್ಟರನು ಹೇಳಿದನು—''ಸಾಕು, ಡಾಕ್ಟರ್, ಇದಕ್ಕಿಂತ ಹೆಚ್ಚಾಗಿ ಇನ್ನೊಂದು ಶಬ್ದವನ್ನೂ ಬಾ-ಯಿಂದ ಹೊರಡಿಸುವ ಅಗತ್ಯವಿರುವದಿಲ್ಲ. ಈ ವೇಳೆಯಲ್ಲಿ ನಿಮಗೀಗ ಎಲ್ಲಕ್ಕಿಂತ ಹೆಚ್ಚಿನ ಉಪಾಯವೆಂದರೆ ನಿಮ್ಮ ನಾಲಿಗೆಯನ್ನು ಹೆಚ್ಚು ಬಿಗಿ ಹಿಡಿದಿರಬೇಕು. ಹಿಂದಿನ ಒಂದೆರಡು ವಾರಗಳ ನಡುವೆ ನಿಮಗೆ ಸಂಬಂಧಿಸಿ ನಡೆದಿರುವ ಸಂಗತಿಗಳನ್ನೆಲ್ಲಾ ನೆನಪಿಸಿಕೊಳ್ಳಲು ಪ್ರಯತ್ನಿಸಿರಿ. ಪ್ರಯೋಜನವಿಲ್ಲದೆ ಸುಮ್ಮನೆ ಆವೇಶಗೊಳ್ಳಬಾರದು. ನಾವು ನಿಮ್ಮ ನ್ಯಾಯಪಕ್ಷದಲ್ಲಿ ಎಲ್ಲ ತರದ ಅನುಕೂಲತೆಗಳನ್ನು ಒದಗಿಸುವದಕ್ಕೂ ತಯಾರಿರುವೆವೆಂಬು

ದನ್ನು ನೆನಪಿಡಿರಿ; ಆದರೆ ನಾನು ಈಗ ಹೇಳುವುದೇನಂದರೆ, ಬೆರಳಿನ ಗುರುತನ್ನು ಪರೀಕ್ಷಿಸುವವರೆಗೆ ನೀವು ನನ್ನ ಕೋಣೆಯಲ್ಲಿಯೇ ಇರಬೇಕು. ನಿಮಗೆ ವಿರುದ್ಧವಾಗಿ ಮೊಕದ್ದಮೆಯನ್ನು ಹೂಡಲನುಕೂಲವಾಗುವಂತಹ ಇನ್ನಾವ ಸಂಗತಿಯೂ ನನ್ನೆದುರಿಗೆ ಬರದಿರಲಿ. ಈ ವಸ್ತುಗಳ ಮೇಲಿನ ಬೆರಳುಗಳ ಗುರುತನ್ನು ಪರೀಕ್ಷಿಸಲಿಕ್ಕೆ ನಾವು ನಿಮ್ಮ ಕೈ ಬೆರಳುಗಳ ಗುರುತನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ. ಪರೀಕ್ಷೆ ಮಾಡಿದ ನಂತರ ಇವುಗಳ ಮೇಲಿನ ಗುರುತು ನಿಮ್ಮ ಬೆರಳುಗಳದ್ದಲ್ಲವೆಂದು ತಿಳಿದುಬಂದರೆ, ಆಗ ನಿಮಗೆ ಸಾಧ್ಯವಾದಷ್ಟು ಅನುಕೂಲವಾದ ಸೌಕರ್ಯವನ್ನು ಕಲ್ಪಿಸಲು ತಯಾರಿರುವೆವು."

ಪ್ರಸನ್ನವದನನಾಗಿ ಡಾಕ್ಟರನು ಹೇಳಿದನು:-ಹಾಗಾಯಿತೆಂದರೆ ನಾನು ಒಂದು ರೀತಿಯಿಂದ ಸ್ವತಂತ್ರನೇ ಇದ್ದಂತಾಗುವುದು. ಈಗ ಸಾಧ್ಯವಾದಷ್ಟು ಬೇಗನೆ ಈ ಕೆಲಸವನ್ನು ಮುಗಿಸಿಬಿಡಿರಿ. ನಾನು ಈ ಆಭರಣಗಳನ್ನಾಗಲಿ ಈ ಕಾಗದವನ್ನಾಗಲಿ ಇದಕ್ಕಿಂತ ಮುಂಚೆ ಎಂದೂ ನೋಡಿಯೂ ಇರಲಿಲ್ಲ. ಹೀಗಿರುವಾಗ ಇವುಗಳ ಮೇಲೆ ನನ್ನ ಕೈಬೆರಳುಗಳ ಗುರುತು ಬೀಳುವ ಸಂಭವವಾದರೂ ಏನಿದೆ? ನನ್ನ ಬುದ್ಧಿಗೀಗ ತೋರುತ್ತಿರುವುದೇನಂದರೆ, ನನ್ನ ವಿರುದ್ಧವಾಗಿ ಯಾವುದೋ ಒಂದು ದೊಡ್ಡ ಮೋಸದ ಬಲೆಯು ಹರಡಲ್ಪಡುತ್ತಿದೆ; ಆದರೆ ಈ ಕಾರ್ಯಕ್ಕೆ ನನ್ನನ್ನೇ ಯಾಕೆ ಚುನಾಯಿಸಿಕೊಂಡಿರುವರೋ ತಿಳಿಯದಾಗಿದೆ. ಇನ್ನು ಕೋಣೆಯ ಎಲ್ಲ ವಸ್ತುಗಳನ್ನು ಪರೀಕ್ಷಿಸಿ ಬಿಡಿರಿ; ಯಾಕೆಂದರೆ, ಇಂತಹುದೇ ಯಾವುದಾದರೂ ವಸ್ತುವು ಅವುಗಳೊಳಗೆ ಸಿಗಬಹುದು.

ಸಾರ್ಜಂಟ್ ಬ್ರೌನ್‌ನು ನಿಶ್ಚಯಸ್ವರದಿಂದ ನುಡಿದನು:-"ಇಲ್ಲಿನ ಪ್ರತಿಯೊಂದೆಡೆಯಲ್ಲಿಯೂ ನಾನು ಪರೀಕ್ಷಿಸಿಯಾಗಿದೆ ಡಾಕ್ಟರ್!"

ಸಾರ್ಜಂಟ್ ಬ್ರೌನನಿಗೆ ಗ್ರೇಯ ಮೇಲೆ ಯಾಕಷ್ಟು ದಯೆಯುಂಟಾಗಿದ್ದಿತೋ ತಿಳಿಯದು. ನಿಶ್ಚಯವಾಗಿಯೂ ಡಾಕ್ಟರ್ ಗ್ರೇಗೆ ವಿರುದ್ಧವಾದ ಭಯಂಕರ ಘಡಯಂತ್ರವೊಂದು ರಚಿಸಲ್ಪಟ್ಟಿದೆ ಎಂದು ಸಾರ್ಜಂಟ್ ಬ್ರೌನನಿಗೆ ಮನವರಿಕೆಯಾಗಿದ್ದಿತು; ಆದರೆ ಅದಕ್ಕೆ ಕಾರಣವೇನೆಂಬುದು ಅವನ ಬುದ್ಧಿಗೂ ಹೊಳೆದಿರಲಿಲ್ಲ.

ಇನ್‌ಸ್ಪೆಕ್ಟರ್ ಹಾರ್ಕರನಿಗೂ ಇದೇ ಸ್ಥಿತಿಯಾಗಿದ್ದಿತು. ಇನ್‌ಸ್ಪೆಕ್ಟರನಿಗೆ ಯಾವನೋ ಒಬ್ಬ ಮನುಷ್ಯನು "ಟಿಮ್ ಸೇಜ್ ಉರ್ಫ ಪ್ಯಾಸ್ಟನ್ ಅಥವಾ ಸ್ಪೈಕ್ಸ್ ಅಥವಾ ವಿಲ್ಸನ್ ಎಂಬಾತನು ಡಾಕ್ಟರ್ ಗ್ರೇಯ ಕೋಣೆಯೊಳಗೆ ಹೋಗಿದ್ದನು; ಮತ್ತು ಕಳವಿನ ಕೆಲವು ಮಾಲುಗಳ ಲೇವಾದೇವಿಯು

ಡಾಕ್ಟರನ ಬಳಿಯಲ್ಲಿ ನಡೆದಿದೆ.'' ಎಂಬುದಿಷ್ಟೇ ಸೂಚನೆಯು ಬಂದಿದ್ದಿತು.

ಇನ್‌ಸ್ಪೆಕ್ಟರ್ ಹಾರ್ಕರನು ಈ ಕೊನೆಯ ಆರೋಪದ ಮೇಲೆ ರೂಪಾಯಿಗೆ ಹನ್ನೆರಡಾಣೆಯಷ್ಟು ಭಾಗ ಅವಿಶ್ವಾಸ ತಾಳಿದ್ದನು; ಆದರೆ ಉಳಿದ ನಾಲ್ಕಾಣೆಯಷ್ಟು ಭಾಗದ ಸಂದೇಹವೂ ಕೂಡ ಡಾಕ್ಟರ್ ಗ್ರೇಯನ್ನು ಸೆರೆಹಿಡಿಯಲು ಸಾಕಾದ ಕಾರಣವೇ ಆಗಿದ್ದಿತು. ಡಾಕ್ಟರ್ ಗ್ರೇಯ ಮೇಲೆ ಯಾಕಿಷ್ಟು ದಯಾರ್ದ್ರಭಾವವು ತನ್ನ ಹೃದಯದಲ್ಲುಂಟಾಯಿತೆಂಬುದನ್ನು ಹಾರ್ಕರನೂ ತಿಳಿಯಲಾರದಾಗಿದ್ದನು. ಡಾಕ್ಟರನ ನಿರ್ದೋಷಿತೆಯು ಯಾವ ತರಹದಿಂದಾದರೂ ಹೊರಪಡಲೆಂದು ಹಾರ್ಕರನು ಮನದಲ್ಲಿ ಇಚ್ಛಿಸುತ್ತಿದ್ದನು.

ಪ್ರಪಂಚದ ಪರಿಸ್ಥಿತಿಯಲ್ಲಿ ಯಾವ ವಿಚಾರವನ್ನೂ ನಿಶ್ಚಿತರೂಪದಿಂದ ತಿಳಿಸಲು ಸಾಧ್ಯವಿಲ್ಲ. ಹೀಗಿರಲು ಡಾಕ್ಟರ್ ಗ್ರೇಯ ವಿಷಯದಲ್ಲಿಯೂ ನಿಶ್ಚಿತರೂಪದಿಂದ ಇನ್‌ಸ್ಪೆಕ್ಟರನು ಏನು ಹೇಳಬಲ್ಲನು? ಇಂತಿಂತಹ ಎಷ್ಟೋ ಮೊಕದ್ದಮೆಗಳು ಇಷ್ಟರೊಳಗೆ ಅವನ ದೃಷ್ಟಿಗೆ ಬಂದುಹೋಗಿದ್ದವು. ಮೊದ ಮೊದಲು ನೋಡುವಾಗ ಸಾಮಾನ್ಯವಾದ ಆಡಿನಂತೆ ಕಾಣಿಸುತ್ತಿದ್ದ ವ್ಯಕ್ತಿಯೂ ಕೂಡ ಕೊನೆ ಕೊನೆಗೆ ಅತಿ ಭಯಂಕರ ವ್ಯಾಘ್ರ ಮುಖದ್ವಾಗಿ ಪ್ರಕಟವಾಗಿರುವಂತಹ ಎಷ್ಟೋ ಮೊಕದ್ದಮೆಗಳು ಇನ್‌ಸ್ಪೆಕ್ಟರನಿಗೆ ಪರಿಚಿತವಾಗಿದ್ದವು. ಇರಲಿ

ಡಾಕ್ಟರನ ನಿರ್ದೋಷಿತೆಯು ಸಾಧಿಸಲ್ಪಟ್ಟಾಗ ತನ್ನ ಪ್ರಸನ್ನತೆಯನ್ನು ತೋರಿಸುವುದಕ್ಕೂ ಇನ್ಸ್ಪೆಕ್ಟರನು ತಯಾರಿದ್ದನು. ಇಂತಹ ಮೊಕದ್ದಮೆಗಳಲ್ಲಿ ನಿರಾಶೆಗಾಗಿ ಹಿಂದಿರುಗುವದೂ ಕೂಡ ಆಶ್ಚರ್ಯದ ಸಂಗತಿಯಾಗಿರಲಿಲ್ಲವೆಂದು ಅವನು ಅರಿತಿದ್ದನು.

ಇಷ್ಟರೊಳಗೇ ಬೆರಳುಗಳ ಗುರುತನ್ನು ಕಂಡುಹಿಡಿಯುತಕ್ಕ ವಿಶೇಷಜ್ಞನೊಬ್ಬನು ಆ ಕೆಲಸಕ್ಕಾಗಿ ನಿಯಮಿಸಲ್ಪಟ್ಟಿದ್ದನು.

ವಿಲಂಬವಾಗುತ್ತಿರುವದನ್ನು ಕಂಡು ಗಾಬರಿಯಾದ ಗ್ರೇ ವಿಚಾರಿಸಿದನು: "ಬೆರಳುಗಳ ಗುರುತನ್ನು ನಿಶ್ಚೈಸಲು ಇನ್ನು ವಿಲಂಬವೇಕೆ?''

ಆದಕ್ಕುತ್ತರವಾಗಿ ಇನ್ಸ್ಪೆಕ್ಟರನು ಅವನಿಗೆ ಸಮಾಧಾನವಾಗುವಂತೆ ಮಾತಾಡಿದನು. -"ಇಲ್ಲ, ಇನ್ನೇನೂ ಹೆಚ್ಚು ವಿಲಂಬವಾಗಲಾರದು, ಗ್ರೇ! ಬಲು ಬೇಗನೆ ವಿಶೇಷಜ್ಞನ ಕೆಲಸವು ಮುಗಿಯುವುದು.''

ಇನ್ಸ್ಪೆಕ್ಟರ್ ಹಾರ್ಕರನು ಬಹಳ ಹೊತ್ತಿನಿಂದ ಡಾಕ್ಟರ್ ಗ್ರೇಯ ಮುಖವನ್ನು ಧ್ಯಾನವಿಟ್ಟು ನಿರೀಕ್ಷಿಸುತ್ತಿದ್ದನು. ಡಾಕ್ಟರನ ಮುಖಭಾವವನ್ನು ಪರೀಕ್ಷಿಸಿ ಇವನು ನಿರಪರಾಧಿಯೇ ಸರಿ ಎಂದು ಇನ್ಸ್ಪೆಕ್ಟರನಿಗೆ ಮನದಟ್ಟಾ

ಯಿತು. ಅವನು ಪ್ರಸನ್ನವದನನಾಗಿ ವಿಶೇಷಜ್ಞನ ಕೆಲಸದ ಕಡೆಗೆ ದೃಷ್ಟಿ ಹೊರಳಿಸಿದನು. ಅಷ್ಟರೊಳಗೇ ವಿಶೇಷಜ್ಞನು ಡೆವಲಪ್ ಮಾಡಿ ಎರಡು ಕಾಗದಗಳನ್ನು ಕೈಯಲ್ಲಿ ಹಿಡಿದುಕೊಂಡು ಇನ್ಸ್ಪೆಕ್ಟರನ ಕಡೆಗೆ ನೋಡಿದನು.

ಇನ್ಸ್ಪೆಕ್ಟರನು ಹೇಳಿದನು—"ಡಾಕ್ಟರ್ ಗ್ರೇಯ ಬೆರಳುಗಳ ಗುರುತಿಗೂ ಈ ವಸ್ತುಗಳ ಮೇಲಿನ ಗುರುತಿಗೂ ಸಂಬಂಧವಿಲ್ಲ, ಅಲ್ಲವೇ?"

ಅದಕ್ಕುತ್ತರವಾಗಿ ವಿಶೇಷಜ್ಞನು ತಲೆಯಾಡಿಸಿದನು. ಅವನ ಮನಸ್ಸಿಗೂ ಕೂಡ ಡಾಕ್ಟರ್ ಗ್ರೇ ನಿರ್ದೋಷಿಯೇ ಇರುವನೆಂದು ನಿಶ್ಚಯವಿದ್ದಿತಲ್ಲದೆ ನಿಶ್ಚಯವಾಗಿಯೂ ನಿರ್ದೋಷಿಯಾದೊಬ್ಬ ಬಡಪಾಯಿಯು ಕಾಲ ವೈಚಿತ್ರ್ಯದಿಂದ ಸಂಕಟಕ್ಕೆ ಸಿಲುಕುವನೆಂಬ ವ್ಯಥೆಯೂ ಆಗಿದ್ದಿತು.

ಇನ್ಸ್ಪೆಕ್ಟರನ ಮಾತಿಗೆ ಉತ್ತರವಾಗಿ ವಿಶೇಷಜ್ಞನು ಹೇಳಿದನು—"ಏನು ಹೇಳಲಿ? ಇನ್ಸ್ಪೆಕ್ಟರ್, ನೋಡೋಣಾಗಲಿ-ಈ ಬೆರಳುಗಳ ಗುರುತು ಆ ಕಾಗದದ ಮೇಲೂ ಇದೆ, ಆ ಸಿಗರೆಟ್‌ಕೇಸಿನ ಮೇಲೆಯೂ ಇದೆ. ಇವೆರಡೂ ಗುರುತುಗಳು ಡಾಕ್ಟರ್ ಗ್ರೇಯ ಬೆರಳುಗಳದ್ದೇ ಇರುವವೆಂಬ ವಿಷಯದಲ್ಲಿ ಸಂಶಯವಿಲ್ಲ. ಹೌದೋ ಅಲ್ಲವೋ ಎಂಬುದನ್ನು ನೀವೇ ಈಗ ನೋಡ ಬಹುದು."

ಹೀಗೆ ಹೇಳಿ ವಿಶೇಷಜ್ಞನು ಕಾಗದಗಳೆರಡನ್ನು ಇನ್ಸ್ಪೆಕ್ಟರನ ಕೈಗಿತ್ತನು. ವಿಶೇಷಜ್ಞನ ಮೇಲಿನ ಮಾತನ್ನು ಆಲಿಸಿದೊಡನೆಯೇ ಭಯ ಮತ್ತು ಆಶ್ಚರ್ಯದಿಂದ ಡಾಕ್ಟರ್ ಗ್ರೇಯ ಮುಖವು ಕಪ್ಪಿಟ್ಟಿತು. ಉದ್ವಿಗ್ನನಾಗಿ ಹೇಳಿದನು: "ಏನು ಹೇಳಿದರು ಇವರು? ನನ್ನದೆಂದೇ? ಉಹುಂ, ಇಲ್ಲ. ಇನ್ಸ್ಪೆಕ್ಟರ್, ಇದೆಂದೂ ಸಂಭವಿಸುವ ಮಾತಲ್ಲ. ನಾನು ಮೊದಲೇ ನಿಮ್ಮ ಬಳಿಯಲ್ಲಿ ತಿಳಿಸಿ ಬಿಟ್ಟಿರುವೆನು -ನೀವು ಈ ವಸ್ತುಗಳನ್ನು ನನ್ನೆದುರಿಗೆ ತೋರಿಸುವದಕ್ಕಿಂತ ಇವನ್ನು ಮುಂಚೆ ಎಲ್ಲಿಯೂ ಯಾವಾಗಲೂ ಕಂಡಿರಲಿಲ್ಲ, ಹೀಗಿರುವಾಗ ನಾನಿವುಗಳನ್ನು ಮುಟ್ಟುವದೆಲ್ಲಿಂದ ಬಂದಿತು? ಮತ್ತು ನನ್ನ ಬೆರಳುಗಳ ಗುರುತು ಬೀಳುವುದು ಹೇಗೆ ಸಂಭವಿಸೀತು? ನಿಶ್ಚಯವಾಗಿಯೂ ನನ್ನ ಮೇಲೆ ಯಾವನೋ ದುಷ್ಟನೊಬ್ಬನು ಗುಪ್ತಬಲೆಯನ್ನು ಹರಡಿರುವನು...."

ಗ್ರೇ ತನ್ನ ಮಾತನ್ನು ಅಷ್ಟಕ್ಕೇ ನಿಲ್ಲಿಸಿದನು. "ಅವನೊಬ್ಬ ದೊಡ್ಡ ಕ್ರೂರ ಹೃದಯನಾದ ವೈಜ್ಞಾನಿಕನಿರುವನು." ಎಂದು ನೋರಳು ಹೇಳಿದ್ದ ಮಾತು ಈಗ ಗ್ರೇಯ ಮನದೊಳಗೆ ಥಟ್ಟನೆ ನೆನಪಾಗಿ, ಅದು ಬಾಯಿಂದ ಹೊರ ಹೊರಡುವದರಲ್ಲಿದ್ದಿತು; ಆದರೆ ಒಡನೆ ಅಷ್ಟಕ್ಕೇ ಮನಸ್ಸನ್ನು ಬಿಗಿ ಹಿಡಿದನು.

ಗ್ರೇ ಮನದೊಳಗೇ ಪ್ರಶ್ನಿಸಿಕೊಂಡನು—"ಆದರೆ ಈ ಆರೋಪಕ್ಕೂ ಡಾಕ್ಟರ್ ಮೇಡೀನನಿಗೂ ಸಂಬಂಧವೇನಿದೆ? ಒಂದು ವೇಳೆ ಸಂಬಂಧವೇನಾದರೂ ಇದ್ದರೂ ಪೋಲೀಸರ ಬಳಿಯಲ್ಲಿ ನಾನದನ್ನು ಹೇಳುವುದರಿಂದ ಒಳ್ಳೆಯದಾಗದು."

ಮಾತನಾಡುತ್ತಾ ಆಡುತ್ತಾ ನಡುವೆ ನಿಲ್ಲಿಸಿದುದನ್ನು ಕಂಡು ಇನ್‌ಸ್ಪೆಕ್ಟರನು ಪ್ರಶ್ನಿಸಿದನು---"ಹುಂ-ಹುಂ, ಡಾಕ್ಟರ್ ಏನು? ಮಾತಾಡುತ್ತಿದ್ದಾಗಲೇ ನಡುವೆ ಯಾಕೆ ಥಟ್ಟನೆ ನಿಲ್ಲಿಸಿದಿರಿ? ಹುಂ, ಹೇಳಿರಿ, ಮುಂದೆ ಏನದು?"

ಗ್ರೇ ತನ್ನ ಅಭಿಪ್ರಾಯವನ್ನು ಹೊರಗೆಡವದೆ ಮಾತನ್ನು ಮುಂದುವರಿಸಿದನು—"ಯಾವನು ಹೀಗೆ ನನ್ನ ಮೇಲೆ ಬಲೆ ಬೀಸಿರುವನೋ, ತಿಳಿಯದಾಗಿದೆ."

ಇನ್‌ಸ್ಪೆಕ್ಟರನು ಹೇಳಿದನು—"ಸರಿ, ನಿಲ್ಲಿಸಿರಿ. ಇನ್ನಿದಕ್ಕಿಂತ ಹೆಚ್ಚಾಗಿ ಮಾತಾಡದಿರುವುದೇ ಒಳ್ಳೆಯದು. ಡಾಕ್ಟರ್! ಈಗ ನಿಮ್ಮ ವಿರುದ್ಧವಾಗಿ ಸಾಕಾದಷ್ಟು ಪ್ರಮಾಣಗಳು ನನ್ನ ಬಳಿಯಲ್ಲಿರುವುವು. ಇವುಗಳಿಂದ ನಿಮ್ಮನ್ನು ತಪ್ಪುಗಾರರೆಂದು ನಿಶ್ಚೈಸಿ ನಾನೀಗ ಮುಂದುವರಿಯಬೇಕಲ್ಲದೆ ಇನ್ನೇನನ್ನು ಮಾಡುವುದಕ್ಕೂ ಸಾಧ್ಯವಿಲ್ಲವಾಗಿದೆ. ಹುಂ ಹೊರಡಿರಿ."

ಡಾಕ್ಟರನು ಪೋಲೀಸ್ ಸ್ಟೇಷನ್ನಿಗೊಯ್ಯಲ್ಪಟ್ಟು ಒಂದು ಗಂಟೆಯ ನಂತರ ಜಾಮೀನಿನ ಮೇಲೆ ಬಿಡಲ್ಪಟ್ಟನು.

ವೆಂಟ್‌ವರ್ತ್ ಫೌಂಡೇಷನ್ ಆಸ್ಪತ್ರೆಯ ಸೆಕ್ರೆಟರಿಯಾದ ಫೆಂಟನ್ ಮತ್ತು ಡಾಕ್ಟರ್ ಸ್ಟೆಂಟನ್‌ರು ಈ ಕೋಲಾಹಲಕರವಾದ ವಾರ್ತೆಯನ್ನು ಕೇಳಿದೊಡನೆಯೇ ಡಾ. ಗ್ರೇಯ ಸಹಾಯಕ್ಕಾಗಿ ಪೋ. ಸ್ಟೇಷನ್ನಿಗೆ ಓಡಿ ಬಂದರು; ಆದರೆ ಅವರ ಬುದ್ಧಿಯೂ ಈ ವಿಷಯದಲ್ಲಿ ಏನೂ ಕೆಲಸ ಮಾಡಲಾರದಾಯಿತು. ಇತ್ತ ಚಿರಪರಿಚಿತನಾದ ಡಾಕ್ಟರ್ ಗ್ರೇಯ ಮೇಲೆಯೂ ಅವಿಶ್ವಾಸ ತಾಳುವಂತಿಲ್ಲ; ಅತ್ತ ಬೆರಳುಗಳ ಗುರುತಿನ ಮೇಲೆಯೂ ಅವಿಶ್ವಾಸ ತಾಳುವಂತಿಲ್ಲ. ಮುಂದೇನು ಮಾಡಬೇಕೆಂಬುದು ಅವರ ಬುದ್ಧಿಗೂ ಹೊಳೆಯಲಿಲ್ಲ.

ಸ್ವಲ್ಪ ಹೊತ್ತಿನ ಮೇಲೆ ಡಾಕ್ಟರ್ ಸ್ಟೆಂಟನ್‌ನು ಹಾರ್ಕರನನ್ನು ಕುರಿತು ಹೇಳಿದನು—"ಇಂತಹ ಆರೋಪದ ಮೇಲೆ ನಾನು ಎಂದೂ ವಿಶ್ವಾಸ ತಾಳಲಾರದವನಾಗಿರುವೆನು. ಈ ಜೆಫ್ರಿ ಗ್ರೇ ಬಾಲಕನಾಗಿದ್ದ ಕಾಲದಿಂದಲೂ ನನಗೆ ಪರಿಚಿತನಾಗಿರುವನು. ನಾನು ಇವನ ತಂದೆಯನ್ನೂ ಚೆನ್ನಾಗಿ ಬಲ್ಲೆನು. ಇಂತಹನಮೇಲೆ ಈ ಆಲೋಪವನ್ನು ತಂದಿಡುವುದೆಂದರೆ ಹುಚ್ಚುತನವಲ್ಲದೆ ಇನ್ನೇನೂ ಇಲ್ಲವೆಂದು ನಾನು ತಿಳಿಯುತ್ತೇನೆ. ಇಂತಹ ಸಂಗತಿಗಳ ಮೇಲೆ

ಸ್ವಲ್ಪ ಆಲೋಚನೆ ಮಾಡಿ ನೋಡಿದರೆ, ನೀವೂ ಇವನ ಮೇಲೆ ಅವಿಶ್ವಾಸ ತಾಳಲಾರಿರಿ. ಡಾಕ್ಟರ್ ಗ್ರೇ ಅಪರಾಧಿಯಾಗುವುದೆಂಬುದು ಅಸಂಭವವೇ ಸರಿ, ಎಂದು ನಾನು ಎದೆ ತಟ್ಟಿ ಹೇಳುತ್ತೇನೆ. ಅದಲ್ಲದೆ ಇತ್ತ ಸ್ವಲ್ಪ ದೃಷ್ಟಿ ಇಡೋಣಾಗಲಿ. ಕಳವಿನ ಮಾಲುಗಳನ್ನು ಕೊಂಡುಕೊಳ್ಳುವ ಅಲ್ಪ ಆಶೆಗೆ ಇಷ್ಟು ದೊಡ್ಡ ಡಾಕ್ಟರನು ಬಲಿ ಬಿದ್ದು ತನ್ನ ಮುಂದಿನ ಉಜ್ವಲ ಭವಿಷ್ಯವನ್ನು ಹಾಳುಮಾಡಿಕೊಳ್ಳಲು ಹೇಗೆ ತಯಾರಾದಾನು? ಈ ಸಂಗತಿಯನ್ನು ಯಾವ ವಿಧದಿಂದಲೂ ನಂಬುವಂತಿಲ್ಲ, ಇನ್‌ಸ್ಪೆಕ್ಟರ್, ನೀವೂ ಕೂಡ ಈ ನನ್ನ ಅಭಿಪ್ರಾಯವನ್ನು ಪೂರ್ಣ ಒಪ್ಪುವಿರಾಗಿ ನಂಬುತ್ತೇನೆ.''

ಹಾರ್ಕರನು ಹೇಳಿದನು:-''ನಿಜ. ತಮ್ಮ ಅಭಿಪ್ರಾಯವನ್ನು ಒಪ್ಪಲೇ ಬೇಕು; ಆದರೆ ನನ್ನೊಬ್ಬನ ಸ್ವತಂತ್ರ ಅಭಿಪ್ರಾಯದಿಂದ ಈಗ ಯಾವ ಲಾಭವೂ ಆಗಲಾರದೆಂದು ನೀವೂ ಅರಿತಿರಬಹುದು. ಪ್ರಮಾಣಗಳ ಮೇಲೆ ವಿಶ್ವಾಸವಿಟ್ಟು ಪೋಲೀಸರು ಕೆಲಸಮಾಡಬೇಕಾಗಿದೆ ಎಂಬುದು ನಿಮಗೂ ಗೊತ್ತಿದೆ. ಹಾಗಲ್ಲದೆ ಇನ್ನಾವ ಉಪಾಯವೂ ನಮ್ಮ ಬಳಿಯಲ್ಲಿ ಇಲ್ಲ ವೆಂಬುದನ್ನು ನೀವೂ ಅರಿತಿರಬಹುದು.''

ಇಷ್ಟು ಮಾತನ್ನು ಹೇಳಿ ಇನ್‌ಸ್ಪೆಕ್ಟರನು ಸುಮ್ಮನಾದನು. ಸ್ವಲ್ಪ ಹೊತ್ತು ಆಲೋಚಿಸಿ ಇನ್‌ಸ್ಪೆಕ್ಟರನು ಮಂದಸ್ವರದಿಂದ ತಿರುಗಿ ಮಾತಾಡ ತೊಡಗಿದನು:-''ಆದರೆ ಒಂದು ಉಪಾಯವನ್ನು ಸೂಚಿಸಬಲ್ಲೆನು. ಡಾಕ್ಟರ್ ಗ್ರೇಯನ್ನು ಈ ಭಯಂಕರ ಸಂಕಟದಿಂದ ಉಳಿಸಬಲ್ಲ ವ್ಯಕ್ತಿ ಎಂದರೆ, ಇಡೀ ಲಂಡನ್ನಿನಲ್ಲಿ ಸ್ಯಾಕ್ಸ್ಟನ್ ಬ್ಲೇಕ್ ಒಬ್ಬರಲ್ಲದೆ ಇನ್ನಾರೂ ಇಲ್ಲ. ಅವರೊಬ್ಬ ಸುಪ್ರಸಿದ್ಧ ಪತ್ತೇದಾರರೆಂಬುದು ನಿಮಗೂ ತಿಳಿದಿರಬಹುದು.''

ಸ್ಟಂಟನ್ ಹೇಳಿದನು:—''ಹೌದು. ತಿಳಿದಿದೆ. ಅವರಿರುವುದೆಲ್ಲಿ?''

ಹಾರ್ಕರ್ ಹೇಳಿದನು:—''ಆದರೆ ಅದನ್ನು ತಿಳಿಯುವುದೇ ಕಷ್ಟ. ಈಗವರು ಲಂಡನ್ನಿನಲ್ಲಿ ಇಲ್ಲವೆಂಬುದು ಮಾತ್ರ ನನಗೆ ತಿಳಿದಿದೆ. ಯಾವುದೋ ಒಂದು ಕೆಲಸಕ್ಕಾಗಿ ಲಂಡನ್ನಿನಿಂದ ಹೊರಗೆ ಹೊರಟು ಹೋಗಿರುವರು; ಆದರೆ ಅವರು ಹಿಂದಿರುಗಿ ಬಂದೊಡನೆಯೇ ಅದನ್ನು ನಾನು ನಿಮಗೆ ತಿಳಿಸ ಬಲ್ಲೆನು. ಅವರೊಪ್ಪಿದರೆಂದರೆ, ಈ ಕಾರ್ಯದಲ್ಲಿ ಉಚಿತವಾದ ಸಹಾಯ ವನ್ನು ಮಾಡಬಲ್ಲರು. ನನ್ನ ಆಂತರಿಕವಾದ ಅಭಿಪ್ರಾಯವನ್ನೀಗ ನಿಮಗೆ ತಿಳಿಸುತ್ತಿರುವೆನು. ಡಾಕ್ಟರ್ ಗ್ರೇ ನಿರ್ದೋಷಿಗಳಾಗಿದ್ದರೂ ಅವರ ಮೇಲೆ ಯಾವುದೋ ಒಂದು ದುಷ್ಟರ ಗುಂಪಿನ ಕ್ರೂರದೃಷ್ಟಿಯು ಬಿದ್ದಿರುವುದೆಂದು ಈಗೀಗ ನನ್ನ ಮನಸ್ಸಿಗನಿಸುತ್ತಿದೆ. ಇದಕ್ಕಿಂತ ಹೆಚ್ಚಿಗೆ ನಾನೀಗ ಏನನ್ನೂ

ಹೇಳಲಾರೆನು. ಒಳ್ಳೇದು, ಡಾಕ್ಟರ್ ಗ್ರೇ, ನೀವು ದಯುಪಿಟ್ಟು ನಾಳೆ ಬೆಳಿಗ್ಗೆ ಎಂಟೂವರೆ ಗಂಟೆಗೆ ಸರಿಯಾಗಿ ಇಲ್ಲಿಗೆ ಮರೆಯದೆ ಬರಬೇಕು.''

ಪೋಲೀಸ್‌ಸ್ಟೇಷನ್ನಿನಿಂದ ಹೊರಟ ಮೇಲೆ ಡಾಕ್ಟರ್ ಸ್ಟೆಂಟನ್ ಹೇಳಿದನು:—''ಗ್ರೇ, ನೀನೀಗ ನನ್ನ ಮನೆಗೇ ಬಂದಿರುವುದು ಒಳ್ಳೆಯದು. ನಿನ್ನ ಮೇಲೀಗ ದೊಡ್ಡ ಸಂಕಟವು ಅಕಸ್ಮಾತ್ ಬಂದಿರುವುದು; ಆದರೆ ಈ ಸಂಬಂಧದಲ್ಲಿ ಪೋಲೀಸರ ವಾಸ್ತವಿಕ ಸ್ಥಿತಿಯನ್ನೂ ನಾನು ತಿಳಿಯದೇ ಇಲ್ಲ. ನಿನ್ನ ವಿರುದ್ಧವಾಗಿ ಅಷ್ಟು ಮುಖ್ಯವಾದ ಸಾಕ್ಷ್ಯವು ದೊರೆತಿರುವಾಗ, ಅವರಾದರೂ ಏನು ಮಾಡಬಲ್ಲರು? ಒಳ್ಳೇದು. ನೀನು ಆ ಸಿಗರೇಟ್ ಕೇಸಿನ ಮೇಲೆ ಕೈ ಬೆರಳಿನಿಂದ ಮುಟ್ಟಿಲ್ಲವೆ? ಯಾರಾದರೂ ಸಿಗರೇಟನ್ನು ಸೇದಲು ಆ ಕೇಸನ್ನು ನಿನ್ನ ಕೈಗೆ ಎಂದಾದರೂ ಕೊಟ್ಟಿರಬಹುದೇ? ಆದರೆ ನೀನು ಎಂದೂ ಸಿಗರೇಟ್ ಸೇದದಂತಹನಿರುವಿ.''

ಗ್ರೇ ಹೇಳಿದನು:- 'ನಿಶ್ಚಯವಾಗಿ ಹೇಳಬಲ್ಲೆನು—ನಾನೆಂದೂ ಅದನ್ನು ನೋಡಿಯೂ ಇರಲಿಲ್ಲ; ಮುಟ್ಟಿಯೂ ಇರಲಿಲ್ಲ. ಅದನ್ನೆಲ್ಲಿಂದಲೋ ಕದ್ದು ತಂದನೆಂದು ಇನ್‌ಸ್ಪೆಕ್ಟರರೇ ಹೇಳಿದರು. ಒಳ್ಳೇದು. ತಮ್ಮ ಮನಸ್ಸಿಗೆ ಬೇಸರವಾಗುವುದಿಲ್ಲವಾದರೆ ನಾನೀಗ ನೆಟ್ಟಗೆ ನನ್ನ ಬಿಡಾರಕ್ಕೇ ಹೋಗಬೇಕೆಂದಿರುವೆನು; ಯಾಕೆಂದರೆ, ಅಲ್ಲಿ ನನಗನುಕೂಲವಾಗುವಂತಹ ಇನ್ನೇನಾದರೂ ವಸ್ತುವು ದೊರಕುವುದೋ ಎಂದು ಹುಡುಕಬೇಕಾಗಿದೆ.''

ಡಾಕ್ಟರ್ ಸ್ಟೆಂಟನ್ ಹೇಳಿದನು:—''ಒಳ್ಳೇದು. ಇಚ್ಛೆ ಇದ್ದಂತೆ ಮಾಡಬಹುದು; ಆದರೆ ಮರೆಯಬೇಡ-ನಿನ್ನ ಹಿತಚಿಂತಕರೆಲ್ಲರೂ ಈಗ ನಿನಗೆ ಯಾವ ಸಹಾಯಕ್ಕೆ ಬೇಕಾದರೂ ತಯಾರಿರುವರು. ಈ ಮೊಕದ್ದಮೆಯು ಬಲು ಭೀಷಣವಿರುವಂತೆ ತೋರುತ್ತದೆ. ನಾನೀಗ ನೆಟ್ಟಗೆ ಇದರ ಮುಂದಿನ ಏರ್ಪಾಡಿಗಾಗಿ ನನ್ನ ವಕೀಲರ ಬಳಿಗೆ ಹೋಗುವೆನು.''

ಡಾಕ್ಟರ್ ಸ್ಟೆಂಟನ್‌ನು ಸೆಕ್ರೆಟರಿಯೊಡನೆ ವಕೀಲರ ಮನೆಗೆ ಹೋಗಿ ಮೊಕದ್ದಮೆಯ ಮುಂದಿನ ವ್ಯವಸ್ಥೆಗೆ ಆಗತ್ಯವಿರತಕ್ಕ ವಿಷಯವನ್ನೆಲ್ಲ ವಕೀಲರಿಗೆ ತಿಳಿಸಿದನು.

ಡಾಕ್ಟರ್ ಗ್ರೇ ನೆಟ್ಟಗೆ ತನ್ನ ಬೀಡಾರಕ್ಕೆ ಹೋದನು. ಎಷ್ಟೋ ದಿವಸಗಳಿಂದ ನಿದ್ರೆಯನ್ನೇ ಮಾಡದಿರುವ ಮನುಷ್ಯರಂತೆ ಗ್ರೇಯ ಮುಖವು ಬಹಳ ಇಳಿದುಹೋಗಿದ್ದಿತು. ಬಿಡಾರವನ್ನು ತಲ್ಪಿದೊಡನೆ ಹೊಸದಾಗಿ ಮನೆಯನ್ನು ಪ್ರವೇಶಿಸಿದವರಂತೆ ಒಳಗೆ ನಾಲ್ಕು ಕಡೆಗೂ ಕಣ್ಣನ್ನೊರಳಿಸಿ ನೋಡಿದನು. ಈಗ ಆ ಕೋಣೆಯು ತನ್ನನ್ನು ಕಚ್ಚಲು ಓಡಿಬರುತ್ತಿರುವಂತೆ ಅವನಿಗೆ ತೋರಿತು.

ತನ್ನೊಳಗೇ ಹೇಳಿಕೊಂಡನು:-ಡಾಕ್ಟರ್ ಮೇಡೀನನೇ ನನ್ನ ಮೇಲೆ ಈ ಬಲೆಯನ್ನು ಹರಡಿರಬಹುದೇ? ಅವನಿಗಲ್ಲದೆ ಇನ್ನಾರಿಗೆ ನನ್ನ ಮೇಲೆ ದ್ವೇಷತಾಳುವ ಅವಕಾಶವಿದೆ? ನೋರಳಿಗೆ ಇನ್ನೂ ಈ ಸುದ್ದಿಯು ತಿಳಿದಿರಲಾರದು. ಅವಳಿಗೀಗ ಇದನ್ನೆಲ್ಲ ತಿಳಿಸಿ ಮೇಡೀನನ ಬಳಿಯಲ್ಲಿ ಜಾಗರೂಕತೆಯಿಂದ ವರ್ತಿಸುವಂತೆ ಸೂಚಿಸುವದು ನನ್ನ ಪ್ರಥಮ ಕರ್ತವ್ಯವಾಗಿದೆ.''

ಅನಂತರ ಡಾಕ್ಟರನು ಕುರ್ಚಿಯ ಮೇಲೆ ಕುಳಿತು ನೋರಳಿಗೊಂದು ಕಾಗದ ಬರೆದನು:—''ನನ್ನ ಪ್ರಾಣಪ್ರಿಯಳಾದ ನೋರಾ! ನಾನೀಗ ಒಂದು ದೊಡ್ಡ ವಿಚಿತ್ರ ಸಂಕಟದಲ್ಲಿ ಬಿದ್ದಿರುವೆನು. ಕಳವಿನ ಮಾಲನ್ನು ತೆಗೆದುಕೊಂಡ ಆರೋಪವು ನನ್ನ ಮೇಲೆ ಬಲಾತ್ಕಾರವಾಗಿ ಹೊರಿಸಲ್ಪಟ್ಟಿದೆ. ಅದಕ್ಕೆ ತಕ್ಕ ಕೆಲವು ಸಾಕ್ಷ್ಯಗಳೂ ಪೋಲೀಸರಿಗೆ ದೊರೆತಿವೆ. ಕಳವಿನ ಕೆಲವು ಮಾಲುಗಳು ನಾನು ಮಲಗುತ್ತಿದ್ದ ಕೋಣೆಯ ಗೋಡೆಯೊಳಗೆ ಸಿಕ್ಕಿದವು. ನಾಳೆ ಬೆಳಗಿನ ವರೆಗೆ ನಾನೀಗ ಜಾಮೀನಿನ ಮೇಲೆ ಬಿಡಲ್ಪಟ್ಟಿರುವೆನು. ಆರೋಪವು ನನ್ನ ಮೇಲೆ ಸ್ಥಿರವಾಗಬಹುದು. ಕೋರ್ಟಿಗೆ ನಾನು ನಾಳೆ ಬೆಳಿಗ್ಗೆ ಹೋಗಬೇಕು. ನನಗಿದುವರೆಗೆ ಯಾವ ವೈರಿ ಇರುವುದೂ ಕೂಡ ತಿಳಿದು ಬಂದಿರುವದಿಲ್ಲ. ಡಾಕ್ಟರ್ ಮೇಡೀನನೇ ಯಾವುದೋ ಒಂದು ಭೀಷಣ ಸಾಹಸದಿಂದ ನನ್ನ ಮೇಲೆ ಬಿದ್ದಿರುವನೆಂದು ನಾನೀಗ ಊಹಿಸುತ್ತಿರುವೆನು. ಅವನೇ ಇದಕ್ಕೆಲ್ಲ ಮೂಲ ಕಾರಣನೆಂದಾದರೆ, ನೀನೂ ಸ್ವಲ್ಪ ಜಾಗರೂಕಳಾಗಿರುವುದು ಅತ್ಯಗತ್ಯವಿದೆ. ತನ್ನ ಗುಟ್ಟನ್ನೆಲ್ಲ ನಾನು ನಿನ್ನ ಬಳಿಯಲ್ಲಿ ಹೇಳಿರುವೆನೆಂಬುದು ಆತನಿಗ ತಿಳಿದರೆ, ನಿನ್ನ ಮೇಲೆಯೂ ಅವನು ಭೀಷಣ ಸಂಕಟವೊಂದನ್ನು ತಂದು ಹಾಕದಿರಲಾರನು. ನಾನು ತಿಳಿದಿರುವಷ್ಟರಮಟ್ಟಿಗೆ ಹೇಳುವುದಾದರೆ, ನಾವಿಬ್ಬರಲ್ಲದೆ ಆಸ್ಪತ್ರೆಯ ಇನ್ನಾವ ಮನುಷ್ಯನೂ ಆ ಗುಪ್ತಸಂಗತಿಯನ್ನು ಅರಿತಿರುವುದಿಲ್ಲ ನಾವು ಬಹಳ ಎಚ್ಚರಿಕೆಯಿಟ್ಟು ಮಾತನಾಡಿದ್ದೆವು. ಮುಂದೆ ಬಲು ಎಚ್ಚರದಿಂದ ವರ್ತಿಸುವುದೇ ಒಳ್ಳೇದು. ನನ್ನ ಮೇಲೆ ಬಂದಿರುವ ಈ ಸಂಕಟಕ್ಕಾಗಿ ನೀನೇನೂ ಗಾಬರಿಯಾಗುವುದು ಬೇಡ. ನಾನು ಇನ್ನೊಂದು ಕಾಗದ ಬರೆಯುವ ವರೆಗೆ ನೀನು ನನ್ನ ದರ್ಶನಕ್ಕೂ ಬರಬೇಡ. ಡಾಕ್ಟರ್ ಸ್ಟೆಂಟನರೇ ಮುಂದೆ ನಿಂತು ನನಗೆ ತಕ್ಕ ಸಹಾಯ ಮಾಡುತ್ತಿರುವರು; ಅದಲ್ಲದೆ ನನ್ನನ್ನು ಸೆರೆಹಿಡಿದೊಯ್ದ ಡಿಟೆಕ್ಟಿವ್ ಇನ್‌ಸ್ಪೆಕ್ಟರರೂ ಕೂಡ ತಮ್ಮ ಮಿತ್ರರೊಬ್ಬರಿಂದ ನನಗೆ ಮುಖ್ಯ ಸಹಾಯವನ್ನು ಮಾಡಿಸುತ್ತೇವೆಂದು ವಚನವಿತ್ತಿರುವರು. ಇರಲಿ. ನೀನೀಗ ಯಾವ ಚಿಂತೆಯನ್ನೂ ಮಾಡಬೇಡ. ಡಾಕ್ಟರ್ ಮೇಡೀನನು ನಿನ್ನ ಯಾವ

ಗುಟ್ಟನ್ನೂ ತಿಳಿಯಲಾಗದಿರುವಂತೆ ಪ್ರಯತ್ನಿಸು. ಇದೊಂದು ವಿಚಿತ್ರವಾದ ಬಲೆಯಾಗಿದೆ; ಆದರೂ ನಾನು ಇದರಿಂದ ಖಂಡಿತವಾಗಿಯೂ ಬಿಡಿಸಲ್ಪಡುವೆನೆಂಬ ಭರವಸೆಯು ನನ್ನ ಮನಸ್ಸಿಗಿದೆ. ಉಳಿದುದು ಮುಂದೆ.

ನಿನ್ನ ಪ್ರಾಣಪ್ರಿಯನಾದ ಜೆಫ್ರೆ ಗ್ರೇ."

ಪಿ. ಸೂ.—ಈ ಕಾಗದವು ನಿನಗೆ ಈ ರಾತ್ರಿಯೇ ಸಿಕ್ಕಿದರೆ, ಆ ಮೇಲೆ ನನಗೇನಾದರೂ ನೀನು ಬರೆಯಲಿಚ್ಛಿಸುವಿಯಾದರೆ, ನಾಳೆ ಬೆಳಿಗ್ಗೆ ಎಂಟು ಗಂಟೆಯೊಳಗೆ ನಾನು ಪೋಲೀಸ್ ಸ್ಟೇಶನ್ನಿಗೆ ಹೊರಡುವದಕ್ಕಿಂತ ಮುಂಚೆಯೇ ನನ್ನ ಕೈ ಸೇರುವಂತೆ ಕಾಗದ ಬರೆಯಬೇಕು. ಅಷ್ಟರೊಳಗವಕಾಶವಿಲ್ಲದಿರುವ ಸಂಪರ್ಭವಿದ್ದರೆ ಕಾಗದವನ್ನು ಬರೆಯಲೇಬೇಡ."

ಕಾಗದವನ್ನು ಬರೆದು ಮುಗಿಸಿದೊಡನೆಯೇ ಅದನ್ನು ಪೋಸ್ಟ್ ಬಾಕ್ಸಿಗೆ ಹಾಕಿ, ಕೋಣೆಯನ್ನು ಇನ್ನೊಂದು ಬಾರಿ ಪರೀಕ್ಷಿಸುವದಕ್ಕಾಗಿ ಕೂಡಲೆ ಹಿಂದಿರುಗಿ ಕೋಣೆಯೊಳಗೆ ಹೋದನು; ಆದರೆ ಅಷ್ಟರೊಳಗೆ ಮನಸ್ಸು ವ್ಯತ್ಯಸ ಹೊಂದಿತು. ಗೋಡೆಯೊಳಗಿನ ತೂತು ಹೇಗಾಯಿತೆಂಬದನ್ನು ನೋಡುವುದಕ್ಕೂ ಮುಂದುವರಿಯಲಿಲ್ಲ. ಹಾಸಿಗೆಯನ್ನು ಹಾಸಿ ಮಲಗಿಬಿಟ್ಟನು.

ಮಾರನೆ ದಿನ ಬೆಳಿಗ್ಗೆ ವೇಳೆಗೆ ಸರಿಯಾಗಿ ಡಾಕ್ಟರ್ ಗ್ರೇ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಜರಾದನು. ವಿಚಾರಣೆಯು ನಡೆಯಿತು. ಡಾಕ್ಟರ್ ಸ್ಟಂಟನನ ವಕೀಲನು ಬಹಳ ಪ್ರಯತ್ನಮಾಡಿದರೂ ಪ್ರಯೋಜನವಾಗಲಿಲ್ಲ. ಹದಿನೈದು ದಿನಗಳ ವರೆಗೆ ಜೈಲಿನಲ್ಲಿಡಲು ಆಜ್ಞೆಯಾಯಿತು. ಜಾಮೀನನ್ನು ಸ್ವೀಕರಿಸಲಿಲ್ಲ.

ಕೋರ್ಟಿನಿಂದ ಹೊರಗೆ ಬಂದ ನಂತರ ಇನ್ಸ್ಪೆಕ್ಟರ್ ಹಾರ್ಕರ್ ಹೇಳಿದನು—"ಇದರಲ್ಲಿ ನನ್ನದೇನೂ ಅಪರಾಧವಿಲ್ಲ, ಡಾಕ್ಟರ್! ಈ ತರಹದ ಮೊಕದ್ದಮೆಗಳಲ್ಲಿ ಪ್ರಾಯಶಃ ಜಾಮೀನನ್ನು ತೆಗೆದುಕೊಳ್ಳುವದಿಲ್ಲ. ಮಿಸ್ಟರ್ ಬ್ಲೇಕ್ ಹಿಂದಿರುಗಿ ಬಂದೊಡನೆಯೇ ಅವರನ್ನು ನಿಮ್ಮ ಬಳಿಗೆ ಕರೆತರುವೆನು. ಬೆರಳುಗಳ ಗುರುತಿನ ಸಾಕ್ಷ್ಯವೊಂದು ನಿಮ್ಮ ವಿರುದ್ಧವಾಗಿ ಬರದೆ ಇದ್ದಿದ್ದರೆ, ಕೇವಲ ನಿಮ್ಮ ನಡತೆಯ ಬಲದಿಂದಲೇ ನೀವು ಬಿಡುಗಡೆ ಹೊಂದಬಹುದಾದ ಸಂಭವವಿದ್ದಿತು. ಈ ಸಾಕ್ಷ್ಯದ ಪ್ರಭಾವವು ನಿಮ್ಮ ಈ ಮೊಕದ್ದಮೆಯ ಮೇಲೆ ಎಷ್ಟರ ಮಟ್ಟಿಗೆ ಬಿದ್ದಿರುವುದೆಂಬುದನ್ನು ನೀವು ಅರಿಯದೆ ಇಲ್ಲ. ಈಗಾದರೂ ನೀವು ಸರಿಯಾಗಿ ನೆನಪು ಮಾಡಿಕೊಂಡು ಹೇಳಿರಿ ಸೋಹೋ ಸ್ಕ್ವಯರ್‌ನಲ್ಲಿನ ಸ್ಪೈನೋಲಾ ಹೋಟಲಿನಲ್ಲಿ ಆ ದುಷ್ಟ ಸೇಜನು ನಿಮ್ಮ ಪರಿಚಯ

ವನ್ನು ಮಾಡಿಕೊಂಡಾಗ ಬಂಗಾರದ ಸಿಗರೇಟ್ ಕೇಸನ್ನು ನಿಮ್ಮ ಕೈಗೆ ಕೊಟ್ಟಿರಲಿಲ್ಲವೆ? ಈ ಉಪಾಯದಿಂದಲೇ ನಿಮ್ಮ ಬೆರಳುಗಳ ಗುರುತನ್ನು ಆ ಸೇಜನು ಪಡೆದಿರಬಹುದಾಗಿದೆ.''

ಡಾಕ್ಟರ್ ಗ್ರೇ ಉತ್ತರವಿತ್ತನು:—''ಇಲ್ಲ. ನಾನು ಸಿಗರೇಟ್ ಸೇದುವುದೇ ಇಲ್ಲ. ಈಗಲೂ ಕೂಡ ನಾನು ನಿನ್ನೆ ನಿಮ್ಮ ಬಳಿಯಲ್ಲಿ ಹೇಳಿದುದಕ್ಕಿಂತ ಹೆಚ್ಚಿಗೆ ಇನ್ನೇನೂ ಹೇಳಲಾರದವನಾಗಿರುವೆನು. ಆ ವಸ್ತುಗಳನ್ನೆಲ್ಲ ನಿನ್ನೆ ನಿಮ್ಮೆದುರಿಗಲ್ಲದೆ ಮುಂಚೆ ಎನ್ನೆಂದೂ ನಾನು ನನ್ನ ಕಣ್ಣಿನಿಂದ ನೋಡಿರಲಿಲ್ಲವೆಂದು ದೃಢವಾಗಿ ಹೇಳಬಲ್ಲೆನು. ಹೀಗಿರುವಾಗ ನಾನಿನ್ನು ನೆನಪಿಸಿಕೊಳ್ಳುವುದೇನಿದೆ?''

ಇನ್ಸ್ಪೆಕ್ಟರ್:—''ಸರಿ, ಗಾಬರಿಯಾಗಬೇಕಾದುದ್ದೇನೂ ಇಲ್ಲ. ಈ ಮೊಕದ್ದಮೆಯು ಪ್ರತಿಯೊಂದು ಗುಟ್ಟು ಎಂದಾದರೊಂದು ದಿನ ಪ್ರಕಟವಾಗದಿರಲಾರದೆಂದು ನನಗೆ ಭರವಸೆ ಇದೆ. ಕೂಡಲೆ ಇದರೊಳಗೆ ಯಾವ ರಹಸ್ಯವು ಅಡಗಿಕುಳಿತಿರುವುದೆಂಬುದನ್ನು ತಿಳಿಯಲು ನಾವು ಯತ್ನಿಸುವೆವು. ಯಾವ ತರಹದಿಂದಾದರೂ ಆ ಸೇಜನು ನಮ್ಮ ಕೈಯೊಳಗೆ ಒಂದು ಸಲ ಸಿಕ್ಕಿದರೆ ಅದರಿಂದ ಬಹಳ ಅನುಕೂಲವಾಗುವುದು; ಆದರೆ ಅವನು ಒಂದೇ ಸಾರಿಗೆ ಮಾಯವಾಗಿ ಬಿಟ್ಟನು! ಒಳ್ಳೇದು. ಪುನಃ ಬೇಗನೆ ನಿಮ್ಮನ್ನು ಬಂದು ನೋಡುವೆನು.''

ಇನ್ಸ್ಪೆಕ್ಟರನ ಭರವಸೆಯಿಂದ ಗ್ರೇಯ ಮನಸ್ಸಿಗೆ ಬಹಳ ಸಮಾಧಾನವೆನಿಸಿತು. ಅನಂತರ ಗ್ರೇ ಜೈಲಿಗೊಯ್ಯಲ್ಪಟ್ಟನು. ಅಲ್ಲಿ ಕುಳಿತ ಮೇಲೆ ತನ್ನ ಕಾಗದಕ್ಕೆ ಉತ್ತರವಾಗಿ ನೋರಳು ತವಕದಿಂದ ಬರೆದಿದ್ದ ಕಾಗದದ ನೆನಪಾಯಿತು. ಬೆಳಿಗ್ಗೆ ಮನೆಯಿಂದ ಸ್ಟೇಶನ್ನಿಗೆ ಹೊರಡುವುದಕ್ಕಿಂತ ಮುಂಚೆಯೇ ಅವಳ ಉತ್ತರವು ಗ್ರೇಯ ಕೈಗೆ ಬಂದಿದ್ದಿತು. ಆ ಕಾಗದದಲ್ಲಿನ ಪ್ರತಿಯೊಂದು ವಾಕ್ಯವೂ ಈಗ ನೆನಪಾಗತೊಡಗಿತು. ಅದರಲ್ಲಿ ಹೀಗೆ ಬರೆಯಲಾಗಿದ್ದಿತು:—''ಪ್ರಿಯಕರಾ! ಗಾಬರಿಪಡುವ ಅಗತ್ಯವೇನೂ ಇಲ್ಲ. ನೀನು ನಿರಪರಾಧಿಯೆಂದು ನನಗೆ ವಿಶ್ವಾಸವಿದೆ. ನಿಶ್ಚಯವಾಗಿ ಮೇಡೀನನೇ ತನ್ನ ಸೇಡನ್ನು ತೀರಿಸಿಕೊಳ್ಳಲು ಈ ಭೀಷಣ ಸಾಹಸಕ್ಕೆ ತೊಡಗಿರುವನು. ನಮ್ಮಿಬ್ಬರೊಳಗೆ ಇರುವ ಸ್ನೇಹವನ್ನು ಮಾತ್ರ ಇತರರು ಅರಿತಿರುವರಲ್ಲದೆ, ನಮ್ಮಿಬ್ಬರ ಇನ್ನಾವ ಸಂಬಂಧವನ್ನೂ ಅರಿತಿರುವದಿಲ್ಲ; ಡಾಕ್ಟರ್ ಮೇಡೀನನು ಲಂಡನ್ನಿಗೆ ಬರುವದಕ್ಕಿಂತ ಮುಂಚಿನ ಅವನ ಚರಿತ್ರೆಯನ್ನು ತಿಳಿದುಕೊಳ್ಳಲು ನಾನೀಗ ಪ್ರಯತ್ನಿಸುತ್ತಿರುವೆನು. ಯಾವ

ರೀತಿಯಿಂದಾದರೂ ನಾನು ಈ ವೇಳೆಯಲ್ಲಿ ನಿನಗೆ ಸಹಾಯಕಳಾಗಲು ಹಾತೊರೆಯುತ್ತಿರುವೆನು. ಡಾಕ್ಟರ ಸ್ಟೆಂಟನರು ಒಬ್ಬ ಉಚ್ಚ ಹೃದಯದ ಮಹಾಪುರುಷರಿರುವರು. ಅವರು ನಿನಗೆ ಸಹಾಯ ಮಾಡುವುದಕ್ಕೆ ತತ್ಪರ ರಾಗಿರುವದರಿಂದ ಯಾವ ತರಹದಲ್ಲಿಯೂ ನೀನೀಗ ಹತಾಶನಾಗಬಾರದು.

ಇತಿ ನಿನ್ನ ಪ್ರೇಯಸಿ, ನೋರಾ''

ಗ್ರೇ ಮನದೊಳಗೇ ಆಲೋಚಿಸತೊಡಗಿದನು:—''ಬಡಪಾಯಿ ನೋರಳು! ನನಗೀಗ ಯಾವ ಸಹಾಯವನ್ನು ಮಾಡಬಲ್ಲಳು? ಡಾಕ್ಟರ್ ಮೇಡೀನನೆಂದರೆ, ಒಬ್ಬ ಪ್ರಭಾವಶಾಲಿಯಾದ ವ್ಯಕ್ತಿಯಿರುವನು ಡಾಕ್ಟರೀ ಪ್ರಪಂಚದಲ್ಲಿ ಅವನೊಬ್ಬ ಗಣ್ಯಮನುಷ್ಯನೆಂದು ಎಣಿಸಲ್ಪಟ್ಟಿರುವನು. ನಾನಾದರೂ ಅವನ ಪಾಂಡಿತ್ಯದ ವಿಷಯದಲ್ಲಿ ಹೊಗಳದಿರಲಾರೆನು; ಆದರೆ ಅವನ ಕ್ರೂರ ಸ್ವಭಾವವನ್ನು ಮಾತ್ರ ನಾನು ಎಂದಿಗೂ ಮರೆಯಲಾರೆನು. ನಾನದಕ್ಕೆ ಸಂಪೂರ್ಣ ವಿರೋಧಿ ಇರುವೆನು; ಆದರೆ ನಾನು ಇಲಿಯಂತಿರು ವೆನು. ಅವನಾದರೋ ಪ್ರಚಂಡ ಹುಲಿಯಂತಿರುವನು. ಇಲಿಯು ಈಗ ಬೋನಿನಲ್ಲಿ ಸಿಕ್ಕಿಬಿದ್ದಿರುವದು. ಮೇಡೀನನು ಈ ಭೀಷಣ ತಂತ್ರವನ್ನು ನಡೆಸುವಾಗ ಯಾವುದಾದರೊಂದು ತಪ್ಪನ್ನು ಮಾಡದೆ ಇರಲಾರನು. ಅದ ರಿಂದ ನಾನು ಈ ಬೋನಿನೊಳಗಿಂದ ತಪ್ಪಿಸಿಕೊಂಡು ಹೊರಗೆ ಹೊರಡುವ ಸಂಭವವಿದೆ. ವಿಷಯವೇನೋ ಬಹಳ ಕಠಿಣವಿದ್ದಂತೆ ತೋರುತ್ತದೆ. ಆದರೂ ನನ್ನ ಸುದೈವದಿಂದ ಆ ಸುಪ್ರಸಿದ್ಧ ಡಿಟೆಕ್ಟಿವ್ಹ ಬ್ಲೇಕನು ಇದರಲ್ಲಿ ಮನಸ್ಸಿಟ್ಟು ಪ್ರಯತ್ನಿಸಿದರೆ, ಇದರೊಳಗಿನ ವಾಸ್ತವಿಕವಾದ ರಹಸ್ಯವನ್ನು ಹೊರಗೆಡವದಿರಲಾರನು. ಇನ್ಸಪೆಕ್ಟರ ಹಾರ್ಕರನು ಬಹಳ ಒಳ್ಳೆಯ ಮನುಷ್ಯ ನಿರುವನು. ನನಗೆ ಸಹಾಯ ಮಾಡುವದರಲ್ಲಿ ಅವನು ಮನಮುಟ್ಟಿ ಯತ್ನಿ ಸುತ್ತಿರುವನು. ಇದು ನನ್ನ ಸುದೈವವೇ ಸರಿ.''

ಗ್ರೇ ಇನ್ಸ್ಪೆಕ್ಟರನ ಮೇಲೆ ಯೋಚಿಸಿದುದು ನಿಜವೇ ಆಗಿದ್ದಿತು. ಇನ್ಸ್ಪೆಕ್ಟರನು ಗೊಂದಲದಲ್ಲಿ ಬಿದ್ದಿದ್ದನು. ಒಂದು ಕಡೆ ಬೆರಳುಗಳ ಗುರು ತಿನ ಮೇಲೆ ಅವನಿಗೆ ಅಪಾರವಾದ ನಂಬಿಕ ಇದ್ದಿತು. ಸ್ಕಾಟ್ಲೆಂಡ್ ಯಾರ್ಡಿ ನಲ್ಲಿ ಹಾಜರಿರುವ ಸಾವಿರಾರು ಬೆರಳು ಗುರುತುಗಳಲ್ಲಿ ಮತ್ತು ಯುರೋಪ್, ಅಮೇರಿಕಾ ದೇಶದ ಪೋಲೀಸರಿಂದ ಸಂಗ್ರಹಿಸಲ್ಪಟ್ಟ ಲಕ್ಷಗಟ್ಟಲೆ ಗುರುತು ಗಳಲ್ಲಿ ಒಂದು ಗುರುತೂ ಕೂಡ ಇನ್ನೊಂದು ಗುರುತಿನೊಡನೆ ಸರಿಹೋಲು ತ್ತಿದ್ದುದು ಕಂಡು ಬಂದಿರಲಿಲ್ಲ. ಇರಲಿ. ಸಿಗರೇಟ್ ಕೇಸ್ ಮತ್ತು ಕಾಗದದ ಮೇಲೆ ಬಿದ್ದಿರುವ ಗುರುತು ಡಾಕ್ಟರ್ ಗ್ರೇಯ ಬೆರಳಿನದ್ದಾಗಿರದೆ ಇನ್ನಾ್ಯ

ರದ್ದೋ ಬೆರಳಿನದ್ದಾಗಿರಬಹುದೆಂದು ಸಂಶಯಪಡುವುದಕ್ಕೂ ಕೂಡ ಆ ಇನ್ಸ್ಪೆಕ್ಟರನು ಒಪ್ಪುತ್ತಿರಲಿಲ್ಲ. ಬೆರಳುಗಳ ಗುರುತೆಂಬುದು ಡಾಕ್ಟರ್ ಗ್ರೇಗೆ ವಿರುದ್ಧದ ಒಂದು ಅವಿಚಲಿತವಾದ ಸಾಕ್ಷ್ಯವಾಗಿದ್ದಿತು.

ಇನ್ನೊಂದು ಕಡೆಯಾದರೋ ಡಾಕ್ಟರನ ನಿರ್ದೋಷವಾದ ಚರಿತ್ರೆಯು ಇನ್ಸ್ಪೆಕ್ಟರನ ಎದುರಿಗಿದ್ದಿತು. ಡಾಕ್ಟರ್ ಗ್ರೇ ಎಂದರೆ ಒಬ್ಬ ಸುಪ್ರಸಿದ್ಧ ನಿಪುಣ ಡಾಕ್ಟರ್ ಮತ್ತು ಚತುರ ಸರ್ಜನನಿದ್ದನು. ಅದಲ್ಲದೆ ಡಾಕ್ಟರೀ ಪ್ರಪಂಚದಲ್ಲಿ ವಿವೇಕಯುತವಾದ ಖ್ಯಾತಿಯನ್ನು ಸಂಪಾದಿಸುವ ಯೋಗ್ಯತೆಯೂ ಅವನಿಗಿದ್ದಿತು. ಅವನ ಆದಾಯವೇನೋ ಹೆಚ್ಚಿಗೆ ಇರಲಿಲ್ಲ; ಆದರೂ ಇದ್ದವುಟ್ಟಿಗೆ ಸುಖವಾಗಿರಲು ಯಾವ ತೊಂದರೆಯೂ ಇರಲಿಲ್ಲ. ಹೀಗಿರಲು, ಇಂತಹ ಯೋಗ್ಯ ಮನುಷ್ಯನೊಬ್ಬನು ಕಳವಿನ ಗೊಂದಲಕ್ಕೆ ಸಿಲುಕಬಲ್ಲನೇ?

ಆದರೆ ಎಂತೆಂತಹ ಬುದ್ಧಿವಂತರ ಮತ್ತು ವಿಶ್ವಾಸಪಾತ್ರರ ಬುದ್ಧಿಯೂ ಕೂಡ ಅಕಸ್ಮಾತ್ತಾಗಿ ಅಪರಾಧದ ಕಡೆಗೆ ಓಡಿರುವಂತಹ ಉದಾಹರಣೆಗಳು ಇನ್ಸ್ಪೆಕ್ಟರ್ ಹಾರ್ಕರನಿಗೆ ಪರಿಚಿತವಾಗಿದ್ದವು.

ಏನಾದರೂ ಇರಲಿ. ಈ ಮೊಕದ್ದಮೆಯಲ್ಲಿ ಈಗಲೇ ತನ್ನ ನಿಶ್ಚಿತವಾದ ಅಭಿಪ್ರಾಯವನ್ನು ಹಾರ್ಕರನು ತಿಳಿಸಲಾರದಾಗಿದ್ದನು.

ಇನ್ಸ್ಪೆಕ್ಟರ್ ಹಾರ್ಕರ್‌ನು ಟೆಲಿಫೋನಿನ ರಿಸೀವರನ್ನು ಎತ್ತಿಕೊಂಡು ಬೇಕರ್ ಸ್ಟ್ರೀಟಿನಲ್ಲಿರುವ ಸ್ಯಾಕ್ಸ್ಟನ್ ಬ್ಲೇಕನಿಗೆ ಫೋನ್ ಮಾಡಿದನು; ಆದರೆ ಟಿಂಕರನನ್ನು ಜೊತೆಗೆ ಕರೆದುಕೊಂಡು ಬ್ಲೇಕನು ಸ್ಕಾಟ್ಲೆಂಡಿಗೆ ಹೋಗಿರುವನೆಂದು ಅಲ್ಲಿಂದ ಉತ್ತರ ಬಂದಿತು. ಬ್ಲೇಕನ ಮನೆಯಲ್ಲಿದ್ದ ಅಡಿಗೆ ಕೆಲಸದವಳಾದ ವಾರ್ಡೇಲಳು ಇದಕ್ಕಿಂತ ಇನ್ನೇನೂ ಹೆಚ್ಚಿಗೆ ತಿಳಿದಿರಲಿಲ್ಲ.

ಇನ್ಸ್ಪೆಕ್ಟರನು ಮನದೊಳಗೇ ಹೇಳಿಕೊಂಡನು:—"ಈ ವಿಧವಾದ ಮೊಕದ್ದಮೆಗಳಲ್ಲಿ ಬ್ಲೇಕನಿಗೆ ವಿಶೇಷವಾದ ಅಭಿರುಚಿಯಿರುವುದರಿಂದ ಅವನು ಬೇಗನೆ ಹಿಂದಿರುಗಿ ಬಂದಿದ್ದರೆ ಬಹಳ ಒಳ್ಳೇದಾಗುತ್ತಿದ್ದಿತು." ಅನಂತರ ಹಾರ್ಕರನು ಪೋಲೀಸರಿಗೆ ಕಟ್ಟಪ್ಪಣೆ ಮಾಡಿದನು:—"ಈ ದುಷ್ಟ ಕಾರ್ಯದಲ್ಲಿ ಪ್ರಧಾನಪಾತ್ರವಹಿಸಿರುವ ಜೋನ್ಸ್-ವಿಲ್ಸನ್-ಪ್ಯಾಸ್ಟನ್-ಸೈಕ್ಸ್ ಅಥವಾ ಸೇಜನನ್ನು ಹೇಗಾದರೂ ಕಂಡುಹಿಡಿಯಿರಿ."

ಡಾಕ್ಟರ್ ಮೇಡೀನನು ತನ್ನ ನಿತ್ಯದ ನಿಯಮಾನುಸಾರವಾಗಿ ವೆಂಟ್ವರ್ತ್ ಆಸ್ಪತ್ರೆಗೆ ಬಂದನು. ಆಸ್ಪತ್ರೆಯೊಳಗೆ ಕಾಲಿಟ್ಟೊಡನೆಯೇ ಡಾಕ್ಟರ್

ಗ್ರೇಯನ್ನು ಸೆರೆಹಿಡಿದೊಯ್ದ ಸುದ್ದಿಯು ಡಾಕ್ಟರ್ ಸ್ಟೆಂಟನನಿಂದ ಅವನಿಗೆ ತಿಳಿಯಿತು. ಕೂಡಲೆ ಮೋಡೀನನು ಉತ್ತರವಿತ್ತನು.—"ಅಸಂಭವವಿದು. ನಿಮ್ಮ ಇಂಗ್ಲಿಷ್ ಪೋಲೀಸರು ಈ ತರಹದ ಅಸಭ್ಯವಾದ ತಪ್ಪನ್ನು ಎಂದೂ ಮಾಡಲಾರರೆಂದು ನಾನು ಇದುವರೆಗೆ ಭಾವಿಸಿದ್ದೆನು. ನನ್ನ ಆ ಭಾವನೆಯು ಈಗ ತಲೆಕೆಳಗಾಯಿತು. ಡಾಕ್ಟರ್ ಗ್ರೇ ಬಹಳ ಬುದ್ಧಿವಂತನಾದ ಜಾಣ ತರುಣನಿರುವನು. ಇರಲಿ. ಡಾಕ್ಟರ್ ಗ್ರೇಯ ಬಿಡುಗಡೆಗೆ ಈಗ ಹಣದ ಅಗತ್ಯವಿರುವುದೇ? ಹಾಗಿದ್ದರೆ ನನಗೆ ಅವಶ್ಯವಾಗಿ ತಿಳಿಸಬೇಕು."

ಡಾಕ್ಟರ್ ಸ್ಟೆಂಟನ್ ಹೇಳಿದನು—"ಅಗತ್ಯಬಿದ್ದರೆ ತಿಳಿಸುವೆನು; ಆದರೆ ಈ ಕಾರ್ಯಕ್ಕೆ ಬೇಕಾಗುವಷ್ಟು ಹಣವು ನನ್ನ ಬಳಿಯಲ್ಲಿ ಇದೆ ಎಂಬ ವಿಶ್ವಾಸ ನನಗಿದೆ. ನಿಮ್ಮ ಈ ಸಹೃದಯತೆಗಾಗಿ ಧನ್ಯವಾದಗಳು. ನಿಶ್ಚಯ ವಾಗಿಯೂ ಗ್ರೇ ನಿರ್ದೋಷಿ ಎಂದು ಸಿದ್ಧಪಡಿಸಲ್ಪಡುವನೆಂಬ ವಿಶ್ವಾಸವು ನನಗೆ ಪೂರ್ಣವಾಗಿದೆ."

ಮೋಡೀನನು ಹೇಳಿದನು—"ನಿಜ. ಎಂದೂ ನಂಬುವುದಕ್ಕೆ ಸಾಧ್ಯ ವಿಲ್ಲದ ವಿಚಿತ್ರ ಸಂಗತಿಯಾಗಿದೆ ಇದು. ಅದಿರಲಿ. ಈಗ ನಾನೊಂದು ವಿಜ್ಞಾ ಪನೆಯನ್ನು ತಮ್ಮ ಬಳಿಯಲ್ಲಿ ಮಾಡಿಕೊಳ್ಳಬೇಕೆಂದಿರುವೆನು. ಇಲ್ಲಿನ ರೀತಿ ನೀತಿಗಳೇನಿರುವುವೋ ನನಗೆ ತಿಳಿಯದು. ತಮ್ಮಲ್ಲಿಂದ ಕೆಲವು ದಿನಗಳ ಮಟ್ಟಿಗೆ ಒಬ್ಬ ನರ್ಸನ್ನು ಕಡವಾಗಿ ನನ್ನ ಮನೆಗೆ ಒಯ್ಯಲು ಸಾಧ್ಯವಿರು ವುದೇ? ನಾನು ಸ್ವಲ್ಪ ದಿನದೊಳಗೇ ನನ್ನ ಮನೆಯಲ್ಲಿ ಒಬ್ಬಿಬ್ಬ ರೋಗಿಗಳ ನ್ನಿಟ್ಟು ಚಿಕಿತ್ಸೆ ನಡೆಸಬೇಕೆಂದಿರುವೆನು. ಅದಕ್ಕಾಗಿ ನನ್ನ ಚಿಕಿತ್ಸಾಕ್ರಮವನ್ನು ಚೆನ್ನಾಗಿ ಅರಿತುಕೊಂಡು ನನ್ನ ಕಾರ್ಯಕ್ಕೆ ತಕ್ಕ ಸಹಾಯ ಮಾಡಬಲ್ಲ ಒಬ್ಬ ನರ್ಸ್ ಬೇಕು.

ಸ್ಟೆಂಟನ್ ಹೇಳಿದನು—"ಇದೇನು ಕಷ್ಟ? ನಿಮಗೆ ಪರಿಚಿತಳಾಗಿರುವ ಯಾವ ನರ್ಸಳದಾದರೂ ಹೆಸರನ್ನು ಹೇಳಿರಿ."

ಮೋಡೀನನು ಹೇಳಿದನು—"ನನ್ನ ಅಭಿಪ್ರಾಯವು ನೋರಾ ಎಂಡ- ರ್ಬಿಯ ಕಡೆಗೆ ಇದೆ. ಅವಳು ತನ್ನ ಕೆಲಸ-ಕಾರ್ಯಗಳಲ್ಲಿ ಬಹಳ ಚತುರ ಳಿರುವಳು. ಅವಳು ನನಗೆ ದೊರೆಯಬಲ್ಲಳೇ?"

ಸ್ಟೆಂಟನ್ ಉತ್ತರವಿತ್ತನು—"ಅವಳಿಗೆ ಈ ವಿಚಾರದಲ್ಲಿ ಯಾವ ತರ ಹದ ಅನಭಿಮತವೂ ಇಲ್ಲದೇ ಇದ್ದರೆ ನನ್ನದೇನೂ ತಡೆಯಿಲ್ಲ. ಇನ್ನೇ ನೆಂದರೆ, ಅವಳನ್ನು ಹೆಚ್ಚು ಕಾಲದವರೆಗೆ ನೀವು ನಿಲ್ಲಿಸಿಕೊಳ್ಳಲಾಗದು. ನಾವು ಅವಳನ್ನು ಆಸ್ಪತ್ರೆಯಿಂದ ಬಹಳ ಕಾಲ ಕಳೆದುಕೊಳ್ಳಲಾರೆವು."

ನಸುನಗುತ್ತ ಮೋಡೀನನಂದನು—“ಅವಳೊಬ್ಬ ಅಪೂರ್ವ ಸುಂದರಿಯಾಗಿರುವಳು. ಶೀಘ್ರದಲ್ಲಿಯೇ ಮದುವೆಯಾಗಿ ಅವಳು ತಾನಾಗಿಯೇ ಆಸ್ಪತ್ರೆಯಿಂದ ಹೊರಟು ಹೋಗತಕ್ಕವಳಾಗಿರುವಳು. ಅವಳನ್ನು ಹೆಚ್ಚು ಕಾಲ ಆಸ್ಪತ್ರೆಯಲ್ಲಿ ನಿಲ್ಲಿಸಿಕೊಳ್ಳುವ ಆಶೆಯನ್ನು ತಾವು ಬಿಡೋಣಾಗಲಿ.”

ಅಲ್ಲಿಂದ ಹೊರಟ ಮೋಡೀನನು ನರ್ಸ್ ನೋರಾ ಎಂಡರ್ಬೀಯನ್ನು ಅವಳ ವಾರ್ಡಿಗೆ ಹೋಗಿ ನೋಡಿದನು. ಮನದೊಳಗೆ ಮುಂಚೆಯೇ ನಿಶ್ಚಯ ಮಾಡಿಕೊಂಡಿರುವುದನ್ನನುಸರಿಸಿ ನೋರಳು ಮೋಡೀನನಿಗೆ ಚೆನ್ನಾಗಿ ಆದರ-ಸತ್ಕಾರವನ್ನು ತೋರಿಸಿದಳು. ಯಾವ ತರಹದಿಂದಲೂ ತನ್ನ ಹೃದಯದ ಭಾವನೆಯನ್ನು ಹೊರಬಿಡದಂತೆ ಪ್ರಯತ್ನಿಸಿದಳು. ನೋರಳು ಹೇಳಿದಳು—“ಗುಡ್‌ಮಾರ್ನಿಂಗ್, ಡಾಕ್ಟರ್ ಮೋಡೀನಾ!”

ಡಾಕ್ಟರನು ಉತ್ತರ ಕೊಟ್ಟನು—“ಗುಡ್‌ಮಾರ್ನಿಂಗ್ ನರ್ಸ್! ಡಾಕ್ಟರ್ ಗ್ರೇಯ ಮೇಲೆ ಪೋಲೀಸರು ತೋರಿಸಿದ ಅತ್ಯಾಚಾರಕ್ಕೆ ನಾನು ಪೋಲೀಸರ ಮೂರ್ಖತನ ಅಥವಾ ಹುಚ್ಚುತನವೆಂದೇ ಹೇಳುವೆನು. ಇಂತಹ ಅನ್ಯಾಯವಾದ ಆರೋಪಗಳನ್ನು ನಾನಿದುವರೆಗೆ ನೋಡಿರಲಿಲ್ಲ.”

ಮೋಡೀನನು ಈ ಮಾತನ್ನಾಡುತ್ತ ಮಿಸ್ ಎಂಡರ್ಬೀಯ ಮುಖವನ್ನು ತೀಕ್ಷ್ಣದೃಷ್ಟಿಯಿಂದ ನೋಡಿದನು. ಈ ಸಮಯದಲ್ಲಿ ಮೋಡೀನನ ಕಣ್ಣಿನಲ್ಲಿ ಒಂದು ವಿಚಿತ್ರ ರೀತಿಯ ಹೊಳಪಿದ್ದಿತು!

ನರ್ಸ್ ಹೇಳಿದಳು:—“ನಾವೆಲ್ಲರೂ ಅದನ್ನು ಮೂರ್ಖತನವೆಂದೇ ತಿಳಿದು ಕುಳಿತಿರುವೆವು. ಶೀಘ್ರದಲ್ಲಿಯೇ ಡಾಕ್ಟರ್ ಗ್ರೇಯು ನಮ್ಮ ನಡುವೆ ಇರುವುದನ್ನು ನಾವು ನೋಡುವ ಆಶೆ ಇದೆ.”

ಮೋಡೀನನು ಹೇಳಿದನು:—“ನಿಶ್ಚಯ-ನಿಶ್ಚಯ. ಈಗ ನಾನು ನಿನ್ನ ಬಳಿಯಲ್ಲೊಂದು ವಿಷಯದಲ್ಲಿ ಮಾತಾಡಲು ಬಂದೆನು. ಎರಡು-ಮೂರು ತಿಂಗಳ ಕಾಲ ನೀನು ನನ್ನಲ್ಲಿ ಕೆಲಸ ಮಾಡಲು ಸಾಧ್ಯವಿರುವುದೇ? ನಾನು ಒಬ್ಬಿಬ್ಬ ರೋಗಿಗಳನ್ನು ನನ್ನ ಮನೆಯಲ್ಲಿಯೇ ಇಟ್ಟುಕೊಂಡು ಚಿಕಿತ್ಸೆ ನಡೆಸಬೇಕೆಂದಿರುವೆನು. ಈ ಕಾರ್ಯದಲ್ಲಿ ನಾನು ನಿನ್ನ ಬೆಂಬಲವನ್ನು ಬಯಸುತ್ತಿರುವೆನು. ಜೊತೆಗೆ ಈ ವಿಷಯವನ್ನೂ ತಿಳಿಸಿಬಿಡುತ್ತೇನೆ—ನಿನಗೆ ಇಲ್ಲಿ ದೊರೆಯುತ್ತಿರುವ ಸಂಬಳದ ಎರಡರಷ್ಟು ಸಂಬಳವನ್ನು ನಾನು ಕೊಡುವೆನು. ಡಾಕ್ಟರ್ ಸ್ಟೆಂಟನರಿಗೂ ತಿಳಿಸಿರುವೆನು; ಕೆಲವು ದಿನಗಳವರೆಗೆ ನಿನಗೆ ರಜೆಕೊಡಲು ಅವರೇನೂ ತಡೆಯುಂಟುಮಾಡುವುದಿಲ್ಲ.”

ಡಾಕ್ಟರನ ಈ ಮಾತನ್ನು ಕೇಳಿ ನೋರಳು ತನ್ನ ಅಂತರಂಗದೊಳ

ಗಿನ ಪ್ರಸನ್ನತೆಯನ್ನು ಕಷ್ಟದಿಂದ ಅಡಗಿಸಿಕೊಂಡಳು. ಭಾಗ್ಯವು ಈಗ ಅವಳ ಕಡೆಗಿದ್ದಿತು; ಯಾಕೆಂದರೆ, ಮೇಡೀನನ ಮನೆಯಲ್ಲಿ ಇದ್ದಾಗ ಅವನ ಪೂರ್ವ ಚರಿತ್ರೆಯನ್ನೆಲ್ಲ ಬಹಳ ಸುಲಭವಾಗಿ ಅರಿತುಕೊಳ್ಳಲು ಅನುಕೂಲ ವಿದ್ದಿತು. ಆದರಿಂದ ಡಾಕ್ಟರ್ ಗ್ರೇಯ ಬಿಡುಗಡೆಗೆ ಬಹಳ ಸಹಾಯವೂ ಆಗುವಂತಿದ್ದಿತು.

ಡಾಕ್ಟರ್ ಮೇಡೀನನ ಪ್ರಶ್ನೆಗೆ ಉತ್ತರವಾಗಿ ನೋರಾ ಹೇಳಿದಳು:-- "ಆಗಲಿ. ಬಹಳ ಸಂತೋಷ. ನಿಮ್ಮ ಈ ಏರ್ಪಾಡನ್ನು ನಾನು ಸಂತೋಷ ದಿಂದ ಒಪ್ಪಿಕೊಳ್ಳುವೆನು. ನಿಮ್ಮ ಈ ಕಾರ್ಯದಲ್ಲಿ ಎಲ್ಲರನ್ನೂ ಬಿಟ್ಟು ನನ್ನನ್ನೇ ಚುನಾಯಿಸಿಕೊಂಡಿರುವದಕ್ಕಾಗಿ ನಾನು ನಿಮಗೆ ಧನ್ಯವಾದವ ನ್ನೀಯುತ್ತೇನೆ. ಇಲ್ಲಿಂದ ಯಾವಾಗ ಹೊರಡಬೇಕು?"

ಡಾಕ್ಟರ್ ಮೇಡೀನನು ಹೇಳಿದನು:—"ನಾಳೆ ನಮ್ಮ ಮನೆಗೆ ರೋಗಿಯು ಬರುವನು. ಅವನು ಬಂದು ಕೂಡಲೆ ನಿನಗೆ ಸೂಚನೆ ಕೊಡು ವೆನು. ಒಳ್ಳೇದು. ವಾರ್ಡಿನ ರೋಗಿಗಳ ಸ್ಥಿತಿಯು ಹೇಗಿದೆ? ಎಂಬುದನ್ನು ಸ್ವಲ್ಪ ನೋಡಿಕೊಂಡು ಬರುತ್ತೇನೆ."

ಮೇಡೀನನು ಅಲ್ಲಿಂದ ಹೊರಟನು. ನೋರಾ ಎಂಡರ್ಬಿಯೂ ಡಾಕ್ಟರ್ ಮೇಡೀನನೊಂದಿಗೇ ಇದ್ದು, ಆಯಾಯ ವಾರ್ಡಿನ ರೋಗಿಗಳನ್ನು ನಿರೀಕ್ಷಿಸಿದಳು. ರೋಗಿಗಳನ್ನು ಪರೀಕ್ಷಿಸುತ್ತಿದ್ದಾಗ ಮೇಡೀನನಿಗೆ ಆ ರೋಗಿಗಳ ಮೇಲೆ ಆಂತರಿಕವಾಗಿ ಎಂತಹ ಉದಾಸೀನಭಾವನೆ ಇರುವು ದೆಂಬುದನ್ನು ನೋರಳು ಕೂಡಲೆ ಅರಿತುಬಿಟ್ಟಳು. ಅವನ ಮುಖದ ಇಳಿ ಯುವಿಕೆ-ಏರುವಿಕೆಗಳನ್ನೂ ಮತ್ತಿತರ ಮುಖಲಕ್ಷಣಗಳನ್ನೂ ಕಂಡು, ಇವನು ಯಾವಾಗಲೂ ಭೀತಿಯುತನಾಗಿ ವರ್ತಿಸುವವನೆಂದು ನೋರಳು ತಿಳಿದಳು; ಆದರೆ ಇಡೀ ಪ್ರಪಂಚದಲ್ಲಿಯೇ ಸುಪ್ರಸಿದ್ಧನಾದ ಡಾಕ್ಟರ್ ಎಂದೆನಿಸಿರುವ ಮನುಷ್ಯನೊಬ್ಬನು ಈ ರೀತಿಯಾಗಿ ಯಾವಾಗಲೂ ಭೀತಿ ಯುತನಾಗಿರಲು ಪ್ರಯತ್ನಿಸುತ್ತಿರುವ ಆಗತ್ಯವೇನಿದ್ದಿತು? ನೋರಳು ಎಷ್ಟೆಷ್ಟು ಆಲೋಚಿಸಿದರೂ ಇದರ ಗುಟ್ಟನ್ನು ತಿಳಿಯಲಾಗಲಿಲ್ಲ. ಆಲೋ ಚಿಸಿ-ಆಲೋಚಿಸಿ ಕೊನೆಗೆ ನಿರ್ಧರಿಸಿದಳು:—"ಈ ಮನುಷ್ಯನು ಕಾಡಿನಲ್ಲಿ ಸ್ವತಂತ್ರವಾಗಿ ತಿರುಗುವ ಮಾಂಸಭಕ್ಷಿಯಾದ ಪ್ರಾಣಿಗಳಿಗಿಂತಲೂ ಎಷ್ಟೋ ಪಾಲು ಹೆಚ್ಚಿನ ಭಯಂಕರನಿರುವನು; ಮತ್ತು ಭೀಷಣ ವಿಷ ಮಯ ಸರ್ಪಗಳಿಂತಲೂ ಹೆಚ್ಚಿನ ಭೀಕರನಿರುವನು!"

# (೨)

ಮಿಸ್ಟರ ಕ್ಲೀಮೆಂಟ್ ಮಾರ್ಟಿಮರ್ ಆರ್. ಎ. ಇವನ ಚಿಕ್ಕ ಚಿಕ್ಕ ವಿನೋದ ಪಾರ್ಟಿಯು ಕೇವಲ ಪರಿಚಿತವಾದ ಮೇರೆಯಲ್ಲಿಯೇ ಪ್ರಸಿದ್ಧವಾಗಿದ್ದಿತು. ಯಾಕೆಂದರೆ, ಕ್ಲೀಮೆಂಡ್ ಮಾರ್ಟಿಮರನ ವಿನೋದಗೋಷ್ಠಿಗೆ ಬರುವ ಅತಿಥಿಗಳು ಹೆಚ್ಚಾಗಿ ಹಣವಂತರೂ, ವಿದ್ವಾಂಸರೂ, ಉನ್ನತಪದಾಧಿಕಾರಿಗಳೂ ಆಗಿರುತ್ತಿದ್ದರು.

ಮಾರ್ಟಿಮರನು ಒಬ್ಬ ದೊಡ್ಡ ಪೇಂಟರನಾಗಿದ್ದನು. ಜನತೆಯು ಅವನ ಮೇಲೆ ಬಹಳ ನಂಬಿಗೆ ಇಟ್ಟಿದ್ದಿತು. ಅವನು ತಯಾರಿಸಿದ ಚಿತ್ರಗಳು ರಾಯಲ್ ಅಕಾಡೆಮಿಯ ಗೋಡೆಗಳಲ್ಲಿಯೂ ಕೂಡ ತೂಗಹಾಕಲ್ಪಡುತ್ತಿದ್ದವು. ಈ ಕಾರಣದಿಂದಲೇ ಮಾರ್ಟಿಮರನಿಗೆ ತನ್ನ ಕಾರ್ಯದಲ್ಲಿ ಬಹಳ ಕಡಿಮೆ ವಿಶ್ರಾಂತಿಯು ದೊರೆಯುತ್ತಿದ್ದಿತು; ಆದರೆ ಯಾವ ಮನುಷ್ಯನು ಎಂತಹ ಕಾರ್ಯದಲ್ಲಿ ಬೇಕಾದರೂ ಆಸಕ್ತನಾಗಿರಲಿ, ಆದರೂ ಒಂದೊಂದು ಸಮಯದಲ್ಲಿ ನಡುನಡುವೆ ಮನೋವಿನೋದಕರವಾದುದೇನನ್ನಾದರೂ ಮಾಡಿ ಆನಂದಿಸಬೇಕಾದುದು ಅಗತ್ಯವಿದೆ. ಮಿಸ್ಟರ್ ಕ್ಲೀಮೆಂಟ್ ಮಾರ್ಟಿಮರನ ಪಾರ್ಟಿಯೂ ಕೂಡ ಇಂತಹದೇ ಒಂದು ಮನೋವಿನೋದಗೊಳಿಸುವ ಸಾಧನವಾಗಿದ್ದಿತು.

ಮಾರ್ಟಿಮರನ ಇಂದಿನ ವಿನೋದಗೋಷ್ಠಿಗೆ ವಿಖ್ಯಾತ ರಾಜನೀತಿಜ್ಞನಾದ ರೈಂಡಲ್ ಹರ್ಸಿ, ಇತ್ತೀಚೆಗೆ ಆಸ್ಸಾಂ ಪ್ರಾಂತದಲ್ಲೊಂದು ದೊಡ್ಡ ಸೇತುವೆಯನ್ನು ನಿರ್ಮಿಸಿ ಪ್ರಸಿದ್ಧಿ ಹೊಂದಿದ ಇಂಜಿನಿಯರ್ ಕೈಂಡನ್, ಪರ್ತ ಡೆ ಆನರ್ಸ ಎಂಬ ಗೌರವ ಪ್ರಶಸ್ತಿಯನ್ನು ಪಡೆದ ಫದರ್ ಸ್ಲೋನ್, ಪೋಲೀಸ್ ಚೀಫ್ ಕಮಿಶನರ ಸರ್ ರಥವರ್ಟ್ ನಾವೆಲ್ಸ, ಸುಪ್ರಸಿದ್ಧ ಸಂಪಾದಕನಾದ ವಿಲಹಂಟನ್, ಡಾಕ್ಟರೀ ಪ್ರಪಂಚದಲ್ಲಿ ಅತುಲ ಕೀರ್ತಿಗಳಿಸಿದ ಡಾಕ್ಟರ್ ಮೆಡೀನಾ ಮುಂತಾದವರು ದಯಮಾಡಿಸಿದ್ದರು.

ಡಾಕ್ಟರ್ ಮೇಡೀನನು ಸ್ಪೇನ್ ನಿವಾಸಿಯಾಗಿದ್ದನು. ಅವನು ಲಂಡನ್ನಿಗೆ ಬರುವದಕ್ಕಿಂತ ಮುಂಚೆ ಸೇನಾವಿಭಾಗದಲ್ಲಿ ಎಷ್ಟೋ ಕಾಲದವರೆಗೆ ಡಾಕ್ಟರೀ ಪ್ರ್ಯಾಕ್ಟೀಸ್ ಮಾಡಿದ್ದನು. ಫ್ರೆಂಚ್ ಡಾಕ್ಟರೀ ಡಿಗ್ರಿಯೊಡನೆಯೇ ಅವನು ಇಂಗ್ಲಿಷ್ ಡಾಕ್ಟರೀ ಡಿಗ್ರಿಯನ್ನೂ ಸಂಪಾದಿಸಿದ್ದನು. ಅದಲ್ಲದೆ ಅವನು ಸಾಹಿತ್ಯವಿಭಾಗದಲ್ಲಿಯೂ ದೊಡ್ಡ ಪಂಡಿತನಾಗಿದ್ದನು. ಪ್ರಪಂಚದ ಮುಖ್ಯ ಮುಖ್ಯವಾದ ಆರು ಭಾಷೆಗಳಲ್ಲಿ ಅವನು ಸುಲಭವಾಗಿ

ವ್ಯವಹಾರ ಮಾಡುತ್ತಿದ್ದನಲ್ಲದೆ, ಅಗತ್ಯಬಿದ್ದಾಗ ಇನ್ನೂ ಐದಾರು ಭಾಷೆಗಳಲ್ಲಿ ಸಂಭಾಷಣೆ ನಡೆಸಿ, ತನ್ನ ಕೆಲಸವನ್ನು ನಿರ್ವಹಿಸಿಕೊಳ್ಳಬಲ್ಲವನಾಗಿದ್ದನು. ರೇಡಿಯಮ್ ಪ್ರಯೋಗದ ಮೂಲಕವಾಗಿ ಕೆನ್ಸರ್ ರೋಗದಂತಹ ದುಸ್ಸಾಧ್ಯರೋಗಗಳನ್ನೂ ಕೂಡ ಗುಣಪಡಿಸುವ ತನ್ನ ನವೀನ ಆವಿಷ್ಕಾರದಿಂದ ಆವನು ಈ ಸಮಯದಲ್ಲಿ ಬಹಳ ಪ್ರಸಿದ್ಧಿ ಹೊಂದಿದ್ದನು. ಇತ್ತೀಚೆಗೆ ವೆಸ್ಟ್‌ಮಿನಿಸ್ಟರಿನ ವೆಂಡ್‌ವರ್ಥ್ ಫೌಂಡೇಷನ್ ಆಸ್ಪತ್ರೆಯಲ್ಲಿಯೂ ಚೆನ್ನಾಗಿ ಕೀರ್ತಿಯನ್ನು ಸಂಪಾದಿಸಿದ ನಂತರ, ಈಗ ತನ್ನದೇ ಒಂದು ಆಸ್ಪತ್ರೆಯನ್ನು ತೆರೆದು, ಅದರಲ್ಲಿ ನವನವೀನನಾದ ತನ್ನ ಆವಿಷ್ಕಾರಗಳಿಂದ ರೋಗವನ್ನು ಹೋಗಲಾಡಿಸಲಿಚ್ಛಿಸುತ್ತಿದ್ದನು.

ಡಾಕ್ಟರ್ ಮೇಡೀನನು ಆಕೃತಿಯಿಂದಲೇ ದೊಡ್ಡ ಪ್ರಭಾವಶಾಲಿಯಾದ ಭವ್ಯ ಪುರುಷನೆಂದು ಕಾಣಿಸುತ್ತಿದ್ದನು. ಅವನ ತಲೆಯ ಕಪ್ಪು ಕೂದಲುಗಳೂ, ಉನ್ನತವಾದ ಲಲಾಟವೂ, ಯಾವಾಗಲೂ ಹಸುರು ಕನ್ನಡಕವನ್ನೇ ಧರಿಸಿರುತ್ತಿದ್ದ ಅವನ ನೀಲವಾದ ನೇತ್ರಗಳೂ ಮುಖಕ್ಕೆ ಇನ್ನೂ ಕಾಂತಿಯನ್ನು ಹೆಚ್ಚಿಸುತ್ತಿದ್ದವು. ಅವನ ಆಕಾರ ಸೌಷ್ಟವವನ್ನು ನೋಡಿದೊಡನೆಯೇ ಇವನೊಬ್ಬ ಮಹಾಪುರುಷನೆಂದು ನೋಡಿದವರಿಗೆ ಅನಿಸದೆ ಇರುತ್ತಿರಲಿಲ್ಲ.

ಇಂದಿನ ಪಾರ್ಟಿಗೆ ಬಂದಿದ್ದ ಅತಿಥಿಗಳು ಅಲ್ಲಿನ-ಇಲ್ಲಿನ ವಿಚಾರಗಳನ್ನು ಮಾತಾಡುತ್ತ ನಗುತ್ತಾ, ರುಚಿರುಚಿಯಾದ ತಿಂಡಿಗಳನ್ನು ತಿನ್ನುತ್ತಾ, ಮದ್ಯವನ್ನು ಕುಡಿಯುತ್ತಾ ಆನಂದದಲ್ಲಿ ಮಗ್ನರಾಗಿದ್ದರು. ಪೋಲೀಸ್ ಚೀಫ್ ಕಮಿಶನರ್ ಸರ್ ಕಥವರ್ಟ್ ನಾವಲ್ಸನು ಮಾತಾಡುವಾಗ ನಡುನಡುವೆ ನಿಂತು ಕೆಮ್ಮುತ್ತಾ ಇದ್ದನು. ಆದರ ಮೇಲೆ ಡಾಕ್ಟರ್ ಮೇಡೀನನ ಧ್ಯಾನವು ವಿಶೇಷವಾಗಿ ಆ ಕಡೆಗೇ ಧಾವಿಸಿತು. ಸ್ವಲ್ಪ ಹೊತ್ತಿನ ಮೇಲೆ ಮೇಡೀನನು ಮೃದುಮಧುರವಾದ ಧ್ವನಿಯಿಂದ ಕಥವರ್ಟ್ ನಾವೆಲ್ಸನನ್ನು ವಿಚಾರಿಸಿದನು. "ಕ್ಷಮಿಸಬೇಕು ಮಿಸ್ಟರ್ ನಾವೆಲ್ಸ! ಕುತ್ತಿಗೆಯೊಳಗೆ ಏನೋ ಬಾವು ಉಂಟಾಗಿದ್ದುದರಿಂದಲೇ ಮಾತಾಡುವಾಗ ತಾವು ಇಷ್ಟು ಕಷ್ಟವನ್ನು ಅನುಭವಿಸುತ್ತಿದ್ದೀರೆಂದು ನಾನು ಭಾವಿಸುತ್ತೇನೆ, ಅಲ್ಲವೆ?"

ನಾವೆಲ್ಸನು ಸಮಾಧಾನವಾಗಿ ಉತ್ತರವಿತ್ತನು—"ವಿಷಯವೇನೋ ಸ್ವಲ್ಪ ನಿಜವಿರಬಹುದು ಡಾಕ್ಟರ್! ಕುತ್ತಿಗೆಯಲ್ಲಿ ಏನೋ ಒಂದು ತರಹ ನೋವಿದೆ; ಆದರೆ ಅದರಿಂದೇನೂ ತೊಂದರೆ ಇಲ್ಲ. ಸ್ವಲ್ಪ ಹೊತ್ತಿನೊಳಗೇ ಅದು ಸರಿಹೋಗಿ ಬಿಡುವುದು."

ಇಷ್ಟು ಮಾತನ್ನಾಡಿ ನಾವೆಲ್ಸನು ವಿಷಯವನ್ನು ಬದಲಾಯಿಸಿ ಮಾತಾಡತೊಡಗಿದನು; ಆದರೆ ಸಂಭಾಷಿಸುವಾಗ ಅವನಿಗೆ ಬಹಳ ಕಷ್ಟವೆನಿಸ ಹತ್ತಿತು. ಕೊನೆಗೆ ಡಾಕ್ಟರ್ ಮೇಡೀನನು ಸುಮ್ಮನೆ ಕುಳಿತಿರಲಾರದೆ ಹೇಳಿದನು:—"ಮಿಸ್ಟರ್ ನಾವೆಲ್ಸ! ತಮ್ಮ ಕುತ್ತಿಗೆಯ ಸ್ಥಿತಿಯು ಸ್ವಲ್ಪ ಉಲ್ಬಣಿಸುತ್ತಿರುವಂತಿದೆ. ತಾವೀಗ ಅಗತ್ಯವಿರುವದಕ್ಕಿಂತ ಹೆಚ್ಚಿನ ಸಂಭಾಷಣೆಯನ್ನು ಮಾಡದೆ ಇರುವುದು ಬಹಳ ಅನುಕೂಲ. ಯಾಕಂದರೆ ಹೆಚ್ಚಿನ ಸಂಭಾಷಣೆಯಿಂದ ಹೆಚ್ಚು ತೊಂದರೆಯಾಗುವ ಸಂಭವವಿದೆ. ತಾವು ದಯ ವಿಟ್ಟು ಒಂದು ಸಾರಿ ನನಗೆ ತಮ್ಮ ಕುತ್ತಿಗೆಯನ್ನು ಪರೀಕ್ಷಿಸಲು ಅವಕಾಶ ವಿತ್ತಿದ್ದರೆ ನಾನು ತಮ್ಮ ಈ ಕಷ್ಟವನ್ನು ಬಲು ಸುಲಭವಾಗಿ ಪರಿಹರಿಸಬಹು ದಾಗಿದ್ದಿತು."

ನಾವೆಲ್ಸ ಹೇಳಿದನು:—"ತಮ್ಮ ಉಪಕಾರಕ್ಕೆ ಧನ್ಯವಾದಗಳು. ಆಗಲಿ. ಅಗತ್ಯವಾಗಿ ನಾನೊಂದು ಸಾರೆ ತಮ್ಮ ಮನೆಗೆ ಬರುವನು."

ವಿನೋದಗೋಷ್ಠಿಯು ಮುಗಿದ ಮೂರು ಗಂಟೆಗಳ ನಂತರ ಸರ್ ಕಥವರ್ಟ್ ನಾವೆಲ್ಸನು ಡಾಕ್ಟರ್ ಮೇಡೀನನ ಮನೆಯೊಳಗೆ ಕುರ್ಚಿಯೊಂದರ ಮೇಲೆ ಕುಳಿತಿದ್ದನು. ಮೇಡೀನನು ಒಂದು ತೀಕ್ಷ್ಣವಾದ ಎಲೆಕ್ಟ್ರಿಕ್ ಬಲ್ಬಿನ ಮೂಲಕವಾಗಿ ನಾವೆಲ್ಸನ ಕುತ್ತಿಗೆಯನ್ನು ನಿಧಾನವಾಗಿ ಪರೀಕ್ಷಿಸುತ್ತಿದ್ದನು. ನಡುವೆ ಡಾಕ್ಟರನ ಮುಖವು ಹೆಚ್ಚು ಗಂಭೀರಭಾವವನ್ನು ತಳೆಯಿತು. ಇದರಿಂದ ಸರ್ ಕಥವರ್ಟ ನಾವೆಲ್ಸನ ಉತ್ಸುಕತೆಯು ಬಹಳ ಹೆಚ್ಚಾಯಿತು. ಆಗಲೆ ಡಾಕ್ಟರ್ ಮೇಡೀನನು ನಾವೆಲ್ಸನ ಕುತ್ತಿಗೆಯ ಒಳಭಾಗವನ್ನು ಯಾವುದೋ ಒಂದು ಲೋಷನಿನಿಂದ ಒದ್ದೆ ಮಾಡಿದನು. ಇದರಿಂದ ಕುತ್ತಿಗೆಯ ನೋವು ಮುಂಚಿಗಿಂತ ಸ್ವಲ್ಪ ಕಡಿಮೆಯಾದಂತೆ ತೋರಿತು. ಅನಂತರ ಮೇಡೀನನು:—"ಮಿಸ್ಟರ್ ಕಥವರ್ಟ! ಎಲ್ಲಕ್ಕಿಂತ ಮೊದಲು ನಾನು ನಿಮ್ಮನ್ನು ಈ ರೋಗದಿಂದ ಬಿಡುಗಡೆ ಹೊಂದಿಸಬಲ್ಲೆನೆಂದು ನಿಮಗೆ ಭರವಸೆ ಕೊಡುತ್ತೇನೆ. ಜೊತೆಗೆ ಈಗ ಇದನ್ನೂ ತಿಳಿಸುವೆನು-ನಿಮ್ಮ ಶರೀರದಲ್ಲೀಗ ಭಯಂಕರ ವ್ಯಾಧಿಯೊಂದು ತಲೆದೋರುತ್ತಿದೆ. ಬಹಳ ಬೇಗನೆ ಅದಕ್ಕೆ ತಕ್ಕ ಚಿಕಿತ್ಸೆ ಮಾಡಬೇಕಾದುದು ಅತ್ಯಗತ್ಯವಾಗಿದೆ."

ಕೆನ್ಸರ್ ರೋಗದ ಮೇಲೆ ಹೊಸ ಹೊಸ ಆವಿಷ್ಕಾರಗಳನ್ನು ಕಂಡು ಹಿಡಿಯುತ್ತಿರುವ ಒಬ್ಬ ಸುಪ್ರಸಿದ್ಧ ಡಾಕ್ಟರನ ಬಾಯಿಂದ ಹೊರಟ ಈ ಮಾತನ್ನು ಆಲಿಸಿದೊಡನೆಯೇ ಸರ್ ಕಥವರ್ಟನ ಮಸ್ತಿಷ್ಕದಲ್ಲಿ ಒಂದೇಸಾರಿಗೆ ತರಹ ತರಹದ ವಿಚಾರಗಳು ಉದ್ಭವಿಸತೊಡಗಿ, ಶರೀರವೆಲ್ಲವೂ ಒಂದು ಸಾರಿ ನಡುಗಿ

ಬಿಟ್ಟಿತು. ಅವನು ಬಹು ದಿಗಿಲುಗೊಂಡನು. ಸಂಧಿಗ್ಧಸ್ವರದಿಂದ ಪ್ರಶ್ನಿಸಿದನು—"ಕೆನ್ಸರ್ ರೋಗವೇನೂ ಅಲ್ಲವಷ್ಟೆ ಡಾಕ್ಟರ್?"

ನಿಶ್ಚಯಪೂರ್ಣವಾದ ಸ್ವರದಿಂದ ಮೇಡೀನನು ಉತ್ತರ ಕೊಟ್ಟನು—ನೀವು ಒಂದೇಸಾರಿಗೆ ನಿಜವನ್ನೇ ಅರಿತು ಬಿಟ್ಟಿರಿ, ಸರ್ ಕಥವರ್ಟ್!

ಆದರೆ ನಾನು ನಿಮಗೆ ತಿರುಗಿ ಪೂರ್ಣ ವಿಶ್ವಾಸವೀಯುತ್ತೇನೆ – ನಾನು ಏನೇನು ಹೇಳುತ್ತೇನೆಯೋ, ಅದನ್ನು ಪೂರ್ಣವಾಗಿ ತೋರಿಸುವುದಕ್ಕೂ ನಾನು ಶಕ್ತನಿರುವೆನು ಹತ್ತು ವರ್ಷಗಳ ಮುಂಚೆ ಅಥವಾ ಐದು ವರ್ಷಗಳ ಮುಂಚೆಯಾದರೂ ನಾನು ಈ ರೋಗದ ವಿಷಯವಾಗಿ ಇಷ್ಟು ನಿಶ್ಚಿತ ರೂಪದಿಂದ ಯಾವ ವಿಚಾರನನ್ನೂ ಹೇಳಲಾರದವನಾಗಿದ್ದೆನು; ಆದರೆ ಅದೇ ನಾನು ಇಂದು ಬೇಕಾದರೆ ಕೆನ್ಸರ್‌ರೋಗಕ್ಕೆ ಸಂಬಂಧಿಸಿದ ಸಕಲ ವಿಚಾರವನ್ನೂ ದೃಢವಾಗಿ, ನಿಶ್ಚಯವಾಗಿ ಹೇಳಬಲ್ಲೆನು. ತಾವು ಪೂರ್ಣ ವಿಶ್ವಾಸವಿಟ್ಟು ನನ್ನ ಅಧೀನದಲ್ಲಿ ಇದ್ದರೆ, ನಾನು ನಿಶ್ಚಯವಾಗಿ ನಿಮ್ಮನ್ನು ಒಂದು ವಾರದ ಒಳಗೇ ಆರೋಗ್ಯದ ದಾರಿಗೆ ಕರೆತರಬಲ್ಲೆನು ಅದಲ್ಲದೆ ಇನ್ನು ಮೂರು ತಿಂಗಳೊಳಗೇ ನೀವು ಸಂಪೂರ್ಣ ಸ್ವಾಸ್ಥ್ಯಪಡೆಯುವಂತೆ ಮಾಡಬಲ್ಲೆನು. ಈ ವಿಚಾರವನ್ನು ನಾನು ಪ್ರತಿಜ್ಞೆಗೈದು ಹೇಳುತ್ತೇನೆ. ಈ ಚಿಕಿತ್ಸೆಗಾಗಿ ನಾನು ನಿಮ್ಮಿಂದ ಯಾವ ತರಹದ ಫೀಜನ್ನೂ ತೆಗೆದುಕೊಳ್ಳುವುದಿಲ್ಲ. ಕೇವಲ ನಿಮ್ಮ ಮನೆಯಲ್ಲಿ ವಾಸವಿದ್ದರೆ ನಿಮಗೆಷ್ಟು ಖರ್ಚಾಗುವದೋ ಅಷ್ಟನ್ನು ಮಾತ್ರ ಇಲ್ಲಿ ಕೊಟ್ಟರೆ ಸಾಕು ನಾನು ಲಾಭಸಂಪಾದನೆಗಾಗಿ ಈ ಕಾರ್ಯವನ್ನು ಕೈಗೊಳ್ಳುವುದಿಲ್ಲ. ಈ ತರಹದ ಭಯಂಕರ ರೋಗವನ್ನು ಪರಿಹರಿಸುವುದರಲ್ಲಿ ನನಗೊಂದು ತರಹದ ಮನಃಪ್ರಸನ್ನತೆಯು ಉಂಟಾಗುವುದು. ಕಡಿಮೆ ಪಕ್ಷ ಎರಡು ತಿಂಗಳ ಕಾಲವಾವರೂ ಇಲ್ಲಿರುವಂತೆ ಏರ್ಪಾಡು ಮಾಡಿಕೊಂಡು ನಾಳೆಯೇ ನೀವು ಇಲ್ಲಿಗೆ ಬರಬೇಕು. ಎರಡು ತಿಂಗಳ ನಂತರ ಬೇಕಾದರೆ ನಿಮ್ಮ ಮನೆಯಲ್ಲಿಯೇ ಇದ್ದು ಚಿಕಿತ್ಸೆಯನ್ನು ಪಡೆಯಬಹುದು. ಮೂರುತಿಂಗಳಾದ ಮೇಲೆ ನಿಮ್ಮ ಶರೀರದಲ್ಲಿ ಈ ರೋಗದ ಚಿಹ್ನೆಯೂ ಕೂಡ ಕಾಣಿಸದಿರುವಷ್ಟು ಸ್ವಸ್ಥರಾಗುವಿರಿ. ನಿಮಗಿದರಲ್ಲಿ ಸ್ವಲ್ಪವೂ ಸಂಶಯಬೇಡ. ನಾನು, ಡಾಕ್ಟರ್ ಮೇಡಿನಾ ಈ ಮಾತನ್ನು ಹೇಳುತ್ತಿರುವನೆಂದು ತಿಳಿಯಿರಿ."

ಮೇಡೀನನು ಸರ್‌ಕಥವರ್ಟ್‌ನ ಹೃದಯಕ್ಕೆ ಹೋಗಿ ಬಲವಾಗಿ ನಾಟುವಂತೆ ಕೊನೆಯ ಮಾತನ್ನು ದೃಢವಾದ ನಿಶ್ಚಲಸ್ವರದಿಂದ ನುಡಿದಿದ್ದನು. ನಾವೆಲ್ಸನು ದೀರ್ಘನಿಟ್ಟುಸಿರೊಂದನ್ನು ಬಿಟ್ಟು ಸ್ವಲ್ಪಕಾಲ ಚಿಂತಿಸಿ ಹೇಳಿದನು—"ಆಗಲಿ, ಡಾಕ್ಟರ್! ಖಂಡಿತವಾಗಿಯೂ ಬರುವೆನು; ಆದರೆ ನಾನು

ಕೊಡುವ ಫೀಜನ್ನು ನೀವು ಅಗತ್ಯವಾಗಿ ಸ್ವೀಕರಿಸಲೇಬೇಕು.''

ಡಾಕ್ಟರನು ನಿಶ್ಚಿತಸ್ವರದಿಂದ ನುಡಿದನು:—''ಉಹುಂ, ಅದಾಗದು ಸರ್. ಕೇವಲ ನಿಮ್ಮ ಖರ್ಚನ್ನು ಮಾತ್ರ ತೆಗೆದುಕೊಳ್ಳುವೆನು. ನಿಮಗೆ ಒಂದು ವೇಳೆ ಕೊಡಲೇಬೇಕೆಂಬ ಅಭಿಲಾಷೆ ಇರುವುದಾದರೆ, ನಮ್ಮ ವೆಂಟ್ ವರ್ಥ್ ಆಸ್ಪತ್ರೆಗೆ ಕೊಡಬಹುದು. ಅದರಿಂದ ಎಷ್ಟೋ ಬಡಜನಗಳಿಗೆ ಉಪ ಕಾರವಾಗುವುದು. ಹಾಗೆ ಮಾಡುವದೇ ಒಳ್ಳೆಯದು.''

ನಾವೆಲ್ಸನು ಹೇಳಿದನು:—''ನಿಮ್ಮಿಚ್ಛೆ ಇದ್ದಂತಾಗಲಿ. ನಾನು ಈಗ ಹೋಗುತ್ತೇನೆ. ನನ್ನ ಕಾರ್ಯಗಳ ವಿಷಯದಲ್ಲಿ ಬಹಳ ಏರ್ಪಾಡು ಮಾಡ ತಕ್ಕದ್ದಿದೆ. ನಾನು ಇಲ್ಲಿ ಇರುವಾಗ ಕಡಿಮೆ ಪಕ್ಷ ಟೆಲಿಫೋನಿನಿಂದಾದರೂ ನನ್ನ ಆಫೀಸಿನವರೊಂದಿಗೆ ಸಂಭಾಷಣೆ ಮಾಡಬಹುದಷ್ಟೆ?''

ಮೋಡೀನನು ದೃಢಸ್ವರದಿಂದ ಹೇಳಿದನು:—''ಅದಾಗದು ಮಿಸ್ಟರ್ ಕಥವರ್ಟ್! ಕಡಿಮೆ ಪಕ್ಷ ನೀವು ಒಂದು ತಿಂಗಳವರೆಗಾದರೂ ಟೆಲಿಫೋನ್ ವ್ಯವಹಾರವನ್ನು ನಿಲ್ಲಿಸಬೇಕಾಗುವದು. ಈ ನಡುವೆ ಬೇಕಾದರೆ ನೀವು ಬರೆದು ತೋರಿಸಬಹುದು. ಬಾಯಿಂದ ಮಾತ್ರ ಏನೂ ಹೇಳಲಾಗದು. ನಡು ನಡುವೆ ನಿಮ್ಮವರ್ಯಾರನ್ನೂ ಕೂಡ ಭೇಟಿಮಾಡಲು ಸಾಧ್ಯವಿಲ್ಲ; ಯಾಕೆಂ ದರೆ, ಭೇಟಿಯು ಸಂದರ್ಭದಲ್ಲಿ ಸಂಭಾಷಣೆಗೂ ಆರಂಭವಾಗುವದು ಅದ ರಿಂದ ಕುತ್ತಿಗೆಗೆ ಬಾಧೆಯುಂಟಾಗದೆ ಇರದು. ನಾನು ಇದನ್ನೆಂದೂ ಒಪ್ಪಲಾ ರೆನು. ಎಷ್ಟೇ ಅಗತ್ಯವಿದ್ದರೂ ಕೂಡ ನಾನು ಅಥವಾ ನನ್ನ ಕೆಲಸಗಾರ ರಲ್ಲದೆ ಇನ್ನಾವ್ಯರೊಡನೆಯೂ ನಿಮ್ಮ ಭೇಟಿಯಾಗಲು ನಾನು ಅನುಮತಿಸಲಾ ರೆನು. ಇವೇ ನನ್ನ ಶರತ್ತುಗಳು. ನನ್ನ ಈ ಶರತ್ತುಗಳನ್ನು ನೀವು ಒಪ್ಪಿ ಬರುವಿರಾದರೆ ನಾನು ಖಂಡಿತವಾಗಿ ನಿಮ್ಮ ರೋಗವನ್ನು ಗುಣಪಡಿಸುವೆನೆಂದು ನಿಮಗೆ ವಚನವನ್ನೀಯುವೆನು. ಹಾಗೊಂದು ವೇಳೆ ಈ ಶರತ್ತುಗಳಿಗೆಲ್ಲ ನಿಮ್ಮ ಒಪ್ಪಿಗೆ ಇಲ್ಲವಾದರೆ ನಿಮ್ಮ ಕೇಸನ್ನು ನಾನು ನನ್ನ ಕೈಗೆ ತೆಗೆದುಕೊಳ್ಳ ಲಾರೆನು. ಹೀಗೆ ಕಟ್ಟುನಿಟ್ಟಾಗಿ ಹೇಳುತ್ತಿದ್ದುದಕ್ಕಾಗಿ ತಾವು ದಯವಿಟ್ಟು ಬೇಸರಪಡಬಾರದು. ಕಟ್ಟುನಿಟ್ಟಾಗಿ ಇದ್ದರೇ ಕಾರ್ಯವು ತಡೆಯಿಲ್ಲದೆ ಸಫಲ ವಾಗುವದೆಂಬುದಕ್ಕಾಗಿ ನಾನು ಹೀಗೆ ಹೇಳಬೇಕಾಗಿದೆ. ಇನ್ನು ತಮ್ಮಿಚ್ಛೆ.''

ಮೋಡೀನನ ಶರತ್ತುಗಳು ಮನಸ್ಸಿಗೊಪ್ಪದಿದ್ದರೂ ರೋಗದ ಅಂಜಿಕೆ ಯಿಂದ ನಾವೆಲ್ಸನು ಅವನ್ನೆಲ್ಲ ಒಪ್ಪಲೇಬೇಕಾಗಿ ಬಂದಿತು. ಇನ್ನೇನೂ ಉಪಾಯಕಾಣದೆ ನಾವೆಲ್ಸನು ತಲೆಯಾಡಿಸುತ್ತ ಹೇಳಿದನು:—''ನನ್ನ ಉದ್ಯೋಗವು ಬಹಳ ಮುಖ್ಯವಾದುದಾದ್ದರಿಂದ ನನಗದರ ಮೇಲೆ ಹೆಚ್ಚು

ಶ್ರದ್ಧೆ ಇದೆ; ಆದರೆ ಜೀವಕ್ಕಿಂತ ಹೆಚ್ಚಿನದೇನಿದೆ? ಆಗಲಿ. ನೀವು ಹೇಳಿದು ದೆಲ್ಲವನ್ನೂ ನಾನು ಮನಃಪೂರ್ವಕವಾಗಿ ಒಪ್ಪುತ್ತೇನೆ. ಸಾಧ್ಯವಾದಷ್ಟು ಬೇಗನೆ ಹೇಗಾದರೂ ನನ್ನ ರೋಗವನ್ನು ಗುಣಪಡಿಸಲು ನೀವು ಸಮ್ಮತಿಸಿರುವುದೇ ನನ್ನ ದೊಡ್ಡ ಭಾಗ್ಯವೆಂದರಿಯುತ್ತೇನೆ. ಒಳ್ಳೇದು. ಎಂದಿನಿಂದ ಚಿಕಿತ್ಸೆಗೆ ಆರಂಭವಾಗುವುದು?''

ಮೇಡೀನನು ಹೇಳಿದನು:—''ತಾವು ನಾಳೆ ಎರಡು ಗಂಟೆಗೆ ಸರಿಯಾಗಿ ಇಲ್ಲಿಗೆ ಬರೋಣಾಗಲಿ. ತಮ್ಮ ಉದ್ಯೋಗದ ಕೆಲಸ ಕಾರ್ಯಗಳಿಗೆ ತಕ್ಕ ಏರ್ಪಾಡು ಮಾಡಿ ಬರಲು ಈ ನಡುವೆ ಇರುವ ವೇಳೆಯು ಸಾಕಾಗಬಹುದು.''

ಕಥವರ್ಟ್:—''ಸರಿ, ಆ ಮೇಲೆ?''

ಮೇಡೀನಾ:—ನೀವು ಬಂದೊಡನೆಯೇ ಚಿಕಿತ್ಸೆಗಾರಂಭಿಸುವೆನು ಈ ಚಿಕಿತ್ಸೆಗಾಗಿ ವೆಂಟವರ್ಥ್ ಆಸ್ಪತ್ರೆಯಿಂದ ಎರಡು ದಿನಗಳಮಟ್ಟಿಗೆ ರೇಡಿಯಮ್ಮಿನ ಅಧಿಕಾಂಶಭಾಗವನ್ನು ಇಲ್ಲಿಗೆ ತರಬೇಕಾಗುವದು. ರೇಡಿಯಮ್ ಬಲು ಬೆಲೆಯುಳ್ಳ ವಸ್ತುವಾಗಿದೆ. ಮಿಸ್ಟರ್ ವೆಂಟವರ್ಥ್‌ರು ಇದಕ್ಕಾಗಿ ೩೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಯಿತೆಂಬದು ನನಗೆ ಗೊತ್ತಿದೆ ಅಂತಹ ಪದಾರ್ಥವನ್ನು ಆಸ್ಪತ್ರೆಯಿಂದ ಇಲ್ಲಿಗೆ ತರುವಾಗ ಮತ್ತು ಇಲ್ಲಿಂದ ಒಯ್ಯುವಾಗ ನಿಮ್ಮ ಪತ್ತೇದಾರಿಗಳ್ಯಾರಾದರೂ ನನ್ನೊಂದಿಗೆ ಇರಬೇಕಾಗುವುದು. ಡಾಕ್ಟರ್ ಸ್ಟೆಂಟನರು ಈ ವಿಚಾರದಲ್ಲಿ ಹೆಚ್ಚಿನ ರಕ್ಷಣೆಯಿಲ್ಲದೆ ಅದನ್ನು ಆಸ್ಪತ್ರೆಯಿಂದ ಹೊರಗೆ ಕಳುಹಲು ಒಪ್ಪಲಾರರು.''

ಕಥವರ್ಟ್:—''ಹಾಗಿರುವಾಗ ಅದನ್ನು ಇತರರ ಉಪಯೋಗಕ್ಕಾಗಿ ಅವರು ಕೊಡಬಲ್ಲರೇ?''

ಮೇಡೀನಾ:—''ಪರಿಸ್ಥಿತಿಯಲ್ಲಿ ಅವರು ಒಪ್ಪದೇ ಇರಲಾರರೆಂದು ನನಗೆ ನಂಬಿಕೆ ಇದೆ. ನಾನದನ್ನು ತಂದು ಉಪಯೋಗಿಸಲು ತಕ್ಕವನೆಂದು ಅವರಿಗೂ ನಂಬಿಕೆಯಿದೆ. ಕೇವಲ ಅದರ ರಕ್ಷಣೆಯ ವ್ಯವಸ್ಥೆಯ ಮೇಲೆಯೇ ಅವರು ಹೆಚ್ಚು ಲಕ್ಷ್ಯವಿಡುವರು.''

ಕಥವರ್ಟ್:—''ಅದಕ್ಕೇನೂ ಯೋಚಿಸಬೇಕಾಗಿಲ್ಲ. ನಮ್ಮ ಇಲಾಖೆಯಲ್ಲಿ ಜಾಣರಾದವರೊಬ್ಬರನ್ನು ಈ ಕಾರ್ಯಕ್ಕೆ ನಿಯೋಜಿಸುವೆನು. ಇನ್ನೊಂದೇನಂದರೆ, ನಮ್ಮಲ್ಲಿಯ ದುಷ್ಟ ಸಾಹೇಬರಾರೂ ಅದನ್ನು ಕದ್ದೊಯ್ಯಲು ಯತ್ನಿಸಲಾರರೆಂದು ನನಗೆ ನಂಬಿಕೆ ಇದೆ. ಯಾಕಂದರೆ, ರೇಡಿಯಮ್ಮಿನಿಂದ ಕಳ್ಳರು ಯಾವ ಲಾಭವನ್ನೂ ಪಡೆಯಲಾರರು. ಅದನ್ನು ಒಂದು ವೇಳೆ ಎಲ್ಲಿಯಾದರೂ ಮಾರಿ ಹಣದ ರೂಪದಲ್ಲಿ ಪರಿವರ್ತಿಸುವುದೂ

ಕೂಡ ಸಾಮಾನ್ಯ ಕಾರ್ಯವಲ್ಲವೆಂದು ಅವರೂ ತಿಳಿದಿರಬಹುದು. ಒಳ್ಳೇದು. ಡಾಕ್ಟರ್ ಮೋಡೀನಾ! ಧನ್ಯವಾದಗಳು. ನಾಳೆ ಎರಡು ಗಂಟೆಯ ಹೊತ್ತಿಗೆ ಇಲ್ಲಿಗೆ ನಿಶ್ಚಯವಾಗಿ ಬರುವೆನು.''

ಮೋಡೀನನು ನಾವೆಲ್ಲನನ್ನು ಬಾಗಿಲದ ವರೆಗೆ ಕಳುಹಿಸಿ ಹಿಂದಿರುಗಿ ತನ್ನ ಆಫೀಸ್ ರೂಮಿಗೆ ಬಂದು ಕುಳಿತು ಗಂಭೀರವಾದ ಆಲೋಚನೆಯಲ್ಲಿ ಆಸಕ್ತನಾದನು. ಎಷ್ಟೋ ಹೊತ್ತು ಹಾಗೆಯೇ ಚಿಂತಾಮಗ್ನನಾಗಿ ಕುಳಿತ ನಂತರ, ಕುರ್ಚಿಯಿಂದೆದ್ದು ರಾತ್ರಿಯ ಭಯಂಕರ ನಿಃಸ್ತಬ್ಧತೆಯಲ್ಲಿ ಮನೆಯಿಂದ ಹೊರಹೊರಟನು.

ಮಿಸ್ಟರ್ ಜೋಸೆಫ್ ಶೀಡ್ಮನ್ನನು ಹಾಸಿಗೆಯಲ್ಲಿ ಮಲಗಿಕೊಂಡೇ ಒಂದು ಮಗ್ಗುಲಿಂದ ಇನ್ನೊಂದು ಮಗ್ಗುಲಿಗೆ ಹೊರಳಿದನು. ಎಚ್ಚರವಾಯಿತು. ಮೆಲ್ಲನೆ ಎದ್ದು ಹಾಸುಗೆಯ ಮೇಲೆ ಕುಳಿತು ಅತ್ತಿತ್ತ ಕಣ್ಣನ್ನು ಹೊರಳಿಸಿ ನೋಡಿದನು. ಮಂಚದ ಪಕ್ಕದಲ್ಲಿದ್ದ ಒಂದು ಸ್ವಿಚ್ ಒತ್ತಿದನು. ಅಷ್ಟು ಹೊತ್ತಿನ ವರೆಗೆ ಮಂದವಾಗಿ ಪ್ರಕಾಶ ಬೀರುತ್ತಿದ್ದ ಆ ಎಲೆಕ್ಟ್ರಿಕ್ ದೀಪವು ಈಗ ಉಜ್ವಲವಾಗಿ ಬೆಳಗತೊಡಗಿತು. ಮೈಮೇಲೆ ಹೊದ್ದುಕೊಂಡಿದ್ದ ಬಲು ಬೆಲೆಬಾಳುವ ಶಾಲನ್ನು ಕೆಳಗೆ ತೆಗೆದು ಹಾಕಿ ಹಾಸುಗೆಯನ್ನು ಬಿಟ್ಟು ಎದ್ದುನಿಂತನು. ಗೋಡೆಯ ಗೂಟದಲ್ಲಿ ಸಿಕ್ಕಿಬಿದ್ದ ಡ್ರೆಸ್ಸಿಂಗ್ ಗೌನನ್ನು ಧರಿಸಿ ಹತ್ತಿರದಲ್ಲಿಯೇ ಇದ್ದ ಸ್ಲೀಪರನ್ನು ಕಾಲಿಗೆ ಹಾಕಿಕೊಂಡನು.

ಮಿಸ್ಟರ್ ಶೀಡ್ಮನ್ನನು ವಿಲಾಸಸಾಮಗ್ರಿಗಳನ್ನು ಹೆಚ್ಚು ಪ್ರೀತಿಸುತ್ತಿದ್ದನು. ಅದಕ್ಕೆ ತಕ್ಕ ಐಶ್ವರ್ಯವೂ ಅವನಿಗಿದ್ದಿತು. ಅವನು ಬಹು ಬೆಲೆಬಾಳುವ ರತ್ನಗಳ ವ್ಯಾಪಾರಿಯಾಗಿದ್ದನು. ಮನೆಯ ಕೆಳಭಾಗದಲ್ಲಿರುವ ಅಂಗಡಿಯ ಹಜಾರದಲ್ಲಿನ ಸ್ಟ್ರಾಂಗ್ ರೂಮಿನಲ್ಲಿಯ ಖಜಾನೆ ಪೆಟ್ಟಿಗೆಯನ್ನು ಬಹು ಮೂಲ್ಯ ರತ್ನಗಳಿಂದ ಯಾವಾಗಲೂ ತುಂಬಿರುತ್ತಿದ್ದನು.

ಯಾವುದೋ ಒಂದು ಶಬ್ದವು ಆಕಸ್ಮಾತ್ತಾಗಿ ಅವನ ನಿದ್ರೆಯನ್ನು ಕೆಡಿಸಿ ಎಚ್ಚರಗೊಳಿಸಿದ್ದಿತು. ಆ ಶಬ್ದವನ್ನು ತಿರುಗಿ ಆಲಿಸಲು ಬಹಳ ಲಕ್ಷ್ಯವಿಟ್ಟು ಪರೀಕ್ಷಿಸಿದನು; ಆದರೆ ಎಲ್ಲಿಯೋ ರಸ್ತೆಯಲ್ಲಿ ಹೋಗುವ ಟ್ಯಾಕ್ಸಿಯ ಶಬ್ದವಲ್ಲದೆ ಇನ್ನ್ಯಾವ ಶಬ್ದವೂ ಕೇಳಿಸಲಿಲ್ಲ. ರಾತ್ರಿ ಒಂದು ಗಂಟೆಯ ವೇಳೆಯಲ್ಲಿ ಹ್ಯಾಡನ್ ಗಾರ್ಡನ್ನಿನ ರಸ್ತೆಗಳಲ್ಲಿ ಇನ್ನ್ಯಾವ ತರಹದ ಶಬ್ದವಾಗುವ ಶಂಕೆಯೂ ಇದ್ದಿರಲಿಲ್ಲ. ಆದರೂ ಶೀಡ್ಮನ್ನನು ಇಷ್ಟರಿಂದ ಸಂತೃಪ್ತನಾಗದೆ, ಕೂಡಲೆ ಮಂಚದ ಕೆಳಗೆ ಕೈಹಾಕಿ, ಒಂದು ಪ್ರಾಚೀನ ರೀತಿಯ ಭಯಂಕರ

ಶಸ್ತ್ರವನ್ನು ಹೊರತೆಗೆದನು. ಅದೊಂದು ಉದ್ದವಾದ ಬೇಟೆ ಕೋವಿಯಾಗಿದ್ದಿತು. ಇದುವರೆಗೆ ಎಂದೂ ಅದರ ಉಪಯೋಗಬಿದ್ದಿರಲಿಲ್ಲ. ಈಗದನ್ನು ಕೈಯಲ್ಲಿ ಹಿಡಿದು ಶೀಡ್ಮನ್ನನು ಸಮಾಧಾನ ತಾಳಿದನು. ಅದನ್ನು ವಸ್ತ್ರದೊಳಗೆ ಅಡಗಿಸಿಟ್ಟುಕೊಂಡು, ಒಂದು ದೊಡ್ಡ ಟಾರ್ಚ್ ಲೈಟನ್ನು ಹಿಡಿದು ಕೋಣೆಯ ಬಾಗಿಲನ್ನು ಮೆಲ್ಲನೆ ತೆರೆದನು. ಹೊರಗೆ ಹೋಗಿ ಮೆಟ್ಟಲುಗಳ ಹತ್ತಿರ ನಿಂತನು.

ಪಕ್ಕದ ಕೋಣೆಯಿಂದ ಅವನ ತಂಗಿಯು ಉಸಿರಾಡುತ್ತಿದ್ದ ಶಬ್ದವು ಕೇಳಿಸುತ್ತಿದ್ದಿತು. ಅದೊಂದಲ್ಲದೆ ಇನ್ನ್ಯಾವ ಶಬ್ದವೂ ಅವನ ಕಿವಿಗೆ ಬೀಳಲಿಲ್ಲ. ಉಸಿರು ಕಟ್ಟಿ ಆಲೈಸಿದನು. ಅನಂತರ ಎರಡು ಹೆಜ್ಜೆ ಮುಂದೆ ಹೋಗಿ ಅಂಧಕಾರಮಯವಾದ ಮೆಟ್ಟಲುಗಳ ಕೆಳಭಾಗದ ಕಡೆ ಬೊಗ್ಗಿ ನೋಡಿದನು. ಅದೇ ವೇಳೆಯಲ್ಲಿ ಪ್ರಕಾಶದ ಒಂದು ತೀವ್ರರೇಖೆಯು ಶೀಡ್ಮನ್ನನ ಮುಖದ ಮೇಲೆ ಬಿದ್ದಿತು. ಯಾವುದೋ ವಸ್ತುವು ಗಾಳಿಯಲ್ಲಿ ತೂರಿ ವೇಗವಾಗಿ ಬರುತ್ತಿರುವಂತೆ ಒಂದು ಚಿಕ್ಕ ಶಬ್ದವು ಅವನ ಕಿವಿಗೆ ಬಿದ್ದಿತು. ಜೊತೆಗೆ ಟಾರ್ಚಿನ ಬೆಳಕಿನಲ್ಲಿ ಬೆಳದಿಂಗಳಿನಂತಹ ಬೆಳ್ಳಗಾದ ಒಂದು ವಸ್ತುವು ಪ್ರಕಾಶಿಸಿತು. ನಂತರ ತನ್ನ ಮುಖದ ಮೇಲೆ ಯಾವದೋ ತರಲ ಮತ್ತು ತಣ್ಣಗಿರುವ ಪದಾರ್ಥವು ಬಿದ್ದಂತೆ ಅವನಿಗೆ ಅನುಭವವಾಯಿತು. ಅದರಿಂದ ಒಂದು ವಿಚಿತ್ರ ರೀತಿಯ ತೀಕ್ಷ್ಣವಾದ ಗಂಧವು ಹೊರಹೊರಡುತ್ತಿದ್ದಿತು.

ಶೀಡ್ಮನ್ನನ ಬಾಯಿಂದ ಕೂಡಲೆ ಒಂದು ಚಿಕ್ಕ ಛೀತ್ಕಾರವು ಹೊರಟು ಅಂಧಕಾರದಲ್ಲಿ ಲೀನವಾಯಿತು. ಅವನ ಕಾಲುಗಳು ತನ್ನ ದೇಹದ ಭಾರವನ್ನೀಗ ಹೊರಲಾರದಾದವು. ಆತನು ಒಂದುಸಲ ದೀರ್ಘಶ್ವಾಸವೊಂದನ್ನು ಬಿಟ್ಟು ಎಚ್ಚರದಪ್ಪಿ ಕೆಳಗೆ ಹಾಸಿದ ರತ್ನಕಂಬಳಿಯ ಮೇಲೆ ಬಿದ್ದುಬಿಟ್ಟನು!

ಎರಡನೆಯ ಕ್ಷಣದಲ್ಲಿಯೇ ಒಂದು ಕಪ್ಪುಛಾಯೆಯು ಮೆಟ್ಟಲಿನ ಮೇಲೆ ಕಾಣಿಸಿತು. ಅದು ಶೀಡ್ಮನ್ನನ ಶರೀರದ ಹತ್ತಿರ ಬಂದು ಬೊಗ್ಗಿ ನೋಡಿ, ಇನ್ನೊಂದು ಸಲ ಆ ಗಂಧಯುಕ್ತವಾದ ತರಲ ಪದಾರ್ಥವನ್ನು ಶೀಡ್ಮನ್ನನ ಮೂಗಿಗೆ ಹಿಡಿಯಿತು. ಅನಂತರ ಸಂತೋಷದ ಉಸಿರೊಂದನ್ನು ಬಿಟ್ಟು, ಆ ಕಪ್ಪುಛಾಯೆಯು ಆ ಮೆಟ್ಟಲುಗಳ ಮೇಲೆಯೇ ಕುಳಿತಿತು. ಅದರ ಕೈಯಲ್ಲಿನ ಟಾರ್ಚ್‌ಲೈಟ್ ನೊಂದುತ್ತಲೇ ಆ ಪ್ರದೇಶವು ಅಂಧಕಾರಮಯವಾಯಿತು.

ಬಿಸಿಗಾಳಿಯ ಒಂದು ತೀಕ್ಷ್ಣತರಂಗವು ಮೆಟ್ಟಲುಗಳ ಕಡೆ ಏರುತ್ತಿರುವುದು ಕಾಣಿಸಿತು; ಆದರೆ ಆ ಕಪ್ಪುಛಾಯೆಯು ಮೊದಲು ಕುಳಿತಿದ್ದ ಸ್ಥಳದಲ್ಲಿಯೇ ಕುಳಿತು ನಾಲ್ಕೂ ಕಡೆಯ ಶಬ್ದವನ್ನು ಲಕ್ಷ್ಯವಿಟ್ಟು ಆಲಿಸುತ್ತಿದ್ದಿತು.

ಹೀಗೆ ಅರ್ಧಗಂಟೆಯ ವರೆಗೆ ಆ ಛಾಯೆಯು ಅಲ್ಲಿಯೇ ಕುಳಿತು ನಿರೀಕ್ಷಿಸು ತ್ತಿದ್ದಿತು. ಪ್ರಕಾಶದ ಕ್ಷೀಣರೇಖೆಯೊಂದು ಮೆಟ್ಟಿಲುಗಳ ಮೇಲೆ ಬಿದ್ದಿತು. ಅದು ಯಾವದೋ ಒಂದು ಸಂಕೇತವಾಗಿದ್ದಿತು. ಆ ಕಪ್ಪುಛಾಯೆಯು ಕೂಡಲೆ ತನ್ನ ಸ್ಥಾನದಿಂದ ಎದ್ದುನಿಂತು, ಮೆಲ್ಲಮೆಲ್ಲನೆ ಮೆಟ್ಟಿಲುಗಳನ್ನು ಇಳಿಯತೊಡಗಿತು. ಇಷ್ಟರವರೆಗೆ ತನ್ನ ಬಾಯಿಯನ್ನೂ ಮೂಗನ್ನೂ ಮುಚ್ಚಿ ಕೊಂಡಿದ್ದ ಗ್ಯಾಸ್ ಟೋಪಿಯನ್ನು ಅದು ಈಗ ತೆಗೆದು ಕೈಯಲ್ಲಿ ಹಿಡಿದು ಕೊಂಡು, ಆನಂದದ ಉಸಿರೊಂದನ್ನು ಬಿಟ್ಟಿತು. ಸ್ವಲ್ಪ ಹೊತ್ತಿನ ವರೆಗೆ ಮೆಲ್ಲಮೆಲ್ಲನೆ ಮಾತಾಡುತ್ತಿದ್ದ ಶಬ್ದವಾಗಿ, ಆ ಮೇಲೆ ಎಲ್ಲ ಕಡೆಯಲ್ಲಿಯೂ ನಿಶ್ಶಬ್ದವಾಯಿತು.

ಬೆಳಿಗ್ಗೆ ಏಳು ಗಂಟೆಗೆ ಶೀಡ್ಮನ್ನನ ತಂಗಿಯು ತನ್ನ ಕೋಣೆಯ ಬಾಗಿ ಲನ್ನು ತೆರೆದು ಹೊರಗೆ ಬಂದು ನೋಡಿದಾಗ ರಾತ್ರಿಯ ಪರಿಸ್ಥಿತಿಯೆಲ್ಲವೂ ಗೋಚರವಾಯಿತು. ಕೂಡಲೆ ಆ ಸುದ್ದಿಯು ಊರಲ್ಲೆಲ್ಲ ಹಬ್ಬಿ, ಶೀಡ್ಮನ್ನನ ಬಂಗ್ಲೆಯು ಡಾಕ್ಟರು ಮತ್ತು ಪೋಲೀಸರಿಂದ ತುಂಬಿ ಹೋಯಿತು.

---

## (೩)

ಊಟದ ತಟ್ಟೆಯನ್ನು ಮಿಸ್ಟರ್ ಸ್ಯಾಕ್ಸ್ಟನ್ ಬ್ಲೇಕನ ಎದುರಿಗೆ ಇಡುತ್ತ ವಾರ್ಡೆಲ್ ಹೇಳಿದಳು:-"ಮೊನ್ನೆ ಮತ್ತು ನಿನ್ನೆಯೂ ಇನ್‌ಸ್ಪೆಕ್ಟರ್ ಹಾರ್ಕ ರರು ನಿಮಗೆ ಫೋನ್ ಮಾಡಿದ್ದರು; ಆದರೆ ನಿಮ್ಮಲ್ಲಿ ಕೆಲಸವೇನೆಂಬುದನ್ನು ಮಾತ್ರ ಅವರು ತಿಳಿಸಲಿಲ್ಲ."

ಬ್ಲೇಕನು ಅಲಕ್ಷ್ಯಭಾವದಿಂದ ಉತ್ತರವಿತ್ತನು:—"ಅವನ ಸ್ವಭಾವವು ಯಾವಾಗಲೂ ಇಂತಹುದೇ ಆಗಿರುತ್ತದೆ ವಾರ್ಡೇಲ್! ಸಾಮಾನ್ಯವಾದ ವಿಷಯವನ್ನೂ ಕೂಡ ಅವನು ರಹಸ್ಯವಾಗಿರಿಸಲು ಪ್ರಯತ್ನಿಸುತ್ತಿರುತ್ತಾನೆ."

ಬ್ಲೇಕನೂ ಅವನ ಸಂಗಡಿಗನಾದ ಟಿಂಕರನೂ ಒಂದು ದೊಡ್ಡ ಕಠಿಣ ಕಾರ್ಯವನ್ನು ಮುಗಿಸಿ ಉತ್ತರ ಸ್ಕಾಟ್ಲೆಂಡಿನಿಂದ ಈಗಲೇ ಬಂದಿದ್ದರು. ಬಹಳ ದಣಿದಿದ್ದುದರಿಂದ ಊಟಮಾಡಿ ಮಲಗಬೇಕೆಂದು ಆಲೋಚಿಸಿದ್ದರು; ಆದರೆ ದೈವವು ಇನ್ನೊಂದು ದೊಡ್ಡ ಕಾರ್ಯವನ್ನು ಅವರಿಗಾಗಿ ತಂದಿಟ್ಟಿದ್ದಿತು.

ಊಟವನ್ನು ಮಾಡಿ ಹಾಸಿಗೆಯನ್ನು ಹಾಸಿ ಮಲಗಿದ್ದೇ ಸರಿ; ಅಷ್ಟ ರೊಳಗೇ ಟೆಲಿಫೋನಿನ ಗಂಟೆಯು ಗಣಗಣ ಎಂದು ಬಲವಾಗಿ ಹೊಡೆಯ ತೊಡಗಿತು.

ಟಿಂಕರನು ಮಲಗಿ ಇನ್ನೂ ಹತ್ತು ನಿಮಿಷಗಳಾಗಿರಲಿಲ್ಲ; ಅಷ್ಟರಲ್ಲಿಯೇ ಬ್ಲೇಕನು ಕೂಗಿ ಕರೆಯುತ್ತಿರುವುದು ಕೇಳಿಸಿತು:—"ಏಳು-ಏಳು, ಟಿಂಕರ್! ಹ್ಯಾಟರ್ಸ್‌ಗಾರ್ಡನ್ನಿನ ಶೀಡ್ಮನ್ನನಲ್ಲಿ ಕಳವು ನಡೆದಿದೆ. ಶೀಡ್ಮನ್ನನು ಜೂಯೆಲರ್ಸ್ ಎಲೋಯಿಯನ್ಸ್ನ ಸೆಕ್ಯೂರಿಟಿಯ ಮೆಂಬರನಿರುವನು. ಈಗ ಆ ಕಳವನ್ನು ಕಂಡುಹಿಡಿಯುವ ಕೆಲಸ ಬಂದಿದೆ."

ಸರಿ. ಕೂಡಲೆ ಇಬ್ಬರೂ ಸಿದ್ಧರಾದರು. ಟ್ಯಾಕ್ಸಿಯು ವೇಗವಾಗಿ ಮುಂದುವರಿಯುತ್ತಿದ್ದಿತು. ಟಿಂಕರನು ದಾರಿಯಲ್ಲಿ ಪ್ರಶ್ನಿಸಿದನು:—"ಈ ಕಳವಿನ ಸಂಬಂಧವಲ್ಲಿ ಇನ್ನೇನಾದರೂ ವಿಶೇಷ ಸುದ್ದಿಯು ದೊರೆತಿರುವುದೇ?"

ಬ್ಲೇಕ್ ಹೇಳಿದನು: -"ಶೀಡ್ಮನ್ನನು ಆವೇಶದಲ್ಲಿ ಬಡಬಡಿಸಿದ ಎಲ್ಲ ಸಂಗತಿಗಳ ಅಭಿಪ್ರಾಯವು ಇನ್ನೂ ಹೂಳೆಯಲಿಲ್ಲ; ಆದರೆ ಇಷ್ಟು ಮಾತ್ರ ನಿಶ್ಚಯವಾಗಿ ತಿಳಿದಿದೆ -- ಗ್ಯಾಸ್ ಅಥವಾ ಇನ್ನಾವುದೋ ಒಂದು ವಸ್ತುವಿನ ಮೂಲಕವಾಗಿ ಶೀಡ್ಮನ್ನನನ್ನು ಎಚ್ಚರತಪ್ಪಿಸಿ ಆ ಕಳವನ್ನು ಮಾಡಿದ್ದಾರೆ. ಖಜಾನೆಯ ಪೆಟ್ಟಿಗೆಯನ್ನು ಕಳ್ಳರು ಮುರಿದಿದ್ದಾರೆ."

ಬ್ಲೇಕ್ ಮತ್ತು ಟಿಂಕರರು ಬಂದೊಡನೆಯೇ ಶೀಡ್ಮನ್ನನು ಮುಂದೆ ಬಂದು ಸ್ವಾಗತಿಸಿದನು. ಆ ವೇಳೆಯಲ್ಲಿ ಶೀಡ್ಮನ್ನನ ಕಣ್ಣುಗಳು ಸಿಟ್ಟಿನಿಂದ ಕೆಂಪಾಗಿದ್ದವು. ಪೋಲೀಸ್ ಸಾರ್ಜಂಟನೊಬ್ಬನು ಶೀಡ್ಮನ್ನನ ಜೊತೆಯಲ್ಲಿ ನಿಂತಿದ್ದನು. ಸಾರ್ಜಂಟನು ಬ್ಲೇಕನನ್ನು ಚೆನ್ನಾಗಿ ಅರಿತವನಾದುದರಿಂದ, ಅವನನ್ನು ಕಂಡೊಡನೆಯೇ ಆ ಸಾರ್ಜಂಟನು ಸೆಲ್ಯೂಟ್ ಮಾಡಿ ವಿನಯದಿಂದ ಮಾತಾಡತೊಡಗಿದನು:—"ಅವರು ಕೆಲಸವನ್ನೆಲ್ಲ ಚೆನ್ನಾಗಿ ಮಾಡಿ ಹೋಗಿ ಬಿಟ್ಟರು. ನಾನು...."

ಸಾರ್ಜಂಟನನ್ನು ಮುಂದೆ ಮಾತಾಡಗೊಡದೆ ಶೀಡ್ಮನ್ನನು ಕ್ರೋಧಯುಕ್ತವಾದ ಸ್ವರದಿಂದ ಹೇಳಿದನು "ಮಿಸ್ಟರ್ ಬ್ಲೇಕ್! ಇದು ಅನ್ಯಾಯ, ಘೋರ ಅನ್ಯಾಯ. ನಿದ್ರಿಸುತ್ತಿದ್ದಾಗ ನಾನೊಂದು ಶಬ್ದವನ್ನು ಆಲಿಸಿದೆನು. ಎದ್ದು ಕುಳಿತೆನು ಕೋವಿಯನ್ನು ಹಿಡಿದುಕೊಂಡು ಕೋಣೆಯಿಂದ ಹೊರಗೆ ಬಂದೆನು. ಆಗ ಒಂದು ಚಿಕ್ಕ ಬೆಳಕಿನೊಡನೆ ತರಳವಾದ, ತಣ್ಣಗಿರುವ ಒಂದು ವಸ್ತುವಿನ ಕಟುವಾದ ತರಂಗವು ನನ್ನ ಮುಖಕ್ಕೆ ಅಕಸ್ಮಾತ್ ತಗುಲಿತು. ಅದರಿಂದ ಹೊರಡುತ್ತಿದ್ದ ಒಂದು ಗಂಧವು ನನ್ನ ಮೂಗಿನೊಳಗೆ ಪ್ರವೇಶಿಸಿತು. ನಾನು ಎಚ್ಚರವಿಲ್ಲದೆ ಕೆಳಗೆ ಬಿದ್ದೆನು. ಅನಂತರ ಬೆಳಿಗ್ಗೆ ನನ್ನ ತಂಗಿಯು ಬಂದು ನೋಡಿದಳು. ಖಜಾನೆಯು ಬೀಗವು ಒಡೆಯಲ್ಪಟ್ಟಿದೆ. ಅದರೊಳಗಿನ ಹೆಚ್ಚಿನ ಮಾಲುಗಳು ಮಾಯವಾಗಿವೆ. ನೀವು

ಈಗಿಂದೀಗಲೇ ಆ ಬನ್ದ್ಮಾಷರನ್ನು ಹಿಡಿಯುವ ಕೆಲಸಕ್ಕೆ ತೊಡಗಬೇಕು. ಸ್ಕಾಟ್ಲೆಂಡ್ ಯಾರ್ಡಿನಿಂದಲೂ ಪೋಲೀಸರು ಬರುವರು; ಆದರೆ ಮೊದಲು ನಾನು ನಿಮ್ಮನ್ನೇ ಈ ಕಾರ್ಯದಲ್ಲಿ ನಿಯೋಜಿಸುತ್ತೇನೆ. ಇತ್ತ ಬನ್ನಿರಿ....''

ಬ್ಲೇಕನು ಹೇಳಿದನು—'ಈ ರೀತಿಯಾಗಿ ವರ್ತಿಸುವದರಿಂದ ಯಾವ ಲಾಭವೂ ಇಲ್ಲ, ಶೀಡ್ಮನ್! ಒಂದು ವೇಳೆ ನಿಮ್ಮ ಮಾಲುಗಳು ಇಷ್ಟರೊಳಗೆ ಮಾರಲ್ಪಟ್ಟಿರಲೂ ಬಹುದು."

ಹೌದೆಂದು ನುಡಿದು ಶೀಡ್ಮನ್ನನು ತಣ್ಣಗಾದನು. ಸ್ವಲ್ಪ ಹೊತ್ತು ಸುಮ್ಮನಿದ್ದು ತಿರುಗಿ ಹೇಳಿದನು—"ನನ್ನ ಪ್ರೇಯಸ್ಥಿತಿಯು ಬಹಳ ಕೆಟ್ಟು ಹೋಗಿಬಿಟ್ಟಿತು. ಈಗಲೂ ಪೂರ್ಣ ಸರಿಯಾಗಿಲ್ಲ. ಯಾವ ರೀತಿಯಿಂದಾದರೂ ಆ ದುಷ್ಟರ ದುಷ್ಕರ್ಮಕ್ಕೆ ತಕ್ಕ ಫಲವನ್ನು ತಿನ್ನಿಸಬೇಕು."

ಬ್ಲೇಕನು ಸ್ವಲ್ಪ ಕಠಿಣವಾಗಿ ಉತ್ತರವಿತ್ತನು—"ನೀವು ದಯವಿಟ್ಟು ಸುಮ್ಮನಿರಿ, ಮಿಸ್ಟರ್ ಶೀಡ್ಮನ್! ಸುಮ್ಮನ ಆವೇಶಗೊಳ್ಳಬೇಡಿರಿ. ಆವೇಶದ ಮಾತುಗಳಿಂದ ಯಾವ ವಿಷಯವನ್ನೂ ನಿಜವಾಗಿ ತಿಳಿಯುವದಕ್ಕೆ ಸಾಧ್ಯವಾಗುವುದಿಲ್ಲ. ಒಳ್ಳೇದು. ನಿಮ್ಮ ಸ್ಟ್ರಾಂಗ್ ರೂಮ್ ಯಾವುದು? ತೋರಿಸಿರಿ. ಎಲ್ಲವನ್ನೂ ಸಾವಧಾನವಾಗಿ ನೋಡಿ, ವಿಮರ್ಶಿಸಿ, ನಿಜಸ್ಥಿತಿಯನ್ನು ತಿಳಿಯೋಣ."

ಶೀಡ್ಮನ್ನನು ಹೋಗಿ ಒಂದು ಬಾಗಿಲನ್ನು ತೆರೆದನು. ಬಾಗಿಲು ಹಸುರು ಬಣ್ಣದ ಬನಾತಿನಿಂದ ಮುಚ್ಚಲ್ಪಟ್ಟಿದ್ದಿತು. ಆ ಬಾಗಿಲಿನಲ್ಲಿ ಯಾವ ಬಲವೂ ಕಾಣಸಲಿಲ್ಲ. ಯಾಕೆಂದರೆ ಯಾವ ಸ್ಥಳದಲ್ಲಿ ಆಕ್ಸಿ-ಹೈಡ್ರೋಜನ್ ಬ್ಲೋ ಪಾಯಿಪ್ ವೇಗವನ್ನು ನಾಲ್ಕೂ ಕಡೆಯಿಂದ ಕತ್ತರಿಸಿದ್ದಿತೋ, ಅಲ್ಲೀಗ ಒಂದು ಗೋಲಾಕಾರವಾದ ರಂಧ್ರವು ಮಾಡಲ್ಪಟ್ಟದ್ದು ಕಾಣಿಸುತ್ತಿದ್ದಿತು. ಅದರ ಮುಂಭಾಗದಲ್ಲಿ ಒಂದು ಉದ್ದವಾದ, ಇಕ್ಕಟ್ಟಾದ ಕೋಣೆ ಕಾಣಿಸುತ್ತಿದ್ದಿತು. ಆ ಕೋಣೆಯು ಕಬ್ಬಿಣದ ಸಲಾಕೆಗಳಿಂದ ಭದ್ರವಾಗಿದ್ದಿತು. ಅದರೊಳಗೆ ಒಂದು ದೊಡ್ಡ ಖಜಾನೆ ಪೆಟ್ಟಿಗೆ, ಒಂದು ಟೇಬಲ್, ಒಂದು ಕುರ್ಚಿ; ಇವಿಷ್ಟಲ್ಲದೆ ಇನ್ನಾವ ವಸ್ತುಗಳೂ ಇರಲಿಲ್ಲ. ಖಜಾನೆ ಪೆಟ್ಟಿಗೆಯು ಈಗ ತೆರೆಯಲ್ಪಟ್ಟಿದ್ದಿತು. ಆ ಪೆಟ್ಟಿಗೆಯು ಒಂದು ಕಾಲದಲ್ಲಿ ಬಹಳ ಗಟ್ಟಿಮುಟ್ಟಾದ್ದೆಂದು ಎಣಿಸಲ್ಪಡುತ್ತಿದ್ದಿತು: ಆದರೆ ಈಗ ಬ್ಲೋಪಾಯಿಪ್ ಬಂದು ಅದನ್ನು ಸುಲಭವಾಗಿ ತೆರೆದುಬಿಡುವುದಾಗಿದ್ದಿತು.

ಬ್ಲೇಕನು ಅದನ್ನೆಲ್ಲ ನೋಡಿ ತಲೆಯನ್ನಲುಗಾಡಿಸಿ ಹೇಳಿದನು:—"ಮಿಸ್ಟರ ಶೀಡ್ಮನ್! ಈ ನಿಮ್ಮ ಬಾಗಿಲು ಮತ್ತು ಪೆಟ್ಟಿಗೆಗಳು ಈಗಿನ

ನವೀನ ಆವಿಷ್ಕಾರಗಳೆದುರಿಗೆ ಸ್ವಲ್ಪವೂ ಬಲಯುತವಾಗಿ ಎಣಿಸಲ್ಪಡುತ್ತಿಲ್ಲ. ಈ ಘಟನೆಯಿಂದ ಈಗೊಂದು ಪಾಠವನ್ನು ನೀವು ಕಲಿತಂತಾಯಿತು. ಇದನ್ನು ನೋಡಿದ ಮೇಲೆ ನೀವಿನ್ನು ರತ್ನಗಳ ರಕ್ಷಣೆಗೆ ಇದಕ್ಕಿಂತಲೂ ಉತ್ತಮವಾದ ವ್ಯವಸ್ಥೆಯನ್ನು ಏರ್ಪಡಿಸದೆ ಇರಲಾರಿರಿ. ಒಳ್ಳೇದು. ರತ್ನಗಳೆಲ್ಲವೂ ಕಳವಾದುವೇ?" ಎಂದು ಹೇಳಿ, ಬ್ಲೇಕನು ಹತ್ತಿರ ಹೋಗಿ ಪೆಟ್ಟಿಗೆಯೊಳಗೆ ನೋಡಿ ಹೇಳಿದನು:—"ಇಲ್ಲ. ಇದೇನು ಸೋಜಿಗ? ರತ್ನಗಳಿವೆ. ಈಗ ಇಲ್ಲಿರುವ ರತ್ನಗಳೆಲ್ಲವೂ ಬಹಳ ಬೆಲೆ ಬಾಳುವಂತಹುಗಳಲ್ಲವೆ?"

ಪೆಟ್ಟಿಗೆಯೊಳಗೆ ಒಂದು ಭಾಗದಲ್ಲಿ ಬಿಳೇಬಣ್ಣದ ರತ್ನಗಳು ಸಾಲಾಗಿ ಇಡಲ್ಪಟ್ಟಿದ್ದವು. ಇವೆಲ್ಲವೂ ಬಹಳ ಬೆಲೆ ಬಾಳುವುವೆಂಬುದನ್ನು ಮಿಸ್ಟರ ಬ್ಲೇಕನ ತೀಕ್ಷ್ಣ ಬುದ್ಧಿಯು ಥಟ್ಟನೆ ಕಂಡು ಹಿಡಿಯಿತು. ಅವುಗಳಲ್ಲಿ ಕೆಲವು ರತ್ನಗಳು ಬಹಳ ದೊಡ್ಡವಾಗಿದ್ದವು.

ಶೀಡ್ಮನ್ನನು ಹೇಳಿದನು:—"ಇದೇ ಸೋಜಿಗದ ಸಂಗತಿಯಾಗಿದೆ, ಮಿಸ್ಟರ್ ಬ್ಲೇಕ್! ನೋಡಿರಿ. ಇವುಗಳ ಪಟ್ಟಿ ಇದೆ. ಇವುಗಳಲ್ಲಿ ಕಳವಾದ ರತ್ನಗಳ ಬಳಿಯಲ್ಲಿ ಗುರುತು ಮಾಡಿರುವೆನು. ಈಗ ಕಳವಾಗಿರುವ ರತ್ನಗಳೆಲ್ಲವೂ ಬಲು ಚಿಕ್ಕವು. ಎರಡು, ಮೂರು, ನಾಲ್ಕು, ಕ್ಯಾರೇಟ್ಟಿಗಿಂತ ದೊಡ್ಡವಾದವುಗಳಲ್ಲ. ಎಂಟು, ಹತ್ತು, ಹನ್ನೆರಡು ಕ್ಯಾರೇಟ್ಟಿನ ರತ್ನಗಳು ಪೆಟ್ಟಿಗಯಲ್ಲಿ ಹಾಗೆಯೇ ಉಳಿದಿವೆ. ನಾನೀಗ ನಿಮ್ಮನ್ನು ಕೇಳುತ್ತೇನೆ — ಕೊನೆಗೆ ಇದರ ಕಾರಣವೇನು? ಈ ಬಲು ಬೆಲೆ ಬಾಳುವ ರತ್ನಗಳನ್ನೆಲ್ಲ ಬಿಟ್ಟು-ಆ ಸಣ್ಣ ಸಣ್ಣ ರತ್ನಗಳನ್ನೇ ಆರಿಸಿ ಕದ್ದೊಯ್ದಿರುವರಷ್ಟೆ? ಇದರಲ್ಲಿ ಆ ಬದ್ಮಾಷರ ಒಳಗುಟ್ಟೇನಿರಬಹುದು? ಕೊನೆಗೆ ಆ ಪುಂಡರು ಹೀಗೇಕೆ ಮಾಡಿರಬಹುದು?"

ಮಿಸ್ಟರ್ ಬ್ಲೇಕ್ ಹೇಳಿದನು:—"ನಿಮ್ಮ ಈ ಪ್ರಶ್ನೆಗೆ ಉತ್ತರವು ಸ್ಪಷ್ಟವಿರುವುದು. ಚಿಕ್ಕ ಚಿಕ್ಕ ರತ್ನಗಳನ್ನು ಮಾರಿ ಹಣವನ್ನು ಒಟ್ಟುಗೂಡಿಸಿಕೊಳ್ಳುವದು ಅಷ್ಟೊಂದು ಕಠಿಣ ಕಾರ್ಯವಲ್ಲ. ಕಳವಿನ ಮಾಲನ್ನು ಮಾರತಕ್ಕವರು ಬಹು ಬೆಲೆಯು ವಸ್ತುಗಳನ್ನು ಕೂಡ ಕಡಿಮೆ ಬೆಲೆಗೇ ಮಾರಿ ಬಿಡುವರು. ಯಾಕಂದರೆ, ಪ್ರಾಯಶಃ ದೊಡ್ಡ ದೊಡ್ಡ ರತ್ನಗಳಿಂದ ಅವರ ರಹಸ್ಯವು ಹೊರಬಿದ್ದು ಹೋಗುವ ಅಂಜಿಕೆ ಇರುತ್ತದೆ. ದೊಡ್ಡ ದೊಡ್ಡ ರತ್ನಗಳ ಕತ್ತನೆಯ ಕೆಲಸವನ್ನು ಆ ಮೇಲೆ ಮಾಡಲು ಸಾಧ್ಯವಿದೆ; ಆದರೆ ಇಂತಿಂತಹ ಕೆಲಸಗಳಲ್ಲಿ ಹೆಚ್ಚು ಖರ್ಚು ಬೀಳುವದಲ್ಲದೆ, ತಿರುಗಿ ಕೆತ್ತನೆ ಕೆಲಸ ಮಾಡುವಾಗ ಅವರ ರಹಸ್ಯವು ಹೊರಬೀಳುವ

ಶಂಕೆಯು ಬಹಳ ಇರುತ್ತದೆ. ಈ ಕಾರ್ಯವು ಬಹಳ ಹಳೆಯ ಅನುಭವದಾರರಿಂದ, ಚತುರರಾದ ಚೋರರಿಂದ ನಡೆದುದಾಗಿದೆ. ಶೀಡ್ಮನ್! ಇಂತಹ ಸಂಗತಿಗಳನ್ನು ಅವರು ಬಹು ಚೆನ್ನಾಗಿ ಅರಿತಿರುತ್ತಾರೆ. ಅಗತ್ಯಕ್ಕಿಂತ ಹೆಚ್ಚಿನ ಸಂಕಟವು ತಮ್ಮ ಮೈಮೇಲೆ ಬರಬಾರದೆಂದೇ ಅವರು ಇಚ್ಛಿಸುತ್ತಾರೆ; ಆದರೆ ಇದು ಏನು?''

ಬ್ಲೇಕನು ಈ ಸಮಯದಲ್ಲಿ ರತ್ನಗಳ ಪಟ್ಟಿಯನ್ನು ಬಹಳ ಲಕ್ಷ್ಯವಿಟ್ಟು ನೋಡುತ್ತಿದ್ದನು. ಆಗ ಅಕಸ್ಮಾತ್ತಾಗಿ ಬ್ಲೇಕನ ಬಾಯಿಂದ ಈ ಮಾತು ಹೊರಟಿತು:—''ಆದರೆ ಇದು ಏನು? ಇದೊಳ್ಳೆಯ ಆಶ್ಚರ್ಯವಾಗಿದೆ ಶೀಡ್ಮನ್! ಈ ಹದಿನೆಂಟು, ಇಪ್ಪತ್ತು, ಇಪ್ಪತ್ತೆರಡು ಕ್ಯಾರೆಟ್ಟಿನ ದೊಡ್ಡ ದೊಡ್ಡ ರತ್ನಗಳೂ ಕೂಡ ಕದಿಯಲ್ಪಟ್ಟಿವೆಯಲ್ಲವೆ? ಇದರಿಂದೀಗ ನಾನು ಊಹಿಸಿದ ವಿಚಾರವು ಸುಳ್ಳಾಯಿತೆಂದು ಕಾಣಿಸುತ್ತದೆ.''

ಶೀಡ್ಮನ್ ಹೇಳಿದನು:—''ಇದು ಕೂಡ ಒಂದು ವಿಚಿತ್ರವೇ ಆಗಿದೆ ಮಿಸ್ಟರ್ ಬ್ಲೇಕ್! ಆ ದೊಡ್ಡ ದೊಡ್ಡ ರತ್ನಗಳು ಅಪಹರಿಸಲ್ಪಟ್ಟಿವೆಯಷ್ಟೆ? ಅವೆಲ್ಲವೂ ಹಳದಿ ಬಣ್ಣದವುಗಳು. ಹಳದಿ ಬಣ್ಣದ ರತ್ನಗಳಿಗೆ ಹೆಚ್ಚು ಬೆಲೆ ಇರುವುದಿಲ್ಲ. ಇವುಗಳು ಬಹಳ ಅಗ್ಗವಾಗಿ ಮಾರಲ್ಪಡುತ್ತವೆ. ರತ್ನಗಳ ವಿಷಯದಲ್ಲಿ ಹೆಚ್ಚಿನ ಪರಿಚಯವಿಲ್ಲದಿರುವ ಜನರೇ ಅಂಥವುಗಳನ್ನು ಕೊಂಡುಕೊಳ್ಳುತ್ತಾರೆ. ಅವರು ಎಷ್ಟು ರೂಪಾಯಿಗಳನ್ನು ಅದಕ್ಕಾಗಿ ಖರ್ಚು ಮಾಡುತ್ತಾರೆಯೋ, ಅವುಗಳ ಲೆಕ್ಕದಿಂದ ಆ ಹರಳು ಬಹಳ ಅಗ್ಗವಾಗಿಯೇ ಕಾಣಲ್ಪಡುವುದು; ಆದರೆ ನೀವು ಮಾತ್ರ ರತ್ನಗಳ ವಿಷಯದಲ್ಲಿ ಎಲ್ಲವನ್ನೂ ತಿಳಿದಿರುವಿರಾದುದರಿಂದ ನಾನೇನೂ ತಿಳಿಸಬೇಕಾಗಿಲ್ಲ, ನೋಡಿರಿ ಮಿಸ್ಟರ್ ಬ್ಲೇಕ್!''

ಇಷ್ಟನ್ನು ಹೇಳಿ ಶೀಡ್ಮನ್ನನು ಕೂಡಲೆ ತನ್ನ ವಾಸ್ಕೋಟಿನ ಜೇಬಿಗೆ ಕೈಹಾಕಿ ಅದರಿಂದ ಒಂದು ರತ್ನವನ್ನು ಹೊರತೆಗೆದನು. ಆ ರತ್ನವು ಸಾಕಷ್ಟು ದೊಡ್ಡದಾಗಿದ್ದಿತು. ಸರ್ವಸಾಧಾರಣವಾದ ದೃಷ್ಟಿಯಲ್ಲಿ ಅದು ನಿಶ್ಚಯವಾಗಿಯೂ ಬಹಳ ಬೆಲೆ ಬಾಳುವದಾಗಿದೆ, ಎಂದು ನಿರ್ಧರಿಸುವಂತಹದಾಗಿದ್ದಿತು.

ಶೀಡ್ಮನ್ನನು ಆ ರತ್ನವನ್ನು ಮಿಸ್ಟರ್ ಬ್ಲೇಕನ ಕೈಯಲ್ಲಿಟ್ಟು ಹೇಳಿದನು:—“ನೋಡಿರಿ, ಆ ಹಳದಿ ರತ್ನಗಳಲ್ಲಿ ಈ ರತ್ನವು ಎಲ್ಲಕ್ಕಿಂತ ದೊಡ್ಡದಾಗಿಯೂ ಬೆಲೆಯುಳ್ಳದ್ದಾಗಿಯೂ ಇದೆ. ನಾನಿದನ್ನು ಒಬ್ಬ ಮನುಷ್ಯನಿಗೆ ಮಾರಬೇಕೆಂದಿದ್ದೆನು. ಅವನು ಇದನ್ನು ಅನೇಕ ಬಣ್ಣದ ರತ್ನಗಳೊಡನೆ

ಸೇರಿಸಿ ಒಂದು ತಾಯಿತದಲ್ಲಿ ಕೂರಿಸಬೇಕೆಂದು ಇಚ್ಛಿಸುತ್ತಿದ್ದನು. ಈ ಬಣ್ಣದ ಈ ರತ್ನಗಳು ಇಂತಿಂತಹ ಕೆಲಸಗಳಿಗೇ ಉಪಯೋಗಿಸಲ್ಪಡುತ್ತವೆ."

ಆ ರತ್ನದ ಮೇಲೊಂದು ದೃಷ್ಟಿಯನ್ನು ಬೀರಿ ಬ್ಲೇಕನು ಸಮ್ಮತಿ ಸೂಚಕವಾಗಿ ತಲೆಯಾಡಿಸಿದನು. ಶೀಡ್ಮನನು ಹೇಳಿದಂತೆ ಬ್ಲೇಕನಿಗೆ ರತ್ನಗಳ ವಿಷಯದಲ್ಲಿಯೂ ತಕ್ಕಷ್ಟು ತಿಳುವಳಿಕೆ ಇದ್ದಿತು. ಹಳದಿ ಬಣ್ಣದ ಇಪ್ಪತ್ತು ಕ್ಯಾರೆಟ್ಟಿನ ಒಂದು ರತ್ನವು ಅದರ ಅರ್ಧದಷ್ಟು ಮಾತ್ರ ತೂಕವಿರುವ ಬಿಳೀ ರತ್ನಕ್ಕಿಂತಲೂ ಕಮ್ಮಿ ಬೆಲೆಯುಳ್ಳದ್ದಿರುವುದೆಂದು ಬ್ಲೇಕನು ಅರಿತಿದ್ದನು. ಬ್ಲೇಕನು ಹೇಳಿದನು:—"ಇವುಗಳ ಬಣ್ಣವು ಹಸುರು ಅಥವಾ ನೀಲವಿರುವುದಿಲ್ಲವೆಂಬುದಿಷ್ಟೇ ವಿಷಾದವಾಗಿದೆ. ಹಾಗಿದ್ದಿದ್ದರೆ ಇವುಗಳು ನಿಮ್ಮ ಹತ್ತಿರ ಇರುವುದರಿಂದ ನಿಮಗೆ ಹೆಚ್ಚಿನ ವೈಭವವಿರುತ್ತಿದ್ದಿತು."

ಒಂದುದ್ದವಾದ ನಿಟ್ಟುಸಿರನ್ನು ಬಿಟ್ಟು ಶೀಡ್ಮನ್ನನು ಹೇಳಿದನು:-"ಏನು ಹೇಳಲಿ ಮಿಸ್ಟರ್ ಬ್ಲೇಕ್! ಆ ತರಹದ ರತ್ನವಾದರೋ ನಮ್ಮ ಕೈಗೇ ಬರುವದಿಲ್ಲ. ವಾಸ್ತವಿಕವಾಗಿ ಅಂತಹ ರತ್ನಗಳನ್ನು ಕೊಂಡುಕೊಳ್ಳುವದೂ ನನ್ನ ಶಕ್ತಿಗೆ ಮೀರಿದ ಸಂಗತಿಯಾಗಿದೆ. ಹದಿನೈದು ಕ್ಯಾರೆಟ್ಟಿನ ಒಂದು ರತ್ನವನ್ನು ನಾನು ಕೆಲವು ದಿನಗಳ ಹಿಂದೆ ಎಂಟ್ವರ್ಪಿನಲ್ಲಿ ನೋಡಿದ್ದೆನು. ಆಹಾ! ಎಂತಹ ಸುಂದರ ರತ್ನವದು! ಅದರ ಬೆಲೆ ಮೂರು ಸಾವಿರ ಪೌಂಡಿದ್ದಿತು. ನನ್ನಂತಹ ಬಡಮನುಷ್ಯರು ಅಂತಹ ಬಹುಮೂಲ್ಯ ರತ್ನಗಳನ್ನು ಸಂಗ್ರಹಿಸಿಡಬಲ್ಲರೇ?"

ಖಜಾನೆಯ ಇನ್ನೊಂದು ಭಾಗದಲ್ಲಿ ಇಟ್ಟಿದ್ದ ಥಳಥಳಿಸುವ ಬಿಳೀ ರತ್ನಗಳ ಕಡೆಗೆ ಕೈತೋರಿಸುತ್ತ ಬ್ಲೇಕನು ಹೇಳಿದನು:—"ಇಂತಿಂತಹ ಬಹುಮೂಲ್ಯ ರತ್ನಗಳನ್ನು ನಿಮ್ಮ ಹತ್ತಿರ ಇಟ್ಟುಕೊಂಡಿದ್ದರೂ ಕೂಡ ನಿಮ್ಮನ್ನು ನೀವು ಬಡವರೆಂದೇ ಹೇಳಿಕೊಳ್ಳುತ್ತೀರಲ್ಲವೇ? ಮಿಸ್ಟರ್ ಶೀಡ್ಮನ್! ಇರಲಿ ಅದು. ಈ ಕಳವಾದರೋ ಬಹಳ ರಹಸ್ಯಮಯವಾಗಿಯೇ ಕಾಣಿಸುತ್ತಿದೆ ಮಿಸ್ಟರ್ ಹಾರ್ಕರ್!"

ತನ್ನ ಹಿಂದುಗಡೆಯಲ್ಲಿ ಆಗಲೇ ಬಂದು ನಿಂತು, ಎಲ್ಲವನ್ನೂ ಸುಮ್ಮನೆ ನೋಡುತ್ತಾ ನಿಂತಿದ್ದ ಇನ್ಸ್ಪೆಕ್ಟರ್ ಹಾರ್ಕರನನ್ನು ಕಂಡು ಬ್ಲೇಕನು ಆ ಕೊನೆಯ ಮಾತನ್ನು ಅಂದಿದ್ದನು.

ನಸುನಗುತ್ತಾ ಹಾರ್ಕರನು ಮುಂದೆ ಬಂದು ಬ್ಲೇಕನ ಕೈಕುಲುಕಿಸಿ ಹೇಳಿದನು—"ನೀವು ಲಂಡನ್ನಿಗೆ ಹಿಂದಿರುಗಿ ಬಂದುದನ್ನು ನೋಡಿ ಬಹಳ ಸಂತೋಷವಾಯಿತು, ಮಿಸ್ಟರ್ ಬ್ಲೇಕ್! ಸ್ವಲ್ಪ ಹೊತ್ತು ನಾನು ನಿಮ್ಮೊಡನೆ

ಪ್ರತ್ಯೇಕವಾಗಿ ಮಾತಾಡತಕ್ಕ ವಿಚಾರವೊಂದಿದೆ; ಆದರೆ ಈಗ ಆ ಎಲ್ಲಕ್ಕಿಂತ ಮೊದಲು ಈ ಕಳವಿನ ಕಡೆಗೇ ಲಕ್ಷ್ಯವಿಡಬೇಕಾದುದು ಉಚಿತವಾಗಿದೆ."

ಬ್ಲೇಕ್ ಹೇಳಿದನು—"ಈಗ ನಾವು ಎಲ್ಲಕ್ಕಿಂತ ಮುಂಚೆ ಕಳ್ಳರು ಯಾವ ದಾರಿಯಿಂದ ಒಳಹೊಕ್ಕರೆಂಬುದನ್ನು ನೋಡಬೇಕಾಗಿದೆ. ಮಿಸ್ಟರ್ ಶೀಡ್ಮನ್! ನಮ್ಮನ್ನೀಗ ನಿಮ್ಮ ಮನೆಯ ಹಿಂಭಾಗದ ಕಡೆಗೆ ಸ್ವಲ್ಪ ಕರೆದು ಕೊಂಡು ಹೋಗಿರಿ."

ಅಲ್ಲಿಗೆ ಹೋಗಿ ಪರೀಕ್ಷಿಸಿ ನೋಡಿದಾಗ ಮನೆಯ ಹಿಂಭಾಗದ ಪಾಗಾರದ ಮೇಲಿನಿಂದ ಕಳ್ಳರು ಹಾರಿ ಒಳಸೇರಿದ್ದರೆಂದು ತಿಳಿಯಿತು. ಪಾಗಾರದ ಗೋಡೆಯನ್ನು ಹತ್ತಲು ಉದ್ದವಾದ ಹಗ್ಗವನ್ನು ಉಪಯೋಗಿಸಿದ್ದರೆಂದೂ ತಿಳಿಯಿತು.

ಎಲ್ಲವನ್ನೂ ನೋಡಿ ಪರೀಕ್ಷಿಸಿದ ನಂತರ ಹಾರ್ಕರನು ಹೇಳಿದನು— "ನನಗೇನೋ ಇದು ಕಾನ್ನೀ ವಿಲಿಯಮ್ಸನ ವಿಧಾನದಂತೆಯೇ ಇರುವ ಮಾಟವೆಂದು ಕಾಣಿಸುತ್ತಿದೆ. ಈ ಕೆಲಸವನ್ನು ನಿಶ್ಚಯವಾಗಿ ಅವನೇ ಮಾಡಿದ್ದೆಂದು ನಾನು ಹೇಳಿಬಿಡುತ್ತಿದ್ದೆನು; ಆದರೆ ಅವನು ನೂಯಾರ್ಕಿಗೆ ಹೋಗಿ ಸೆರೆ ಹಿಡಿಯಲ್ಪಟ್ಟು, ಈಗ ಸಿಂಗ್‌ಸಿಂಗಿನ ಯಾವುದೋ ಒಂದು ಜೈಲಿನಲ್ಲಿ ತನ್ನ ಉಳಿದ ಜೀವನಕಾಲವನ್ನು ತಳ್ಳುತ್ತಿರುವನು. ಆದರೂ ಕೂಡ ಯಾರೋ ಅವನ ಶಿಷ್ಯರೇ ಈ ಕೆಲಸವನ್ನು ಮಾಡಿರುವರೆಂದು ನನ್ನ ಬುದ್ಧಿಗನಿಸುತ್ತದೆ. ಇರಲಿ. ನೋಡೋಣ. ಎಲ್ಲಾದರೂ ಬೆರಳುಗಳ ಗುರುತು ದೊರೆತರೆ ಅನುಕೂಲವಾಗುವದು. ಅದಿರಲಿ. ಮಿಷ್ಟರ್ ಬ್ಲೇಕ್! ಖಜಾನೆ ಪೆಟ್ಟಿಗೆಯಲ್ಲಿ ರತ್ನಗಳು ಹಾಗೆಯೇ ಬಿದ್ದಿರಲು ಕಾರಣವೇನು? ಅವೆಲ್ಲವೂ ಬಹು ಬೆಲೆಬಾಳತಕ್ಕವುಗಳಲ್ಲವೇ? ಅವುಗಳನ್ನು ಕದ್ದು ಪೇಟೆಯಲ್ಲಿ ಮಾರಾಟ ಮಾಡುವುದು ಕಷ್ಟದ ಕೆಲಸವೇ?"

"ನನಗೂ ಇದೇ ಅಭಿಪ್ರಾಯವಿದೆ" ಎಂದು ಹೇಳುತ್ತಾ ಬ್ಲೇಕನು ಕಳವಾದ ಹಳದಿ ಬಣ್ಣದ ರತ್ನಗಳ ವಿಚಾರವನ್ನು ಹಾರ್ಕರನಿಗೆ ತಿಳಿಸಿ, ಆ ಮೇಲೆ ಹೇಳಿದನು "ಕೊನೆಗೆ ಈ ವಿಷಯದಲ್ಲಿ ನಿಮ್ಮ ಮುಖ್ಯ ಅಭಿಪ್ರಾಯ ವೇನು?"

ಹಾರ್ಕರ್ ಹೇಳಿದನು—"ಕಾನ್ನಿಯ ಆ ಶಿಷ್ಯನು ರತ್ನಗಳ ವಿಷಯ ವಾಗಿ ಹೆಚ್ಚಿನ ತಿಳುವಳಿಕೆಯಿಲ್ಲದವನಾಗಿರುವ ಸಂಭವವಿದೆ ಎಂದು ಊಹಿಸು ವುದಕ್ಕೆ ಕೂಡ ಈಗ ಸಾಧ್ಯವಿಲ್ಲವಾಗಿದೆ. ಅವನಿಗೆ ರತ್ನಗಳ ವಿಷಯದಲ್ಲಿ ಹೆಚ್ಚಿನ ತಿಳುವಳಿಕೆಯಿಲ್ಲದೆ ಇದ್ದಿದ್ದರೆ, ಎಲ್ಲಾ ರತ್ನಗಳ ಮೇಲೂ ತನ್ನ

ಕೈಯಾಡಿಸುತ್ತಿದ್ದನು. ಏನು ಹೇಳಲಿ? ಅಷ್ಟು ದೊಡ್ಡ ದೊಡ್ಡವಾದ ರತ್ನಗಳನ್ನು ಯಾಕವನು ಈ ಪೆಟ್ಟಿಗೆಯಲ್ಲಿಯೇ ಬಿಟ್ಟು ಹೋದನೋ ನನಗಂತೂ ತೋರದಾಗಿದೆ. ನನಗೀಗ ಇದೊಂದು ಅದ್ಭುತ ಜಟಿಲ ಸಮಸ್ಯೆಯಾಗಿ ತೋರುತ್ತದೆ. ಬೆರಳುಗಳ ಗುರುತಿನಿಂದ ಏನು ಸುಳಿವು ತಿಳಿಯಬಹುದೋ ಅದನ್ನು ನೋಡೋಣ."

ಅಲ್ಲಲ್ಲಿ ಪರೀಕ್ಷಿಸಿ ನೋಡಿದಾಗ ತಕ್ಕಷ್ಟು ಗುರುತುಗಳು ಕಂಡು ಬಂದವು. ಅವನ್ನು ನೋಡಿದ ಮೇಲೆ ಎಲ್ಲರಿಗೂ ಸೋಜಿಗವಾಗದಿರಲಿಲ್ಲ.

ಸರಿ. ಯಾರ್ಡಿನ ವಿಶೇಷಜ್ಞನು ಬಂದು ಅವುಗಳ ಫೋಟೋ ಇಳಿಸಿದನು.

ಇನ್ನು ಆ ಸ್ಥಳದಲ್ಲಿ ಪರೀಕ್ಷಿಸಬೇಕಾದುದೇನೂ ಉಳಿಯಲಿಲ್ಲೆಂದು ಮನಗಂಡ ನಂತರ ಹಾರ್ಕರನು ಹೇಳಿದನು:—"ನನ್ನೊಡನೆ ಸ್ವಲ್ಪ ಬರಬೇಕು, ಮಿಸ್ಟರ್ ಬ್ಲೇಕ್! ಈ ಗುರುತುಗಳು ಬೆರಳುಗಳದ್ದಿರುವುವು; ಇವುಗಳಲ್ಲದೆ ಇನ್ನೂ ಕೆಲವು ಬೆರಳುಗಳ ಗುರುತುಗಳಿವೆ. ಇವುಗಳ ವಿಷಯದಲ್ಲಿ ನಿಮ್ಮೊಡನೆ ನಾನು ಪ್ರತ್ಯೇಕವಾಗಿ ಮಾತಾಡಬೇಕಾಗಿದೆ."

ಹಾರ್ಕರನು ಶೀಡ್ಮನನ ಕಡೆಗೆ ನೋಡಿ ಹೇಳಿದನು:—"ಮಿಸ್ಟರ್ ಶೀಡ್ಮನ್! ನಾವು ಸಾಧ್ಯವಾದಷ್ಟು ಬೇಗನೆ ನಿಮ್ಮ ಈ ಕಳವಿನ ಪತ್ತೆಹಚ್ಚಲು ಸ್ವಲ್ಪವೂ ವಿಲಂಬಿಸುವುದಿಲ್ಲ; ಆದರೆ ಈ ಕೆಲಸವು ಬಹು ದೊಡ್ಡ ಚತುರ ಮನುಷ್ಯನಿಂದ ನಡೆದಿದೆ, ಎಂದು ಹೇಳಲು ಯಾವ ಸಂಶಯವೂ ಇಲ್ಲ; ಆದರೂ ಕೂಡ ಕೆಲಸ ನಡೆಸುವಾಗ ಆ ಚತುರ ಮನುಷ್ಯನಿಂದಲೂ ತಪ್ಪು ನಡೆಯುವ ಸಂಭವವಿದ್ದೇ ಇರುವುದೆಂಬುದನ್ನು ನಾವು ನಂಬಲೇಬೇಕು ಉದಾಹರಣೆಗೆ ಈಗ ಬೆರಳುಗಳ ಗುರುತನ್ನೇ ನೋಡಿರಿ. ಖಜಾನೆಪೆಟ್ಟಿಗೆಯನ್ನು ಒಡೆದ ಮನುಷ್ಯನು ಆಗ ತನ್ನ ಕೈಗೆ ಕೈಚೀಲವನ್ನು ಯಾಕೆ ಹಾಕಿಕೊಳ್ಳಲಿಲ್ಲ? ಅದಲ್ಲದೆ ದೊಡ್ಡ ದೊಡ್ಡ ಬಹು ಬೆಲೆಯ ರತ್ನಗಳನ್ನೆಲ್ಲ ಹಾಗೆಯೇ ಬಿಟ್ಟು, ಸಾಮಾನ್ಯ ತರಹದ ಹಳದಿಬಣ್ಣದ ರತ್ನಗಳನ್ನು ಯಾಕೆ ಒಯ್ದನು?"

ನಿರಾಶಭಾವದ ಸ್ವರದಿಂದ ಶೀಡ್ಮನ್ ಹೇಳಿದನು:-"ಈ ಸಂಗತಿಗಳನ್ನು ಅರಿತುಕೊಳ್ಳುವದು ನನ್ನ ಬುದ್ಧಿಗೆ ಸಾಧ್ಯವಿಲ್ಲ, ಮಿಸ್ಟರ್ ಹಾರ್ಕರ್! ಇನ್ನು ನಾನು ಇಲ್ಲಿ ಅಲಾರ್ಮ ಇಡಲು ನಿಶ್ಚಯಿಸಿರುವೆನು."

ಹಾರ್ಕರನು ತನ್ನ ಸಲಹೆ ಇತ್ತನು:—"ನೀವು ಒಂದು ಚಿಕ್ಕನಾಯಿಯನ್ನು ಹತ್ತಿರ ಸಾಕಿಟ್ಟುಕೊಂಡಿರುವುದು ಒಳ್ಳೇದು. ಇನ್ನೊಂದು ಬಲವಾದ ಪೆಟ್ಟಗೆಯನ್ನೂ ಕೊಂಡುಕೊಳ್ಳಿರಿ. ಹಾಲ್ಬ್ರೋರ್ನಿನ ಟಾಲವರ್ತನು

ಬಹಳ ಬಲವಾದ ಖಜಾನೆಪೆಟ್ಟಿಗೆಗಳನ್ನು ಇತ್ತೀಚೆಗೆ ತಯಾರಿಸುತ್ತಿರುವನು. ಅವುಗಳನ್ನು ನೀವು ಒಂದು ಸಲ ನೋಡಿ ಬನ್ನಿರಿ. ಒಳ್ಳೇದು. ನಾವೀಗ ಹೊರಡುವೆವು. ಮಿಸ್ಟರ್ ಬ್ಲೇಕ! ಇನ್ನು ನಾವು ಹೊರಡೋಣ."

ಅಲ್ಲಿಂದ ಎಲ್ಲರೂ ಯಾರ್ಡಿಗೆ ಹಿಂದಿರುಗಿ ಬಂದರು. ಅಷ್ಟರೊಳಗೆ ಯಾರ್ಡಿನ ವಿಶೇಷಜ್ಞನು ಖಜಾನೆಪೆಟ್ಟಿಗೆಯ ಮೇಲಿದ್ದ ಗುರುತುಗಳ ಫೋಟೋವನ್ನಿಳಿಸಿ ಅವುಗಳನ್ನು ಡೆವಲೆಪ್ ಮಾಡಿದ್ದನು; ಅಲ್ಲದೆ ಅವು ಯಾರ ಕೈಬೆರಳುಗಳ ಗುರುತೆಂಬುದನ್ನೂ ಕಂಡುಹಿಡಿದಿದ್ದನು.

ಹಾರ್ಕರನು ಅವಿಶ್ವಸನೀಯಭಾವದಿಂದ ಆ ಎರಡೂ ಸೆಟ್ಟುಗಳ ಕಡೆಗೆ ಒಂದು ಸಾರೆ ನೋಡಿ ಬ್ಲೇಕನೊಡನೆ ಮಾತಾಡಿದನು:—"ಇಷ್ಟರವರೆಗೆ ನನಗೆ ವಿಶ್ವಾಸವಿದೆ. ಒಟ್ಲೆರ್ನೀನಿಯನ್ ಹೇಳುವುದು ಸಂಪೂರ್ಣವಾಗಿ ನಿಜ ವಿದೆ. ಈ ಪ್ರಪಂಚದಲ್ಲಿ ಇಬ್ಬರು ಮನುಷ್ಯರ ಬೆರಳಚ್ಚುಗಳು ಎಂದಿಗೂ ಪರಸ್ಪರವಾಗಿ ಸರಿಹೊಂದಲಾರವು; ಆದರೆ ಈ ವ್ಯವಹಾರವಾದರೋ ಎಲ್ಲ ವಿಧಾನಗಳನ್ನೂ ಮಣ್ಣುಗೂಡಿಸುತ್ತಿದ್ದಂತೆ ಕಾಣಿಸುತ್ತದೆ. ಈ ಫೋಟೋ ಗ್ರಾಫ್ ಶೀಡ್ಮನನ ಖಜಾನೆಪೆಟ್ಟಿಗೆಯ ಮೇಲೆ ಬಿದ್ದಿರುವ ಬೆರಳುಗಳದ್ದೇ ಆಗಿದ್ದರೆ, ವಾಸ್ತವಿಕವಾಗಿಯೂ ಅವೇ ಇವೆ. ಹಾಗಿದ್ದರೆ ಇವುಗಳು ಕಾನ್ಕೀ ಅಥವಾ ವಿಲಿಯಮ್ಸನ ಕೈಯಿಂದಲೇ ನಡೆಸಲ್ಪಟ್ಟವುಗಳಾಗಿವೆ; ಆದರೆ ಕಾನ್ಕಿಯು ಈ ಮುಂಚೆಯೇ ಸಿಂಗ್‌ಸಿಂಗಿನ ಜೈಲಿನಲ್ಲಿ ಕೈದಿಯಾಗಿರುವನು. ಇರಲಿ. ಮಿಸ್ಟರ್ ಬ್ಲೇಕ್! ಇಬ್ಬರು ಮನುಷ್ಯರ ಬೆರಳಚ್ಚುಗಳು ಪರಸ್ಪರ ಸರಿಹೊಂದುವುವೆಂಬುದನ್ನು ನೀವು ಎಂದಾದರೂ ಎಲ್ಲಿಯಾದರೂ ನೋಡಿರು ವಿರಾ ಅಥವಾ ಕೇಳಿರುವಿರಾ?"

ಬ್ಲೇಕ ಉತ್ತರವಿತ್ತನು:—"ಹುಂ. ಇಂತಹದೊಂದು ವ್ಯವಹಾರವು ಸರ್ಕಾರಿ ರಿಕಾರ್ಡಿನಲ್ಲಿ ದಾಖಲಾಗಿದೆ. ಆ ವ್ಯವಹಾರವು ಬರ್ಲಿನ್ನಿನ ಅರ್ನ ಸ್ಟೀನ್ ಎಂಬ ಅವಳಿ-ಜವಳಿ ಸೋದರರದು. ನಿಮಗೆ ಆ ಮೊಕದ್ದಮೆಯ ಸುದ್ದಿ ದೊರೆತಿರಲಾರದು. ಅದರಲ್ಲಿ ಬಹಳ ವೈಚಿತ್ರ್ಯವು ಕಂಡು ಬಂದಿತು. ಆ ಇಬ್ಬರು ಅವಳಿ ಜವಳಿ ಸಹೋದರರ ಬಲಗೈ ಬೆರಳುಗಳ ಗುರುತು ಸಮಾನವಾಗಿದ್ದಿತು. ಅವರ ಎಡಗೈ ಬೆರಳುಗಳ ಗುರುತಾದರೋ ಆಕಾಶ-ಪಾತಾಳಗಳಷ್ಟು ವ್ಯತ್ಯಸವಾಗಿದ್ದಿತು. ಇದು ಪ್ರಕೃತಿಯ ಒಂದು ವೈಚಿತ್ರ್ಯ ವೇ ಸರಿ. ಇದರಿಂದ ಕಾನ್ಕಿಯ ವ್ಯವಹಾರದ ಮೇಲೆ ತಕ್ಕಷ್ಟು ಪ್ರಭಾವ ಬೀಳಲಾರದೆಂದು ಕಾಣಿಸುತ್ತಿದೆ. ನಿಮಗೆ ನೆನಪಿರಬಹುದು, ಅವನು ಕೋರ್ಟಿನಲ್ಲಿ ರುಜುವಾತುಪಡಿಸಿದ್ದನು........"

ಬ್ಲೇಕನ ಮಾತಿನ ನಡುವೆಯೇ ಹಾರ್ಕರ ಹೇಳಿದನು:—"ಹೌದು-ಹೌದು. ಅವನ ಅವಳಿ ಜವಳಿ ಸಹೋದರತನದ ಸಂಗತಿಯಷ್ಟೆ? ಎಡ್ವರ್ಡ ವಿಲಿಯಮ್ಸನ ರೂಪವು ಕಾಸ್ನಿಗೆ ಸರಿಹೋಗುತ್ತದೆ. ಆದರೂ ಕೂಡ ಎಡ್ವರ್ಡ್‌ನು ಒಬ್ಬ ಸಂಭ್ರಾಂತ ಮತ್ತು ವಿಶ್ವಾಸಪಾತ್ರ ಮನುಷ್ಯನಿರುವನು. ಹೀಗಲ್ಲದೆ ಇದ್ದಿದ್ದರೆ ಕಾಸ್ನಿಯ ಈ ತಂತ್ರವು ನಿಶ್ಚಯವಾಗಿ ಕೆಲಸ ಮಾಡದೆ ಇರುತ್ತಿರಲಿಲ್ಲ; ಆದರೆ ಯಾರು ಬಲ್ಲರು? ಎಡ್ವರ್ಡ್‌ನೂ ಕೂಡ ಎರಡು ತರದ ಜೀವನ ನಡೆಸುತ್ತಿರಬಹುದು. ಖಜಾನೆ ಪೆಟ್ಟಿಗೆಯನ್ನೊಡೆಯುವ ಅದ್ಭುತ ಸಾಮರ್ಥ್ಯವುಳ್ಳವನಾಗಿದ್ದರೂ ಪಕ್ಕದ ತನ್ನ ಅಂಗಡಿಯನ್ನು ಜನಗಳ ಕಣ್ಣಿಗೆ ಥಳಥಳಿಸುವುದಕ್ಕಾಗಿಯೇ ತೆರೆದಿಟ್ಟುಕೊಂಡಿರಬಹುದು. ವಾಸ್ತವಿಕವಾಗಿಯೂ ಹೀಗೆಯೇ ಇದ್ದರೆ, ಅವನೊಬ್ಬ ಜಾಗರೂಕನಾದ ಚತುರ ವ್ಯಕ್ತಿಯೇ ಸರಿ ಎಂದು ಒಪ್ಪಬೇಕಾಗುವದು; ಆದರೆ ಅವನು ಅಷ್ಟು ಜಾಗರೂಕನಾದ ಮನುಷ್ಯನೆಂದಾದರೆ, ಶೀಡ್ಮನ್ನನ ಖಜಾನೆ ಪೆಟ್ಟಿಗೆಯ ಮೇಲೆ ಹೀಗೆ ತನ್ನ ಬೆರಳುಗಳ ಗುರುತನ್ನು ಕಡೆಯುವ ದೊಡ್ಡ ತಪ್ಪನ್ನು ಯಾಕೆಂದು ಮಾಡುವನು? ಏನಾದರೂ ಇರಲಿ. ಮೊದಲು ನಾವೀಗ ಎಡ್ವರ್ಡ್ ವಿಲಿಯಮ್ಸನು ತನ್ನ ಅಂಗಡಿಯಲ್ಲಿ ಹಾಜರಿರುವನೇ ಇಲ್ಲವೇ ಎಂಬುದನ್ನು ನೋಡಬೇಕು. ನೀವು ಹೇಳಿದ ಬರ್ಲಿನ್ನಿನ ವ್ಯವಹಾರದಂತೆಯೇ ಇದೂ ಒಂದು ವಿಚಿತ್ರ ವ್ಯವಹಾರವಿರುವ ಸಂಭವವಿದೆ.''

ಇಷ್ಟನ್ನು ಹೇಳಿ, ಹಾರ್ಕರನು ಕೂಡಲೆ ಓಲ್ಡ ಕೆಂಟ್ ರೋಡಿನ ಒಂದು ಪೋಲೀಸ ಸ್ಟೇಶನ್ನಿಗೆ ಫೋನ್ ಮಾಡಿದನು.

"ಎಡ್ವರ್ಡ ವಿಲಿಯಮ್ಸನ ಅಂಗಡಿಯು ಸ್ಟೇಷನ್ನಿಗೆ ಅಷ್ಟೇನೂ ದೂರವಿಲ್ಲ. ಈ ಸಂಗತಿಯನ್ನೀಗ ತಿಳಿದುಕೊಳ್ಳಲು ಹೆಚ್ಚಿನ ವಿಲಂಬವೇನೂ ಇಲ್ಲ....ಹುಂ, ಏನು?....ಎರಡು ದಿನಗಳ ಮುಂಚೆಯೇ?....ಹುಂ, ಧನ್ಯವಾದಗಳು. ನಾನು ಕೂಡಲೆ ಆಸ್ಪತ್ರೆಗೆ ಹೋಗಿ ಈ ವಿಚಾರದಲ್ಲಿ ತನಿಖೆ ಮಾಡುವೆನು.''

ಹಾರ್ಕರನು ಬ್ಲೇಕನ ಕಡೆ ತಿರುಗಿ ಹೇಳಿದನು—"ಬಲು ಬೇಗನೆ ಎಲ್ಲ ಸಂಗತಿಗಳೂ ತಿಳಿದು ಬಂದವು. ಎರಡು ದಿನಗಳ ಮುಂಚೆ ಎಡ್ವರ್ಡ್ ವಿಲಿಯಮ್‌ನು ತನ್ನ ಅಂಗಡಿಯ ಮುಂಭಾಗದಲ್ಲಿಯೇ ಒಂದು ಲಾರಿಗೆ ಸಿಕ್ಕಿ ಗಾಯಹೊಂದಿ ಅಂದಿನಿಂದ ಆಸ್ಪತ್ರೆಯಲ್ಲಿ ಬಿದ್ದಿರುವನು. ಅವನ ತೊಡೆಯ ಮೂಳೆಗಳು ಮುರಿದು ಹೋದವಲ್ಲದೆ, ಮೈಯಲ್ಲೆಲ್ಲಾ ವಿಪರೀತ ಗಾಯವಾಗಿವೆ. ಇದನ್ನು ತಿಳಿದ ಮೇಲೆ ಶೀಡ್ಮನ್ನನ ಅಂಗಡಿಯಲ್ಲಿ ನಡೆದಿರುವ

ಕಳವಿನಲ್ಲಿ ಎಡ್ವರ್ಡ್ ವಿಲಯಮ್ಮನನ್ನು ಸೇರಿಸುವದು ಉಚಿತವಾಗುವುದಿಲ್ಲ. ಮಿಸ್ಟರ್ ಬ್ಲೇಕ್! ಈಗ ನೀವೇನು ಹೇಳುವಿರಿ ಹೇಳಿರಿ?''

ಅನಿಶ್ಚಿತಭಾವದಿಂದ ತಲೆಯನ್ನು ಅಲ್ಲಾಡಿಸುತ್ತ ಬ್ಲೇಕನು ಆ ಖಜಾನೆ ಪೆಟ್ಟಿಗೆಯ ಮೇಲೆ ಬಿದ್ದಿದ್ದ ಬೆರಳ ಗುರುತುಗಳಕಾಗದವನ್ನು ಕೈಗೆ ತೆಗೆದು ಕೊಂಡನು. ತನ್ನ ಅಂಗಿಯ ಜೇಬಿಗೆ ಕೈಹಾಕಿ ಬಹಳ ಶಕ್ತಿಶಾಲಿಯಾದ, ಸೂಕ್ಷ್ಮದರ್ಶಕವಾದ ಒಂದು ಕನ್ನಡಿಯನ್ನು ಹೊರತೆಗೆದು ಅವುಗಳನ್ನು ತೀಕ್ಷ್ಣದೃಷ್ಟಿಯಿಂದ ಪರೀಕ್ಷಿಸತೊಡಗಿದನು.

ಸ್ವಲ್ಪ ವೇಳೆ ಕಳೆದ ನಂತರ ಬ್ಲೇಕನು ಹಾರ್ಕರನ ಕಡೆಗೆ ದೃಷ್ಟಿಯನ್ನು ಬೀರಿ ಹೇಳಿದನು:—''ಬರ್ಲಿನ್ನಿನ ಆ ಅವಳಿ-ಜವಳಿ ಸಹೋದರರ ವ್ಯವ ಹಾರವು ನನ್ನ ಕಿವಿಗೆ ಬೀಳದೆ ಇದ್ದಿದ್ದರೆ, ಇಬ್ಬರ ಬೆರಳಚ್ಚುಗಳು ಎಂದೂ ಸರಿಹೊಂದಲಾರವೆಂದು ನಾನೂ ನಿಶ್ಚಯವಾಗಿ ಹೇಳಿಬಿಡುತ್ತಿದ್ದೆನು. ಈಗ ನೀವು ಸಾಧ್ಯವಾದಷ್ಟು ಬೇಗನೆ ಎಡ್ವರ್ಡ್ ವಿಲಿಯಮ್ಮನ ಬೆರಳಚ್ಚುಗಳನ್ನು ಪಡೆದುಕೊಳ್ಳುವ ಏರ್ಪಾಡು ಮಾಡಿರಿ; ಆದರೆ ಈ ಕೆಲಸವು ಅವನ ನಿಸ್ಸಂಜ್ಞಾ ವಸ್ಥೆಯಲ್ಲಿ ನಡೆಸಲ್ಪಡಬೇಕಾಗುವದು.''

ಹಾರ್ಕರನು ತಿರುಗಿ ಟೆಲಿಫೋನಿನಿಂದ ಕೆಲಸ ಮಾಡತೊಡಗಿದನು. ಸ್ವಲ್ಪ ಹೊತ್ತಿನ ನಂತರ ಬ್ಲೇಕನ ಕಡೆಗೆ ತಿರುಗಿ ಹೇಳಿದನು:—''ಈ ವ್ಯವ ಹಾರವು ವಾಸ್ತವಿಕವಾಗಿ ಬಹಳ ವಿಚಿತ್ರವಾಗಿ ಕಾಣಿಸುತ್ತದೆ. ಕಾನ್ನಿಯು ಈಗ ಜೈಲಿನಲ್ಲಿ ಬಂದಿಯಾಗಿರುವನು. ಹೀಗಿರುವಾಗ ಅವನ ಬೆರಳ ಗುರ್ತು ಗಳು ಇಂಗ್ಲೆಂಡಿನಲ್ಲಿರುವದು ಯಾವ ತರಹದಿಂದಲೂ ಸಂಭವಿಸದ ಮಾತಾ ಗಿದೆ. ಆದರೂ ಕೂಡ ಅವನ ಬೆರಳ ಗುರುತು ಖಜಾನೆ ಪೆಟ್ಟಿಗೆಯ ಮೇಲೆ ದೊರೆತಿವೆ. ಇನ್ನು ಅವನ ಸೋದರನಾದ ಎಡ್ವರ್ಡ್ ವಿಲಿಯಮ್ಮನ ಬೆರಳ ಗುರುತು ಇದಕ್ಕೆ ಸರಿಹೋಗುವ ಸಂಭವವಿದೆಯಾದರೂ ಅವನು ಎರಡು ದಿನಕ್ಕಿಂತ ಮುಂಚೆಯೇ ಆಸ್ಪತ್ರೆಯಲ್ಲಿ ಎಚ್ಚರದಪ್ಪಿ ಬಿದ್ದಿರುವನು. ಒಂದು ವೇಳೆ ಕಾನ್ನಿಯು ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದರೆ ಕೂಡಲೆ ನಮಗೆ ಆ ವರ್ತಮಾನವು ಬರದೆ ಇರುತ್ತಿರಲಿಲ್ಲ. ಆದ್ದರಿಂದ ಅದರ ಮೇಲೆ ಸಂಶಯ ಪಡುವದಕ್ಕೂ ನಮಗೀಗ ಅವಕಾಶ ದೊರೆಯುವದಿಲ್ಲ. ಈ ವಿಷಯದಲ್ಲಿ ಈಗ ನಿಮಗೇನು ಅನಿಸುತ್ತಿದೆ?''

ಬೆರಳುಗಳ ಕಡೆಗೆ ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸುತ್ತ ಬ್ಲೇಕ್ ಹೇಳಿ ದನು:—''ಈ ವಿಷಯದಲ್ಲಿ ನಾನೀಗ ನನ್ನ ನಿಶ್ಚಿತವಾದ ಯಾವ ಅಭಿಪ್ರಾಯ ವನ್ನು ಹೊರಗೆಡಹುದೂ ಉಚಿತವಾದುದಲ್ಲವೆಂದು ನಾನು ತಿಳಿಯುತ್ತೇನೆ.

ತಕ್ಕಷ್ಟು ಪ್ರಮಾಣಗಳು ಒಟ್ಟುಸೇರದೆ ಇರುವವರೆಗೆ ನಾನು ಯಾವ ಅಭಿಪ್ರಾಯವನ್ನೂ ಪ್ರಕಟಿಸಲಾರೆನು. ನಿಶ್ಚಿತವಲ್ಲದ ಸಂದಿಗ್ಧವಾದ ಮಾತುಗಳನ್ನು ಆಡುವದರಿಂದ ಯಾವ ಲಾಭವೂ ಹೊಳೆಯುವದಿಲ್ಲ; ಮತ್ತು ನಿಮ್ಮ ಮನಸ್ಸಿಗೆ ಅವು ಒಪ್ಪತಕ್ಕವುಗಳೂ ಆಗುವದಿಲ್ಲ. ಇದನ್ನು ಎಷ್ಟೋ ಸಾರೆ ನೀವೇ ಹೇಳಿರುವಿರಿ.''

ಹೀಗೆ ಹೇಳಿ ಬ್ಲೇಕನು ವ್ಯಂಗ್ಯವಾಗಿ ನಕ್ಕನು. ಆ ವಿಚಾರವನ್ನು ಒಂದೇಸಾರಿಗೆ ಹಾರಿಸಿ ಬಿಡುವ ಉದ್ದೇಶದಿಂದ ಇನ್‌ಸ್ಪೆಕ್ಟರ ಹಾರ್ಕರನು ಮಾತಿನ ಓಘವನ್ನು ಬೇರೊಂದೆಡೆಗೆ ತಿರುಗಿಸುತ್ತ ಹೇಳಿದನು:—"ಸರಿ, ಸರಿ. ಈ ವಿಚಾರವನ್ನು ಸ್ವಲ್ಪ ವೇಳೆಯ ವರೆಗೆ ನಿಲ್ಲಿಸೋಣ. ಈಗ ಇನ್ನೊಂದು ಹೊಸ ಸಂಗತಿಯನ್ನು ಹೇಳುವೆನು. ಅದರ ಮೇಲೆ ನಿಮ್ಮ ಅಭಿಪ್ರಾಯವನ್ನು ಹೇಳಿರಿ. ಆ ವ್ಯವಹಾರವೂ ಕೂಡ ಬೆರಳಚ್ಚುಗಳ ಮೇಲೆಯೇ ಅವಲಂಬಿಸಿ ಇದೆ.''

ಹೀಗೆ ಹೇಳಿ ಹಾರ್ಕರನು ಡಾಕ್ಟರ್ ಗ್ರೇಯ ಕಥೆಯನ್ನು ಬ್ಲೇಕನಿಗೆ ಸಂಪೂರ್ಣವಾಗಿ ವಿವರಿಸಿ ಹೇಳಿ, ಕೊನೆಗೆ ಹೀಗಂದನು:—"ಮಿಸ್ಟರ್ ಬ್ಲೇಕ! ಆ ದುಷ್ಟರು ಯಾವ ಉದ್ದೇಶದಿಂದ ಈ ಕೆಲಸವನ್ನು ಮಾಡಿದರೋ, ಇದು ನನಗಂತೂ ಸ್ವಲ್ಪವೂ ಬಗೆಹರಿಯದಾಗಿದೆ. ಆ ಪುಂಡರು ಯಾವುದೋ ಒಂದು ನೆವದಿಂದ ಸಿಗರೇಟ್ ಕೇಸನ್ನು ಡಾಕ್ಟರ್ ಗ್ರೇಯ ಕೈಗೆ ಕೊಟ್ಟು ಅದರ ಮೇಲೆ ಅವನ ಬೆರಳಗುರುತುಗಳನ್ನು ತೆಗೆದುಕೊಂಡಿರುವ ಸಂಭವವಿದೆ. ಡಾಕ್ಟರನು ಮಾತ್ರ ಆ ವಿಷಯವನ್ನು ಹೇಗೋ ಮರೆತಿರಬಹುದು. ಆ ಕಾಗದದ ವಿಷಯದಲ್ಲಿಯೂ ಹೀಗೆಯೇ ಊಹಿಸಬಹುದಾಗಿದೆ. ಮನುಷ್ಯನ ಸ್ವಭಾವದಲ್ಲಿ ಆಗಾಗ್ಗೆ ಎಷ್ಟೋ ತರಹದ ಬದಲಾವಣೆಗಳು ಆಗಬಲ್ಲವು; ಆದರೆ ತನ್ನ ಮುಂದಿನ ಉಜ್ವಲ ಭವಿಷ್ಯವನ್ನು ಒಂದೇಸಾರಿಗೆ ಧಿಃಕರಿಸಿ ಇಂತಹ ನೀಚ ಕರ್ಮವನ್ನು ಆ ಡಾಕ್ಟರನು ಮಾಡಲು ಉದ್ಯುಕ್ತನಾಗುವನೆಂಬ ವಿಷಯವನ್ನು ಥಟ್ಟನೆ ನಂಬಲು ಮನವೊಡಂಬಡುವದಿಲ್ಲ.''

ಬ್ಲೇಕನು ಹೇಳಿದನು:—"ನೀವನ್ನುವದು ಸರ್ವಥಾ ಸರಿಯಾಗಿದೆ; ಆದರೆ ಡಾಕ್ಟರೀ ಪ್ರಪಂಚದಲ್ಲಿ ಸರಿಯಾಗಿ ಇದೇ ರೀತಿಯಾಗಿರುವ ಒಂದು ವ್ಯವಹಾರವು ನಮ್ಮಗಳೆದುರಿಗೇ ಒಂದುಹೋಗಿದೆಯಲ್ಲವೇ? ನಮಗೆ ಚಿರ ಪರಿಚಿತನಾದ ಡಾಕ್ಟರ್ ಫೆರಾರೋವನ್ನು ನೀವು ಒಂದೇಸಾರಿಗೆ ಮರೆತಿರಾ? ಫೆರಾರೋ ಎಂದರೆ ಸಾಮಾನ್ಯ ವ್ಯಕ್ತಿಯೇ? ಅವನಲ್ಲಿ ಅಸಾಧಾರಣವಾದ ವಿದ್ಯಾಬುದ್ಧಿ ಚಾತುರ್ಯಗಳು ಮನೆಮಾಡಿದ್ದುವು. ಅತ್ಯುಜ್ವಲ ಭವಿಷ್ಯವು

ಆತನೆದುರಿಗೆ ಇದ್ದಿತು. ಅಷ್ಟಿದ್ದರೂ ಆವನ ಬುದ್ಧಿಯ ಬದಲಾವಣೆಯು ಅವನನ್ನು ಎಂತಹ ಭಯಂಕರ ಅಪರಾಧಿಯ ಕೂಪದಲ್ಲಿ ತಳ್ಳಿಬಿಟ್ಟಿತೆಂಬ ದನ್ನು ಮರೆಯಲು ಸಾಧ್ಯವೆ? ಅಷ್ಟು ಕ್ರೂರ-ಭಯಂಕರನಾದ ಮನುಷ್ಯ ನಿನ್ನೊಬ್ಬನು ಈ ಪ್ರಪಂಚದಲ್ಲಿ ಇದುವರೆಗೆ ಎಲ್ಲಿಯೂ ಬಂದಿರಲಾರನು. ನಮ್ಮ ಗಳ ನಿರುದ್ಯೋಗವನ್ನು ಅವನು ಒಂದೇಸಾರಿಗೆ ದೂರಪಡಿಸಿದನು. ಅಂತಹ ಭೀಷಣ ಸಾಹಸಿಯಾದ ಮಾನವನು ಈ ಲೋಕದಿಂದೀಗ ದೂರವಾದು ದಕ್ಕಾಗಿ ನಾನು ವ್ಯಥೆ ಪಡುತ್ತೇನೆ. ಹೇಗೆ, ಫೆರೋರಾವಿನ ಭೀಷಣ ಸಾಹಸ ಗಳು ನೆನಪಾಗುವವೆ?''

ಹಾರ್ಕರ್ ಹೇಳಿದನು: –''ಯಾಕಿಲ್ಲ? ನನಗೆ ಚೆನ್ನಾಗಿ ನೆನಪಾಗು ತ್ತವೆ. ನನಗೆ ನೆನಪಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಆವನು ಫ್ರಾನ್ಸಿನ ಯಾವದೋ ಒಂದು ಹಡಗಿನ ಅಗ್ನಿ ಕಾಂಡದಲ್ಲಿ ಸಿಲುಕಿ ಉರಿದು ಹೋದನು"

ಬ್ಲೇಕ್ ಹೇಳಿದನು:—''ಅಂತಹ ಮನುಷ್ಯರ ವಿಷಯದಲ್ಲಿ ಹೇಗೆ ಬೇಕಾದರೂ ಹೇಳಬಹುದು; ಯಾಕೆಂದರೆ, ಇತ್ತೀಚೆಗೆ ಬಹಳ ದಿನಗಳಿಂದ ಆವನ ವಿಚಾರವಾಗಿ ಯಾವ ವರ್ತಮಾನವೂ ಕೇಳಿಸುವದಿಲ್ಲ. ಅವನ ವಿಷಯುವಾದ ಈ ಸುದ್ದಿಯನ್ನು ನಿಜವೆಂದೊಪ್ಪುವುದೇ ಉಚಿತವಾಗಿ ಕಾಣಿಸು ತ್ತಿದೆ. ಇನ್ನೀಗ ಡಾಕ್ಟರ ಗ್ರೇಯ ವಿಚಾರವು ಉಳಿಯಿತು.........''

ಮಾತಾಡುತ್ತ ಮಾತಾಡುತ್ತ ಬ್ಲೇಕನು ನಡುವೆಯೇ ಮಾತನ್ನು ನಿಲ್ಲಿಸಿದನು. ಯಾಕಂದರೆ, ಆ ಸಮಯಕ್ಕೆ ಸರಿಯಾಗಿ ಟೆಲಿಫೋನಿನ ಗಂಟೆಯು ಬಹಳ ಬಲವಾಗಿ ಹೊಡೆಯತೊಡಗಿತು. ಹಾರ್ಕರನು ಕೊಳವೆ ಯನ್ನೆತ್ತಿ ಸ್ವಲ್ಪವೇಳೆಯವರೆಗೆ ಆಲಿಸಿದ ನಂತರ ಎದ್ದು ನಿಂತು ''ಪೋಲೀಸ್ ಕಮೀಶನರ್ ಸಾಹೇಬರು ನನ್ನನ್ನು ಕರೆಯುತ್ತಿದ್ದಾರೆ ಮಿಸ್ಟರ್ ಬ್ಲೇಕ್! ನೀವುಸ್ವಲ್ಪ ಇಲ್ಲಿಯೇ ಇರೋಣಾಗಲಿ. ಈಗಲೇ ಬಂದುಬಿಡುವೆನು.'' ಎಂದು ಹೇಳುತ್ತಾ ಆ ಕೋಣೆಯಿಂದ ಬೇಗಬೇಗನೆ ಹೊರಟು ಹೋದನು.

ಸ್ವಲ್ಪಹೊತ್ತಿನ ಮೇಲೆ ಹಾರ್ಕರನು ಹಿಂದಿರುಗಿ ಬಂದನು. ಈ ವೇಳೆ ಯಲ್ಲಿ ಆತನ ಮುಖಮಂಡಲವು ಗಂಭೀರ ಚಿಂತಾಮಗ್ನವಾಗಿರುವಂತೆ ಕಾಣಿ ಸುತ್ತಿದ್ದಿತು. ಬಂದೊಡನೆಯೇ ಹೇಳಿದನು—''ಸಮಾಚಾರವು ಒಳ್ಳೆಯದಿರು ವುದಿಲ್ಲ, ಮಿಸ್ಟರ್‌ಬ್ಲೇಕ್! ಸರ್ ಕಥವರ್ಟ್‌ಸಾಹೇಬರ ಕುತ್ತಿಗೆಯಲ್ಲಿ ಕೆನ್ಸರ್ ರೋಗವು ಆವಿರ್ಭವಿಸಿ ಬಿಟ್ಟಿದೆ. ಅದಕ್ಕಾಗಿ ಈಗ ಅವರು ಎರಡು ತಿಂಗಳ ಕಾಲದ ವರೆಗೆ ಯಾವುದೋ ಪ್ರೈವೇಟ್ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗತಕ್ಕವರಾಗಿರುವರು. ಆ ಪ್ರೈವೇಟ್ ಆಸ್ಪತ್ರೆಯ ಡಾಕ್ಟರರು ರೆಡಿ

ಯಮ್ನಿನ ಯಾವುದೋ ಒಂದು ತರಹದ ಚಿಕಿತ್ಸೆಯ ಮೂಲಕವಾಗಿ ಆ ರೋಗವನ್ನು ನಿಶ್ಚಯವಾಗಿ ಪರಿಹರಿಸುವೆವೆಂದು ಮಾತು ಕೊಟ್ಟಿರುವಂತೆ. ಆ ಡಾಕ್ಟರರ ಹೆಸರು ಮೇಡೀನಾ. ಈ ಹೆಸರನ್ನು ನೀವೆಂದಾದರೂ ಕೇಳಿರುವಿರಾ?''

ಬ್ಲೇಕ್ ಉತ್ತರವಿತ್ತನು—''ಯಾಕಿಲ್ಲ? ನೀವು ಮರೆತಿರಬಹುದು. ನಾನು ನನ್ನ ಈ ಕಾರ್ಯವನ್ನು ಮುಂಚೆ ಡಾಕ್ಟರೀ ವಿದ್ಯೆಯಿಂದಲೇ ಆರಂಭಿಸಿದ್ದೆನು. ಈಗಲೂ ಕೂಡ ನನಗೆ ಡಾಕ್ಟರೀ ವಿದ್ಯೆಯಲ್ಲಿ ತಕ್ಕಷ್ಟು ಅಭಿರುಚಿ ಇದೆ. ವಿನ್ಸೆಂಟ್ ಮೇಡೀನಾ ಇವನು ಒಬ್ಬ ದೊಡ್ಡ ಡಾಕ್ಟರನಿರುವುದು ನಿಜ. ಬಹಳ ದೊಡ್ಡ ಕಾರ್ಯದಲ್ಲಿ ಆತನು ಕೈಹಾಕಿರುವನು. ಕೆನ್ಸರ್ ರೋಗದ ಮೇಲೆ ರೇಡಿಯಮ್ನಿನ ಒಂದು ನವೀನ ಚಿಕಿತ್ಸಾಕ್ರಮವನ್ನು ತಂದು ಅವನೀಗ ಡಾಕ್ಟರೀ ಪ್ರಪಂಚದಲ್ಲಿ ಒಂದು ದೊಡ್ಡ ಗದ್ದಲವನ್ನೆಬ್ಬಿಸಿಬಿಟ್ಟಿರುವನು''

ಹಾರ್ಕರ್—''ಆದರೆ ನಾನು ಕೇಳಿರುವುದರಲ್ಲಿ ಡಾಕ್ಟರರು ರೇಡಿಯಮ್ಮನ್ನು ಎಷ್ಟೋ ವರ್ಷಗಳಿಂದ ಚಿಕಿತ್ಸಾಕಾರ್ಯದಲ್ಲಿ ತಂದುಕೊಂಡಿರುವರೆಂದು ತಿಳಿದು ಬಂದಿದೆ.''

ಬ್ಲೇಕ್—''ಆದರೆ ಮೇಡೀನನು ಅದನ್ನು ಪಯೋಗಿಸುವುದರಲ್ಲಿ ಒಂದು ಹೊಸ ವಿಧಾನವನ್ನು ಕಂಡು ಹಿಡಿದಿರುವನು. ಅವನು ಆದನ್ನು ಇಂಜೆಕ್ಷನ್ ರೀತಿಯಿಂದ ಶರೀರದೊಳಗೆ ಉಪಯೋಗಿಸುತ್ತಾನೆ; ಆದರೆ ಇಂತಹ ಸಮಾಚಾರಗಳಲ್ಲಿ ನಿಮಗೆ ಸಂತುಷ್ಟಿಯುಂಟಾಗಲಾರದು. ಮೇಡೀನನು ಒಂದು ರೀತಿಯಿಂದ ಮಾನವ ಜಾತಿಗೇ ಹಿತಮಾಡತಕ್ಕ ವ್ಯಕ್ತಿಯಾಗಿರುವನೆಂದು ಹೇಳಬಹುದಾಗಿದೆ. ಅಂತಹ ಮನುಷ್ಯನು ಸರ್ ಕಥವರ್ಟ್ ಸಾಹೇಬರಿಗೆ ಆರೋಗ್ಯವನ್ನುಂಟುಮಾಡುವ ವಚನವಿತ್ತಿದ್ದರೆ ಅವರ ರೋಗಪರಿಹಾರವಾಗುವ ವಿಷಯದಲ್ಲಿ ಯಾವ ತರಹದ ಸಂಶಯಪಡಬೇಕಾದ ಆಗತ್ಯವೂ ಇರುವುದಿಲ್ಲ.''

ಬ್ಲೇಕನು ಯಾವ ಹುರುಪಿನಿಂದ ಈ ಮಾತನ್ನಾಡಿದ್ದನೋ ಆ ರೀತಿಯಿಂದ ಅವನು ಬಹಳ ಕಡಿಮೆ ಮಾತಾಡುತ್ತಿದ್ದನು. ಹಾರ್ಕರನು ಹೇಳಿದನು: ''ಸರಿ. ನಿಮ್ಮ ಬಾಯಿಂದ ಬಂದ ಈ ಮಾತನ್ನು ಕೇಳಿ ನನ್ನ ಮನಸ್ಸಿಗೆ ಬಹಳ ಸಮಾಧಾನವಾಯಿತು. ಮಿಷ್ಟರ್ ಬ್ಲೇಕ್! ಯಾಕಂದರೆ ಅಂತಹ ಒಳ್ಳೆಯ ಆಫೀಸರರು ನಮಗಿನ್ನಾರೂ ದೊರೆಯಲಾರರು. ಒಳ್ಳೇದು, ಇನ್ನು ಡಾಕ್ಟರ್ ಗ್ರೇಯ ವಿಚಾರವನ್ನು ಮಾತಾಡೋಣ. ಡಾಕ್ಟರ್ ಗ್ರೇಗೆ ವಿರುದ್ಧವಾಗಿ ನಿಂತಿರುವ ಸಿಗರೇಟ್ ಕೇಸ್ ಮತ್ತು ಆ ಕಾಗದ ಮುಂತಾದುದನ್ನು ನೀವು ಒಂದು ಸಲ ಆಗತ್ಯವಾಗಿ ನೋಡುವುದುಚಿತವೆಂದು ನನ್ನ ಅಭಿಪ್ರಾಯವಿದೆ.''

ಬ್ಲೇಕ್ ಹೇಳಿದನು—''ಆಗಲಿ, ನೋಡೋಣ, ತರಿಸಿರಿ.''

ಕೂಡಲೆ ಆ ವಸ್ತುಗಳೆಲ್ಲವೂ ಬ್ಲೇಕನೆದುರಿಗೆ ತರಲ್ಪಟ್ಟವು. ಬ್ಲೇಕನು ಸಿಗರೆಟ್ ಕೇಸಿನ ಮೇಲ್ಭಾಗವನ್ನು ಒಂದು ಸಾರಿ ತನ್ನ ಅಗ್ನಿಸಂಬಂಧವಾದ ಕನ್ನಡಿಯಿಂದ ಸೂಕ್ಷ್ಮವಾಗಿ ನೋಡಿದನು; ಮತ್ತು ಆ ಕಾಗದವನ್ನೂ ತಿರುಗ ಮುರುಗ ಮಾಡಿ ಹಾಗೆಯೇ ಪರೀಕ್ಷಿಸಿದನು. ಅನಂತರ ಅದರ ಮೇಲಿನ ವಾಟರ್ ಮಾರ್ಕನ್ನು ನೋಡುವ ಇಚ್ಛೆಯಿಂದ ಬ್ಲೇಕನು ಅದನ್ನು ಕೈಯಿಂದೆತ್ತಿ ಬೆಳಕಿನ ಕಡೆಗೆ ಹಿಡಿದನು.

ಹಾರ್ಕರನು ಹೇಳಿದನು:—"ಅದರಿಂದೇನೂ ನಿಮಗೆ ಹೊಸ ಸಂಗತಿಯು ತಿಳಿಯಲಾರದು ಮಿಸ್ಟರ್ ಬ್ಲೇಕ್! ಯಾಕೆಂದರೆ ಇದು ಸರ್ವಸಾಧಾರಣವಾದ ಕಾಗದವಲ್ಲದೆ ಹೊಸ ತರಹದ್ದೇನೂ ಅಲ್ಲ. ಎರಡು ಆಣೆ ಖರ್ಚು ಮಾಡಿದರೆ ನೀವು ಇಂತಹ ಒಂದು ಪ್ಯಾಕೆಟ್ ಕಾಗದ ಮತ್ತು ಇಂತಹುದೇ ಆದ ಒಂದು ಡಜನ್ ಲಕ್ಕೋಟೆಗಳನ್ನು ಕೊಂಡುಕೊಳ್ಳಬಹುದು."

ಬ್ಲೇಕ್:—"ಹೀಗೆಯೊ ಮಿಸ್ಟರ್ ಹಾರ್ಕರ್! ಬಹಳ ಇಂಪಾದ ಮಾತನ್ನಾಡಿದಿರಿ ನೀವು. ಒಳ್ಳೇದು. ಇದನ್ನು ಹೇಳರಿ—ಸಾರ್ಜಂಟ್ ಬ್ರೌನನಿಂದ ಹುಡುಕಿಸಿದ ನಂತರ ತಿರುಗಿ ಎಂದಾದರೂ ನೀವು ಡಾಕ್ಟರ್ ಗ್ರೇಯ ಬಿಡಾರಕ್ಕೆ ಹೋಗಿ ಅಲ್ಲಿ ಪರೀಕ್ಷಿಸಲೆತ್ನಿಸಿದಿರಾ?"

ಹಾರ್ಕರ್:—"ಇನ್ನದರ ಅಗತ್ಯವೇನಿದ್ದಿತು? ನಮಗೆ ಯಾವ ವಸ್ತುಗಳು ಆವಶ್ಯಕವಾಗಿದ್ದವೋ ಅವು ದೊರಕಿಯೇ ಇವೆ ಇನ್ನೇನು?"

ಬ್ಲೇಕ್:—"ಚೆನ್ನಾಗಿ ಹೇಳಿದಿರಿ, ಮಿಸ್ಟರ್ ಹಾರ್ಕರ್! ಯಾವ ವಸ್ತುಗಳು ಬುದ್ಧಿಪೂರ್ವಕವಾಗಿ ನಿಮಗಾಗಿ ಅಲ್ಲಿ ಇರಿಸಲ್ಪಟ್ಟಿದ್ದವೋ ಅವೆಲ್ಲವೂ ಪ್ರಾಯಶಃ ನಿಮಗೆ ದೊರೆತೇ ಇವೆ. ಒಳ್ಳೇದು. ಒಂದು ಬಾರಿ ನಾನೂ ಅಲ್ಲಿಗೆ ಹೋಗಿ ನೋಡಿ ಬರುವುದರಿಂದ ನಿಮಗ್ಯಾರಿಗೂ ಏನೂ ಹಾನಿ ಇಲ್ಲವಷ್ಟೆ? ಅದಲ್ಲದೆ ಡಾಕ್ಟರ್ ಗ್ರೇಯ ಬಳಿಯಲ್ಲಿಯೂ ನಾನು ಸ್ವಲ್ಪ ಮಾತನಾಡಬೇಕಾದ್ದಿದೆ. ನನಗೆ ನೀವೀಗ ಒಂದು ಆಜ್ಞಾಪತ್ರವನ್ನಿತ್ತರೆ ಈಗಲೇ ನಾನು ನೆಟ್ಟಗೆ ಬ್ರಿಕ್ಸ್ಟನ್ನಿಗೆ ಹೋಗುವೆನು. ಇನ್ನೊಂದು ವಿಷಯವನ್ನು ನಾನು ತಿಳಿದುಕೊಳ್ಳಬೇಕಾದ್ದಿದೆ—ಎಲ್ಲಕ್ಕಿಂತ ಮೊದಲು ಈ ಸುದ್ದಿಯನ್ನು ನಿಮಗೆ ತಿಳಿಸಿದವರ್ಯಾರು"

ಹಾರ್ಕರ್:—"ಸ್ಲಿಮ್ ಟಾಮೀ-ಹ್ಯಾಂಕಿನ್ ತಿಳಿಸಿದನು. ನೀವು ಅವನನ್ನು ಅರಿತೇ ಅರಿತಿರುವಿರಿ."

ಬ್ಲೇಕ್:—"ಇರಲಿ. ಅವನ ವಿಚಾರವಾಗಿ ಈಗ ಇಷ್ಟು ಮಾತ್ರ ಹೇಳಿದರೆ ಸಾಕು. ಅವನ ಮೇಲೆ ದೃಷ್ಟಿಯಿಟ್ಟಿರಿ; ನಿಮಗೆ ತಿಳಿಯದೆ ಇರಲಾರದು

ಯಾವಾಗ ನಿಮಗೆ ಅವನ ಆವಶ್ಯಕತೆಯುಂಟಾಗುವುದೋ, ಆಗ ಪ್ರಯತ್ನ ಪಟ್ಟರೂ ನಿಮಗವನ ಪತ್ತೆ ಎಲ್ಲಿಯೂ ಹತ್ತಲಾರದು. ಒಳ್ಳೇದು. ಆಗೋ, ನೋಡಿರಿ—ಇವನು ಯಾವ ಹೊಸ ಸುದ್ದಿಯನ್ನು ತಂದನು?"

ಬ್ಲೇಕನು ಈ ಕೊನೆಯಮಾತನ್ನು ಆಗತಾನೆ ಅಲ್ಲಿಗೆ ಬಂದ ಮನುಷ್ಯನೊಬ್ಬನನ್ನು ಕಂಡು ಹೇಳಿದ್ದನು.

ಹಾರ್ಕರ್:—"ಪ್ರಾಯಶಃ ಇವನು ಎಡ್ವರ್ಡ್ ವಿಲಿಯಮ್ಸನ ಬೆರಳಚ್ಚುಗಳ ಕಾಗದವನ್ನು ತೆಗೆದುಕೊಂಡು ಬಂದಿರಬಹುದು."

ಬಂದಿದ್ದ ಮನುಷ್ಯನು ಒಂದು ಕಾಗದವನ್ನು ಇನ್‌ಸ್ಪೆಕ್ಟರ್ ಹಾರ್ಕರನ ಕೈಗೆ ಕೊಟ್ಟನು. ಬ್ಲೇಕ್ ಮತ್ತು ಹಾರ್ಕರ್ ಇಬ್ಬರೂ ಬಹಳ ಲಕ್ಷ್ಯವಿಟ್ಟು ಆ ಬೆರಳುಗಳ ಗುರುತನ್ನು ಪರೀಕ್ಷಿಸಿದರು. ಅನಂತರ ಕಾನ್ನಿಯ ಬೆರಳಚ್ಚಿನೊಂದಿಗೆ ಹೋಲಿಸಿ ನೋಡಿದರು. ಒಡನೆಯೇ ತಿಳಿದುಬಂದಿತು-ಒಂದೇ ತರಹವಾಗಿದ್ದರೂ ಕೂಡ ಸ್ವಲ್ಪವೂ ಹೋಲಿಕೆಯಿರಲಿಲ್ಲ.

ಹಾರ್ಕರ್ ಹೇಳಿದನು:—"ನೋಡಿರಿ, ತಿರುಗಿ ನಾವೀಗ ಹಿಂದಿನ ದಾರಿಗೇ ಬಂದುಬಿಟ್ಟೆವು. ಕಾನ್ನಿಯ ಬೆರಳ ಗುರುತುಗಳು ಆ ಖಜಾನೆಪೆಟ್ಟಿಗೆಯ ಮೇಲೆ ಹೇಗೆ ಬಂದವೆಂದು?"

ಕೂಡಲೆ ಬ್ಲೇಕನು ಉತ್ತರವಿತ್ತನು:—"ಡಾಕ್ಟರ್ ಗ್ರೇಯ ಬೆರಳ ಗುರುತುಗಳು ಆ ಸಿಗರೇಟ್ ಕೇಸಿನ ಮೇಲೆಯೂ ನೋಟ್‌ಪೇಪರಿನ ಮೇಲೆಯೂ ಹೇಗೆ ಬಂದವೋ ಹಾಗೆಯೇ ಇವೂ ಬಂದಿವೆ. ಎರಡು ಕೆಲಸಗಳಲ್ಲಿಯೂ ಒಂದೇ ವಿಧಾನವನ್ನು ಅನುಸರಿಸಲಾಗಿದೆ. ಇನ್ನೀಗ ಇವೆರಡರಲ್ಲಿ ಯಾವ ತರಹದ ಸಂಬಂಧವಿರುವುದೆಂದು ತಿಳಿದುಕೊಳ್ಳಬೇಕಾಗಿದೆ."

ಹಾರ್ಕರ್ ಹೇಳಿದನು—"ಹಾಗೆಂದು ನೀವೀಗ ಹೇಳುತ್ತಿರುವುದರ ಅಭಿಪ್ರಾಯವೇನು?"

"ಇವೆರಡು ಬೆರಳು ಗುರುತುಗಳೂ ಕೃತಕಗಳಾಗಿವೆ" ಎಂದು ಗಂಭೀರ ಸ್ವರದಿಂದ ನುಡಿದು, ಬ್ಲೇಕನು ಅಲ್ಲಿಂದ ಹೊರಟನು. ಹಾರ್ಕರನು ಈ ಮಾತನ್ನು ಕೇಳಿ ಕಕ್ಕಾವಿಕ್ಕಿಯಾಗಿ ಬ್ಲೇಕನ ಕಡೆ ನೋಡುತ್ತಾ ನಿಂತನು!

## (೬)

ಬ್ಲೇಕನು ಹೇಳಿದನು—"ಇನ್‌ಸ್ಪೆಕ್ಟರ್ ಹಾರ್ಕರರು ನಿಮ್ಮ ಮೊಕದ್ದಮೆಯ ವಿಚಾರವನ್ನು ನನಗೆ ತಿಳಿಸಿದ್ದಾರೆ. ಅವರ ಮಾತಿನ ಮೇಲಿಂದ ನನಗೆ ತಿಳಿದು ಬಂದುದೇನಂದರೆ, ನೀವು ಅಪರಾಧಿಗಳೆಂಬುದನ್ನು ಅವರು ಯಾವ

ವಿಧದಲ್ಲಿಯೂ ಒಪ್ಪುವುದಿಲ್ಲ. ನಾನೂ ಕೂಡ ಇನ್ಸ್ಪೆಕ್ಟರರ ಆ ಅಭಿಪ್ರಾಯ ವನ್ನು ಸಂಪೂರ್ಣವಾಗಿ ಒಪ್ಪಿರುವೆನು. ನಾನು ಇನ್ನೂ ಹೇಳುವುದಾದರೆ ಈ ವಿಷಯದಲ್ಲಿ ಈಗ ದೊರಕಿರುವ ಪ್ರಮಾಣಗಳಷ್ಟೂ ಕೂಡ ಒಂದು ತರಹ ಬುದ್ಧಿಪೂರ್ವಕವಾಗಿಯೇ ತಯಾರಿಸಿ ಇಡಲ್ಪಟ್ಟವುಗಳಾಗಿವೆ.''

ಕೃತಜ್ಞತಾಸೂಚಕ ಸ್ವರದಿಂದ ಗ್ರೇ ಹೇಳಿದನು—''ತಮಗೆ ಧನ್ಯವಾದ ಗಳು. ಹಾಗಾದರೆ ನಾನು ಶೀಘ್ರವಾಗಿಯೇ ಸ್ವತಂತ್ರನಾಗುವೆನಲ್ಲವೇ?''

ಬ್ಲೇಕನು ಹೇಳಿದನು—''ಇದಕ್ಕೂ ಉಚಿತವಾದ ಏರ್ಪಾಡು ಮಾಡ ಬಹುದು; ಆದರೆ ಈ ವಿಷಯದಲ್ಲಿ ನನ್ನ ಸಲಹೆಯನ್ನು ನೀವು ತೆಗೆದುಕೊಳ್ಳ ಲಿಚ್ಛಿಸುವಿರಾದರೆ, ನೀವು ಇನ್ನೂ ಸ್ವಲ್ಪ ಕಾಲ ಇಲ್ಲಿ ಸುಮ್ಮನಿದ್ದುಬಿಡುವುದೇ ಬಹಳ ಒಳ್ಳೆಯದೆಂದು ಹೇಳುತ್ತೇನೆ ಇದೀಗ ನಿಮ್ಮ ಮೇಲೆ ತುಂಬಾ ಅನ್ಯಾಯ ಮಾಡಿದಂತಿರುವದೇನೋ ನಿಜ; ಆದರೆ ನಾನು ಯಾವುದೋ ಒಂದು ವಿಶೇಷವಾದ ಅಭಿಪ್ರಾಯದಿಂದಲೇ ಈ ಮಾತನ್ನು ಹೇಳುತ್ತಿರುವೆ ನೆಂದು ನೀವು ನಂಬಿರಿ.''

ಡಾಕ್ಟರ್ ಗ್ರೇ ಸ್ವಲ್ಪ ರೋಷಪೂರ್ಣವಾದ ದನಿಯಿಂದ ಹೇಳಿದನು— "ನಿರಪರಾಧಿಯಾದೊಬ್ಬ ಮನುಷ್ಯನನ್ನು ಈ ರೀತಿಯಾಗಿ ಜೈಲಿನಲ್ಲಿ ಸೇರಿಸಿ ನಿರ್ಬಂಧಿಸಿಡುವುದರಿಂದ ನಿಮ್ಮ ಯಾವ ಆಶೆಯು ಪೂರ್ಣವಾಗುವುದಿದೆ?"

ಬ್ಲೇಕನು ಬಹಳ ಶಾಂತವಾದ ಸ್ವರದಿಂದ ಉತ್ತರ ಕೊಟ್ಟನು-''ಡಾಕ್ಟರ ಗ್ರೇ! ಇದರ ಕಾರಣವನ್ನು ನಾನು ಈಗಲೇ ತಿಳಿಸುತ್ತೇನೆ; ಆದರೆ ಮೊದಲು ನಿಮ್ಮ ಹತ್ತಿರ ಎರಡು ಮೂರು ಪ್ರಶ್ನೆಗಳನ್ನು ಕೇಳಬೇಕೆಂದು ಇಚ್ಛಿಸಿದ್ದೇನೆ. ಕಳೆದು ಹೋದ ನಿಮ್ಮ ಜೀವನ ಘಟನೆಗಳಲ್ಲಿನ ಎಷ್ಟೋ ಸಂಗತಿಗಳು ನನಗೆ ತಿಳಿದಿವೆ. ಕೆಲವು ದಿನ ನಾನೂ ಕೂಡ ಈ ಡಾಕ್ಟರೀವೃತ್ತಿಯಲ್ಲೇ ಇದ್ದೆನು. ಅದಲ್ಲದೆ ಈಗಲೂ ನನಗೀ ಉದ್ಯೋಗದಲ್ಲಿ ಅಭಿರುಚಿ ಇದೆ. ನೀವು ಕೆಲವು ಕಾಲ ವೆಂಟ್‌ವರ್ತ ಆಸ್ಪತ್ರೆಯಲ್ಲಿ ಡಾಕ್ಟರ್ ವಿನ್ಸೆಂಟ್ ಮೇಡೀನರ ಮೇಲ್ವಿ ಚಾರಣೆಯಲ್ಲಿ ಕೆಲಸ ಮಾಡಿರುವಿರಾಗಿ ತಿಳಿಯಿತು.''

ಗ್ರೇ ಹೇಳಿದನು—''ನಿಜ"

ಬ್ಲೇಕ್:—''ಅದು ನಿಮ್ಮ ಸೌಭಾಗ್ಯದ ಸಂಗತಿಯಾಗಿದೆ. ಡಾಕ್ಟರ್ ಮೇಡೀನರು ನಡೆಸಿರುವ ಕಾರ್ಯಗಳೆಲ್ಲವೂ ಅವರ ಹೆಸರನ್ನು ಡಾಕ್ಟರೀ ಪ್ರಪಂಚ ದಲ್ಲಿ ಅಮರವನ್ನಾಗಿ ಮಾಡುವಂತಹುಗಳಾಗಿವೆ. ಈಗತಾನೇ ಸ್ಕಾಟ್ಲೆಂಡ್ ಯಾರ್ಡಿನಲ್ಲಿ ನನಗೆ ಈ ವಿಷಯವು ತಿಳಿಯಿತು—ಮೇಡೀನರು ಸರ್ ಕಥ ವರ್ಟ್ ನಾವೆಲ್ಸ್ ಸಾಹೇಬರ ರೋಗಕ್ಕೆ ಚಿಕಿತ್ಸೆ ಮಾಡುವರಂತೆ. ಏನೋ

ಒಂದು ಕುತ್ತಿಗೆಯ ರೋಗವಂತೆ. ಮೋಡೀನರು ಇತ್ತೀಚೆಗೆ ಇಲ್ಲಿರುವುದು ಕಥವರ್ಟ್ ನಾವೆಲ್ಲರ ಸೌಭಾಗ್ಯವೆಂದೇ ಹೇಳಬೇಕು. ಆದಿರಲಿ. ನಿಮ್ಮ ಮೇಲೆ ನಡೆಸಿರುವ ಸಂಗತಿಗಳನ್ನು ಈಗ ನಿಮ್ಮ ಬಾಯಿಂದ ನಾನು ಕೇಳಲಿಚ್ಛಿಸುತ್ತೇನೆ. ಜೋನ್ಸ್ ಅಥವಾ ಸೇಜನಿಗೆ ನಿಮ್ಮ ಭೇಟಿಯಾಗಿರುವದಷ್ಟೆ? ಆಗ ಆ ಸಂಬಂಧದಲ್ಲಿ ನಡೆದಿರುವ ಮಾತು-ಕಥೆಗಳೇನು? ಅದಲ್ಲದೆ ನಿಮ್ಮ ದೃಷ್ಟಿಗೆ ನವೀನ ವಿಚಾರವಾವುದಾದರೂ ಬಿದ್ದಿರುವುದೇ? ನಿಮ್ಮ ಮೇಲೆ ಯಾರಿಗಾದರೂ ಗುಪ್ತವೈರವವಿರುವ ಶಂಕೆಯು ನಿಮಗಿರುವುದೇ?"

ಡಾಕ್ಟರ್ ಜೆಫ್ರ್ರೆ ಗ್ರೇ ಸ್ವಲ್ಪ ಶಂಕಿಸಿದನು. ಮನದೊಳಗೇ ಆಲೋಚಿಸತೊಡಗಿದನು—ಮೋಡೀನನ ಮೇಲೆ ತನಗುಂಟಾದ ಸಂಶಯು, ಅಥವಾ ಕಳವಾದ ನೋಟ್‌ಬುಕ್ಕಿನ ಸಂಗತಿಯನ್ನು ಬ್ಲೇಕನಿಗೆ ತಿಳಿಸಲೊ-ಬೇಡವೇ? ಆದರೆ ಬ್ಲೇಕನು ಈಗ ಮೋಡೀನನ ಮೇಲೆ ತನ್ನ ಅಪಾರ ವಿಶ್ವಾಸವನ್ನು ಪ್ರಕಟಿಸಿರುವನು. ಹಾಗಿರಲು ತನ್ನ ಮಾತಿನ ಮೇಲೆ ನಂಬಿಕೆ ಇಡಬಲ್ಲನೇ? ಅದಲ್ಲದೆ ಈ ವಿಚಾರವನ್ನು ಅರಿತ ನಂತರ ಬ್ಲೇಕನ ಮನದೊಳಗೆ ಇನ್ನೇನಾದರೂ ವಿಚಾರವು ಉತ್ಪನ್ನವಾಗಿ ಬಿಟ್ಟರೆ...."

ಬಹಳ ಆಲೋಚಿಸಿದನು. ಸ್ವಲ್ಪ ಕಾಲದವರೆಗೆ ಮೋಡೀನನ ಮೇಲಿರುವ ತನ್ನ ಸಂಶಯುವನ್ನು ಮನಸ್ಸಿನೊಳಗೆ ಬಿಗಿಹಿಡಿದಿಡುವುದೇ ಒಳ್ಳೇದೆಂದು ಗ್ರೇ ನಿಶ್ಚಯ ಮಾಡಿದನು. ಶಂಕಿತಭಾವನೆಯಿಂದ ಬ್ಲೇಕನ ಮಾತಿಗೆ ಉತ್ತರವಿತ್ತನು:—"ಇಲ್ಲ-ಇಲ್ಲ, ನನಗೆ ನೆನಪಿರುವಷ್ಟರಮಟ್ಟಿಗೆ ಹೇಳುವುದಾದರೆ, ನನ್ನ ಮೇಲೆ ಯಾರಿಗೂ ವೈರಭಾವನೆ ಇಲ್ಲ. ಯಾರೊಡನೆಯೂ ನಾನು ನನ್ನ ಶತ್ರುವಾಗುವಂತಹ ಅಥವಾ ಇಂತಹ ಸ್ಥಿತಿಯನ್ನು ತಲೆಯ ಮೇಲೆ ತಂದುಕೊಳ್ಳುವಂತಹ ಯಾವ ವಿಧವಾದ ಕಾರ್ಯವನ್ನೂ ಮಾಡಿಲ್ಲವೆಂದು ನನ್ನ ಅಂತರಂಗವು ದೃಢವಾಗಿ ಹೇಳುತ್ತದೆ."

ಬ್ಲೇಕನ ತೀಕ್ಷ್ಣದೃಷ್ಟಿಯ ಎದುರಿಗೆ ಗ್ರೇ ತನ್ನ ಶಂಕಾಭಾವನೆಯನ್ನು ಅಡಗಿಸಿಕೊಳ್ಳಲಾಗಲಿಲ್ಲ. ಇದರಲ್ಲಿ ಏನೋ ಒಂದು ಇದೆ, ಎಂದು ಬ್ಲೇಕನು ಥಟ್ಟನೆ ಅರಿತು ಬಿಟ್ಟನು; ಆದರೆ ಅದನ್ನೀಗ ಪ್ರಶ್ನಿಸುವುದು ಉಚಿತವಲ್ಲವೆಂದು ಯೋಚಿಸಿ, ಜೋನ್ಸನೊಡನೆ ನಡೆದ ಅವನ ಮೊದಲನೆಯ ಭೇಟಿಯ ವಿಷಯವಾಗಿ ಕೇಳಿದನು:—"ಒಳ್ಳೇದು. ನೀವು ಸ್ಪೈನೋಲಾ ಹೋಟಲಿಗೆ ಆಗಾಗ್ಗೆ ಹೋಗಿ ಬರುತ್ತಿದ್ದಿರಾ?"

ಗ್ರೇ ಹೇಳಿದನು:—"ಹೌದು. ವಾರದಲ್ಲಿ ಕಡಿಮೆಪಕ್ಷ ಮೂರು ಸಾರೆಯಾದರೂ ಊಟಕ್ಕಾಗಿ ನಾನು ಆ ಹೋಟೆಲಿಗೆ ಹೋಗದೆ ಇರುತ್ತಿರಲಿಲ್ಲ.

ನಿರಂತರವಾಗಿ ಎರಡು ವರ್ಷಗಳಿಂದ ನಾನು ಅಲ್ಲಿಗೆ ಹೀಗೆಯೇ ಹೋಗಿ ಬರುತ್ತಿದ್ದೆನು. ಆ ಹೋಟಲಿನ ಊಟದ ಏರ್ಪಾಡು ಬಹಳ ಚೆನ್ನಾಗಿದ್ದುದೇ ಅಲ್ಲಿಗೆ ಹೋಗಲು ಕಾರಣ."

ಬ್ಲೇಕ್—"ಅಲ್ಲಿ ಪ್ರಾಯಶಃ ನೀವು ನಿತ್ಯವೂ ಒಂದೇ ಟೇಬಲಿನಲ್ಲಿ ಊಟ ಮಾಡುತ್ತಿದ್ದಿರಲ್ಲವೇ?"

ಗ್ರೇ—"ಹೌದು."

ಬ್ಲೇಕ್—"ಒಳ್ಳೇದು, ಯಾವ ದಿನ ಜೋನ್ಸನೊಡನೆ ನಿಮ್ಮ ಪ್ರಥಮ ಸಂಭಾಷಣೆಯು ಜರುಗಿತೋ, ಅದಕ್ಕಿಂತ ಮುಂಚೆ ನೀವು ಎಲ್ಲಿಯಾದರೂ ಆತನನ್ನು ನೋಡಿದ್ದಿರಾ?"

ಗ್ರೇ—"ಹೌದು, ಮುಂಚೆಯೂ ಎಷ್ಟೋ ಸಾರಿ ನಾನು ಅವನನ್ನು ನೋಡಿದ್ದೆನು; ಆದರೆ ಸಂಭಾಷಣೆಯು ಮಾತ್ರ ಮುಂಚೆ ಎಂದೂ ಆಗಿರಲಿಲ್ಲ. ಮಂಗಳವಾರ ದಿನ ಸಾಯಂಕಾಲ ಅಲ್ಲಿ ಬಹಳ ಜನಸಂದಣಿಯು ನೆರೆದಿದ್ದಿತು. ಜನಗಳ ಸೌಕರ್ಯಕ್ಕಾಗಿ ಆ ದಿನ ಅಲ್ಲಿ ಎರಡು ಹೆಚ್ಚಿನ ಟೇಬಲ್ಲುಗಳು ಮುಂಚೆಯೇ ಇಡಲ್ಪಟ್ಟಿದ್ದವು. ಹಾಗಾದರೂ ಒಂದೊಂದು ಟೇಬಲ್ಲಿನಲ್ಲಿ ಎಷ್ಟೋ ಜನರು ಒಟ್ಟಿಗೆ ಕುಳಿತುಕೊಳ್ಳಬೇಕಾಗಿದ್ದಿತು. ಸಂದರ್ಭವಶಾತ್ತಾಗಿ ಅಂದು ಅವನು ನನ್ನ ಟೇಬಲಿನಲ್ಲಿಯೇ ಕುಳಿತುಕೊಳ್ಳಬೇಕಾಗಿ ಬಂದಿತು. ಊಟ ಮಾಡುತ್ತಾ ಮಾಡುತ್ತಾ ಆತನು ನನ್ನೊಡನೆ ಮಾತಾಡಲಾರಂಭಿಸಿದನು. ತನ್ನ ವ್ಯಾಪಾರವು ಹೀನಸ್ಥಿತಿಗಿಳಿದಿದೆ ಎಂದೂ ಉಂಗುರ ಮತ್ತು ಇತರ ಎಷ್ಟೋ ಮಾಲುಗಳನ್ನು ವ್ಯಾಪಾರೀ ಭಾವದಿಂದ ತಾನು ಕೊಡುತ್ತೇನೆಂದೂ ಹೇಳಿದನು. ವ್ಯಾಪಾರೀಭಾವದಿಂದ ನಾನು ಕೊಂಡುಕೊಳ್ಳುವಾಗ ಅಂಗಡಿಯಲ್ಲಿ ಕೊಂಡುಕೊಳ್ಳುವ ಕ್ರಯಕ್ಕಿಂತ ಅರ್ಧದಷ್ಟು ಕಡಿಮೆ ಕ್ರಯದಲ್ಲಿಯೇ ಅವನ ಬಳಿಯಲ್ಲಿ ಸಿಗುವಂತಿರುವದನ್ನು ಕಂಡು ನಾನು ಅವನ ಮಾತಿಗೆ ಒಪ್ಪಿದೆನು. ಅವನು ನನ್ನ ಬಿಡಾರಕ್ಕೆ ಬರುತ್ತೇನೆಂದು ಹೇಳಿ ಆ ದಿನ ಎಷ್ಟೋ ತರಹದ ರತ್ನಗಳನ್ನೂ, ಎಷ್ಟೋ ತರಹದ ಉಂಗುರಗಳ ನಮೂನೆಯನ್ನೂ ತಂದು ನನಗೆ ತೋರಿಸಿದನು."

ಬ್ಲೇಕ್—"ಅವನು ತೋರಿಸಿದ ಆ ರತ್ನಗಳೆಲ್ಲವೂ ಬಹಳ ಬೆಲೆ ಬಾಳತಕ್ಕವುಗಳಾಗಿದ್ದವೇನು? ಬಹುಮೂಲ್ಯದ ರತ್ನಗಳನ್ನು ನೋಡಿ ನೀವು ಅವುಗಳನ್ನು ಗುರುತಿಸಬಲ್ಲಿರಾ?"

ಗ್ರೇ—"ನನಗೆ ರತ್ನಗಳ ವಿಷಯದಲ್ಲಿ ಪೂರ್ಣ ಪರಿಚಯವಿಲ್ಲ. ಅವು ಒಳ್ಳೇ ಶುಭ್ರವಾಗಿದ್ದವಲ್ಲದೆ ಹೊಳೆಯುತ್ತಲೂ ಇದ್ದವು. ಉಂಗುರವು ತಯಾ

ರಾಗಿ ಬಂದ ನಂತರ ಅದನ್ನು ಬೇಕಾದರೆ ಅಂಗಡಿಯಲ್ಲಿ ಪರೀಕ್ಷಿಸಬಹುದೆಂದೂ ಹಾಗೆ ಪರೀಕ್ಷಿಸಿದ ನಂತರವೇ ಬೆಲೆಯನ್ನು ಕೊಡಬಹುದೆಂದೂ ಜೋನ್ಸನು ಹೇಳಿದ್ದನು. ಅವನೊಬ್ಬ ನಂಬಿಕೆಗೆ ಯೋಗ್ಯನಾದ ಮನುಷ್ಯನೆಂದೇ ನಾನು ಆಗ ತಿಳಿದೆನು. ಒಂದು ಉಂಗುರವನ್ನು ಕೊಂಡುಕೊಳ್ಳಲು ಇದೊಳ್ಳೆಯ ಸಂದರ್ಭವೊದಗಿದೆ ಎಂದೂ ನಿಶ್ಚೈಸಿದೆನು.''

ಬ್ಲೇಕ್—''ಯಾವಾಗ ಅವನು ನಿಮ್ಮ ಬೀಡಾರಕ್ಕೆ ಬಂದಿದ್ದನೋ, ಆ ಸಮಯದಲ್ಲಿ ದ್ವಾರರಕ್ಷಕನ ದೃಷ್ಟಿಯು ಆ ಮನುಷ್ಯನ ಮೇಲೆ ಬಿದ್ದಿದ್ದಿತೆ?''

ಗ್ರೇ—''ಅದೇನೋ ತಿಳಿಯದು. ಇನ್ನೇನಂದರೆ ನಮ್ಮ ಮನೆಯಲ್ಲಿ ಒಂದು ಅಟೋಮೇಟಿಕ್ ಲಿಫ್ಟ್ ಇದೆ. ಅದನ್ನು ಯಾವ ಅಂತಸ್ತಿನಲ್ಲಿ ಬೇಕಾದರೂ ತಡೆದು ನಿಲ್ಲಿಸಲು ಸಾಧ್ಯವಿದೆ. ಇನ್ನೊಂದು ವಿಚಾರವೇನಂದರೆ ದ್ವಾರ ರಕ್ಷಕನು ಎರಡು ಬಾಗಿಲುಗಳಲ್ಲಿ ತನ್ನ ಕಾರ್ಯ ನಡೆಸಬೇಕಾಗಿ ಬರುತ್ತದೆ. ಹೀಗಿರುವದರಿಂದ ಇಷ್ಟಪಟ್ಟರೆ ಯಾರು ಬೇಕಾದರೂ ಆ ಕಾವಲುಗಾರನ ದೃಷ್ಟಿಗೆ ಬೀಳದೆಯೇ ಕಷ್ಟವಿಲ್ಲದೆ ನನ್ನ ಮನೆಯನ್ನು ಪ್ರವೇಶಿಸಬಲ್ಲರು.''

ಬ್ಲೇಕ್—''ಸರಿ. ಹಾಗಾದರೆ ಯಾರು ಬೇಕಾದರೂ ನಿಮ್ಮ ಕೋಣೆಯೊಳಗೆ ಹೋಗಿ ಯಾವ ವಸ್ತುವನ್ನು ಎಲ್ಲಿಯಾದರೂ ಇಟ್ಟು, ಯಾರ ಕಣ್ಣಿಗೂ ಗೋಚರಿಸದೆಯೇ ಮನೆಯಿಂದ ಹೊರಗೆ ಬರಬಹುದು, ಅಲ್ಲವೇ? ಇರಲಿ. ನಾನೂ ಈಗ ಅಲ್ಲಿಗೆ ಹೋಗುವೆನು. ನೀವೀಗ ಇನ್ನೇನಾದರೂ ಉಪಯೋಗಕರವಾದ ವಿಚಾರಗಳನ್ನು ತಿಳಿಸುವುದಿದೆಯೇ? ಈ ಮೊಕದ್ದಮೆಯನ್ನು ತಕ್ಕ ವ್ಯವಸ್ಥೆಗೊಳಿಸಲನುಕೂಲವಾಗುವಂತಹ ಯಾವುದಾದರೂ ಹೊಸ ಸುದ್ದಿಯನ್ನು ನಿಮ್ಮ ಹೃದಯಬಿಚ್ಚಿ ನನ್ನ ಬಳಿಯಲ್ಲಿ ಹೇಳಲು ನಿಮಗೆ ವಿಶ್ವಾಸವಿರುವುದೇ?''

ಈಗಲೂ ಡಾಕ್ಟರ್ ಗ್ರೇ ಬ್ಲೇಕನ ವಿಷಯದಲ್ಲಿ ಶಂಕಾಭಾವವನ್ನೇ ಇಟ್ಟನು. ಡಾಕ್ಟರ್ ಮೇಡೀನನಂತಹ ಸುಪ್ರಸಿದ್ಧ ಮನುಷ್ಯನು ಪುಂಡರು-ಪೋಕರಿಗಳೊಡನೆ ಸೇರಿರಬಹುದಾದ ತನ್ನ ಸಂಶಯವನ್ನು ಬ್ಲೇಕನ ಹತ್ತಿರ ಪ್ರಕಟಿಸುವದೆಂದರೆ, ಸಾಮಾನ್ಯವಿಷಯವಾಗಿರಲಿಲ್ಲ. ತಟ್ಟನೆ ಯಾರೂ ಆ ಮಾತನ್ನು ನಂಬದಿರುವಂತೆ ಇದ್ದಿತು. ಆದ್ದರಿಂದ ಗ್ರೇ ಈಗಲೂ ಅಸಮ್ಮತಿಸೂಚಕವಾಗಿ ತಲೆಯಾಡಿಸಿ ಹೇಳಿದನು:—''ಇಲ್ಲ. ನಾನು ತಿಳಿದಿರುವಷ್ಟರಮಟ್ಟಿಗೆ ಇನ್ಯಾವ ವಿಚಾರವೂ ಉಳಿಯಲಿಲ್ಲ. ನನ್ನನ್ನು ದಸ್ತಗಿರಿ ಮಾಡಿದ ದಿನದ ರಾತ್ರಿ ಜೋನ್ಸ್ ನನ್ನನ್ನು ಬಂದು ಕಾಣುವ ಮಾತು ನಡೆದಿದ್ದಿತು; ಆದರೆ ಅವನು ಬರುವ ನಿರೀಕ್ಷಣೆಗಿಂತ ಮುಂಚೆಯೇ ಪೋಲೀ

ಸರು ನನ್ನನ್ನು ಸೆರೆ ಹಿಡಿದು ಸ್ಟೇಶನ್ನಿಗೆ ಒಯ್ದರು. ಇರಲಿ. ಈಗಾದರೂ ಹೇಳಿರಿ—ನಾನು ತಿರುಗಿ ಮುಂಚಿನಂತೆ ಸ್ವತಂತ್ರನಾಗುವ ವಿಷಯದಲ್ಲಿ ತಾವೇನು ಹೇಳುವಿರಿ?''

ಬ್ಲೇಕ್:—''ವಿಚಾರವೇನೋ ಹೀಗೆ ಇದೆ. ಯಾವನೋ ಒಬ್ಬನು ನಿಮಗೆ ವಿರುದ್ಧವಾಗಿ ನಿಮ್ಮ ಮೇಲೆ ಮೊಕದ್ದಮೆಯಾಗುವುದಕ್ಕಾಗಿ ಅದಕ್ಕನುಕೂಲವಾಗುವಂತಹ ಕೆಲವು ವಸ್ತುಗಳನ್ನು ನಿಮ್ಮ ಕೋಣೆಯೊಳಗೆ ನೀವಿಲ್ಲದಿದ್ದಾಗ ತಂದು ಮುಚ್ಚಿಟ್ಟಿದ್ದನು. ಈ ಕಾರ್ಯವನ್ನು ಅತನು ಕೇವಲ ಹಾಸ್ಯಕ್ಕಾಗಿ ಮಾಡಿದುದಲ್ಲ. ನಿಶ್ಚಯವಾಗಿಯೂ ಅದರಲ್ಲಿ ಒಂದು ವಿಶೇಷವಾದ ಅಭಿಪ್ರಾಯವಿದೆ. ಎಂತಹುದೆಂಬ ವಿಚಾರದಲ್ಲಿ ನಾನು ಈಗಲೇ ಏನನ್ನೂ ಹೇಳಲಾರೆನು. ನಿಮ್ಮ ಮೇಲಿನ ಯಾವುದೋ ಒಂದು ಸೇಡನ್ನು ತೀರಿಸಿಕೊಳ್ಳುವದಕ್ಕಾಗಿಯೇ ಆ ಮನುಷ್ಯನು ಇಂತಹ ಭೀಷಣ ಸಾಹಸದಲ್ಲಿ ತೊಡಗಿರುವ ಸಂಭವವಿದೆ; ಆದರೆ ನೀವು ಹೇಳುತ್ತೀರಿ, ಈ ಪ್ರಪಂಚದಲ್ಲಿ ನನಗೆ ಶತ್ರುವೇ ಇಲ್ಲವೆಂದು! ತನ್ನ ದಾರಿಯಿಂದ ನಿಮ್ಮನ್ನು ದೂರವಿರಿಸುವದಕ್ಕಾಗಿಯೇ ಅವನು ಈ ಕೆಲವನ್ನು ನಡೆಸಿರಬಹುದಾಗಿದೆ. ನೀವು ಆಸ್ಪತ್ರೆ ಮತ್ತು ಮನೆ ಇವೆರಡು ಕಡೆಯಲ್ಲಿಯೂ ಇರಬಾರದೆಂದು ಆ ಮನುಷ್ಯನ ಇಚ್ಛೆ ಇರಬಹುದು. ಇರಲಿ. ನಿಮ್ಮ ವೆಂಟ್‌ವರ್ತ್ ಆಸ್ಪತ್ರೆಯಲ್ಲಿ ರೇಡಿಯಮ್ ತಕ್ಕಷ್ಟು ಪರಿಮಾಣದಲ್ಲಿರುವುದಷ್ಟೆ? ಅದೆಂತಹ ಬಹು ಮೂಲ್ಯವಾದ ಪದಾರ್ಥವೆಂಬದನ್ನು ನೀವೂ ಅರಿತಿರಬಹುದು. ಅದರ ರಕ್ಷಣೆಯ ಭಾರವು ಯಾರ ಮೇಲಿದೆ?"

ಗ್ರೇ—''ನನಗೆ ತಿಳಿದಿರುವಷ್ಟರ ಮಟ್ಟಿಗೆ ಹೇಳುವುದಾದರೆ ಡಾಕ್ಟರ್ ಸ್ಟೆಂಟನರ ಮೇಲೆಯೆ ಆ ಭಾರವಿರುವದು. ಅವರೇ ಆಸ್ಪತ್ರೆಯ ಉನ್ನತ ಪದಾಧಿಕಾರಿಗಳಿರುವರು; ಆದರೆ ನಾನೇ ಚೆಕ್ ಮಾಡುತ್ತಿದ್ದೆನು. ಅದಲ್ಲದೆ ಅದರ ದೊಡ್ಡ ಭಾಗವು ಅಂದರೆ ದೊಡ್ಡ ಬ್ಯಾಟರಿಯು ಖಜಾನೆಪೆಟ್ಟಿಗೆಯೊಳಗೇ ಇರುತ್ತದೆ. ನಾನೇ ಅದನ್ನು ನನ್ನ ಕೈಯಿಂದ ಅದರೊಳಗೆ ಇಟ್ಟು ಬೀಗದ ಕೈಯನ್ನು ಡಾಕ್ಟರ್ ಸ್ಟೆಂಟನರ ಕೈಗೆ ಕೊಡುತ್ತಿದ್ದೆನು. ಅಲ್ಲಿಂದ ಅದು ಯಾವ ವಿಧದಿಂದ ಕದಿಯಲ್ಪಡಲು ಸಾಧ್ಯವಿದೆ? ಅದಲ್ಲದೆ ರೇಡಿಯಮ್ಮಿನಿಂದ ಕಳ್ಳರಿಗೆ ಯಾವ ಪ್ರಯೋಜನವೂ ಆಗದು."

ಬ್ಲೇಕ್:—ಅದನ್ನು ಯಾರಾದರೂ ಕದಿಯುತ್ತಾರೆಂದು ನನ್ನ ಅಭಿಪ್ರಾಯವಲ್ಲ; ಹಾಗು ಅದನ್ನು ಅಲ್ಲಿಂದ ಎತ್ತಿಕೊಂಡೊಯ್ಯುವದೂ ಕೂಡ ಸಾಮಾನ್ಯವಾದ ಕೆಲಸವಲ್ಲ.''

ಗ್ರೇ:—"ಯಾವ ಪೆಟ್ಟಿಗೆಯಲ್ಲಿ ಅದು ಮುಚ್ಚಲ್ಪಟ್ಟಿರುವದೊ, ಆ ತವರದ ಪೆಟ್ಟಿಗೆಯು ತೂಕದಲ್ಲಿ ಐವತ್ತು ಪೌಂಡಿಗಿಂತ ಯಾವ ಸ್ಥಿತಿಯಲ್ಲಿಯೂ ಕಡಿಮೆಯಾಗಲಾರದು. ಅದಲ್ಲದೆ ಅದನ್ನು ಸುಲಭವಾಗಿ ಎಲ್ಲಿಯೂ ಮುಚ್ಚಿಡುವದಕ್ಕೆ ಸಾಧ್ಯವಿಲ್ಲ. ಅದನ್ನು ದೇಶದಿಂದ ಹೊರಗೊಯ್ಯುವದೂ ಸಹಜವಾದ ಕಾರ್ಯವಲ್ಲ. ಒಳ್ಳೇದು. ನನ್ನ ಸ್ವಾತಂತ್ರ್ಯದ ವಿಷಯದಲ್ಲಿ ನೀವೇನು ಹೇಳುವಿರಿ?"

ಬ್ಲೇಕ್:—"ನೀವಿನ್ನೂ ಕಡಿಮೆಪಕ್ಷ ಕೆಲವು ಕಾಲವಾದರೂ ಇಲ್ಲಿರುವುದೇ ಹೆಚ್ಚು ಒಳ್ಳೆಯದೆಂದು ನಾನು ಹೇಳುತ್ತೇನೆ. ಕೆಲವು ಜನ ಪುಂಡರು ನಿಮ್ಮನ್ನು ಜೈಲಿಗೆ ಕಳುಹಿಸಲು ಚೇಷ್ಟೆಗೈದಿರುವರು. ನೀವು ಇಲ್ಲಿರುವ ವರೆಗೆ ಅವರು ತಮ್ಮ ಇಷ್ಟಕಾರ್ಯವನ್ನು ನಿಶ್ಚಿಂತೆಯಿಂದ ಪೂರ್ಣಮಾಡಿಕೊಳ್ಳಲು ಪ್ರಯತ್ನಿಸುವರು. ಅಷ್ಟರೊಳಗೇ ನಿಮ್ಮ ಬಿಡುಗಡೆಯಾದರೆ ಅವರು ಕೂಡಲೆ ತಮ್ಮ ಕಾರ್ಯಕ್ರಮವನ್ನು ಬದಲಾಯಿಸಿಬಿಡಬಹುದು; ಅಥವಾ ನಿಲ್ಲಿಸಲೂ ಬಹುದು. ಹಾಗಾಗಿಬಿಟ್ಟಿತೆಂದರೆ, ಅಂತಹ ಪುಂಡಾಟವನ್ನು ಕಂಡುಹಿಡಿಯಲು ಮಾಡಿಕೊಂಡ ನಮ್ಮ ಪ್ರಯತ್ನವೆಲ್ಲವೂ ಒಂದೇಸಾರಿಗೆ ಬುಡಮುಟ್ಟ ನಾಶವಾಗುವುದು. ಕಡಿಮೆಪಕ್ಷ ನೀವು ಆಸ್ಪತ್ರೆಯಿಂದಾದರೂ ಸ್ವಲ್ಪ ದಿನಗಳ ವರೆಗೆ ದೂರವಿರುವದು ಸರ್ವವಿಧದಿಂದಲೂ ಒಳ್ಳೆಯದೆಂದು ನಮ್ಮ ಭಾವನೆ. ನಿಮ್ಮ ಬಿಡುಗಡೆಗೆ ತಕ್ಕ ಏರ್ಪಾಡು ಮಾಡುವದೇನೂ ನನಗೆ ಕಷ್ಟವಿಲ್ಲ; ಆದರೂ ಕೂಡ ನೀವಿನ್ನೂ ಕೆಲ ಕಾಲದ ವರೆಗೆ ಸ್ವಲ್ಪ ದೂರಿರುವುದೇ ಒಳ್ಳೆಯದೆಂದು ನಿಮಗೆ ನಾನು ಸಲಹೆ ಕೊಡುತ್ತೇನೆ. ಇನ್ನೊಂದು ವಿಚಾರವೇನೆಂದರೆ, ನಾನು ಆ ನಿಮ್ಮ ಯುವತಿಯೊಂದಿಗೂ ಸ್ವಲ್ಪ ಮಾತನಾಡಲಿಚ್ಛಿಸುತ್ತೇನೆ."

ಸ್ವಲ್ಪ ರೋಷಪೂರ್ಣಸ್ವರದಿಂದ ಗ್ರೇ ಹೇಳಿದನು;—"ನನ್ನ ಈ ವ್ಯವಹಾರದಲ್ಲಿ ಯಾವ ಯುವತಿಯ ಸಂಪರ್ಕವೂ ಇರುವುದಿಲ್ಲ."

ಗ್ರೇ ಹೇಳುವದಕ್ಕೇನೋ ಆ ಮಾತನ್ನು ಹೇಳಿಬಿಟ್ಟನು; ಆದರೆ ಅವನಿಗೆ ಥಟ್ಟನೆ ನೆನಪಾಯಿತು—ಹಾರ್ಕರನೆದುರಿಗೆ ಈ ಮಾತನ್ನು ತಾನೇ ಮುಂಚೆ ಹೇಳಿಬಿಟ್ಟಿದ್ದೆನೆಂದು. ಆದ್ದರಿಂದ ಆತನು ಥಟ್ಟನೆ ಮಾತನ್ನು ತಿರುಗಿಸಿ ಹೇಳಿದನು:—"ಇಂತಹ ಮೊಕದ್ದಮೆಯಲ್ಲಿ ನಾನು ಮಿಸ್ ಎಂಡರ್ಬಿಯನ್ನೂ ಸೆಳೆದುಕೊಳ್ಳಲಾರೆನು."

ಬ್ಲೇಕನು ಸ್ವಲ್ಪ ಕಠಿಣವಾಗಿ ಹೇಳಿದನು:—"ಮಿಸ್ಟರ್ ಗ್ರೇ! ಇಚ್ಛೆ ಇದ್ದರೂ ಕೂಡ ಕೂಡಲೆ ಸಹಾಯವನ್ನೊದಗಿಸಿ ಕೊಡಲಾರದಂತಹ ಒಂದು

ವಿಧದ ಮನುಷ್ಯರಿದ್ದೀರಿ ನೀವು. ಇರಲಿ. ಮಿಸ್ ಎಂಡರ್ಬಿಯು ವೆಂಟ್‌ವರ್ತ್ ಆಸ್ಪತ್ರೆಯಲ್ಲೇ ಕೆಲಸಮಾಡುತ್ತಿರುವಳಷ್ಟೆ?''

ಗ್ರೇ—ಹೌದು, ಅಲ್ಲಿ ಅವಳೊಬ್ಬ ನರ್ಸ್; ಆದರೆ ದಯವಿಟ್ಟು ನೀವು ಆಕೆಯನ್ನು ಪೀಡಿಸಬೇಡಿರಿ. ನಮ್ಮಿಬ್ಬರಿಗೆ ಮದುವೆ ನಿಶ್ಚಯವಾಗಿದೆ. ಈ ಸುದ್ದಿಯನ್ನು ಒಂದು ರೀತಿಯಾಗಿ ನಾನು ಗುಟ್ಟಾಗಿಯೇ ಇಟ್ಟಿರುವೆನು; ಯಾಕೆಂದರೆ, ಡಾಕ್ಟರ್ ಸ್ಟೆಂಟನರು ಇಂತಹ ವಿಚಾರಗಳನ್ನು ಸರ್ವಥಾ ಒಪ್ಪುವದಿಲ್ಲ."

ಬ್ಲೇಕ್:—''ನಾನೂ ಕೂಡ ನಿಮ್ಮ ಈ ವಿಷಯವನ್ನು ಗುಟ್ಟಾಗಿಯೇ ಇಟ್ಟಿರಲು ಪ್ರಯತ್ನಿಸುತ್ತೇನೆ. ಹೇಗಾದರೂ ಮಾಡಿ ನಿಮ್ಮ ಈ ಮೊಕದ್ದಮೆಯ ಒಳಗುಟ್ಟನ್ನು ಹೊರಪಡಿಸಲು ದೃಢನಿಶ್ಚಯ ಮಾಡಿರುವೆನು. ಮಿಸ್ ಎಂಡರ್ಬೀಯು ಬಳಿಯಲ್ಲಿಯೂ ಈ ವಿಷಯವಾಗಿ ಸ್ವಲ್ಪ ಚರ್ಚಿಸುವದಿದೆ. ಒಳ್ಳೇದು. ಈಗ ನಾನು ನಿಮ್ಮ ಬಿಡಾರಕ್ಕೆ ಹೋಗುವೆನು."

ಗ್ರೇ:—"ಅಲ್ಲಿಗೇಕೆ?''

ಬ್ಲೇಕ್:—''ಯಾಕೆಂದರೆ, ನನಗೇನಾದರೂ ಅಲ್ಲಿ ಹೊಸ ವಿಷಯವು ದೊರೆಯಬಹುದೆಂದು ವಿಶ್ವಾಸವಿದೆ. ಈ ವಿಚಾರದಲ್ಲಿ ನೀವೀಗ ಸಂತೋಷದಿಂದ ಇರ್ರಿ. ಇನ್ನೊಂದು ಸಾರೆ ನಾನು ನಿಮ್ಮ ಬಳಿಗೆ ಬಂದಾಗ ನೀವು ನನ್ನನ್ನು ಈಗಿಗಿಂತ ಹೆಚ್ಚಿಗೆ ವಿಶ್ವಾಸಪಾತ್ರನೆಂದು ಅರಿಯದೆ ಇರಲಾರಿರಿ."

ಇಷ್ಟು ಮಾತನ್ನು ಹೇಳಿ ಬ್ಲೇಕನು ಅಲ್ಲಿಯೇ ಸ್ವಲ್ಪಹೊತ್ತು ನಿಂತನು. ಆದರೂ ಗ್ರೇ ಅವನ ಮಾತಿಗೆ ಉತ್ತರವೀಯಲು ಉದ್ಯುಕ್ತನಾಗುವಂತೆ ಕಾಣಿಸಲಿಲ್ಲ. ಅನಂತರ ಬ್ಲೇಕನು ಅಲ್ಲಿಂದ ಹೊರಟನು.

''ಈ ಮುತ್ಠಾಳ ಮನುಷ್ಯನು ನಿಶ್ಚಯವಾಗಿಯೂ ಕೆಲವು ಮುಖ್ಯ ಸಂಗತಿಯನ್ನು ಅಡಗಿಸಿಟ್ಟಿರುವನು. ಆ ಸಂಗತಿಯು ಪ್ರಕೃತ ವಿಷಯಕ್ಕೆ ಪ್ರಯೋಜನದ್ದಿರಲಾರದು; ಅಥವಾ ಪ್ರಯೋಜನದ್ದೂ ಇರಬಹುದು. ಏನಾದರೂ ಇರಲಿ. ಇನ್ನೂ ಕೆಲ ಕಾಲದ ವರೆಗೆ ಇವನು ಜೈಲಿನಲ್ಲಿ ಉಳಿತಿರುವುದೇ ಯೋಗ್ಯವಾಗಿದೆ." ಹೀಗೆ ಮನದಲ್ಲಿ ಆಲೋಚಿಸುತ್ತಾ ಬ್ಲೇಕನು ಅಲ್ಲಿಂದ ಫೆನ್ ಸ್ಟೋನ್ ಮೆನ್ಶನ್ನಿನ ಕಡೆಗೆ ಹೊರಟು ಹೋದನು.

ಅಲ್ಲಿ ಬ್ಲೇಕನು ಕಾವಲುಗಾರನ ದೃಷ್ಟಿಗೆ ಬೀಳದೆ ಮೆಲ್ಲಮೆಲ್ಲನೆ ಆ ಕಟ್ಟಡದೊಳಗೆ ಪ್ರವೇಶಿಸಿದನು. ಇನ್ಸ್ಪೆಕ್ಟರ್ ಹಾರ್ಕರನು ಕೊಟ್ಟಿದ್ದ ಬೀಗದ ಕೈಯಿಂದ ಡಾಕ್ಟರ್ ಗ್ರೇಯ ಕೋಣೆಯ ಬಾಗಿಲನ್ನು ತೆರೆದು ಒಳಹೊಕ್ಕನು. ಎಲ್ಲಕ್ಕಿಂತ ಮುಂಚೆ ಬ್ಲೇಕನು ಗ್ರೇಯ ಟೇಬಲ್ಲಿನ ಹತ್ತಿರವೇ ಹೋದನು.

ಅಲ್ಲಿ ಇದ್ದ ಮಶೀದೌತಿಯ ಶಾಯಿಯನ್ನು ತೆಗೆದುಕೊಂಡು ಒಂದು ಕಾಗದದ ತುಂಡಿನ ಮೇಲೆ ಬರೆದನು; ಹಾಗು ಅಕ್ಷರಗಳ ಮೇಲೆ ಬ್ಲಾಟಿಂಗ್ ಪೇಪರನ್ನು ಇಡದೆ, ಅವು ತಾವಾಗಿಯೇ ಒಣಗಿ ಹೋಗಲು ಅವಕಾಶಕೊಟ್ಟನು. ಯಾವುದರ ಮೇಲೆ ಗ್ರೇಯು ಬೆರಳ ಹೆಸರಿಗೆ ಕಾಗದ ಬರೆಯಲ್ಪಟ್ಟಿದ್ದಿತೋ ಅದಕ್ಕೂ, ಈ ಕಾಗದದ ತುಂಡಿನ ಮೇಲೆ ಬರೆದಿರುವ ಅಕ್ಷರದ ಶಾಯಿಗೂ ಹೋಲಿಸಿ ನೋಡಿದ ಮೇಲೆ ಬ್ಲೇಕನು ಒಂದು ಸಾರಿ ನಸುನಕ್ಕನು.

ಗ್ರೇಯು ಶಾಯಿಯು ಬಹಳ ಕಪ್ಪಾಗಿದ್ದಿತಲ್ಲದೆ ಒಣಗಿದ ನಂತರ ಸ್ವಲ್ಪ ಹೊಳೆಯುತ್ತಿದ್ದಿತು. ಅದು ಸಾಧಾರಣ ಶಾಯಿಯಂತೆ ಇರಲಿಲ್ಲ. ಸಾಧಾರಣವಾದ ಶಾಯಿಗೆ ದ್ರಾವಕದ ಹೊಗೆ ತಗಲಿದರೆ ಅದರಲ್ಲಿ ಒಂದು ವಿಧದ ಬದಲಾವಣೆಯಾಗುವದು; ಆದರೆ ಈ ಶಾಯಿಗೆ ಹೊಗೆಯನ್ನು ತಗಲಿಸಿದರೂ ಯಾವ ತರಹದ ಬದಲಾವಣೆಯಾಗಲಿಲ್ಲ.

ಆ ಕಾಗದದ ಮೇಲೆ ಬರೆದ ಶಾಯಿಯಲ್ಲಿಯೂ ಈ ವಿಶೇಷವೇ ಇದ್ದಿತು. ಇರಲಿ. ಆ ಕಾಗದವು ಆ ಶಾಯಿಯಿಂದಲೇ ಆ ಕೋಣೆಯಲ್ಲಿಯೇ ಬರೆಯಲ್ಪಟ್ಟಿದೆ ಎಂಬ ವಿಚಾರದಲ್ಲಿ ಬ್ಲೇಕನಿಗೆ ಈಗ ಇನ್ನಾವ ಸಂಶಯವೂ ಇರಲಿಲ್ಲ.

ಬ್ಲೇಕನು ಮನದೊಳಗೇ ಹೇಳಿಕೊಂಡನು—"ಗ್ರೇಯ ಪಕ್ಷದಲ್ಲಿ ಈ ಪ್ರಮಾಣವು ಕೆಟ್ಟದ್ದಲ್ಲ. ಈ ತರಹದಲ್ಲಿ ಕಾಗದ ಬರೆಯತಕ್ಕ ಯಾರಾದರೂ ಆ ಮನುಷ್ಯನ ಮನೆಗೇ ಬಂದು ಹೀಗೆ ಬರೆಯಬಲ್ಲರೆಂಬ ವಿಷಯವು ಸಾಮಾನ್ಯ ಬುದ್ಧಿಯ ಯಾವ ಜೂರಿಯ ಮೆದುಳಿನಲ್ಲಿಯೂ ಬರಲಾರದು. ಎದುರಿಗೆ ಬಂದಾಗ ಏನಾದರೂ ಹೇಳಿ ಬಿಡಬಹುದು; ಆ ಮನುಷ್ಯನ ಹತ್ತಿರವೂ ಇಂತಹ ಶಾಯಿಯೇ ಇರಬಹುದಾದ ಸಂಭವವೊಂದಿದೆ; ಆದರೆ ಇಂತಹ ಸಂಭವವು ಬಹಳ ಕಡಿಮೆಯೇ ಸರಿ."

ಬಳಿಕ ಬ್ಲೇಕನು ಗ್ರೇಯು ಮಲಗುವ ಕೋಣೆಯೊಳಗೆ ಕಾಲಿಟ್ಟನು. ಡ್ರಾ ಇರುವ ಬೀರುವನ್ನು ಎವೆಯಿಕ್ಕದೆ ನೋಡತೊಡಗಿದನು. ಆ ಬೀರುವಿನ ಹಿಂಭಾಗದಲ್ಲಿಯೇ ಕಳವಿನ ಮಾಲನ್ನಿಟ್ಟದ್ದ ರಂಧ್ರವಿರುವುದೆಂದು ಕೇಳಿದ್ದನು; ಆದರೆ ಈ ಸಂಗತಿಯಲ್ಲಿ ಬ್ಲೇಕನಿಗೇನೂ ಅಭಿರುಚಿ ಇರಲಿಲ್ಲ. ಯಾಕಂದರೆ ಸಾರ್ಜಂಟ್ ಬ್ರೌನನು ಮುಂಚೆಯೇ ಬಹಳ ಚೆನ್ನಾಗಿ ಅದನ್ನು ಪರೀಕ್ಷಿಸಿರಬಹುದೆಂದು ನಿಶ್ಚಯಿಸಿದ್ದನು.

ಡ್ರೆಸ್ಸಿಂಗ ಚೆಸ್ಟಿನ ಹೊಳೆಯುವ ಮೇಲ್ಮೈ ಬ್ಲೇಕನ ಲಕ್ಷ್ಯವನ್ನು ತನ್ನ ಕಡೆಗೆ ಎಳಕೊಂಡಿತು. ಬೂದು-ಹಸರು ಬಣ್ಣದ ಕೋಲಿನ ಮೇಲೆ

ಹತ್ತಿರುವ ಮೇಣದ ವಾರ್ನಿಷ್ ಬೆರಳುಗಳಗು ತನ್ನ ಬೀಳಿಸಿಕೊಳ್ಳಲು ಬಹಳ ಉಪಯುಕ್ತವಾಗಿದ್ದಿತು. ಅದನ್ನು ಚೆನ್ನಾಗಿ ಪರೀಕ್ಷಿಸುವದರಲ್ಲಿ ಬ್ಲೇಕನು ಸ್ವಲ್ಪವೂ ಉದಾಸೀನನಾಗಲಿಲ್ಲ. ಪೆನ್ಸಿಲಿನ ಸೀಸವನ್ನು ಚೆನ್ನಾಗಿ ನಯ ಮಾಡಿ ಅದನ್ನು ಹತ್ತಿಯ ಲಘುವಾದ ಮೆತ್ತನೆಯ ಮೂಲಕವಾಗಿ ಅದರ ಮೇಲೆ ಎರಚಿದನು. ಒಡನೆಯೇ ಅದರಲ್ಲಿ ಬೆರಳುಗಳ ಕೆಲವು ಗುರುತುಗಳು ಎದ್ದು ಕಾಣಿಸಿದುವು!

ಅವುಗಳಲ್ಲಿಯ ಹಲವು ಗುರುತುಗಳು ಸಾರ್ಜಂಟ್ ಬ್ರೌನನವೆಂದೂ ಕೆಲವು ಗ್ರೇಯುನವೆಂದೂ ಬ್ಲೇಕನು ನಿಶ್ಚಯಿಸಿದನು; ಆದರೆ ಇವಲ್ಲದೆ ಅದರ ಮೇಲೆ ದಪ್ಪವಾಗಿಯೂ, ಅಗಲವಾಗಿಯೂ ಇರುವ ಬೆರಳಿನವೂ ಕೆಲವು ಗುರುತುಗಳು ಬಿದ್ದಿದ್ದವು. ಆಗ ಬ್ಲೇಕನು ಮನದೊಳಗೇ ಹೇಳಿಕೊಂಡನು:-"ನಿಶ್ಚಯುವಾಗಿಯೂ ಈ ಗುರುತುಗಳು ಸೇಜ್ ಅಥವಾ ಗೋಡೆಯಲ್ಲಿ ತೂತು ಕೊರೆದ ಮನುಷ್ಯನದ್ದೇ ಇರುವವು. ಅವನು ಆ ಸಮಯುದಲ್ಲಿ ಕೈ ಚೀಲವನ್ನು ಉಪಯೋಗಿಸಿರಲಿಲ್ಲ. ಈ ವಿಷಯುದಲ್ಲಿ ಆ ಮನುಷ್ಯನು ಸ್ವಲ್ಪ ಅಲಕ್ಷ್ಯತನವನ್ನು ತೋರಿಸಿರುವನು."

ಕೂಡಲೆ ಫೋನಿನ ಬಳಿಗೆ ಹೋಗಿ ಇನ್ಸ್ಪೆಕ್ಟರ ಹಾರ್ಕರನಿಗೆ ತಿಳಿಸಿದನು: —"ಮಿಸ್ಟರ ಹಾರ್ಕರ್! ನೀವು ಸ್ವಲ್ಪ ತಪ್ಪುವಿರಿ. ಡ್ರೆಸಿಂಗ ಟೇಬಲ್ಲಿನ ಮೇಲೆ ಕೆಲವು ಬೆರಳ ಗುರುತುಗಳು ಬಿದ್ದಿರುವವು. ಸೇಜನ ಬೆರಳಚ್ಚನ್ನು ತೆಗೆದುಕೊಂಡು ಒಬ್ಬ ವಿಶೇಷಜ್ಞನೊಡನೆ ಕೂಡಲೆ ಇಲ್ಲಿಗೆ ಬನ್ನಿರಿ. ಟೇಬಲ್ಲಿನ ಮೇಲೆ ಬಿದ್ದಿರುವ ಕೆಲವು ಗುರುತುಗಳು ಸೇಜನ ಬೆರಳಚ್ಚಿಗೆ ಸರಿಹೋಲುವವೆಂದು ನನ್ನ ಅಭಿಪ್ರಾಯುವಿದೆ. ಇನ್ನು ಮುಕ್ಕಾಲು ಗಂಟೆಯಲ್ಲಿ ನಾನು ಇಲ್ಲಿಯೇ ನಿಮಗ ಸಿಗುವೆನು.

o o o o o

ದೃಢವಿಶ್ವಾಸದಿಂದ ಇನ್ಸ್ಪೆಕ್ಟರ ಹಾರ್ಕರನು ಹೇಳಿದನು:—"ಹೌದು-ಹೌದು. ಈ ಗುರುತುಗಳು ಸೇಜನ ಬೆರಳಿನವೇ, ಇವು ಸಾರ್ಜಂಟ್ ಬ್ರೌನನವು, ಇವು ಗ್ರೇಯುನ ಬೆರಳನವು. ನಿಜ. ಇದರಿಂದ ಈಗ ಹೀಗೂ ಒಪ್ಪಬಹುದಾಗಿದೆ—ಆ ರಂಧ್ರವನ್ನು ಕೊರೆಯುವ ಕಾರ್ಯದಲ್ಲಿ ಸೇಜನು ಡಾಕ್ಟರ್ ಗ್ರೇಗೆ ಸಹಾಯ ಮಾಡಿರುವನು."

ವ್ಯಂಗ್ಯವಾಗಿ ನಸುನಗುತ್ತ ಬ್ಲೇಕ್ ಹೇಳಿದನು:—"ಮತ್ತು ಆ ಸೇಜನೇ ಗ್ರೇ ಇರುವಾಗ, ಗ್ರೇನ ಶಾಯಿಯಿಂದಲೇ ಗ್ರೇಗೇ ಆ ಕಾಗದವನ್ನು ಬರೆದು, ಮುತ್ತಾಳನಿಗಿಂತಲೂ ಹೆಚ್ಚು ಮುತ್ತಾಳನಾದ ಯಾವ ಪತ್ತೆದಾರ

ಯ ದೃಷ್ಟಿಯೂ ಬೀಳಬಹುದಾದ ಒಂದು ಸ್ಥಾನದಲ್ಲಿ ಅದನ್ನು ಇಟ್ಟನು, ಅಲ್ಲವೇ? ನೋಡಿರಿ. ಲಕ್ಷ್ಯವಿಟ್ಟು ನೆತೇಡಿರಿ. ಬೇಕಾದರೆ ಇದನ್ನು ಪ್ರಮಾಣಗಳ ಪಟ್ಟಿಯಲ್ಲಿ ಬರೆದುಕೊಳ್ಳಿರಿ."

ಈ ವ್ಯಂಗ್ಯವಾದ ವಚನದಿಂದ ಹಾರ್ಕರನು ಠಟ್ಟನೆ ನೆಲಕ್ಕೆ ಕುಸಿದು ಕುಳಿತನು. ನಾಚಿಕೆಯಿಂದ ಮುಖವು ಚಿಕ್ಕದಾಯಿತು. ಶಾಯಿಯ ಈ ಸೂತ್ರದ ಕಡೆಗೆ ಲಕ್ಷ್ಯವಿಡದೆ ಇದ್ದ ತನ್ನ ತಪ್ಪಿನ ಮೇಲೆ ಹಾರ್ಕರನಿಗೆ ಬಹಳ ಪಶ್ಚಾತ್ತಾಪವಾಯಿತು. ಯಾಕಂದರೆ, ಈ ಸೂತ್ರವು ಎಂಥ ಬೆಲೆಯುಳ್ಳದ್ದೆಂಬದು ಅವನಿಗೆ ತಿಳಿಯದೇ ಇರಲಿಲ್ಲ.

ಪಶ್ಚಾತ್ತಾಪದ ಸ್ವರದಿಂದ ಹಾರ್ಕರನು ಹೇಳಿದನು:—"ಅವಶ್ಯವಾಗಿಯೂ ಈ ಸೂತ್ರವು ಗ್ರೇಯ ಪಕ್ಷವನ್ನು ಬಲವಾಗಿ ಸಮರ್ಥಿಸುತ್ತದೆ; ಸೇಜನಿಗಾದರೋ ಇದು ವಿರುದ್ಧವಾಗುತ್ತದೆ."

ಬ್ಲೇಕ್:—"ಅವನ ಪಕ್ಷದವಾದರೂ ಇನ್ನಾವ ಸೂತ್ರಗಳು ನಿಮಗೆ ದೊರಕಿವೆ? ನನಗಾದರೋ ಈ ವ್ಯವಹಾರ ಮತ್ತು ಶೀಡ್ಮನ್ನನ ವ್ಯವಹಾರ ಇವೆರಡರಲ್ಲಿಯೂ ಏನೋ ಒಂದು ವಿಧವಾದ ಸಂಬಂಧವಿರುವುದೆಂದು ಕಾಣಿಸುತ್ತದೆ. ಒಂದೇ ಮೆದುಳೇ ಈ ಎರಡೂ ಘಟನೆಗಳನ್ನು ನಿರ್ಮಿಸಿದೆ; ಆದರೆ ಅವುಗಳನ್ನು ಕಾರ್ಯರೂಪದಲ್ಲಿ ಪರಿಣಾಮಗೊಳಿಸುವ ಕಾರ್ಯದಲ್ಲಿ ಮಾತ್ರ ಅಯೋಗ್ಯ ಶಿಷ್ಯರನ್ನು ನೇಮಿಸಿದೆ, ಎಂದು ನಾನು ಊಹಿಸುತ್ತೇನೆ ನಿಶ್ಚಯವಾಗಿಯೂ ಇವುಗಳು ಒಂದೇ ಫಿತೂರಿಯ ಎರಡು ಬೇರೆ ಬೇರೆ ಭಾಗಗಳಿರುವುವು. ಹಾಗಿದ್ದಾಗ್ಯೂ ಇವುಗಳೊಳಗೆ ಅಡಗಿರುವ ಭೀಷಣ ಸಾಹಸವು ಯಾವ ತರಹದ್ದಿರುವುದೆಂಬದು ಇದುವರೆಗೂ ನನ್ನ ಬುದ್ಧಿಗೆ ನಿಲುಕಿರುವುದಿಲ್ಲ."

ಹಾರ್ಕರನು ಹೇಳಿದನು:—"ಈ ಎರಡು ಘಟನೆಗಳಲ್ಲಿ ಪರಸ್ಪರವಾಗಿ ಯಾವ ತರಹದ ಸಂಬಂಧವಿದೆ? ಎರಡೂ ಘಟನೆಗಳಲ್ಲಿ ದೊರಕಿರುವ ಬೆರಳ ಗುರುತುಗಳು ಕಪಟದ್ದಿರುವುವೆಂದು ಹೇಳುವ ನಿಮ್ಮ ಮಾತಿನ ಅಭಿಪ್ರಾಯವೇನು?"

ಬ್ಲೇಕನು ವ್ಯಂಗ್ಯವಾಗಿ ಉತ್ತರವಿತ್ತನು:—"ಮಿಸ್ಟರ್ ಹಾರ್ಕರ್! ಒಂದೊಂದು ವೇಳೆ ನೀವು ನಿಮ್ಮ ಮೆದುಳನ್ನೂ ಖರ್ಚು ಮಾಡಿ ಕೆಲಸ ಮಾಡಬೇಕಾಗಿ ಬರುವುದು. ಇಗೋ ಲಕ್ಷ್ಯವಿಟ್ಟು ನೋಡಿರಿ."

ಹೀಗೆ ಹೇಳಿ, ಬ್ಲೇಕನು ಪೆನ್ಸಿಲ್ಲಿನ ಸೀಸತಗಲಿರುವ ಹತ್ತಿಯ ಮೆತ್ತೆಯನ್ನು ಮತ್ತೆ ಎತ್ತಿಕೊಂಡು ಅದನ್ನು ಆ ಡ್ರೆಸಿಂಗ್ ಟೇಬಲ್ಲಿನ ಪಾಲಿಷ್

ಮಾಡಿದ ಮೇಲ್ಮೈ ಮೇಲೆ ಸವರಿದನು. ಬೆರಳುಗಳ ಎಷ್ಟೋ ಗುರುತು ಗಳು ಆಗ ಅದರ ಮೇಲೆ ಎದ್ದು ಕಾಣಿಸತೊಡಗಿದವು.

ಬ್ಲೇಕ್ ಹೇಳಿದನು:—"ನಿಜವು! ಆದರೆ ನಾನು ಇದನ್ನು ಕೈಯಿಂದ ಸರ್ವಥಾ ಮುಟ್ಟಿರುವುದಿಲ್ಲ."

ಆಶ್ಚರ್ಯದಿಂದ ನೋಡುತ್ತ ಹಾರ್ಕರನು ಹೇಳಿದನು:—"ಹಾಗಾದರೆ ಇದು ಹೇಗೆ? ಮಿಸ್ಟರ ಬ್ಲೇಕ್! ಕೊನೆಗೂ ನಿಮ್ಮ ಅಭಿಪ್ರಾಯವೇನೆಂಬುವೇ ನನ್ನ ಬುದ್ಧಿಗೆ ಹೊಳೆಯುವದಿಲ್ಲ."

"ಈಗಲೇ ತಿಳಿಸುತ್ತೇನೆ" ಎಂದು ನುಡಿದು, ಬ್ಲೇಕನು ತನ್ನ ಜೇಬಿ ನಿಂದ ಫೋಟೋಗ್ರಾಫಿಕ್ ಫಿಲ್ಮಿನ ಒಂದು ತುಂಡನ್ನು ಹೊರತೆಗೆದು ಹೇಳಿ ದನು: "ನಿಮಗೆ ಫೋನ್ ಮಾಡಿದ ನಂತರ ನಾನು ಇಲ್ಲಿಂದ ನೆಟ್ಟಗೆ ಬೇಕರ್ ಸ್ಟ್ರೀಟಿಗೆ ಹೋಗಿದ್ದೆನು. ಅಲ್ಲಿ ನನ್ನ ಸಹಚರನು ನನ್ನ ಕಾರ್ಯವನ್ನು ಬೇಗನೆ ಪೂರೈಸಿಕೊಟ್ಟನು. ತೆಗೆದುಕೊಳ್ಳಿರಿ ಇದನ್ನು. ಸ್ವಲ್ಪ ಬೆಳಕಿನ ಕಡೆಗೆ ಹಿಡಿ ಯಿರಿ. ಇದರ ಮೇಲೆ ನಿಮಗೆ ನನ್ನ ಬೆರಳುಗಳ ಚಕ್ರನುಂತಾದವು ನೆಟ್ಟಗೆ ಕಾಣಿಸುವವು. ಇದನ್ನು ಉಬ್ಬಿದ ಜಿಲೆಟಿನ್ ಪ್ರೋಸೆಸ್ ಎಂದು ಕರೆಯು ತ್ತಾರೆ. ಸರಿಯಾಗಿ ಕೋಲೋಟೈಪಿನಂತೆ."

ಹಾರ್ಕರನು ಫೋಟೋಗ್ರಾಫರನಾಗಿರಲಿಲ್ಲ. ಅವನು ಹೇಳಿದನು:— "ನಾನು ನಿಮ್ಮ ಈ ಪ್ರೋಸೆಸ್ಸುಗಳ ವಿಷಯದಲ್ಲಿ ಏನೂ ತಿಳಿಯಲಾರೆನು."

"ಒಳ್ಳೇದು. ನೋಡಿರಿ." ಎಂದು ಹೇಳಿ, ಬ್ಲೇಕನು ಬಾಯಿಯ ಉಸಿ ರನ್ನು ಆ ಫಿಲ್ಮಿನ ಮೇಲೆ ಬಿಟ್ಟನು. ಮತ್ತು ಪಾಲಿಷ್ ಮಾಡಿದ ಆ ಟೇಬಲಿನ ಮೇಲ್ಮೈಯ ಮೇಲೂ ಬಿಟ್ಟನು. ಅನಂತರ ಕಠಿಣವಾದ ಕಾರ್ಡಿನ ಒಂದು ತುಂಡನ್ನು ಅದರ ಮೇಲೆ ಇಟ್ಟನು; ಮತ್ತು ಅದರ ಮೇಲೆ ಸರಿ ಯಾಗಿ ಒತ್ತಿದನು.

ಇಷ್ಟು ಕೆಲಸವನ್ನು ಮಾಡಿದ ಮೇಲೆ ಬ್ಲೇಕನು ಆ ಎರಡೂ ಪದಾರ್ಥ ಗಳನ್ನು ಟೇಬಲ್ಲಿನ ಮೇಲಿಂದ ಎತ್ತಿಕೊಂಡು ಹೇಳಿದನು:—"ನೋಡಿರಿ. ಈಗ ಲಾದರೋ ಇದರ ಮೇಲೆ ಏನೂ ಕಾಣುವದಿಲ್ಲ ಅಲ್ಲವೆ? ಆದರೆ ಸ್ವಲ್ಪ ಪರಿ ಶ್ರಮದಲ್ಲಿಯೇ ನಿಮಗೆ ಇದರ ಫಲವು ಕಾಣಿಸುವದು."

ಹೀಗೆ ಹೇಳಿ ಬ್ಲೇಕನು ಅದೇ ಸ್ಥಳದಲ್ಲಿ ಸೀಸ ತುಂಬಿದ ಹತ್ತಿಯ ಮೆತ್ತನೆಯನ್ನು ಒಂದು ಸಾರೆ ಸವರಿದನು. ಆಗ ಅಲ್ಲಿ ಬೆರಳ ಗುರುತುಗಳು ಎದ್ದು ಕಾಣಿಸಿದವು.

ಬ್ಲೇಕ್ ಹೇಳಿದನು:—"ಎರಡು ವ್ಯವಹಾರಗಳಲ್ಲಿಯೂ ಈ ವಿಧಾನ

ದಿಂದಲೇ ಬೆರಳ ಗುರುತುಗಳನ್ನು ತಯಾರಿಸಲಾಗಿದೆ. ನೀವು ಮುಂಚೆ ಈ ವಿಷಯದ ಮೇಲೆ ಲಕ್ಷ್ಯವಿಟ್ಟಿರಲಿಲ್ಲ. ಲಕ್ಷ್ಯವಿಟ್ಟಿದ್ದರೆ ಖಜಾನೆ ಪೆಟ್ಟಿಗೆಯ ಮುಂಭಾಗದಲ್ಲಿ ಬಿದ್ದಿರುವ ಬೆರಳ ಗುರುತುಗಳ ಫಾಸಲೆಯು (ದೂರವು) ಒಂದು ಇನ್ನೊಂದರೊಡನೆ ಸಮಾನವಾದ ಅಂತರದ ಮೇಲೆ ಇದೆ, ಎಂಬ ವಿಚಾರವು ತಿಳಿಯದೆ ಇರುತ್ತಿರಲಿಲ್ಲ. ಯಾವನೇ ಮನುಷ್ಯನಿರಲಿ, ಯಾರೂ ತಮ್ಮ ಬೆರಳುಗಳನ್ನು ಯಾವಾಗಲೂ ಒಂದು ಫಾಸಲೆಯಲ್ಲಿಯೇ ಇಡುವುದಿಲ್ಲ. ಈ ವಿಚಾರವೇ ನನಗೆ ಎಲ್ಲಕ್ಕಿಂತ ಮೊದಲು ಸಂಶಯವನ್ನು ಹುಟ್ಟಿಸಿತು; ಆದರೆ ಅಷ್ಟು ಸಮರ್ಪಕವಾಗಿ ಪೆಟ್ಟಿಗೆಯ ಮೇಲೆ ಬೆರಳ ಗುರುತುಗಳನ್ನು ತಯಾರಿಸಿದ ಒಬ್ಬ ನಿಪುಣನಾದ ಪೆಟ್ಟಿಗೆ ಒಡೆಯುವವನು ಆ ಗುರುತುಗಳೊಡನೆ ತನ್ನ ಬೆರಳ ಗುರುತುಗಳನ್ನು ಬಿಟ್ಟು ಹೋಗುವಷ್ಟು ತಪ್ಪು ಮಾಡುತ್ತಾನೆಂಬುದೇನೂ ಸಂಭವಿಸುವದಿಲ್ಲ ''

ಹಾರ್ಕರ್:—''ಸೇಜನು ಈ ಕಾರ್ಯವನ್ನು ಮಾಡಿದ್ದರೆ ತನ್ನ ಬೆರಳ ಗುರುತುಗಳನ್ನು ಈ ಟೇಬಲ್ಲಿನ ಮೇಲೆ ಹೇಗೆ ಬಿಟ್ಟು ಹೋದನು?''

ಬ್ಲೇಕ್:—''ಈ ವಿಧಾನದ ಗುರುತುಗಳನ್ನು ತಯಾರಿಸುವದು ಅವನ ನಿತ್ಯದ ಅಭ್ಯಾಸವಲ್ಲವೆಂದು ನೀವು ತಿಳಿಯಲಾರಿರಾ? ಈ ಕೆಲಸದಲ್ಲಿ ಅವನು ಅಜಾಗರೂಕತೆಯನ್ನು ಪ್ರದರ್ಶಿಸಿರುವನು. ಪೆಟ್ಟಿಗೆಯ ಮೇಲೆ ಗುರುತುಗಳು ಮೂಡಲ್ಪಟ್ಟಿರುವವಷ್ಟೆ? ಅದಕ್ಕೆ ಕೇವಲ ಎರಡೇ ಕಾರಣಗಳಿರಬಹುದು. ಒಂದನೇದು ಇದು, ಪೋಲೀಸರ ಕೈಯಲ್ಲಿ ನಿರ್ದೋಷಿಯಾದ ವ್ಯಕ್ತಿಯ ಮೇಲೆ ಬಲವಾದ ಪ್ರಮಾಣಗಳು ಆಗಬೇಕು; ಮತ್ತು ನಿಜವಾದ ತಪ್ಪುಗಾರನ ಮೇಲೆ ಪೋಲೀಸರ ಲಕ್ಷ್ಯವು ಬೀಳಬಾರದು.

ಇನ್ನು ಎರಡನೆಯದೆಂದರೆ, ಯಾವ ಪುಂಡನು ಕಾನ್ವಿಯ ಬೆರಳು ಗುರುತುಗಳನ್ನು ಪೆಟ್ಟಿಗೆಯ ಮೇಲೆ ತಯಾರಿಸಿರುವನೋ, ಅವನಿಗೆ ಕಾನ್ವಿಯು ಈ ವೇಳೆಯಲ್ಲಿ ಅಮೇರಿಕಾದ ಒಂದು ಜೈಲಿನಲ್ಲಿ ಕೊಳೆಯುತ್ತಿರುವನೆಂಬ ಸುದ್ದಿಯು ತಿಳಿದಿರಲಾರದು. ಬೆರಳುಗಳ ಆ ಅಚ್ಚುಗಳನ್ನು ತಯಾರಿಸುವದಕ್ಕಾಗಿ ಆ ದುಷ್ಟನು ಕಾನ್ವಿ ಅಥವಾ ಗ್ರೇಯ ಬೆರಳ ಗುರುತುಗಳನ್ನು ಯಾವ ವಿಧಾನದಿಂದ ಸಂಗ್ರಹಿಸಿದನೆಂಬ ವಿಷಯದಲ್ಲಿ ಈಗಲೇ ನಾನು ಏನನ್ನೂ ಹೇಳಲಾರೆನು; ಆದರೆ ಇದು ಸ್ಪಷ್ಟವಿದೆ – ಈಗ ನಾನು ಹೇಗೆ ಈ ಟೇಬಲ್ಲಿನ ಮೇಲೆ ನನ್ನ ಬೆರಳ ಗುರುತುಗಳನ್ನು ಮಾಡಿ ತೋರಿಸಿದೆನೋ, ಹಾಗೆಯೇ ಆ ಗುರುತುಗಳನ್ನು ಅವನು ತಯಾರಿಸಿರಬಹುದು. ಈ ವೇಳೆಯಲ್ಲಿ ನಾನು ನಿಮಗೆ ಕೊಡುವ ಮುಖ್ಯ ಸಲಹೆ ಏನಂದರೆ, ಸಾಧ್ಯವಾದಷ್ಟು

ಬೇಗನೆ ಸ್ಲಿವ್ ಟಾಮಿಯನ್ನು ಸೆರೆಹಿಡಿಯಬೇಕು. ಅವನು ಬಹಳ ಜಾಗ ರೂಕನಾದ ಮನುಷ್ಯನಿರುವನು; ಆದರೆ ಅವನ ಪತ್ತೆ ಇಲ್ಲವೆಂದು ನನ್ನ ಬಳಿ ಯಲ್ಲಿ ಹೇಳಲಾಗದು.''

ಹಾರ್ಕರ್—''ಏನು ಹೇಳಲಿ, ಮಿಸ್ಟರ್ ಬ್ಲೇಕ್! ನಾನು ಅವನನ್ನು ಹುಡುಕಿಸುವುದಕ್ಕಾಗಿ ನೀವಿತ್ತ ಹೊರಟು ಬಂದೊಡನೆಯೇ ಪೋಲೀಸರನ್ನು ಕಳುಹಿಸಿದ್ದೆನು. ಅವನಲ್ಲಿಗೆ ಫೋನ್ ಮಾಡಿದನು; ಆದರೆ ಎಲ್ಲಿಯೂ ಅವನ ಪತ್ತೆ ಹತ್ತಲಿಲ್ಲ.''

ಬ್ಲೇಕ್--''ನಾನು ಮುಂಚೆಯೇ ಹೇಳಿರಲಿಲ್ಲವೇ? ಹಾಗೇ ಆಯಿತು. ಗ್ರೇಗೆ ವಿರುದ್ಧವಾಗಿರುವ ಯಾವ ಸುದ್ದಿಯನ್ನು ನಿಮಗೆ ತಿಳಿಸುವ ಕಾರ್ಯವು ಅವನಿಗೊಪ್ಪಿಸಲ್ಪಟ್ಟಿದ್ದಿತೋ ಅದನ್ನು ಪೂರೈಸಿದೊಡನೆಯೇ ಅವನು ಕಣ್ಣಿಗೆ ಕಾಣದಂತಾದನು. ಇರಲಿ. ಡಾಕ್ಟರ್ ಗ್ರೇಗೆ ವಿರುದ್ಧವಾಗಿ ಇಷ್ಟರ ವರೆಗೆ ನಿಮಗೆ ಎಷ್ಟು ಪ್ರಮಾಣಗಳು ದೊರಕಿದ್ದವೋ ಅವೆಲ್ಲವೂ ಈಗ ಒಂದೇಸಾರಿಗೆ ಮುಗಿದು ಹೋದವಷ್ಟೆ?''

ಹಾರ್ಕರ್—''ಆದರೆ ನೀವೇ ಸ್ವಲ್ಪ ಆಲೋಚಿಸಿರಿ, ಮಿಸ್ಟರ್ ಬ್ಲೇಕ್! ಈ ವಿಷಯವಾಗಿ ನಾವು ಯಾವ ಕಾರ್ಯ-ಕಲಾಪಗಳನ್ನು ನಡೆಸಿದೆವೋ, ಈ ಸ್ಥಿತಿಯಲ್ಲಿ ಅದಲ್ಲದೆ ಇನ್ನ್ಯಾವ ಕಾರ್ಯಕ್ರಮವನ್ನು ನಡೆಸಬಹುದಾಗಿದ್ದಿತು? ಆಗ ನಾವು ಆ ಪ್ರಮಾಣಗಳ ಮೇಲೆಯೇ ಲಕ್ಷ್ಯವಿಡುವುದು ಉಚಿತವಾಗಿದ್ದಿತು ಅಲ್ಲವೇ? ಅದರಿಂದ ನಾವು ನಿರುಪಾಯರಾಗಿ ಪ್ರಮಾಣಾಧೀನರಾಗಿ ಡಾಕ್ಟರ್ ಗ್ರೇಯನ್ನು ಸೆರೆಹಿಡಿಯಲು ವಾರಂಟನ್ನು ಹೊರಡಿಸಬೇಕಾಗಿ ಬಂದಿತು. ಆಗಲಿ. ಈಗ ನಾನು ಸಾಧ್ಯವಾದಷ್ಟು ಬೇಗನೆ ಅವನನ್ನು ಸೆರೆಯಿಂದ ಬಿಡಿಸಿ ಸ್ವತಂತ್ರನನ್ನಾಗಿ ಮಾಡುವೆನು.''

ಬ್ಲೇಕ್—''ಉಹುಂ, ಅದೀಗ ಬೇಡ. ನನ್ನ ಅಭಿಪ್ರಾಯದಲ್ಲಿ ಡಾಕ್ಟರ್ ಗ್ರೇ ಇನ್ನೂ ಕೂಡ ಈ ಅಪಾಯದಿಂದ ಎಷ್ಟು ದೂರವಿರುವನೋ ಅಷ್ಟೂ ಒಳ್ಳೆಯದಿದೆ. ಇನ್ನೂ ಒಂದೆರಡು ದಿನಗಳ ವರೆಗೆ ಅವನು ಜೇಲಿನಲ್ಲಿಯೇ ಕೈದಿ ಯಾಗಿದ್ದರೆ ಅದರಿಂದ ಹಾನಿ ಏನು? ಆದರೆ ಈ ವಿಷಯದಲ್ಲಿ ಕೊನೆಯದಾಗಿ ಹೇಳುವುದೇನಂದರೆ ನಿಮಗಿಷ್ಟವಿದ್ದಂತೆ ಮಾಡಿರಿ.''

ಹಾರ್ಕರ್—''ಹಾಗೇನೂ ಇಲ್ಲ, ಮಿಸ್ಟರ್ ಬ್ಲೇಕ್! ನಿಮ್ಮಿಚ್ಛೆಯಂತೆ ಯೇ ನಡೆಸುವೆನು; ಆದರೆ ಗ್ರೇಯ ಮೇಲೆ ಇನ್ನು ಬರುವ ಅಪಾಯವೇನಿದೆ? ಇನ್ನೂ ಯಾವ ತರಹದ ಸಂಕಟದ ಸಂಭಾವನೆ ಇದೆ!''

ನಸುನಗುತ್ತಾ ಬ್ಲೇಕ್ ಹೇಳಿದನು—''ಇದರಿಂದಲೇ ತಿಳಿಯಬಾರದೇ?

ಅವನಿಗೆ ವಿರುದ್ಧವಾಗಿ ತಯಾರಿಸಿದ ಈ ವಿಧಾನವನ್ನು ನೋಡಿದರೆ, ಆ ಪುಂಡರು ತಮ್ಮ ಈ ಪ್ರಯತ್ನವು ವಿಫಲವಾಯಿತೆಂದು ತಿಳಿದೊಡನೆಯೇ ಇನ್ನಾವುದಾದರೂ ಹೊಸ ತರಹದ ಉಪದ್ರವವನ್ನು ತಂದು ಹಾಕದೆ ಇರಲಾರರು. ಒಳ್ಳೇದು. ಏನೂ ಬಾಧಕವಿಲ್ಲ. ಗ್ರೇಯನ್ನು ಜೈಲಿನಿಂದ ಬಿಡಿಸಿ ಇಲ್ಲಿಗೇ ಕರೆದು ತಂದು ಬಿಡಿರಿ; ಆದರೆ ಅವನಿಂದ ಪ್ರತಿಜ್ಞೆ ಮಾಡಿಸಿಕೊಳ್ಳಿರಿ-ರಾತ್ರಿ ವೇಳೆಯಲ್ಲಿ ಈ ಸ್ಥಳದಿಂದ ಹೊರಗೆ ಕಾಲಿಡುವುದಿಲ್ಲವೆಂದು.''

ಹಾರ್ಕರ್ ''ಗ್ರೇಯ ಮೇಲೆ ತಿರುಗಿಯೂ ಸಂಕಟವ್ಯಾವುದಾದರೂ ಬರಬಹುದೆಂದು ನಿಮ್ಮ ಅಭಿಪ್ರಾಯವಿದ್ದರೆ ನಮ್ಮ ಕಡೆಯವನೊಬ್ಬನನ್ನು ನಾನಿಲ್ಲಿ ಇರಿಸುವೆನು ''

ಬ್ಲೇಕ್:--''ಬೇಡ, ಅಂತಹ ಅಗತ್ಯವೇನೂ ಇಲ್ಲ. ಹಾಗೆ ಮಾಡಿಬಿಟ್ಟಿವೆಂದರೆ, ಆ ಪುಂಡರು ತಮ್ಮ ಕಾರ್ಯವನ್ನು ಥಟ್ಟನೆ ನಿಲ್ಲಿಸಿಬಿಡಬಹುದು. ಇಲ್ಲಿಂದ ಹೊರಗೆ ಹೊರಡಲಾಗದೆಂದು ಗ್ರೇಗೆ ಸ್ಪಷ್ಟವಾಗಿ ತಿಳಿಸಿಬಿಡಿರಿ. ನಾನೇ ಅವನ ರಕ್ಷಣೆಯ ಭಾರವನ್ನು ವಹಿಸಿಕೊಳ್ಳುವೆನು. ಗ್ರೇಯ ಮೂಲಕವೇ ನಮ್ಮ ಕಾರ್ಯವನ್ನು ಸಾಧಿಸಿಕೊಳ್ಳಲು ಯುಕ್ತಿ ನೋಡೋಣ; ಯಾಕೆಂದರೆ, ನಾವು ಇಷ್ಟರವರೆಗೆ ಕೇವಲ ಕುರುಡುಗತ್ತಲೆಯಲ್ಲಿಯೇ ಇರುವೆವು. ಹೀಗೊಂದು ವೇಳೆ ಮಾಡುವದರಿಂದ ಹೊಸ ಸಂಗತಿ ಯಾವುದಾದರೂ ನಡೆಯಬಹುದಾದ ಸಂಭವವಿದೆ. ಡಾಕ್ಟರನ ಈ ಬಿಡಾರದ ಮೇಲೆ ಪುಂಡರ್ಯಾರಾದರೊಬ್ಬರು ತಮ್ಮ ದೃಷ್ಟಿಯಿಟ್ಟೇ ಕಾಯುತ್ತಿರುವರೆಂಬುವ ವರೆಗೆ ನನ್ನ ಊಹೆ ಇದೆ. ಆಗಲಿ. ಈಗ ನಾನು ನಿಮ್ಮೊಡನೆಯೇ ಇಲ್ಲಿಂದ ಹೊರಹೊರಡುವೆನು. ಅನಂತರ ನೀವು ಡಾಕ್ಟರ್ ಗ್ರೇಯನ್ನು ನಿಮ್ಮ ಜೊತೆಯಲ್ಲಿಯೇ ಇಲ್ಲಿಗೆ ಕರೆತಂದು ಬಿಟ್ಟುಹೋಗಿರಿ. ಆ ಮೇಲೆ ಇಲ್ಲಿಂದ ಖಂಡಿತವಾಗಿಯೂ ಹೊರಹೊರಡಲಾಗದೆಂದು ಗ್ರೇಯಿಂದ ವಚನ ಮಾತ್ರ ತೆಗೆದುಕೊಳ್ಳಿರಿ."

೦ ೦ ೦ ೦ ೦

ಇನ್‌ಸ್ಪೆಕ್ಟರ್ ಹಾರ್ಕರನು ಡಾಕ್ಟರ ಗ್ರೇಯನ್ನು ತನ್ನ ಕಾರಿನಲ್ಲಿಯೇ ಕರೆದುಕೊಂಡು ಬಂದು ಅವನ ಕೋಣೆಯಲ್ಲಿ ಬಿಟ್ಟನು. ಅವನಿಗೆ ಬೆಳಿಗ್ಗೆ ಮತ್ತು ರಾತ್ರಿಯ ಊಟದ ಏರ್ಪಾಡನ್ನು ಮಾಡಿ, ರಾತ್ರಿ ವೇಳೆಯಲ್ಲಿ ಅಲ್ಲಿಂದ ಹೊರಹೊರಡುವುದಿಲ್ಲವೆಂದು ಗ್ರೇಯಿಂದ ಹಾರ್ಕರನು ಮಾತು ತೆಗೆದುಕೊಂಡನು. ಅದಲ್ಲದೆ ಬ್ಲೇಕನನ್ನು ಸಂದರ್ಶಿಸದೆ ಆ ಮನೆಯಿಂದ ಹೊರಗೆ ಒಂದು ಹೆಜ್ಜೆಯನ್ನೂ ಇಡಲಾಗದೆಂದು ಕಠಿಣವಾದ ಎಚ್ಚರಿಕೆಯನ್ನಿತ್ತನು.

ಗ್ರೇ ಪ್ರಶ್ನಿಸಿದನು:—"ಕೊನೆಗಾದರೂ ಇದರ ಅಭಿಪ್ರಾಯವೇನು?

ನನ್ನನ್ನು ಸೆರೆಹಿಡಿದುದು ಸರಿಯಾಗಲಿಲ್ಲವೆಂದು ಈಗ ನೀವು ತಿಳಿದಿರಷ್ಟೆ? ಇನ್ನಾದರೂ ನೀವು ಕೋರ್ಟಿನಲ್ಲಿರುವ ನನ್ನ ಮೇಲಿನ ಮೊಕದ್ದಮೆಯನ್ನು ಪೂರೈಸಿಬಿಡಿರಿ, ಎಂದು ನಿಮ್ಮ ಬಳಿಯಲ್ಲಿ ಹೇಳಲು ನನಗೀಗ ಅಧಿಕಾರವಿದೆ.''

ಹಾರ್ಕರ್ ಹೇಳಿದನು:—''ನೀವೀಗ ನಿಶ್ಚಿಂತೆಯಿಂದ ಇರ್ರಿ, ಮಿಸ್ಟರ್ ಗ್ರೇ! ಆ ಕೆಲಸವನ್ನು ನಾನು ಖಂಡಿತವಾಗಿ ಮಾಡುವೆನು. ನಾನೀಗ ನಿಮಗೆ ತಿಳಿಸುವುದೇನೆಂದರೆ, ನೀವಿನ್ನು ಒಂದೆರಡು ದಿನಗಳ ವರೆಗೆ ಮನೆಯೊಳಗೇ ವಾಸ ವಿದ್ದು ಈ ರಹಸ್ಯ ವಿಚಾರವನ್ನು ಕಂಡುಹಿಡಿಯುವ ಮುಖ್ಯ ಕಾರ್ಯದಲ್ಲಿ ನೀವು ನಮಗೆ ಸಹಾಯ ಮಾಡಬೇಕು. ಇಷ್ಟರವರೆಗೂ ನಮಗೆ ಈ ವ್ಯವ ಹಾರದ ತಲೆ ಯಾವುದು, ಕಾಲು ಯಾವುದು? ಎಂಬುದೊಂದೂ ನಮ್ಮ ಬುದ್ಧಿಗೆ ಸಮರ್ಪಕವಾಗಿ ತೋರಲಿಲ್ಲ; ಆದರೆ ಈಗ ಮಿಸ್ಟರ್ ಬ್ಲೇಕರ ಅಸಾಧಾರಣ ವಾದ ಮೆದುಳಿಗೆ ಒಂದೆರಡು ವಿಚಿತ್ರ ಸಂಗತಿಗಳ ಪತ್ತೆಹತ್ತಿದೆ. ಮಿಸ್ಟರ್ ಬ್ಲೇಕರು ನಾಳೆ ತಾವಾಗಿಯೇ ಇಲ್ಲಿಗೆ ಬಂದು ನಿಮಗೆ ಈ ವಿಷಯದಲ್ಲಿ ಇನ್ನೂ ಹೆಚ್ಚಿನ ವಿಚಾರವನ್ನು ತಿಳಿಸುವ ಆಶೆ ಇದೆ. ಅವರು ನಮ್ಮೊಡನೆಯೇ ಸೇರಿ ಪ್ರೈವೇಟ್ ತರಹದಲ್ಲಿ ಈ ವ್ಯವಹಾರದ ಗುಟ್ಟನ್ನು ಕಂಡುಹಿಡಿಯಲು ಹವಣಿ ಸಿರುವರು. ಅವರ ಸಲಹೆಯಿಂದಲೇ ಈಗ ನಿಮ್ಮ ಬಿಡುಗಡೆಯಾಗಿದೆ. ಅವ ರಿಲ್ಲದಿರುತ್ತಿದ್ದರೆ, ಈ ವ್ಯವಹಾರವು ಇಷ್ಟು ಮುಂದುವರಿಯುವ ಆಶೆ ಇರಲಿಲ್ಲ. ಅವರ ಬುದ್ಧಿನೈಪುಣ್ಯದಿಂದಲೇ ಮುಂದಿನ ಕಾರ್ಯಭಾರವೆಲ್ಲವೂ ಸುಗಮವಾಗಿ ಸಾಗಬೇಕಾಗಿದೆ. ನಾನು ಆರಂಭದಲ್ಲಿಯೇ ಹೇಳಿದ್ದೆನು—ನಿಮ್ಮನ್ನು ಈ ಸಂಕಟದಿಂದ ಉಳಿಸಬಲ್ಲವ್ಯಕ್ತಿ ಎಂದರೆ ಇಡೀ ಲಂಡನ್ನಿನಲ್ಲಿ ಸ್ಯಾಕ್ಸ್ಟನ್ ಬ್ಲೇಕ್ ಒಬ್ಬರೇ ಎಂದು. ಈಗವರಿಂದಲೇ ನಿಮ್ಮ ಸಂಕಟವು ಸಡಿಲವಾಯಿತು. ಒಳ್ಳೇದು. ಇದನ್ನು ನೆನಪಿನಲ್ಲಿಟ್ಟಿರಬೇಕು ನೀವಿಲ್ಲಿ ಇರುವಾಗ ಹೊರಗಿನ ಯಾವ ವ್ಯಕ್ತಿಯೊಡನೆಯೂ ಯಾವ ವಿಧವಾದ ಸಂಪರ್ಕವನ್ನೂ ಇಟ್ಟಿರ ಲಾಗದು. ಆಸ್ಪತ್ರೆ ಮುಂತಾದೆಡೆಗಳಿಗೆ ಫೋನ್ ಮಾಡಲೂ ಬಾರದು. ನನ್ನ ಈ ಎಚ್ಚರಿಕೆಯಿಂದ ನಿಮಗೇ ಒಳ್ಳೇದಾಗುವುದು. ಒಳ್ಳೇದು. ಗುಡ್‌ನೈಟ್! ನಾನಿನ್ನು ಹೋಗಿಬರುತ್ತೇನೆ.''

"ಒಳ್ಳೇದು" ಎಂದು ನುಡಿದು, ಗ್ರೇ ಹಾರ್ಕರನನ್ನು ಬಾಗಿಲವರೆಗೆ ಕಳುಹಿಸಿ ಹಿಂದಿರುಗಿ ಬಂದು ಕುಳಿತನು. ಡಾಕ್ಟರ್ ಸ್ಟೆಂಟನ್ನನಿಗೆ ಫೋನ್ ಮಾಡಬೇಕೆಂದು ಅವನಿಗೆ ಬಲವಾದ ಇಚ್ಛೆಯಿದ್ದಿತು; ಆದರೆ ಈಗ ಹಾರ್ಕ ರನಿಗಾಗಿ ಸ್ವಲ್ಪ ಸಮಯದ ವರೆಗೆ ಆ ಇಚ್ಛೆಯನ್ನು ತಡೆದಿರುವದೇ ಒಳ್ಳೆಯ ದೆಂದು ನಿಶ್ಚೈಸಿ, ಗ್ರೇ ಕಿಟಕಿಗೆ ತಲೆ ಹಾಕಿ ಹೊರಗೆ ರಸ್ತೆಯನ್ನು ನೋಡಿದನು.

ಹಾರ್ಕರನು ನೋಟರನ್ನು ಹತ್ತಿ ಹೊರಟು ಹೋಗುತ್ತಿದ್ದುದು ಕಾಣಿಸಿತು. ಹಾಗೆಯೆ ಕಿಟಕಿಯಲ್ಲಿ ನಿಂತು ನೋಡುತ್ತಿದ್ದಾಗ ರಸ್ತೆಯ ಪಕ್ಕದಲ್ಲಿ ವರ್ತಮಾನ ಪತ್ರಿಕೆಗಳನ್ನು ಮಾರುತ್ತ ನಿಂತಿದ್ದ ಒಬ್ಬ ಮುದುಕನು ಕಾಣಿಸಿದನು. ನಾವಿಕನ ವೇಷದಿಂದಿರುವ ಯುವಕನೊಬ್ಬನು ಆ ಮುದುಕನ ಬಳಿಗೆ ಹೋಗಿ ವರ್ತಮಾನ ಪತ್ರಿಕೆಗಳನ್ನು ಕೊಂಡುಕೊಳ್ಳುತ್ತಿರುವದನ್ನೂ ಅವರಿಬ್ಬರು ಸಂಭಾಷಿಸುತ್ತಿರುವದನ್ನೂ ಗ್ರೇ ನೋಡಿದನು. ಅನಂತರ ಆ ನಾವಿಕ ವೇಷದ ಯುವಕನು ತನ್ನ ದಾರಿಯನ್ನು ಹಿಡಿದು ಮುಂದಕ್ಕೆ ಹೊರಟು ಹೋದನು. ಆ ಸಮಯದಲ್ಲಿ ಕತ್ತಲೆಯು ನಾಲ್ಕೂ ಕಡೆಗೆ ತನ್ನ ಪ್ರಭಾವವನ್ನು ಬೀರತೊಡಗಿದ್ದಿತು. ಆ ಕಟ್ಟಡದ ಹಾಬ್ಸ ಎಂಬ ಹೆಸರಿನ ಕಾವಲುಗಾರನು ಈಗ ಆ ಮನೆಯಿಂದ ಹೊರಹೊರಟನು. ತನ್ನ ನಿತ್ಯದ ಸಂಪ್ರದಾಯದಂತೆ ಹತ್ತರದಲ್ಲಿಯೇ ಇರುವ ಹೋಟೆಲಿಗೆ ಹೋಗಿ, ಸ್ವದೇಶೀ ಸರಾಯಿಯ ಒಂದು ಬಾಟಲಿಯನ್ನು ತೆಗೆದುಕೊಂಡು ತನ್ನ ಜೇಬಿನೊಳಗಿಟ್ಟು ಹಿಂದಿರುಗಿ ಬರುತ್ತಿರುವದೂ ಡಾಕ್ಟರ ಗ್ರೇಯ ದೃಷ್ಟಿಗೆ ಗೋಚರಿಸದೆ ಇರಲಿಲ್ಲ.

ಅನಂತರ ಗ್ರೇ ಕಿಟಕಿಯ ಪರದೆಯನ್ನು ಕೆಳಗಿಳಿಸಿ ಕೋಣೆಯಲ್ಲಿ ದೀಪಕನ್ನು ಹಚ್ಚಿದನು. ಆ ಸಮಯದಲ್ಲಿ ಲಿಫ್ಟ ಮೇಲೆ ಯಾರೋ ಬರುವ ಶಬ್ದವು ಗ್ರೇಯ ಕಿವಿಗೆ ಕೇಳಿಸಿತು. ಅನಂತರ ಅವನ ಲೆಟರ ಬಾಕ್ಸಿನಲ್ಲಿ ಕಟಕಟ ಶಬ್ದವಾಯಿತು. ಲಿಫ್ಟಿನಿಂದ ಮೇಲೆ ಬಂದ ನಂತರ ಪೋಸ್ಟಮ್ಯಾನನು ತನ್ನ ಕೆಲಸವನ್ನು ಮುಗಿಸಿಕೊಂಡು ಮೆಟ್ಟಿಲುಗಳಿಂದ ಹಿಂದಿರುಗಿ ಹೋಗುತ್ತಿದ್ದನು. ಗ್ರೇಯ ಲೆಟರ ಬಾಕ್ಸಿನಲ್ಲಿ ಟಪ್ಪಾಲಿನಿಂದ ಬಂದ ಯಾವುದೋ ಒಂದು ಕ್ಯಾಟಲಾಗ್ ಬಿದ್ದಿದ್ದಿತು. ಅದನ್ನು ಓದುವುದು ವ್ಯರ್ಥವಾಗಿದ್ದಿತು. ಆದರೂ ವೇಳೆಯನ್ನು ಕಳೆಯುವದಕ್ಕಾಗಿ ಅವನು ಅದನ್ನು ತೆಗೆದಿಟ್ಟುಕೊಂಡು ಹಾಳೆಗಳನ್ನು ಒಂದೊಂದಾಗಿ ಮಗುಚಿಹಾಕತೊಡಗಿದನು.

ಅಕಸ್ಮಾತ್ತಾಗಿ ಬಾಗಿಲಿನಲ್ಲಿ ಮೆಲ್ಲಗೆ ತಟ್ಟಿದ ಶಬ್ದವಾಯಿತು. ಕೂಡಲೆ ಗ್ರೇ ಕುರ್ಚಿಯಿಂದೆದ್ದು ಬಂದು ಬಾಗಿಲನ್ನು ತೆರೆದನು. ಮುದುಕನೊಬ್ಬನು ಬಾಗಿಲಿನಲ್ಲಿ ನಿಂತಿರುವದು ಕಾಣಿಸಿತು. ಬಾಗಿಲನ್ನು ತೆರೆಯುತ್ತಲೆ, ಆ ಮುದುಕನು ಮುಂದೆ ಬಂದು ಒಂದು ಪ್ಯಾಕೆಟ್ಟನ್ನು ಮುಂದೆ ಹಿಡಿದು ಹೇಳಿದನು: "ಸ್ವಾಮಿ! ಈ ಪ್ಯಾಕೆಟ್ ತಮ್ಮದೇ ಇರಬಹುದೆಂದು ಕಾಣಿಸುತ್ತದೆ. ಪೋಸ್ಟಮ್ಯಾನನು ಪ್ರಮಾದದಿಂದ ಇದನ್ನು ನನ್ನ ಬಳಿ ಚೆಲ್ಲಿಹೋದನು."

ಗ್ರೇ ಪ್ಯಾಕೆಟ್ಟನ್ನು ಮುದುಕನ ಕೈಯಿಂದ ತೆಗೆದುಕೊಂಡನು; ಆದರೆ

ಅದೇ ವೇಳೆಯಲ್ಲಿ ಆ ಮುದುಕನ ಕೈಯಲ್ಲಿ ಏನೋ ಒಂದು ವಸ್ತುವು ಥಳಥಳಿಸಿತು. ಯಾವುದೋ ಒಂದು ತರಳ ಪದಾರ್ಥದ ಲಘುವಾದ ತುಂತುರವು ಗ್ರೇಯ ಮುಖದ ಕಡೆಗೆ ಹಾರತಕ್ಕದ್ದಿದ್ದಿತು; ಆದರೆ ಅದೇ ವೇಳೆಯಲ್ಲಿ ಯಾವುದೋ ಒಂದು ವಸ್ತುವು ಥಟ್ಟನೆ ಆ ಮುದುಕನ ಕೈಮೇಲೆ ಬಂದು ಬಿದ್ದಿತು. ಹಾಗೆ ಆಕಸ್ಮಾತ್ತಾಗಿ ಆ ವಸ್ತುವು ಬಂದು ಬೀಳದೆ ಇದ್ದಿದ್ದರೆ, ತುಂತುರುವಿನ ಗುರಿಯು ತಪ್ಪದೆ ಗ್ರೇಯ ಮುಖವನ್ನೇ ತಲ್ಪುತ್ತಿದ್ದಿತು. ಆ ವಸ್ತುವು ಬೀಳುವುದರ ಜೊತೆಗೇ ಒಂದು ತೀಕ್ಷ್ಣವಾದ ಶಬ್ದವೂ ಬಂದಿದ್ದಿತು. "ಹಿಡಿಯಿರಿ; ಆ ಮುದುಕನನ್ನು ಹೋಗಲು ಬಿಡಬೇಡಿರಿ." ಎಂದು.

ಆದರೆ ಗ್ರೇಗೆ ಬದಲಾಗಿ ಆ ಮುದುಕನೇ ಥಟ್ಟನೆ ಮುಂದಕ್ಕೆ ನುಗ್ಗಿ, ಗ್ರೇಯ ಮುಖಕ್ಕೆ ಬಲವಾಗಿ ಗುದ್ದಿದನು. ಜೊತೆಗೇ ಮುದುಕನ ಕೈಲಿದ್ದ ತರಳ ಪದಾರ್ಥದಿಂದ ಹೊರಡುತ್ತಿದ್ದ ತೀಕ್ಷ್ಣ ಗಂಧವು ಗ್ರೇಯ ಮೂಗಿನೊಳಗೆ ಸ್ವಲ್ಪ ಪ್ರವೇಶಿಸಿತು. ಅದರಿಂದ ಗ್ರೇಯ ತಲೆಯು ತಿರುಗತೊಡಗಿ ಅವನು ನೆಲದ ಮೇಲೆ ಕುಸಿದು ಕುಳಿತನು.

ಉದ್ದಂಗಲಿನ ಆ ಮುದುಕನು ವೇಗವೇಗವಾಗಿ ಮೆಟ್ಟಿಲುಗಳ ಕಡೆಗೆ ಹೋಗಿ ಧಡಧಡನೆ ಕೆಳಗಿಳಿಯುತ್ತಿದ್ದುದು ಗ್ರೇಯ ಕಣ್ಣಿಗೆ ಕಾಣಿಸಿತು, ಹೊರಬಾಗಿಲನ್ನು ಬಲವಾಗಿ ಇಕ್ಕಿದ ಶಬ್ದವೂ ಕೇಳಿಸಿತು. ಗ್ರೇಯ ಕಣ್ಣಿನಿಂದ ನೀರು ಸುರಿಯುತ್ತಿದ್ದಿತು; ತಲೆಯು ಒಂದೇಸಮನೆ ತಿರುಗುತ್ತಿದ್ದಿತು. ಎರಡು ಮಿನೀಟಿನವರೆಗೆ ಗ್ರೇಗೆ ನಾಲ್ಕೂ ದಿಕ್ಕುಗಳು ಅಂಧಕಾರಮಯವಾಗಿ ಕಾಣಿಸಿದವು. ಆತನು ಸುಮ್ಮನೆ ಬಿದ್ದಲ್ಲಿಯೇ ಬಿದ್ದಿದ್ದನು. ಆ ಮೇಲೆ ನಾಲ್ಕೂ ಕಡೆಗೂ ಅವನಿಗೆ ಬೆಳಕು ಕಾಣಿಸಿತು. ತಲೆ ತಿರುಗುವುದೂ ನಿಂತಿತು. ಹತ್ತಿರವೇ ಕಪ್ಪುಬಣ್ಣದ ಟೋಪಿಯೊಂದು ನೆಲದ ಮೇಲೆ ಬಿದ್ದಿರುವುದು ಕಾಣಿಸಿತು. ಈ ಟೋಪಿಯೇ ಆ ಸಮಯದಲ್ಲಿ ಆ ದುಷ್ಟನ ಕೈ ಮೇಲೆ ಬಿದ್ದು ಅವನ ಕಾರ್ಯಕ್ಕೆ ತಡೆಯನ್ನುಂಟುಮಾಡಿತೆಂದು ಗ್ರೇ ತಿಳಿದನು. ಗ್ರೇ ಅತಿ ಕಷ್ಟದಿಂದ ಎದ್ದು ನೆಟ್ಟಗೆ ನಿಂತನು ಮೆಟ್ಟಿಲುಗಳ ಕಡೆಗೆ ನೋಡುತ್ತ:--"ಆ ತರಲ ಪದಾರ್ಥದಲ್ಲಿ ಮೂರ್ಛೆಹೊಂದಿಸುವ ಶಕ್ತಿಯು ಇರುವುದು. ಆ ವೇಳೆಯಲ್ಲಿ ಈ ಟೊಪ್ಪಿಗೆಯನ್ನು ಆ ಮುದುಕನ ಕೈ ಮೇಲೆ ಎಸೆಯದೆ ಇದ್ದಿದ್ದರೆ, ನಿಶ್ಚಯವಾಗಿಯೂ ನಾನು ಪೂರ್ಣವಾಗಿ ಮೂರ್ಛೆಹೊಂದಿ ಬಿಡುತ್ತಿದ್ದೆನು."

"ಅದರಲ್ಲೇನೂ ಆಶ್ಚರ್ಯಪಡುವ ಅವಶ್ಯಕತೆ ಇಲ್ಲ" ಎಂದು ಒಂದು ಶಬ್ದವು ಕೆಳಗಿನಿಂದ ಬಂದಿತು. ಆ ಶಬ್ದದ ಜೊತೆಗೇ ಬ್ಲೇಕನು ಬಂದು ಗ್ರೇಯ ಎದುರಿಗೆ ನಿಂತನು. ಬ್ಲೇಕನನ್ನು ಥಟ್ಟನೆ ಗುರುತಿಸಲು ಗ್ರೇಯಿಂದಾ

ಗಲಿಲ್ಲ. ಯಾಕಂದರೆ, ಆಗ ಬ್ಲೇಕನು ವರ್ತಮಾನಪತ್ರಿಕೆಗಳನ್ನು ಮಾರುವ ಮುದುಕನ ವೇಷದಲ್ಲಿದ್ದನು. ಸ್ವಲ್ಪ ಹೊತ್ತಿಗೆ ಮುಂಚೆ ಡಾಕ್ಟರ್ ಗ್ರೇ ಕಿಟಕಿಯಿಂದ ಇವನನ್ನೇ ರಸ್ತೆಯಲ್ಲಿ ನೋಡಿದ್ದನು.

ನಗುತ್ತಾ ಬ್ಲೇಕ್ ಹೇಳಿದನು—'ಏನು ನೋಡುತ್ತೀರಿ, ಮಿಸ್ಟರ್ ಗ್ರೇ? ನಾನು ಬ್ಲೇಕ್. ನೀವು ಥಟ್ಟನೆ ಗುರುತಿಸವೆ ಇರುವುದಿರಲಿ. ಇಲ್ಲಿಂದ ಹೊರಟು ಹೋಗುತ್ತಿದ್ದ ಇನ್ಸ್ಪೆಕ್ಟರ್ ಹಾರ್ಕರನ ಕೈಯಲ್ಲಿಯೇ ನಾನು ವರ್ತಮಾನ ಪತ್ರಿಕೆಯನ್ನು ಮಾರಾಟ ಮಾಡಿದೆನು. ಆದರೂ ಕೂಡ ನನ್ನನ್ನು ಆಗ ಅವನು ಗುರುತಿಸಲಾರದೆ ಹೋದನು. ಇರಲಿ. ಕೋಣೆಯೊಳಗೆ ಹೋಗಿ ಕುಳಿತು ಮಾತಾಡೋಣ ನಡೆಯಿರಿ.''

ಹೀಗೆ ಹೇಳಿ ಬ್ಲೇಕನು ನೆಲದ ಮೇಲೆ ಬಿದ್ದಿದ್ದ ಟೋಪಿಯನ್ನು ಎತ್ತಿಕೊಂಡು ಪ್ರೀತಿಯಿಂದ ಅದರ ಮೇಲೆ ಕೈಯಾಡಿಸುತ್ತ ಹೇಳಿದನು:—' ದೊಡ್ಡ ದೊಡ್ಡ ಸಂದರ್ಭಗಳಲ್ಲಿ ಇದು ಬಹಳ ಉಪಕಾರವನ್ನು ಮಾಡಿದೆ ಮಿಷ್ಟರ್ ಗ್ರೇ!"

ಒಳಗೆ ಹೋಗಿ ಕುಳಿತುಕೊಂಡ ನಂತರ ಗ್ರೇ ಕೇಳಿದನು:—"ಆದರೆ ಆ ಮುದುಕ?........ಅವನು ಓಡಿಯೇ ಹೋದನೇ?''

ಬ್ಲೇಕ್- "ಹುಂ, ಓಡಿದನು; ಆದರೆ ಅವನು ನಮ್ಮ ಕೈಯಿಂದ ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳಲಾರನು. ನಾವಿಕನ ವೇಷದಲ್ಲಿದ್ದ ಯುವಕನೊಬ್ಬನು ರಸ್ತೆಯಲ್ಲಿ ನನ್ನ ಕೈಯಿಂದ ವರ್ತಮಾನ ಪತ್ರಿಕೆಯನ್ನು ಕೊಂಡುಕೊಳ್ಳುತ್ತಿದ್ದುದನ್ನು ನೀವು ನೋಡಿದ್ದೀರಷ್ಟೆ? ಅವನು ನನ್ನ ಸಂಗಡಿಗನಾದ ಟಿಂಕರ್. ಟಿಂಕರನೇ ಈಗ ಆ ಮುದುಕನನ್ನು ಹಿಂಬಾಲಿಸಿ ಹೋಗಿರುವನು.''

ಗ್ರೇ:—"ಆದರೆ ಆ ಮುದುಕನ್ಯಾರು?''

ಬ್ಲೇಕ್:—"ನಾನೂ ಕೂಡ ಅದನ್ನೇ ಕಂಡುಹಿಡಿಯಲೆತ್ನಿಸುತ್ತೇನೆ. ಟಿಂಕರನು ಸರಿಯಾಗಿ ಹಿಂಬಾಲಿಸಿದರೆ ಅದನ್ನು ಕಂಡು ಹಿಡಿಯದೆ ಇರಲಾರನು. ಸುಮಾರು ಹನ್ನೆರಡು ಗಂಟೆಗಳ ಕಾಲದ ವರೆಗೆ ಗಾಢನಿದ್ರೆಯನ್ನು ಪಡೆಯುವ ಸಂಕಟಕ್ಕೆ ನೀವು ಗುರಿಯಾಗಲಿಲ್ಲವೆಂಬುದೇ ಸದ್ಯದ ಕುಶಲ ವಾರ್ತೆಯಾಗಿದೆ. ಒಳ್ಳೇದು. ಮೊದಲಿನ ಭೇಟಿಯ ಕಾಲದಲ್ಲಿ ನೀವು ಕೆಲವು ಸಂಗತಿಗಳನ್ನು ಹೇಳದೆ ಅಡಗಿಸಿಟ್ಟುಕೊಂಡಿದ್ದಿರಷ್ಟೆ? ದಯವಿಟ್ಟು ಈಗಾದರೂ ಅದನ್ನೆಲ್ಲ ತಿಳಿಸುವ ಕಷ್ಟವನ್ನು ವಹಿಸುತ್ತೀರಾ? ಆ ಸಂಗತಿಗಳು ಪ್ರಕೃತ ವ್ಯವಹಾರದಲ್ಲಿ ಬಹಳ ಪ್ರಯೋಜನಕಾರಿಯಾಗಬಹುದಾದ ಸಂಭವವಿದೆ. ತೀವ್ರ ವಿವರಿಸಿರಿ.''

"ಅವು ಡಾಕ್ಟರ್ ಮೋಡೀನನಿಗೆ ಸಂಬಂಧಿಸಿದವುಗಳಾಗಿವೆ." ಎಂದು ಹೇಳಿ ಡಾಕ್ಟರ್ ಗ್ರೇ ವಿವರಿಸತೊಡಗಿದನು:-ಯಾವ ರೋಗಿಯ ಶರೀರದೊಳಗೆ ಮೋಡೀನನು ಕೆನ್ಸರಿನ ವಿಷವನ್ನು ಪ್ರವೇಶಗೊಳಿಸಿರುವನೆಂದು ತನಗೆ ಸಂಶಯಬಂದಿದ್ದಿತೋ, ಆ ಹನ್ನೊಂದನೇ ನಂಬರಿನ ರೋಗಿಯ ಎಲ್ಲಾ ವಿಚಾರವನ್ನೂ ಬ್ಲೇಕನಿಗೆ ತಿಳಿಸಿದನು. ಬ್ಲೇಕನು ಗ್ರೇಯ ಮಾತನ್ನು ಲಕ್ಷ್ಯವಿಟ್ಟು ಆಲಿಸುತ್ತಿದ್ದನು. ನಡುನಡುವೆ ಒಂದೊಂದು ಪ್ರಶ್ನೆಯನ್ನೂ ಮಾಡುತ್ತಿದ್ದನು. ಅದರಿಂದ ರೋಗನಿದಾನವಿಷಯಕವಾದ ತಿಳಿವಳಿಕೆಯೂ ಬ್ಲೇಕನಿಗೆ ತಕ್ಕಷ್ಟಿದೆ ಎಂಬುದು ಪ್ರಕಟವಾಗುತ್ತಿದ್ದಿತು.

ತನ್ನ ಕಥೆಯನ್ನೆಲ್ಲಾ ಹೇಳಿ ಮುಗಿಸಿದ ನಂತರ ಗ್ರೇ ಹೇಳಿದನು:-ನನ್ನ ಹತ್ತಿರ ಆ ನೋಟ್ ಬುಕ್ ಇಲ್ಲದಿರುವಾಗ ಈ ವಿಷಯದಲ್ಲಿ ನಾನು ನಿಮಗೆ ಎಷ್ಟು ತಿಳಿಸಲು ಸಾಧ್ಯವೋ ಅಷ್ಟನ್ನೂ ತಿಳಿಸಿಬಿಟ್ಟಿರುವೆನು. ನನಗಿರುವ ಕೆಲವು ತೊಂದರೆಗಳನ್ನು ನೀವೂ ಚೆನ್ನಾಗಿ ಅರಿತಿರಬಹುದು. ನನ್ನ ನೋಟ್ ಬುಕ್ಕಿನಲ್ಲಿ ವಿವರಿಸಿ ಬರೆದ ಕೆಲವು ಸಂಗತಿಗಳ ಸಹಾಯವಿಲ್ಲದೆ ಡಾಕ್ಟರ್ ಮೋಡೀನನ ಮೇಲೆ ಬಹಿರಂಗವಾಗಿ ಮೊಕದ್ದಮೆ ಹೂಡುವುದೆಂಬುದು ನನ್ನಿಂದೆಂದೂ ಸಾಧ್ಯವಾಗದಿರುವ ವಿಚಾರವಾಗಿದೆ ಅದಲ್ಲದೆ ಡಾಕ್ಟರ್ ಮೋಡೀನನೇ ನನ್ನ ನೋಟ್‌ಬುಕ್ಕನ್ನು ಕದ್ದಿರುವನೆಂಬ ಸಂಗತಿಗೂ ಕೂಡ ನನ್ನ ಬಳಿಯಲ್ಲಿ ಪ್ರಬಲವಾದ ಪ್ರಮಾಣವೇನೂ ಇಲ್ಲ; ಆದರೆ ನನ್ನನ್ನು ಈ ರೀತಿಯಾಗಿ ಕಳವಿನ ಗೊಂದಲದಲ್ಲಿ ಸಿಲುಕಿಸಿರುವುದರಲ್ಲಿ ಯಾವದಾದರೊಂದು ವಿಧವಾಗಿ ಅವನ ಕೈಯೂ ಸೇರಿರುವುದೆಂಬುದು ಅಸಂಭವವೇನೂ ಅಲ್ಲ."

ಬ್ಲೇಕನು ಕೂಡಲೆ ಯಾವ ಉತ್ತರವನ್ನೂ ಕೊಡಲಿಲ್ಲ. ದುಡುಕಿನ ಅಗತ್ಯವಿಲ್ಲದಿರುವಾಗ ಬ್ಲೇಕನು ಯಾವ ವಿಷಯದಲ್ಲಿಯೂ ಥಟ್ಟನೆ ಉತ್ತರ ಕೊಡುವ ಹವ್ಯಾಸಕ್ಕೆ ಹೋಗುತ್ತಿರಲಿಲ್ಲ. ಒಂದೆರಡು ಮಿನಿಟುಗಳ ವರೆಗೆ ಬ್ಲೇಕನು ಈ ವಿಚಾರಗಳ ಮೇಲೆ ಮನಸ್ಸಿನೊಳಗೇ ಆಲೋಚಿಸಿದ ಮೇಲೆ ಹೇಳಿದನು—"ನೀವು ಡಾಕ್ಟರ್ ಮೋಡೀನನೊಡನೆ ಕೆಲವು ಕಾಲ ಕೆಲಸ ಮಾಡಿರುವಿರಿ. ಅವನ ಸ್ವಭಾವದ ವಿಷಯದಲ್ಲಿಯೂ ನಿಮಗೆ ತಿಳಿದು ಬಂದಿರುವ ವಿಷಯವನ್ನು ನೀವೀಗ ತಿಳಿಸಿದರೆ ಈ ವಿಚಾರದಲ್ಲೇನಾದರೂ ನಿಶ್ಚಯಮಾಡಲು ನನಗನುಕೂಲವಾಗುವುದು."

ಗ್ರೇ ಹೇಳಿದನು—"ಅವನ ಬಹಳ ದೊಡ್ಡ ಪಾಂಡಿತ್ಯ, ಯೋಗ್ಯತೆ, ಬುದ್ಧಿಶಕ್ತಿ ಇವ್ಯಾವುದರಲ್ಲಿಯೂ ನನಗೆ ಸಂಶಯವಿಲ್ಲ. ಅವನು ಎಲ್ಲಾ ಸಂಗತಿಯನ್ನೂ ನೋಡುತ್ತಾನೆ, ಎಲ್ಲವನ್ನೂ ಆಲೋಚಿಸುತ್ತಾನೆ. ನಿಜವಾಗಿ

ಹೇಳುವುದಾದರೆ, ಅವನಿಗೆ ಸರಿಹೋಲುವ ಇನ್ನಾ್ಯರನ್ನೂ ಇಷ್ಟರ ವರೆಗೆ ನಾನು ನೋಡಲಿಲ್ಲ. ಡಾಕ್ಟರ್ ಸ್ಟೆಂಟನರೂ ಕೂಡ ಅವನ ಪಾಂಡಿತ್ಯ, ಬುದ್ಧಿಶಕ್ತಿಗಳನ್ನು ಪ್ರಶಂಸಿಸುತ್ತಾರೆ; ಆದರೆ ಇಷ್ಟಿದ್ದರೂ ಕೂಡ ಅವನ ವ್ಯಕ್ತಿತ್ವ, ರೀತಿ, ನಡತೆ, ಆಚಾರ-ವಿಚಾರಗಳು ಡಾಕ್ಟರ್ ಸ್ಟೆಂಟನರಿಗೂ ರುಚಿಸುವುದಿಲ್ಲ; ನಾನೂ ಕೂಡ ಅವನನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತೇನೆ. ಅವನಲ್ಲಿ ಮನುಷ್ಯತ್ವದ ಗಂಧವೂ ಕೂಡ ಇರುವುದಿಲ್ಲ. ನನಗೆ ತಿಳಿದಿರುವಷ್ಟರ ಮಟ್ಟಿಗೆ ಹೇಳುವುದಾದರೆ, ದೊಡ್ಡ ದೊಡ್ಡ ರೋಗವನ್ನು ಪರಿಹಾರ ಮಾಡುವ ಅದ್ಭುತವಾದ ಅಭಿರುಚಿಯು ಅವನ ಹೃದಯದೊಳಗಿರಬಹುದಾದರೂ ಹಣವನ್ನು ಸಂಪಾದಿಸುವ ಇಚ್ಛೆಯು ಸ್ವಲ್ಪವಾದರೂ ಅವನಿಗಿಲ್ಲ. ಈ ಇಚ್ಛೆಯಿಂದ ಅವನು ಯಾವ ಕೆಲಸವನ್ನು ಮಾಡುವುದೂ ಇಲ್ಲ. ಮನುಷ್ಯಜಾತಿಯ ಮೇಲೆ ಅವನಿಗೆ ಯಾವ ವಿಧವಾದ ಪ್ರೇಮವೂ ಇಲ್ಲ. ಹಾಗಿದ್ದರೂ ಕೂಡ ಆತನು ಎಷ್ಟೋ ದರಿದ್ರ ರೋಗಿಗಳ ಮೇಲೆ ತಕ್ಕಷ್ಟು ಕರುಣೆಯನ್ನು ಪ್ರಕಟಿಸುತ್ತಿರುವಂತೆ ಕಾಣಿಸುತ್ತಾನೆ. ಇದನ್ನು ನಾನು ಕೇಳಿರುವೆನು—ಹನ್ನೊಂದನೆಯ ನಂಬರಿನ ರೋಗಿಯು ತಾನೇ ಎದ್ದು ಕೆಲಸಮಾಡುವಷ್ಟು ಶಕ್ತಿಯನ್ನು ಪಡೆಯುವವರೆಗೆ ಮೋಡೀನನು ಅವನ ಹೆಂಡತಿಗೆ ಖರ್ಚಿಗಾಗಿ ತಕ್ಕಷ್ಟು ಹಣವನ್ನು ಕೊಟ್ಟಿರುವನು. ಹೀಗಿದ್ದರೂ ಕೂಡ ಈ ಉದ್ಯೋಗವಲ್ಲದೆ ಇತರ ಉಪಾಯಗಳಿಂದ ಹಣವನ್ನು ಸಂಪಾದಿಸುವ ಇಚ್ಛೆಯು ಅವನಿಗೆ ಪ್ರಬಲವಾಗಿರುವುದೆಂಬ ವಿಷಯದಲ್ಲಿ ನನಗೆ ಸಂಶಯವೇ ಇಲ್ಲ.''

ಬ್ಲೇಕ್ ಹೇಳಿದನು—''ನೀವು ಈ ಸಮಯದಲ್ಲಿ ಡಾಕ್ಟರ್ ಮೋಡೀನನಿಗೆ ವಿರುದ್ಧವಾಗಿಯೇ ಎಲ್ಲಾ ಸಂಗತಿಗಳನ್ನೂ ಹೇಳುತ್ತಿರುವಿರೆಂಬುದನ್ನು ಅರಿತಿರುವಿರಾ?''

ಗ್ರೇ—''ಚೆನ್ನಾಗಿ ಅರಿತಿರುವೆನು. ಆದರೂ ಕೂಡ ನಾನು ಹೇಳುತ್ತಿರುವುದೆಲ್ಲವೂ ತೀರ ಸತ್ಯವಾಗಿರುವುದೆಂಬ ನಿಶ್ಚಯವು ನನಗಿದೆ. ಡಾಕ್ಟರ್ ಮೋಡೀನನು ಈ ಸಮಯದಲ್ಲಿ ದೊಡ್ಡ ದೊಡ್ಡ ಗಣ್ಯ ವಿದ್ವಾಂಸರಲ್ಲಿ ಪರಿಗಣಿಸಲ್ಪಡುತ್ತಿರುವನೆಂದು ಡಾಕ್ಟರ್ ಸ್ಟೆಂಟನರು ಹೇಳುತ್ತಾರೆ. ಇಂದಿಗೆ ಎರಡು ವರ್ಷಕ್ಕಿಂತ ಮುಂಚೆ ಡಾಕ್ಟರೀ ಪ್ರಪಂಚದಲ್ಲಿ ಅವನ ಗಣನೆಯೇ ಇರಲಿಲ್ಲ. ಸೈವಾಯಿಲ್‌ನಲ್ಲಿದ್ದಾಗ ಇವನ ಗಣನೆಯು ಸಾಮಾನ್ಯ ಡಾಕ್ಟರರಲ್ಲಿದ್ದಿತು. ಇವನು ಗುಪ್ತರೂಪದಿಂದಲೇ ಪಾಂಡಿತ್ಯವನ್ನು ಪಡೆಯುತ್ತಿರುತ್ತಾನೆಂದು ನನ್ನ ಊಹೆ ಇದೆ.''

ಬ್ಲೇಕ್—"ನನ್ನದೂ ಅದೇ ಅಭಿಪ್ರಾಯವಿದೆ."

ಗ್ರೇ:—"ಅಂತಹ ದೊಡ್ಡ ಮನುಷ್ಯನೆನಿಸಿದ ಡಾಕ್ಟರ್ ಮೇಡೀನನು ನನ್ನ ನೋಟ್ ಬುಕ್ಕನ್ನು ಕದಿಯುವಂತಹ ನೀಚ ಕರ್ಮಕ್ಕೆ ಕೈ ಹಾಕಲು ಕನಸಿನಲ್ಲಿಯೂ ಆಲೋಚಿಸಲಾರನೆಂಬುದೇನೋ ಒಪ್ಪತಕ್ಕ ಸಂಗತಿಯಾಗಿದೆ; ಆದರೆ ಅವನೊಬ್ಬನಿಗಲ್ಲದೆ ಇನ್ಯಾರಿಗೂ ನನ್ನ ಆ ನೋಟ್ ಬುಕ್ಕಿನಿಂದ ಪ್ರಯೋಜನವಿಲ್ಲ. ಅದಲ್ಲದೆ ರಸಾಯನ ಶಾಲೆಯ ಬೀಗದ ಕೈ ಸ್ಟೆಂಟನ್, ಮೇಡೀನಾ, ನಾನು ಇವರಿಷ್ಟು ಜನರಲ್ಲದೆ ಇನ್ಯಾರ ಬಳಿಯಲ್ಲಿಯೂ ಇಲ್ಲ; ಮತ್ತು ನನ್ನನ್ನು ಶತ್ರುವೆಂದು ತಿಳಿಯಬಲ್ಲ, ನನ್ನ ವಿರುದ್ಧವಾಗಿ ಗೊಂದಲವೆಬ್ಬಿಸಬಲ್ಲ, ವ್ಯಕ್ತಿ ಎಂದರೆ ಮೇಡೀನನಲ್ಲದೆ ಇನ್ಯಾರೂ ಇಲ್ಲ."

ಬ್ಲೇಕನು ಅನಿಶ್ಚಿತಭಾವದಿಂದ ತನ್ನ ತಲೆಯನ್ನಲ್ಲಾಡಿಸಿದನು. ಯಾವುದೋ ಒಂದು ಪುಂಡರ ತಂಡದೊಂದಿಗೆ ಡಾಕ್ಟರ್ ಮೇಡೀನನಂತಹ ಮನುಷ್ಯನ ಸಂಪರ್ಕದಿರುವುದೆಂಬ ವಿಷಯದಲ್ಲಿ ನಂಬಿಕೆ ಬರುವುದು ಕಠಿಣವಾಗಿದ್ದಿತು. ಬ್ಲೇಕನ ಮನಸ್ಸಿನಲ್ಲಿ ಥಟ್ಟನೆ ಇನ್ನೊಂದು ಭಾವನೆಯು ಹೊಳೆಯಿತು. ಗ್ರೇನನ್ನು ಕೇಳಿದನು:—"ಒಳ್ಳೇದು. ಡಾಕ್ಟರ್ ಗ್ರೇ! ಯಾವ ಅಪರಾಧಿಗಳಿಗಾದರೂ ಚಿಕಿತ್ಸೆ ನಡೆಸುವ ಸಂದರ್ಭವು ನಿಮಗೆಂದಾದರೂ ಒದಗಿದ್ದಿತೇ? ಹಾಗಿದ್ದರೆ ಅಂತಹ ಮನುಷ್ಯನನ್ನು ಎರಡನೆಯ ಸಾರಿ ನೋಡಿದಾಗ ನೀವು ಗುರುತಿಸಬಲ್ಲವರಾದರೆ, ಆಗ ಆ ದುಷ್ಟ ಫಿತೂರಿಗೆ ತೊಂದರೆ ಬರಬಹುದಲ್ಲವೆ?"

ಗ್ರೇ:—"ನಿಜ. ಇಂತಹ ಸಂದರ್ಭವೊಂದು ಇಂದಿಗೆ ಸುಮಾರು ಒಂದು ವರ್ಷದ ಹಿಂದೆ ನನಗೆ ದೊರಕಿದ್ದಿತು. ನಾನು ಒಬ್ಬ ಸ್ನೇಹಿತನೊಡನೆ ಲಿವರ್‌ಪೂಲಿನಲ್ಲಿ ಇದ್ದೆನು. ಅವನ ಆಸ್ಪತ್ರೆಯು ಬಂದರದ ಸಮೀಪದಲ್ಲಿಯೇ ಇದ್ದಿತು. ಒಂದು ದಿನ ಅಲ್ಲಿಗೆ ಪೋಲೀಸರು ಒಬ್ಬ ಮನುಷ್ಯನನ್ನು ಕರೆತಂದಿದ್ದರು. ಅವನ ಶರೀರದಲ್ಲೆಲ್ಲ ಚೂರಿಯಿಂದಾದ ಗಾಯಗಳಿದ್ದವು. ನಾವಿಬ್ಬರೂ ಸೇರಿ ಅವನ ಗಾಯಗಳಿಗೆ ಮುಲಾಮು ಪಟ್ಟಿ ಕಟ್ಟಿದ್ದೆವು. ಅವನು ತನ್ನ ದುರವಸ್ಥೆಯ ವಿಷಯವಾಗಿ ಮಾತಾಡುತ್ತ, ಕೆಲವು ಜನ ಪುಂಡರು ಕತ್ತಲೆಯಲ್ಲಿ ಆಕಸ್ಮಾತ್ತಾಗಿ ತನ್ನ ಮೇಲೆ ಬಿದ್ದು ಗಾಯಪಡಿಸಿದರೆಂದು ಹೇಳಿ ನಮ್ಮನ್ನು ಸಮಾಧಾನ ಪಡಿಸಿದ್ದನು; ಆದರೆ ಅದೃಷ್ಟವಶಾತ್ತಾಗಿ ಅದೇ ದಿನ ಸುಮಾರು ಅರ್ಧಮೈಲಿನ ದೂರದಲ್ಲೊಂದು ಕಡೆ ಇನ್ನೊಬ್ಬ ಮನುಷ್ಯನಿಗೆ ಹಾಗೆಯೇ ಮೈಯೆಲ್ಲ ಚೂರಿಯ ಗಾಯಗಳಾಗಿ ರಸ್ತೆಯಲ್ಲಿ ಪೋಲೀಸರಿಗೆ ಸಿಕ್ಕಿದನು. ಆಗ ಪೋಲೀಸರಿಗೆ ಮೊದಲಿ

ನವನ ಮೇಲೆ ಸಂಶಯವುಂಟಾಯಿತು. ನಿಶ್ಚಯವಾಗಿಯೂ ಇವರಿಬ್ಬರು ಪರಸ್ಪರವಾಗಿ ಹೋರಾಡಿ ಈ ಗತಿಗೆ ಬಂದಿರುವರೆಂದು ಪೋಲೀಸರು ನಿರ್ಣಯ ಮಾಡಿದರು. ಅವರಿಗೆ ವಿರುದ್ಧವಾದ ಯಾವ ಪ್ರಮಾಣವೂ ಆಗ ಪೋಲೀಸರ ಬಳಿಯಲ್ಲಿಲ್ಲವಾದುದರಿಂದ, ಅವರ ಮೇಲೆ ಯಾವ ಕ್ರಮವನ್ನು ಜರುಗಿಸುವದಕ್ಕೂ ಅನುಕೂಲವಿರಲಿಲ್ಲ. ಅದಲ್ಲದೆ ಅವರಿಬ್ಬರೂ ಪರಸ್ಪರವಾಗಿ ತಮಗೆ ಗುರುತೇ ಇಲ್ಲವೆಂದು ಪ್ರಮಾಣ ಮಾಡಿದರು! ಹೀಗಾಗಿ ಕೊನೆಗೆ ಆ ರಹಸ್ಯವು ಹಾಗೆಯೇ ಉಳಿದು ಹೋಯಿತು.''

ಬ್ಲೇಕನು ಕೇಳಿದನು:—"ಆ ಮನುಷ್ಯನನ್ನು ನೀವು ಗುರುತಿಸಬಲ್ಲಿರಾ? ಆ ಕಾಲದ ನಂತರ ಪುನಃ ಅವನೆಲ್ಲಿಯಾದರೂ ನಿಮ್ಮ ಕಣ್ಣಿಗೆ ಕಾಣಿಸಿರುವನೆ?"

ಗ್ರೇ ಉತ್ತರಕೊಟ್ಟನು:—"ಅವನ ಎಡಗಡೆ ಗಲ್ಲದ ಮೇಲೆ ದೊಡ್ಡ ಗಾಯದ ಗುರುತೊಂದಿದೆ. ಅದನ್ನು ಕಂಡು ನಾನೆಲ್ಲಿಬೇಕಾದರೂ ಬಹಳ ಸುಲಭವಾಗಿ ಅವನನ್ನು ಗುರುತಿಸಬಲ್ಲನೆಂಬ ನಿಶ್ಚಯವು ನನಗಿದೆ; ಆದರೆ ಆ ಮೇಲೆ ಅವನು ಎಂದೂ ನನ್ನ ಕಣ್ಣಿಗೆ ಬಿದ್ದಿರಲಿಲ್ಲ. ಏನಾದರೂ ಇರಲಿ. ಮಿಸ್ಟರ್ ಬ್ಲೇಕ್! ಅವನಿಗೂ ಈ ವ್ಯವಹಾರಕ್ಕೂ ಯಾವ ತರದ ಸಂಪರ್ಕವೂ ಇರಲಾರದೆಂದು ನನಗನಿಸುತ್ತದೆ.''

ಬ್ಲೇಕ್:—"ಈ ಪ್ರಪಂಚದಲ್ಲಿ ಯಾವ ಮಾತನ್ನೂ ನಿಶ್ಚಿತರೂಪದಿಂದ ಹೇಳಲು ಸಾಧ್ಯವಿಲ್ಲ, ಡಾಕ್ಟರ್! ಒಳ್ಳೇದು. ಈ ಮಾತನ್ನು ನಾವು ಈಗ ಇಲ್ಲಿಯೇ ನಿಲ್ಲಿಸಿಬಿಡೋಣ. ಈಗ ನಮ್ಮ ಮುಂದಿರುವ ಪ್ರಥಮ ಕರ್ತವ್ಯವೇನೆಂದರೆ, ನಿಮ್ಮನ್ನು ಗ್ಯಾಸಿನ ಮೂಲಕವಾಗಿ ಮೂರ್ಛೆಹೊಂದಿಸಲು ಮುದುಕನೊಬ್ಬನು ಪ್ರಯತ್ನಿಸಿದನಷ್ಟೆ? ಅದನ್ನು ವಿಮರ್ಶಿಸಬೇಕು. ಇಲ್ಲೊಂದು ವಿಶೇಷವಿದೆ—ಕಳೆದ ರಾತ್ರಿ ಹ್ಯಾಡನ್ ಗಾರ್ಡನ್ನಿನ ಶೀಡ್ಮನ್ ಎಂಬ ರತ್ನವ್ಯಾಪಾರಿಯ ಮೇಲೆ ಯಾವ ವಿಧವಾದ ಗ್ಯಾಸನ್ನು ಉಪಯೋಗಿಸಲಾಗಿದ್ದಿತೋ, ಅದೇ ತರಹದ ಗ್ಯಾಸನ್ನು ನಿಮ್ಮ ಮೇಲೆಯೂ ಉಪಯೋಗಿಸಲಾಗಿದೆ. ಈಗ ಅಮೇರಿಕಾದ ಜೈಲಿನಲ್ಲಿ ಇರುವ ಕೈದಿಯೊಬ್ಬನ ಬೆರಳುಗಳ ಗುರುತು ಶೀಡ್ಮನ್ನನ ಖಜಾನೆ ಪೆಟ್ಟಿಗೆಯ ಮೇಲೆ ಬಿದ್ದಿದೆ.''

ಅನಂತರ ಬ್ಲೇಕನು ಕೃತಕ ಬೆರಳಚ್ಚುಗಳನ್ನು ತಯಾರಿಸುವ ವಿಧಾನವನ್ನು ಗ್ರೇಗೆ ತಿಳಿಸಿ, ಹಾರ್ಕರನಿಗೆ ಮಾಡಿತೋರಿಸಿದ ಫಿಲ್ಮನ್ನೂ ತೋರಿಸಿದನು. ಅನಂತರ ಹೇಳಿದನು:-"ಯಾವನೋ ಒಬ್ಬ ದುಷ್ಟನು ಯಾವುದೋ ಒಂದು ವಿಧದಲ್ಲಿ ನಿಮ್ಮ ಬೆರಳುಗಳ ಗುರುತನ್ನು ಸ್ವಾಧೀನಪಡಿಸಿಕೊಂಡು

ಆ ಸಿಗರೇಟ್ ಕೇಸ್ ಮತ್ತು ಕಾಗದಗಳ ಮೇಲೆ ನಿಮ್ಮ ಬೆರಳುಗಳ ಕೃತಕ ಗುರುತುಗಳನ್ನು ಈ ವಿಧಾನದಿಂದಲೇ ಮಾಡಿಟ್ಟನು. ಅವನು ನಿಮ್ಮ ಬೆರಳುಗಳ ಗುರುತನ್ನು ಯಾವಾಗ ಯಾವ ರೀತಿಯಲ್ಲಿ ತೆಗೆದುಕೊಂಡಿರಬಹುದೆಂಬದನ್ನು ನೀವು ನೆನಪಿಸಿ ಹೇಳಬಲ್ಲಿರಾ? ನೀವು ಈ ಪಕ್ಕದ ಸಣ್ಣಕೋಣೆಯನ್ನು ಕತ್ತಲೆಕೋಣೆಯ ಕೆಲಸಕ್ಕಾಗಿ ಉಪಯೋಗಿಸುತ್ತೀರಲ್ಲವೇ? ಇಷ್ಟರವರೆಗೆ ನಾನು ಈ ಕೋಣೆಯನ್ನು ಪರೀಕ್ಷಿಸಲು ಅವಕಾಶವಾಗಲಿಲ್ಲ. ಈಗದನ್ನು ಪರೀಕ್ಷಿಸಲು ನೀವು ನನಗೆ ಅನುಮತಿಕೊಡುವಿರಾ?"

ಗ್ರೇ—"ಯಾಕಾಗದು? ಫಿಲ್ಮ್‌ಗಳನ್ನು ನಾನು ಬರೀ ಕೈಯಿಂದ ಎಂದೂ ಮುಟ್ಟುತ್ತಿರಲಿಲ್ಲ. ಕೈಚೀಲವನ್ನು ಹಾಕಿಕೊಂಡೇ ಕೆಲಸ ಮಾಡುತ್ತಿದ್ದೆನು. ಇತ್ತೀಚೆಗೆ ಸುಮಾರು ಹದಿನೈದು ದಿನಗಳಿಂದ ನಾನು ಡೆವಲಪಿಂಗಿನ ಯಾವ ಕೆಲಸವನ್ನೂ ಮಾಡಲಿಲ್ಲ."

ಬ್ಲೇಕ್:—"ಆದರೆ ಡೆವಲಪಿಂಗ್ ಡಿಶ್‌ಗಳನ್ನು ನೀವು ಬರೀ ಕೈಯಿಂದ ಮುಟ್ಟಿರುವ ಸಂಭವವಿದೆ. ಆದ್ದರಿಂದ ಅವುಗಳಲ್ಲಿ ನಿಮ್ಮ ಬೆರಳ ಗುರುತುಗಳು ಬಿದ್ದಿರಬಹುದು."

ಹೀಗೆ ಹೇಳಿ ಬ್ಲೇಕನು ಆ ಕತ್ತಲೆಯ ಸಣ್ಣಕೋಣೆಯೊಳಗೆ ಹೋಗಿ ಸ್ವಲ್ಪ ಹೊತ್ತು ಹುಡುಕಾಡಿ ಪರೀಕ್ಷಿಸಿ, ಅಲ್ಲಿ ಬಿದ್ದಿದ್ದ ಫಿಲ್ಮ್ ಡೆವಲಪ್ ಮಾಡುವ ಮೂರು ಡಿಶ್‌ಗಳನ್ನು ಎತ್ತಿಕೊಂಡು ಬಂದು ಎದುರಿಗಿದ್ದ ಟೇಬಲಿನ ಮೇಲೆ ಇಟ್ಟನು. ಅವುಗಳಲ್ಲಿ ಒಂದು ಡಿಶ್ಶಿನ ಮಗ್ಗುಲಿನಲ್ಲಿ ಬೆರಳುಗಳ ಎಷ್ಟೋ ಕಪ್ಪು ಗುರುತುಗಳು ಬಿದ್ದಿದ್ದವು.

ಆ ಗುರುತುಗಳನ್ನು ನೋಡುತ್ತಲೇ ಗ್ರೇ ಆಶ್ಚರ್ಯದಿಂದ ಹೇಳಿದನು: "ಹಾ! ಇದೇನು?"

ಬ್ಲೇಕನು ನಸುನಕ್ಕು ಹೇಳಿದನು:—"ಕಾರ್ಬನ್. ಇದರ ಮೇಲೆ ಬಿದ್ದಿರುವ ಬೆರಳುಗಳ ಗುರುತುಗಳನ್ನು ಹೋಗಲಾಡಿಸಲು ಇದ್ದಿಲಿನ ಹುಡಿಯನ್ನು ಉಪಯೋಗಿಸಲಾಗಿದೆ. ಈ ಗುರುತುಗಳು ಸ್ಪಷ್ಟವಿಲ್ಲ; ಆದರೆ........"

ನಡುವೆಯೇ ಡಾಕ್ಟರ್ ಗ್ರೇ ಹೇಳಿದನು:-"ಎಲೋ! ಇವುಗಳಲ್ಲಿ ನನ್ನ ದೊಡ್ಡ ಡಿಶ್ ಒಂದು ಕಾಣಿಸುವುದೇ ಇಲ್ಲವಲ್ಲ! ನಾನು ಅದನ್ನು ಫೋಟೋವಿನ ಚಿತ್ರವನ್ನು ತೊಳೆಯುವ ಕಾರ್ಯದಲ್ಲಿ ಉಪಯೋಗಿಸುತ್ತಿದ್ದೆನು."

ಬ್ಲೇಕ್—"ಸರಿ. ಇದರಿಂದೇನು ತಿಳಿಯುವುದೆಂದರೆ, ಬೆರಳ ಗುರುತುಗಳು ಈ ಡಿಶ್‌ಗಳ ಮೇಲೆ ಬಿದ್ದುದಕ್ಕಿಂತ ಹೆಚ್ಚಾಗಿ ಆ ದೊಡ್ಡ ಡಿಶ್ಶಿನ ಮೇಲೆ ಬಿದ್ದಿರಬೇಕು. ಆದಕ್ಕಾಗಿಯೇ ದುಷ್ಟನೊಬ್ಬನು ಸಿಗರೇಟ್ ಕೇಸ್

ಮತ್ತು ನೋಟ್ ಪೇಪರಿನ ಮೇಲೆ ನಿಮ್ಮ ಬೆರಳ ಗುರುತನ್ನು ತಯಾರಿಸುವ ದಕ್ಕಾಗಿ ಆ ಡಿಶ್ಶನ್ನು ನಿಶ್ಚಯವಾಗಿ ಕದ್ದೊಯ್ದಿರುವನು. ಈ ಡಿಶ್ಶುಗಳ ಜೊತೆಗೇ ಅಲ್ಲಿರುವ ನೀರಿನ ಪಾತ್ರೆಯನ್ನೂ ಎತ್ತಿ ತಂದಿರುವೆನು. ಇದರ ಮೇಲೆ ಬಿದ್ದಿರುವ ಗುರುತುಗಳ ಮೇಲೆಯೂ ಕೂಡ ಇದ್ದಲಿನ ಹುಡಿಯನ್ನು ಉಪಯೋಗಿಸಲಾಗಿದೆ. ಫೋಟೋವಿನ ಚಿತ್ರವನ್ನು ಛಾಪಿಸುವ ಕಾಗದದ ಪ್ಯಾಕೆಟ್ಟುಗಳ ಮೇಲೆ ಬಿದ್ದಿರುವ ಗುರುತುಗಳನ್ನೂ ಕೂಡ ಹೀಗೆಯೇ ಪರೀಕ್ಷಿಸಿರುವೆನು. ಕಾರ್ಯವನ್ನು ಬಹಳ ಜಾಗರೂಕತೆಯಿಂದ ನಿರ್ವಹಿಸಿರುವರು ಮಿಸ್ಟರ್ ಗ್ರೇ! ಯಾವನೋ ಒಬ್ಬ ಪುಂಡನು ನಿಶ್ಚಯವಾಗಿ ಇಲ್ಲಿ ಅರ್ಧ ಗಂಟೆಕಾಲದವರೆಗೆ ಹಾಜರಿದ್ದನು. ನಿಮ್ಮ ಕೋಣೆಗೆ ಹಾಕಿದ್ದ ಬೀಗದ ಅಚ್ಚನ್ನು ತೆಗೆದುಕೊಂಡು ಇಲ್ಲಿಂದ ಗುಟ್ಟಾಗಿ ಹೊರಟು ಹೋಗಿ, ಆ ಬೀಗಕ್ಕೆ ಸರಿಯಾದ ಕೈಯೊಂದನ್ನು ತಯಾರು ಮಾಡಿಕೊಂಡು ಬಂದು ಬಾಗಿಲಿನ ಬೀಗವನ್ನು ತೆರೆದಿರುವನು. ಇದೇನೂ ಆ ಪುಂಡರಿಗೆ ಹೆಚ್ಚಿನ ಕಷ್ಟದ ಕೆಲಸ ವಲ್ಲ. ಕಳವಿನ ಮಾಲುಗಳನ್ನಿಟ್ಟಿದ್ದ ಆ ರಂಧ್ರವು ಉಳಿದ ಎಲ್ಲಾ ಏರ್ಪಾಡು ಗಳಾದ ನಂತರವೇ ತಯಾರಿಸಲ್ಪಟ್ಟಿದ್ದಾಗಿದೆ. ಈ ಎಲ್ಲಾ ಕಪಟ ತಂತ್ರವನ್ನೂ ನಿಪುಣನಾದ ಪುಂಡನೊಬ್ಬನು ಮಾಡಿರುವನು; ಆದರೆ ಆ ಕಾರ್ಯಕ್ರಮ ವನ್ನೆಲ್ಲಾ ಉಪಯೋಗಿಸುವುದರ ಭಾರವು ಯಾರಲ್ಲಿ ಇಡಲ್ಪಟ್ಟಿದ್ದಿತೋ ಅವರು ಮಾತ್ರ ಜಾಗರೂಕತೆಯಿಂದ ಈ ಕಾರ್ಯವನ್ನು ನಿರ್ವಹಿಸಲಿಲ್ಲವೆಂದು ಹೇಳ ಬಹುದು. ಅವರ ಪ್ರಮಾದದ ಲಾಭವನ್ನು ನಾವೀಗ ಪಡೆಯಬೇಕು."

ಗ್ರೇ—"ನನ್ನ ಮೇಲೆ ಗ್ಯಾಸನ್ನು ಪ್ರಯೋಗಿಸಿದ ಆ ಮನುಷ್ಯನು ಯಾವ ವಿಧದಿಂದಾದರೂ ಹಿಡಿಯಲ್ಪಟ್ಟರೆ...."

ಬ್ಲೇಕ್ ಹೇಳಿದನು—"ನಾನು ಅವನನ್ನು ಹಿಡಿಯಬೇಕೆಂದೇನೂ ಇಚ್ಛಿಸಿರಲಿಲ್ಲ. ಅವನು ಎಲ್ಲಿಂದ ಬಂದಿರುವನು ಮತ್ತು ಎಲ್ಲಿಗೆ ಹೋಗು ವನು? ಇದನ್ನು ತಿಳಿಯಬೇಕೆಂಬುದೇ ನನ್ನ ಇಚ್ಛೆಯಾಗಿದ್ದಿತು. ಈ ಕಾರ್ಯ ವನ್ನು ನಮ್ಮ ಟಿಂಕರನು ಸುಲಭವಾಗಿ ಪೂರ್ಣಮಾಡಬಲ್ಲನು. ಆದಿರಲಿ. ನಿಮ್ಮ ಈ ಬಿಡಾರದ ಮೇಲ್ವಿಚಾರಣೆಯ ಭಾರವು ಯಾರ ಮೇಲಿದೆ?"

ಗ್ರೇ—"ಮಿ. ಹಾಬ್ಸಳ ಮೇಲಿರುವುದು. ಅಡಿಗೆ ಮಾಡುವುದು, ಪಾತ್ರೆ ತಿಕ್ಕುವುದು, ತೊಳೆಯುವದು ಮುಂತಾದ ಕೆಲಸಗಳನ್ನೆಲ್ಲಾ ಅವಳೇ ಮಾಡುದಳು. ಹಾಬ್ಸ್ ಎಂದರೆ ಒಬ್ಬ ಜಾಣಳಾದ ಹೆಂಗಸಾಗಿರುವಳು.

ಬ್ಲೇಕ್—"ಹಾಗಾದರೆ ಒಳ್ಳೆಯದಾಯಿತು. ಅವಳನ್ನೂ ನಿಮ್ಮೊಡನೆ ಸೇರಿಸಿಕೊಳ್ಳಿರಿ. ನಾಳೆ ಬೆಳಿಗ್ಗೆ ಅಡಿಗೆ ಮುಂತಾದ ಎಲ್ಲಾ ಕೆಲಸಗಳನ್ನೂ

ನಿತ್ಯದಂತೆಯೇ ಮಾಡುತ್ತಾ, ನೀವು ಇಲ್ಲಿಯೇ ಇರುವಿರೆಂಬುದನ್ನು ಅವಳು ಎಲ್ಲರ ಬಳಿಯಲ್ಲಿಯೂ ಪ್ರಕಟಿಸುತ್ತಿರಬೇಕು. ನಿಮ್ಮ ಅಭಿಪ್ರಾಯವೇನು? ಅವಳು ನಿಮಗಧೀನಳಾಗಿ ಇಷ್ಟು ಕಾರ್ಯವನ್ನು ಮಾಡಬಲ್ಲಳೇ?''

ಗ್ರೇ —''ಓಹೋ! ಮಾಡದೆ ಏನು?''

ಬ್ಲೇಕ್—''ಹಾಗಾದರೆ ಈಗಲೇ ಹೋಗಿ ಅವಳಿಗೆ ಎಲ್ಲವನ್ನೂ ತಿಳಿಸಿ ಬನ್ನಿರಿ. ಅನಂತರ ನೀವು ನನ್ನೊಡನೆ ಹಿಂದಣ ದಾರಿಯಿಂದ ಹೊರಗೆ ನಡೆಯಿರಿ ನಿಮ್ಮ ಮೇಲೆ ಈಗ ನಡೆಯುತ್ತಿರುವ ಕಾರ್ಯಕ್ರಮವನ್ನು ನೋಡಿದರೆ ಯಾವ ತರಹದಿಂದಾದರೂ ನಿಮ್ಮನ್ನು ವೆಂಟ್‌ವರ್ತ್ ಆಸ್ಪತ್ರೆಯಿಂದ ದೂರ ವಿರಿಸುವುದೇ ಫುಂಡರ ಮುಖ್ಯೋದ್ದೇಶವಿರಬಹುದಾಗಿ ನನ್ನ ಮನಸ್ಸಿಗನಿಸುತ್ತದೆ. ಆದ್ದರಿಂದ ಪುನಃ ನೀವು ಈ ಮನೆಯಲ್ಲಿಯೇ ವಾಸವಿರಹತ್ತಿರುವಿರೆಂದು ವ್ಯಕ್ತಪಡಿಸಿದ ಬಳಿಕ ಇಲ್ಲಿ ಇನ್ನಾವ ನವೀನ ಘಟನೆಯು ಆಗುವದೆಂಬದನ್ನು ನೋಡಬೇಕಾಗಿದೆ. ಈ ನಡುವೆ ನೀವು ನನ್ನ ಮನೆಯಲ್ಲಿಯೇ ವಾಸಮಾಡಬೇಕಾಗುವದು.''

ಮೆ. ಹಾಬ್ಸಳಿಗೆ ಡಾ. ಗ್ರೇ ಎಲ್ಲ ವಿಚಾರವನ್ನೂ ತಿಳಿಸಿದ ನಂತರ ಬ್ಲೇಕ್ ಮತ್ತು ಗ್ರೇ ಹಿಂದಣ ದಾರಿಯಿಂದ ಹೊರಗೆ ನಡೆದರು. ಒಂದು ಒಂದು ಟ್ಯಾಕ್ಸಿಯಲ್ಲಿ ಕುಳಿತು ಇಬ್ಬರೂ ಬೇಕರ್ ಸ್ಟ್ರೀಟಿಗೆ ಹೋದರು.

ದಾರಿಯಲ್ಲಿ ಬ್ಲೇಕ್ ಹೇಳಿದನು:—''ನಿಮ್ಮ ಮನೆಯ ಮೇಲೆ ಫುಂಡರು ನಿಶ್ಚಯವಾಗಿ ದೃಷ್ಟಿ ಇಟ್ಟಿರುವರೆಂದು ನಾನು ಭಾವಿಸುತ್ತೇನೆ. ಆದ್ದರಿಂದ ನಾವು ಸಾಧ್ಯವಾದಷ್ಟು ಜಾಗರೂಕತೆ ಇಟ್ಟೇ ನಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವುದು ಉಚಿತವಾಗಿದೆ. ಇಷ್ಟರೊಳಗೆ ನಮ್ಮ ಟಿಂಕರನು ಮನೆಗೆ ಹಿಂದಿರುಗಿರಬಹುದು. ಅವನಿಂದ ಈಗ ಇನ್ನಾವುದಾದರೂ ಹೊಸ ವಿಷಯಗಳು ತಿಳಿಯಬಹುದಾಗಿವೆ.''

ಆದರೆ ಮನೆಗೆ ಹೋಗಿ ನೋಡಿದಾಗ ಟಿಂಕರನು ಇನ್ನೂ ಬಂದೇ ಇರಲಿಲ್ಲ. ಬ್ಲೇಕನು ಬಹಳ ಹೊತ್ತು ಕಾದು ನೋಡಿದನು. ಆದರೂ ಟಿಂಕರನು ಬರುವ ಸುಳಿವು ಕಾಣಿಸಲಿಲ್ಲ. ರಾತ್ರಿ ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ಹೊರಬಾಗಿಲನ್ನು ಯಾರೋ ತಟ್ಟುತ್ತಿರುವಂತೆ ಶಬ್ದವಾಯಿತು. ಕೂಡಲೆ ಹೋಗಿ ಬ್ಲೇಕನು ಬಾಗಿಲನ್ನು ತೆರೆದನು. ಬಾಗಿಲಿನ ಬಳಿಯಲ್ಲಿ ಟಿಂಕರನು ನಿಂತಿದ್ದನು.

ಟಿಂಕರನ ದೇಹಸ್ಥಿತಿಯು ಬಲು ಶೋಚನೀಯವಾಗಿದ್ದಿತು. ಕಣ್ಣುಗಳು ಬತ್ತಿಹೋಗಿದ್ದವು. ಹೊಟ್ಟೆಯಲ್ಲಿ ಕಳವಳಿಸುತ್ತಿದ್ದಿತು.

ಟಿಂಕರನು ಒಳಗೆ ಬಂದು ಕುಳಿತು ತನ್ನ ಸ್ಥಿತಿಯನ್ನು ಬ್ಲೇಕನಿಗೆ ವಿವರಿಸಿದನು:—ಏನು ಹೇಳಲಿ ಸ್ವಾಮಿ! ಇಂದು ನಾನು ದೊಡ್ಡ ಸಂಕಟದಲ್ಲಿ ಬಿದ್ದಿದ್ದೆನು. ಆ ಮನುಷ್ಯನನ್ನು ನಾನು ಹಿಂಬಾಲಿಸಿದರೂ ಅವನು ಮಾತ್ರ ಹೊರಟೇ ಹೋದನು. ನಾನು ಬೆನ್ನತ್ತಿ ಬರುವೆನೆಂದು ಅವನಿಗೆ ಹೇಗೋ ತಿಳಿದಿರಬೇಕೆಂದು ಭಾವಿಸುತ್ತೇನೆ. ಅವನು ಬಲು ದೂರದವರೆಗೆ ನನ್ನನ್ನು ಸುತ್ತಾಡಿಸಿ, ವಿಲಿಂಗ್ಟನ್ ಸ್ಟ್ರೀಟಿನವರೆಗೆ ನನ್ನನ್ನು ಕರೆದೊಯ್ದನು. ಆಗ ಅವನು ಯಾವ ಮನೆಯನ್ನು ಪ್ರವೇಶಿಸುವನೆಂಬದು ಕೂಡಲೆ ತಿಳಿಯುವದೆಂದು ನಾನು ತವಕದಿಂದ ನೋಡುತ್ತಾ ಹಿಂಬಾಲಿಸುತ್ತಿದ್ದೆನು. ಕೆಲವು ಮನೆಗಳ ಕಡೆಗೆ ಅವನು ಮುಂದುವರಿದುದೇನೋ ನಿಜ; ಆದರೆ ಮುಂದೆ ಹೋಗುತ್ತಾ ಹೋಗುತ್ತಾ ಅವನು ತಟ್ಟನೆ ನಿಂತು ಹಿಂದಿರುಗಿ ಏನೋ ಒಂದು ವಸ್ತುವನ್ನು ನನ್ನ ಮುಖದ ಕಡೆ ಎರಚಿಬಿಟ್ಟನು! ಆದರಿಂದ ನನ್ನ ಕಣ್ಣುಗಳು ಒಂದು ರೀತಿಯಿಂದ ಕುರುಡಾಗಿ ಬಿಟ್ಟವು. ನನ್ನ ಶರೀರಸ್ಥಿತಿಯೂ ಒಂದು ವಿಧವಾಗಿ ಕೆಟ್ಟು ಹೋಯಿತು. ಆಗ ಏನಾಗುತ್ತದೆ, ಎಂಬುದನ್ನೇ ಹೇಳಲಾರದಾದೆನು. ಈ ಆಕಸ್ಮಿಕವಾದ ಸಂಕಟಕ್ಕೊಳಗಾದುದರಿಂದ ನಾನು ಸ್ವಲ್ಪ ವೇಳೆಯವರೆಗೆ ಒಂದು ಸ್ಥಳದಲ್ಲಿ ಕುಳಿತು ತುಸ ಸುಧಾರಿಸಿಕೊಳ್ಳಬೇಕಾಗಿ ಬಂದಿತು. ಈ ವೇಳೆಯಲ್ಲಿ ಆ ಮನುಷ್ಯನು ಫರಾರಿಯಾದನು. ಹೀಗೆ ನನ್ನ ಕಣ್ಣಿಗೆ ಧೂಳೆರಚಿ ಆ ದುಷ್ಟನು ತನ್ನ ಕಾರ್ಯವನ್ನು ಸಾಧಿಸಿಕೊಂಡು ಬಿಟ್ಟನಲ್ಲಾ! ಎಂದು ನನಗೆ ವ್ಯಥೆಯಾಗುತ್ತದೆ.

ಬ್ಲೇಕನು ಶಾಂತಸ್ವರದಿಂದ ಸಮಾಧಾನಪಡಿಸುತ್ತ ಹೇಳಿದನು:—"ಒಳ್ಳೇದು, ಟಿಂಕರ್! ಆಗಬೇಕಾದ್ದು ಆಗಿಹೋಯಿತು. ಇನ್ನದನ್ನು ಚಿಂತಿಸಿ ಫಲವೇನು? ನೀನು ಮಾಡುವ ಪ್ರಯತ್ನವನ್ನೆಲ್ಲ ಮಾಡಿಯೇ ಇರುವಿ. ಇರಲಿ. ಒಂದುವೇಳೆ ಇನ್ನೆಲ್ಲಿಯಾದರೂ ನೀನು ಅವನನ್ನು ಕಂಡರೆ ಗುರುತಿಸಬಲ್ಲೆಯಾ?"

ಟಿಂಕರ್:—"ನಿಸ್ಸಂಶಯವಾಗಿ ಗುರುತಿಸಬಲ್ಲೆನು. ಅವನ ಆಕಾರ ಮುಂತಾದುದನ್ನೆಲ್ಲ ನೋಟ್‌ಬುಕ್ಕಿನಲ್ಲಿ ಬರೆದಿಟ್ಟಿರುವೆನು. ನೋಡಿರಿ."

ಅನಂತರ ಬ್ಲೇಕನು ಕೊಟ್ಟ ಒಂದು ಔಷಧವನ್ನು ಕುಡಿದು ಟಿಂಕರನು ಹಾಸಿಗೆಯ ಮೇಲೆ ಸ್ವಸ್ಥವಾಗಿ ಮಲಗಿದನು.

—

## (೫)

ನರ್ಸ ನೋರಾ ಎಂಡರ್ಬಿಯು ಕಿಟಕಿಯಲ್ಲಿ ನಿಂತು ರಾತ್ರಿಯ ತಂಗಾಳಿಯನ್ನು ಸೇವಿಸುತ್ತಿದ್ದಳು. ಆ ದಿನ ಮಧ್ಯಾಹ್ನವೇ ಅವಳು ಡಾ. ಮೋಡೀನನ ಬಂಗ್ಲೆಗೆ ಬಂದಿದ್ದಳು. ಡಾಕ್ಟರ್ ಮೋಡೀನನು ಸರ್ ಕಥವರ್ಟರ ಕುತ್ತಿಗೆಯ ಮೇಲೆ ಎಷ್ಟೋ ತರಹದ ಔಷಧಗಳನ್ನೂ, ಇಂಜೆಕ್ಷನ್ನುಗಳನ್ನೂ ಪ್ರಯೋಗಿಸುತ್ತಿದ್ದಾಗ ನೋರಳು ಮೋಡೀನನ ಪಕ್ಕದಲ್ಲಿಯೇ ನಿಂತು ಸಾವಧಾನವಾಗಿ ಎಲ್ಲವನ್ನೂ ನೋಡಿದ್ದಳು. ಇಂತಹ ಚಿಕಿತ್ಸಾಕಲ್ಪಗಳು ನೋರಳಿಗೆ ಚಿರಪರಿಚಿತವಾಗಿದ್ದವು. ನಾಳೆಯೇ ಮೋಡೀನನು ಸರ್ ಕಥವರ್ಟ್‌ನಾವೆಲ್ಸರ ಕುತ್ತಿಗೆಗೆ ರೇಡಿಯಮ್ ಪ್ರಯೋಗನನ್ನು ಮಾಡುವನೆಂಬ ವಿಷಯವನ್ನು ತಿಳಿಯಲು ಅವಳಿಗೆ ಹೆಚ್ಚು ತಡವಾಗಲಿಲ್ಲ; ಆದರೆ ಆ ಕಾರ್ಯಕ್ಕೆ ಆಸ್ಪತ್ರೆಯಲ್ಲಿರುವ ರೇಡಿಯಮ್ಮಿನ ದೊಡ್ಡ ಬ್ಯಾಟರಿಯು ಅಗತ್ಯಬೀಳುವದೆಂದು ಆಕೆಯು ಅರಿತಿದ್ದಳು. ರೇಡಿಯಮ್ ಚಿಕಿತ್ಸೆಗಾಗಿ ಡಾ. ಮೋಡೀನನು ರೋಗಿಯನ್ನು ಆಸ್ಪತ್ರೆಗೆ ಒಯ್ಯುವನೊ ಹೇಗೆ? ಎಂದು ನೋರಳು ಯೋಚಿಸುತ್ತಿದ್ದಳು; ಆದರೆ ಮೋಡೀನನು ಆಕೆಯ ಆ ಅಭಿಪ್ರಾಯವನ್ನು ಅರಿತಿರುವಂತೆ ಕಾಣಿಸಿತು. ಯಾಕಂದರೆ, ಅದೇ ವೇಳೆಯಲ್ಲಿ ಮೋಡಿನನು ಹೇಳಿದನು:—

"ನಾಳೆ ನಾನು ಆಸ್ಪತ್ರೆಯಿಂದ ರೇಡಿಯಮ್ ಬ್ಯಾಟರಿಯನ್ನು ಇಲ್ಲಿಗೇ ತರಬೇಕೆಂದು ಆಲೋಚಿಸಿರುವೆನು. ಅದಕ್ಕೆ ಬೇಕಾದ ಎಲ್ಲ ಸಿದ್ಧತೆಯನ್ನೂ ನೀನು ಮಾಡಿಟ್ಟಿರು."

ಈ ವೇಳೆಯಲ್ಲಿ ನೋರಳ ಲಕ್ಷ್ಯವು ಆ ವಿಚಾರಗಳ ಮೇಲಿರಲಿಲ್ಲ. ಬಂಗ್ಲೆಯ ಎದುರಿಗಿನ ಮೈದಾನದ ಕಡೆಗೆ ನೋಡುತ್ತ ಆಕೆಯು ಜೆಫ್ರಿಗ್ರೇಯನ್ನೇ ಮನದಲ್ಲಿ ಚಿಂತಿಸುತ್ತಿದ್ದಳು; ಆದರೆ ಗ್ರೇ ಜೈಲಿನಿಂದ ಬಿಡುಗಡೆ ಹೊಂದಿರುವನೆಂಬದನ್ನು ಪಾಪ! ಅವಳು ಹೇಗೆ ಅರಿಯಬಲ್ಲಳು?

ಡಾಕ್ಟರ ಮೋಡೀನನ ಮನೆಗೆ ಬಂದಿರುವ ಆ ಒಳ್ಳೆಯ ಸಂದರ್ಭದಿಂದ ತನ್ನ ಪ್ರಿಯನಾದ ಗ್ರೇಗೆ ಸಹಾಯ ಮಾಡುವಂತಹ ಯಾವುದಾದರೊಂದು ಸೂತ್ರವನ್ನು ಕಂಡು ಹಿಡಿಯಬಹುದೆಂದು ನೋರಳು ಯೋಚಿಸಿದ್ದಳು. ಯಾಕಂದರೆ, ಡಾಕ್ಟರ್ ಗ್ರೇಯನ್ನು ಜೈಲಿಗೆ ಕಳುಹಲು ಮಾಡಿದ್ದ ಫಿತೂರಿಯಲ್ಲಿ ನಿಶ್ಚಯವಾಗಿಯೂ ಮೋಡಿನನ ಕೈ ಸೇರಿದೆ, ಎಂದು ನೋರಳಿಗೆ ದೃಢನಿಶ್ಚಯವಿದ್ದಿತು. ಮೋಡೀನನ ಬಂಗ್ಲೆಗೆ ಬಂದ ನಂತರ ಅವಳು ಕೊನೆಗೆ ತನ್ನ ಪ್ರಿಯಕರಗೆ ಯಾವ ತರಹದ ಸಹಾಯವನ್ನು ಒದಗಿಸಬಲ್ಲೆನೆಂಬ ವಿಚಾರವೇ ಆಕೆಯನ್ನು ಪೀಡಿಸುತ್ತಿದ್ದಿತು. ಡಾಕ್ಟರ್ ಮೋಡಿನನೇ ಗ್ರೇಯ

ನೋಟ್ ಬುಕ್ಕನ್ನು ಅಪಹರಿಸಿದ್ದಿದ್ದರೆ, ನಿಶ್ಚಯವಾಗಿಯೂ ಅವನು ಇಷ್ಟರೊಳಗೆ ಅದನ್ನು ನಾಶಮಾಡಿಬಿಟ್ಟಿರಬಹುದು. ಯಾವುದಾದರೊಂದು ಪುಂಡರ ಸಂಗಡದೊಳಗೆ ಮೋಡೀನನು ಸೇರಿರಬಹುದೆಂಬ ವಿಷಯದಲ್ಲಿ ನೋರಳಿಗೆ ವಿಶ್ವಾಸವಿರಲಿಲ್ಲ. ಒಂದುವೇಳೆ ಹಾಗವನು ಸೇರಿದ್ದರೆ, ಅದನ್ನೆಂದೂ ಪ್ರಕಟಗೊಳಿಸಲು ಅವನು ಬಿಡಲಾರನು; ಅದಲ್ಲದೆ ಯಾವ ಮನುಷ್ಯನ ಕೈಯಲ್ಲಿ ಪೋಲೀಸ್ ಚೀಫ್ ಕಮಿಷನರಂತಹ ದೊಡ್ಡ ಅಧಿಕಾರಿಗಳು ತಮ್ಮ ಪ್ರಾಣವನ್ನು ಇಟ್ಟಿರುವರೋ, ಅಂತಹ ಮನುಷ್ಯನ ಮೇಲೆ ಇವನು ಪುಂಡ-ಪೋಕರಿಗಳೊಡನೆ ಸೇರಿರುವನೆಂದು ಯಾರು ಸಂಶಯಪಡಬಲ್ಲರು? ಡಾಕ್ಟರ ಸ್ಟೆಂಟನರ ಬಳಿಯಲ್ಲಿ ತಾನು ಈ ಸಂಶಯವನ್ನು ಬಿಚ್ಚಿ ಹೇಳಿದರೂ ಅವರೂ ಕೂಡ ಯಾಕೆ ನಂಬುವರು?

ದೂರದಲ್ಲಿನ ಚರ್ಚಿನ ಗಡಿಯಾರವು ಹನ್ನೆರಡು ಗಂಟೆ ಹೊಡೆಯಿತು. ಇನ್ನು ವಿಶ್ರಾಂತಿ ಪಡೆಯುವ ವೇಳೆಯಾಯಿತು. ಇನ್ನೊಂದು ಸಾರಿ ಎದುರಿಗಿನ ಸುಂದರ ವೃಕ್ಷ ಮತ್ತು ಬಳ್ಳಿಗಳ ಪೊದರುಗಳ ಮೇಲೆ ದೃಷ್ಟಿಯನ್ನು ಬೀರಿ ಕಿಟಕಿಯನ್ನು ಮುಚ್ಚಲು ಹವಣಿಸಿದಳು; ಆದರೆ ಅಕಸ್ಮಾತ್ತಾಗಿ ಎದುರಿಗಿದ್ದ ಪೊದರುಗಳ ಬಳಿಯಲ್ಲಿ ಏನೋ ಅತ್ತಿತ್ತ ಚಲಿಸಿದಂತೆ ನೋರಳ ಕಣ್ಣಿಗೆ ಕಾಣಿಸಿತು. ಆಶ್ಚರ್ಯದಿಂದ ಅವಳು ಅಲ್ಲಿಯೇ ನಿಂತು, ಅಲ್ಲಿಯೇ ಸ್ಥಿರದೃಷ್ಟಿ ಇಟ್ಟು ನೋಡುತ್ತಾ ನಿಂತಳು.

ಯಾಕೋ ತಿಳಿಯದು; ಏನೋ ಒಂದು ಆಪತ್ತು ಒದಗುವ ಆಶಂಕೆಯಿಂದ ನೋರಳ ವೀರ ನಾರೀಹೃದಯವೂ ಕೂಡ ಒಂದುಸಾರಿ ಥಟ್ಟನೆ ನಡುಗಿತು. ಆ ಸಮಯದಲ್ಲಿ ಆ ಮನೆಯೊಳಗೆ ಮೂರು ಜನ ಸೇವಕರು, ಒಬ್ಬ ಸೂಲಗಿತ್ತಿ, ಒಬ್ಬ ಅಡಿಗೆಯವಳು ಇಷ್ಟು ಜನರು ಇದ್ದರು. ಇನ್ನ್ಯಾರೂ ಮನೆಗೆ ಬರತಕ್ಕವರಿರಲಿಲ್ಲ; ಆದರೂ ಕೂಡ ಆ ವೇಳೆಯಲ್ಲಿ ಎಷ್ಟೋತರಹದ ಶಂಕೆಗಳು ನೋರಳ ಹೃದಯದಲ್ಲಿ ಒಡಮೂಡಿದವು.

ತಿರುಗಿ ಎದುರಿಗಿನ ಪೊದರೆಯು ಅಲುಗಾಡಿತು. ಬೆಳಕಿನ ಒಂದು ಕ್ಷೀಣ ರೇಷೆಯು ಮನೆಯ ಗೋಡೆಯ ಮೇಲೆ ಒಂದೆರಡು ಕ್ಷಣಕಾಲದವರೆಗೆ ಬಿದ್ದಿತು. ನಂತರ ಆ ರೇಷೆಯು ಒಂದು ಕಿಟಕಿಯೊಳಗೂ ಪ್ರವೇಶಿಸಿತು. ಕಿಟಕಿಯೊಳಗೆ ಕೆಳಗೆ ಮೇಲೆ ಸ್ವಲ್ಪಕಾಲದವರೆಗೆ ಚಲಿಸುತ್ತಾ ಅದು ಹಾಗೆಯೇ ಮಾಯವಾಯಿತು.

ನೋರಳು ತನ್ನ ಉಸಿರನ್ನು ಬಿಗಿಹಿಡಿದು ಆಲಿಸಿದಳು. ಕಿಟಕಿಯು ತೆರೆದ ಶಬ್ದವು ಕೇಳಿಸಿತು. ಆ ಕಿಟಕಿಯಿಂದಲೂ ಅದೇ ರೀತಿಯಾಗಿ ಪ್ರಕಾಶದ ಕ್ಷೀಣ

ರೇಖೆಯೊಂದು ಹೊರಟು ಎದುರಿಗಿನ ಪೊದರುಗಳ ಮೇಲೆ ಬಿದ್ದು ಅತ್ತಿತ್ತ ಚಲಿಸಿ ಮಾಯವಾಯಿತು.

ನೋರಳು ಮನದೊಳಗೇ ಹೇಳಿಕೊಂಡಳು—"ಅಹಾ! ಅದಾದರೋ ಡಾಕ್ಟರ್ ಮೇಡೀನನ ಕೋಣೆ. ಕೊನೆಗೆ ಇದರ ಒಳಗುಟ್ಟೇನಿದ್ದೀತು?"

ಈ ಸಂಕೇತಗಳ ಕಡೆಗೆ ಸರ್ವಥಾ ಧ್ಯಾನವಿಡದೆ ನೋರಾ ಎಂಡರ್ಬಿ ಯು ಸುಮ್ಮನೆ ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದರೆ ಅದೇ ಒಂದು ಜಾಣತನವಾಗುತ್ತಿದ್ದಿತು. ಈ ಹಾಳು ರಗಳೆಯಿಂದ ಅವಳಿಗೇನಾಗಬೇಕಾಗಿ ದ್ದಿತು?

ಆದರೆ ನೋರಳು ಮೆಡೀನನ ಮನೆಗೆ ಬಂದುದು ಹೊಸ ಶೋಧಗಳನ್ನು ಕಂಡುಹಿಡಿಯುವದಕ್ಕಾಗಿಯೇ ಹೊರತು, ಮೇಡೀನನಿಗೆ ಸಹಾಯ ಮಾಡುವ ದಕ್ಕಾಗಿ ಅಲ್ಲ; ಹೆಚ್ಚಿನ ಸಂಬಳಕ್ಕಾಗಿಯೂ ಅಲ್ಲ. ಹೀಗಿರುವಾಗ, ಅಂತಹ ಸಂದರ್ಭಗಳು ಕಣ್ಣೆದುರಿಗೇ ಅಕಸ್ಮಾತ್ತಾಗಿ ದೊರಕಿರುವಾಗ ಅವಳೆಂದರೂ ಹೇಗೆ ಸುಮ್ಮನೆ ಕುಳಿತಿರಬಲ್ಲಳು?

ಮೆಲ್ಲಮೆಲ್ಲನೆ ನೋರಳು ಬಾಗಿಲಬಳಿಗೆ ಹೋಗಿ ಬಾಗಿಲನ್ನು ಸ್ವಲ್ಪ ತೆರೆದು ಹೊರಗಿನ ಸಪ್ಪಳವನ್ನು ಆಲೈಸಿದಳು. ಮೆಟ್ಟಿಲುಗಳ ಕೆಳಗಡೆ ಜಗುಲಿ ಯಲ್ಲಿ ಯಾರವ್ಹೋ ಕಾಲುಸಪ್ಪಳವು ಕೇಳಿಸಿತು. ಧೈರ್ಯದಿಂದ ತನ್ನ ಕೋಣೆ ಯಿಂದ ಹೊರಹೊರಟು ಕೆಳಗೆ ಬೊಗ್ಗಿ ನೋಡಿದಳು.

ಕೆಳಗೆ ದೊಡ್ಡ ಹಾಲಿನಲ್ಲಿ ಒಂದು ದೀಪವು ಉರಿಯುತ್ತಿದ್ದಿತು. ಮೇಡೀ ನನು ಬಹಳ ಜಾಗರೂಕನಾಗಿ ಆ ಹಾಲಿನಿಂದ ಹೊರಗೆ ಹೊರಟು ಹೊರಬಾಗಿ ಲಿನ ಕಡೆಗೆ ಹೋಗುತ್ತಿದ್ದುದನ್ನು ನೋರಳು ನೋಡಿದಳು. ಮನದೊಳಗೇ ಆಲೋಚಿಸಿದಳು—"ಮೇಡೀನನು ತನ್ನ ಮನೆಯೊಳಗೇ ತಾನು ಇಷ್ಟು ಸಾವ ಧಾನತೆಯಿಂದ ನಡೆಯಬೇಕಾದ ಅಗತ್ಯವಾದರೂ ಏನು?"

ಕೂಡಲೆ ನೋರಳು ಒಂದು ಕರೀ ಹೊದಿಕೆಯನ್ನು ಮೈ ಮೇಲೆ ಹೊದ್ದು ಕೊಂಡು ಬಹಳ ಎಚ್ಚರದಿಂದ ಹೆಜ್ಜೆಯಿಡುತ್ತಾ ಮೆಟ್ಟಿಲುಗಳನ್ನು ಇಳಿಯ ತೊಡಗಿದಳು.

ಬಹಳ ಸಿಧಾನವಾಗಿ ಮುಂದುವರಿದು, ಪಕ್ಕದ ಕಾಲ್ದಾರಿಗೆ ಇಳಿದಳು. ತನ್ನ ಕಿಟಕಿಯಿಂದ ಎಲ್ಲಿ ಯಾವ ವಸ್ತುವನ್ನು ನೋಡಿದ್ದಳೋ, ಆ ಪೊದರು ಗಳ ಕಡೆಗೇ ಮೆಲ್ಲಮೆಲ್ಲನೆ ನಡೆದಳು.

ಮೊದಮೊದಲು ಅಲ್ಲಿ ಏನೂ ಕಾಣಿಸಲಿಲ್ಲ, ಯಾವ ಶಬ್ದವೂ ಕೇಳಿಸ ಲಿಲ್ಲ; ಆದರೆ ಅಷ್ಟರೊಳಗೇ ಪೊದರುಗಳ ಮರೆಯಲ್ಲಿ ಸರಸರ ಎಂದು ಶಬ್ದವಾ

ಯಿತು, ಜೊತೆಗೇ ಮೋಡೀನನ ಮಾತು ಕೇಳಿಸಿತು-"ಯಾರು? ಮಾರ್ವನ್!"

"ಹೌದು, ಡಾಕ್ಟರ್! ನಾನು ಹೋಗಿದ್ದ ಕೆಲಸವು ಸಮರ್ಪಕವಾಗಿ ನಡೆಯಲಿಲ್ಲ. ಯಾರೋ ನನ್ನನ್ನು ಹಿಂಬಾಲಿಸಿರಬೇಕೆಂದು ಕಾಣುತ್ತದೆ. ನಾನು ಗ್ರೇಯ ಮುಖದ ಮೇಲೆ ನಮ್ಮ ಅಸ್ತ್ರವನ್ನು ಪ್ರಯೋಗಿಸಲು ಹವಣಿಸುತ್ತಿರುವಾಗಲೇ ಅಕಸ್ಮಾತ್ತಾಗಿ ಯಾರೋ ನನ್ನ ಕಾರ್ಯಕ್ಕೆ ದೊಡ್ಡ ತಡೆಯನ್ನುಂಟು ಮಾಡಿದರು. ಅದರಿಂದ ನಾನು ಹತಾಶನಾಗಿ ಅಲ್ಲಿಂದ ಓಡಿ ಬರಬೇಕಾಯಿತು ಅನಂತರವೂ ಪುನಃ ಒಬ್ಬನು ನನ್ನನ್ನು ಬಹಳ ದೂರ ವರೆಗೆ ಹಿಂಬಾಲಿಸಿ ಬಂದನು. ಬಹಳ ಕಷ್ಟಪಟ್ಟು ಅವನನ್ನು ಸಂಕಟಕ್ಕೆ ಗುರಿಮಾಡಿ, ನನ್ನ ಪ್ರಾಣವನ್ನುಳಿಸಿಕೊಂಡು ಬಂದೆನು."

ಮೋಡೀನಾ—"ಅವನನ್ನು ನೀನು ಗುರುತಿಸಲಿಲ್ಲವೇನು?"

ಅವನು ಹೇಳಿದನು--"ಯಾಕಿಲ್ಲ? ಬ್ಲೇಕನೊಡನಿರುವ ಆ ಪೋರ ಟಿಂಕರನೇ ಅವನು. ಆ ಪೋರನನ್ನು ಗುರುತಿಸಿದೊಡನೆಯೇ ನನಗೆ ತಿಳಿಯಿತು—ಗ್ರೇಯ ಮನೆಯೊಳಗೆ ನನ್ನ ಕಾರ್ಯಕ್ಕೆ ಅಡ್ಡಿಯನ್ನುಂಟುಮಾಡಿದ ಮನುಷ್ಯನು ಬ್ಲೇಕನಲ್ಲದೆ ಇನ್ನಾರೂ ಅಲ್ಲವೆಂದು."

ಮೋಡೀನಾ---"ಒಳ್ಳೇದು, ಆದದ್ದು ಆಯಿತು. ಈಗ ನೀನು ನನ್ನ ಮಾತನ್ನು ಎಚ್ಚರದಿಂದ ಕೇಳು."

ಆ ಮೇಲೆ ಅವರಿಬ್ಬರೊಳಗಾದ ಸಂಭಾಷಣೆಯು ಬಹಳ ಮೆತ್ತಗಿದ್ದುದರಿಂದ ನೋರಾ ಎಂಡರ್ಬಿಗೆ ಏನೊಂದೂ ಕೇಳಿಸಲಿಲ್ಲ. ಇನ್ನು ಈ ಸ್ಥಳದಲ್ಲಿ ನಿಲ್ಲುವುದು ಸರಿಯಲ್ಲವೆಂದು ಭಾವಿಸಿ, ನೋರಳು ಕೂಡಲೆ ಅಲ್ಲಿಂದ ಹಿಂದಿರುಗಿದಳು. ಡಾಕ್ಟರ್ ಮೋಡೀನನು ಫ್ರಂಡರ ಸಂಗಡವೊಂದಿಗೆ ಸೇರಿದವನೆಂಬ ವಿಷಯದಲ್ಲಿ ಇನ್ನಾವ ಸಂಶಯವೂ ಅವಳಿಗುಳಿಯಲಿಲ್ಲ. ಇನ್ನು ವ್ಯರ್ಥವಾಗಿ ಕಾಲಹರಣ ಮಾಡದೆ, ಡಾಕ್ಟರ್ ಸ್ಟೆಂಟನರಿಗೆ ಒಂದು ಕಾಗದದ ಮೂಲಕವಾಗಿ ಈ ರಹಸ್ಯವನ್ನೆಲ್ಲಾ ಬೇಗನೆ ತಿಳಿಸುವುದು ಹೆಚ್ಚು ಉತ್ತಮವೆಂದು ನೋರಳು ನಿರ್ಧರಿಸಿದಳು.

ಆದರೆ ನೋರಾ ಎಂಡರ್ಬಿಯು ಮನೆಯಿಂದ ಹೊರಗೆ ಹೊರಡುತ್ತಿದ್ದಾಗ ಮೋಡೀನನ ಸ್ಪ್ಯಾನಿಷ್ ಸೇವಕನಾದ ಇಬಾನೇಜನು ಮರೆಯಲ್ಲಿ ನಿಂತು ಕಾಕದೃಷ್ಟಿಯಿಂದ ನೋಡಿದ್ದನು; ತಿರುಗಿ ಅವಳು ಈಗ ಮನೆಯೊಳಗೆ ಬಂದುದನ್ನೂ ನೋಡಿದನು. ಸರಿ. ಕೂಡಲೆ ಇಬಾನೇಜನು ಈ ಸುದ್ದಿಯನ್ನು ಯಜಮಾನನಿಗೆ ಅವಸರದಿಂದ ತಿಳಿಸಲು ನಡೆದನು.

ನೋರಳ ಉತ್ಸುಕತೆಯು ಈ ವೇಳೆಯಲ್ಲಿ ಅಭಿವೃದ್ಧಿಹೊಂದುತ್ತಿದ್ದಿತು.

ತನ್ನ ಕೋಣೆಯನ್ನು ಪ್ರವೇಶಿಸಿದೊಡನೆಯೇ ಅವಳು ಡಾಕ್ಟರ್ ಸ್ಟೆಂಟನರಿಗೆ ಕಾಗದವನ್ನು ಬರೆಯಲು ಕುಳಿತಳು. ಗ್ರೇಯ ನೋಟ್‌ಬುಕ್ಕಿನ ಅಪಹರಣದ ಸುದ್ದಿಯನ್ನೆಲ್ಲ ಮೊದಲು ಬರೆದು, ಅನಂತರ ತಾನು ಈಗ ಕಂಡ ವಿಷಯವನ್ನು ವಿವರವಾಗಿ ಬರೆಯುತ್ತಿದ್ದಳು; ಆದರೆ ಅಷ್ಟರೊಳಗೇ ತನ್ನ ಕೋಣೆಯ ಬಾಗಿಲನ್ನು ಯಾರೋ ತಟ್ಟುತ್ತಿರುವ ಶಬ್ದ ಕೇಳಿಸಿತು. ಆ ಕಾಗದವನ್ನು ಮೇಜಿನ ಮೇಲೆಯೇ ಬಿಟ್ಟು, ಬಾಗಿಲನ್ನು ತೆರೆದಳು.

ಹೊರಗಿನಿಂದಲೇ ಯಾರೋ ಕೂಗಿ ಹೇಳುತ್ತಿದ್ದರು:-"ಮಿಸ್! ತ್ವರೆ ಮಾಡಿರಿ ಯಜಮಾನರು ನಿಮ್ಮನ್ನು ಕಥವರ್ಟರ ಕೋಣೆಗೆ ಕರೆಯುತ್ತಿದ್ದಾರೆ."

ಬಾಗಿಲಿನ ಹೊರಗೆ ಇಬಾನೇಜನು ನಿಂತು ಕೂಗುತ್ತಿದ್ದುದನ್ನು ಕಂಡು, ನೋರಳು ಹೊರಗೆ ಬಂದು ಕೇಳಿದಳು:—"ಏನು ವಿಶೇಷ, ಇಬಾನೇಜ್?"

ಇಬಾನೇಜನು ಹೇಳಿದನು:—"ಕಥವರ್ಟ್‌ರಿಗೆ ಏನೋ ಆಗಿದೆ; ಬೇಗನೆ ಹೊರಡಿರಿ."

ನೋರಳು ಹಾಗೆಯೇ ಬೇಗ ಬೇಗನೆ ಸರ್ ಕಥವರ್ಟ್ ನಾವೆಲ್ಸನಿದ್ದ ಕೋಣೆಗೆ ಹೋದಳು. ಅಲ್ಲಿ ಕಥವರ್ಟ ನಾವೆಲ್ಸನು ಹಾಸಿಗೆಯ ಮೇಲೆ ಮಲಗಿದ್ದನು. ಸೇವಕನೊಬ್ಬನು ರೋಗಿಯ ಬಳಿಯಲ್ಲಿ ಬಗ್ಗಿ ನಿಂತಿದ್ದನು. ಡಾಕ್ಟರ್ ಮೇಡೀನನು ಮೇಜಿನ ಬಳಿಯಲ್ಲಿ ನಿಂತುಕೊಂಡು ಒಂದು ಗ್ಲಾಸಿಗೆ ಏನೋ ಔಷಧವನ್ನು ಹುಯ್ಯುತ್ತಿದ್ದನು.

ನೋರಳು ಅತ್ತ ಹೋದೊಡನೆಯೇ ಇಬಾನೇಜನು ಅವಳ ಕೋಣೆಗೆ ಬೀಗ ಹಾಕಿ, ಕಥವರ್ಟ್ ನಾವೆಲ್ಸನ ಕೋಣೆಗೆ ವೇಗವಾಗಿ ಬಂದನು. ನೋರಳು ಕೋಣೆಯೊಳಗೆ ಇನ್ನೂ ಕಾಲಿಡುತ್ತಿದ್ದಳಷ್ಟೆ. ಅಷ್ಟರೊಳಗೇ ವೇಗವಾಗಿ ಹಿಂದಿನಿಂದ ಬಂದ ಇಬಾನೇಜನು ನೋರಳನ್ನು ಬಲವಾಗಿ ಬಿಗಿಹಿಡಿದನು; ಬಾಯ್ತೆರೆದು ಕೂಗದಂತೆ ಬಾಯಿಗೆ ಕೈಯಿಟ್ಟನು!

ಅದೇ ವೇಳೆಯಲ್ಲಿ ಮೇಡೀನನೂ ನೋರಳ ಬಳಿಗೆ ಬಂದನು. ಈಗ ಆತನ ಕೈಯಲ್ಲಿ ಒಂದು ವಸ್ತುವು ಥಳಥಳನೆ ಹೊಳೆಯುತ್ತಿದ್ದಿತು. ಅವನು ಸಮೀಪಿಸಿ, ನೋರಳ ತೋಳಿನ ಅಂಗಿಯನ್ನು ಮೇಲಕ್ಕೆ ಸರಿಸುತ್ತ ನಿಧಾನವಾಗಿ ಹೇಳಿದನು:—"ನೋರಾ! ಈ ರೀತಿಯಾಗಿ ನೀನು ಮನೆಯಿಂದ ಹೊರಹೊರಟು ನನ್ನನ್ನು ಹಿಂಬಾಲಿಸಿರುವುದು ಬಹಳ ದೊಡ್ಡ ತಪ್ಪು. ನಾನೀಗ ನಿನಗೆ ಇನ್ಯಾವ ತರಹದ ಹಾನಿಯನ್ನುಂಟು ಮಾಡುವದಕ್ಕೂ ಇಚ್ಛಿಸಿರುವದಿಲ್ಲ. ಸ್ವಲ್ಪ ದಿನಗಳ ವರೆಗೆ ನೀನು ಇದರಿಂದ ನಿದ್ರಿಸಬೇಕಾಗುವುದು."

ಹೈಪೋಡರ್ಮಿಕ್ ಸಿರಿಂಜಿನ ಸೂಜಿಯು ತನ್ನ ತೋಳಿನೊಳಗೆ ಪ್ರವೇ

ಶಿಸುತ್ತಿರುವುದೆಂದು ನೋರಳು ಅರಿತಳು. ಯಾವುದೋ ವಸ್ತುವು ಕ್ಷಣಕಾಲ ದೊಳಗೆ ಅವಳ ದೇಹದ ನರನಾಡಿಗಳಲ್ಲಿ ಪ್ರವೇಶಿಸಿ ಹೃದಯದ ಗತಿಯನ್ನು ಥಟ್ಟನೆ ನಿಲ್ಲಿಸಿಬಿಟ್ಟಿತು. ಕಣ್ಣುಗಳಿಗೆ ಕತ್ತಲೆಯು ಕವಿದು ಚೇತನಾಶಕ್ತಿಯು ಲೋಪಹೊಂದಿತು!

"ಈ ಸಮಯದಲ್ಲಿ ಇದಲ್ಲದೆ ಇನ್ಯಾವ ಉಪಾಯವೂ ಇರಲಿಲ್ಲ, ಇಬಾನೇಜ! ಈಗಿವಳನ್ನು ಇವಳ ಕೋಣೆಗೇ ಒಯ್ದು ಮಂಚದ ಮೇಲೆ ಮಲಗಿಸಿ ಬೇಕು." ಎಂದು ಮೋಡೀನನು ಹೇಳಿದೊಡನೆ, ಅತನು ನಿಸ್ಸಂಜ್ಞೆಯಿಂದಿರುವ ನೋರಳ ದೇಹವನ್ನೆತ್ತಿಕೊಂಡು ಹೋಗಿ ಅವಳ ಕೋಣೆಯಲ್ಲಿ ಮಲಗಿಸಿದನು.

ಇಬಾನೇಜನು ಹಿಂದಿರುಗಿ ಬಂದನು. ಮೋಡೀನನು ಹೇಳಿದನು: "ನೋಡು ಇಬಾನೇಜ್! ನೋರಾ ಎಂಡರ್ಬಿಯ ವಿಷಯವಾಗಿ ಯಾರಾದರೂ ಇಲ್ಲಿಗೆ ಬಂದು ಏನಾದರೂ ವಿಚಾರಿಸಿದರೆ, ನೋರಳು ವಿಶ್ರಾಂತಿ ಪಡೆಯುತ್ತಿರುವಳೆಂದಾಗಲಿ, ಎಲ್ಲಿಯೋ ಹೊರಗೆ ತಿರುಗಾಡಲು ಹೋಗಿರುವಳೆಂದಾಗಲಿ ಹೇಳಬೇಕು. ತಿಳಿಯಿತೇ?"

ಇಬಾನೇಜ್:—"ಆಗಬಹುದು, ಸ್ವಾಮಿ!"

ಮೋಡೀನನು ನೋರಳ ಕೋಣೆಗೆ ಹೋಗಿ ಅಲ್ಲಿನ ವಸ್ತುಗಳನ್ನೆಲ್ಲ ಹುಡುಕಾಡತೊಡಗಿದನು. ರೈಟಿಂಗ ಕೇಸಿನಲ್ಲಿ ಇಡಲಾಗಿದ್ದ ಗ್ರೇಯ ಕೆಲವು ಕಾಗದಗಳು ಮೋಡೀನನ ಕೈಗೆ ಸಿಕ್ಕವು. ಡಾಕ್ಟರ್ ಗ್ರೇ ಜಾಮೀನಿನ ಮೇಲೆ ಬಿಡುಗಡೆಯಾದಾಗ ಬರೆದಿದ್ದ ಕಾಗದವೂ ಅವುಗಳಲ್ಲೊಂದಾಗಿದ್ದಿತು. ಅವುಗಳನ್ನೆಲ್ಲ ನೋಡಿದ ನಂತರ ಮೋಡೀನನು ಇಬಾನೇಜನ ಕಡೆಗೆ ನೋಡಿ ಹೇಳಿದನು:—"ಈ ಕಾಗದಗಳನ್ನು ನೋಡು. ನನಗಿದ್ದ ಸಂಶಯವು ಈಗ ನಿಶ್ಚಯರೂಪದಲ್ಲಿ ಮಾರ್ಪಾಡಾಯಿತು. ಗ್ರೇಯ ಮೇಲೆ ಖಂಡಿತವಾಗಿಯೂ ತೀಕ್ಷ್ಣದೃಷ್ಟಿ ಇಟ್ಟಿರಬೇಕು; ಮತ್ತು ಸಮಯ ದೊರೆತೊಡನೆಯೇ ಆತನನ್ನೂ........"

ಮೋಡಿನನ ಮಾತು ಮುಗಿಯುವದರೊಳಗೇ ಇಬಾನೇಜನು ತವಕದಿಂದ ಜೇಬಿನಲ್ಲಿದ್ದ ಚೂರಿಗೆ ಕೈಹಾಕಿ ಹೇಳಿದನು:—"ಕೊನೆಗೆ ನಿಮ್ಮ ಅಭಿಪ್ರಾಯವೇನು? ಇದೇ ಅಷ್ಟೆ?"

ಮೋಡೀನನು ಗಂಭೀರವಾಗಿ ಉತ್ತರವಿತ್ತನು:—"ಉಹುಂ. ಅದರ ಅಗತ್ಯವೇನೂ ಇಲ್ಲ ಇಬಾನೇಜ್! ಸಾಧ್ಯವಾದಷ್ಟು ನಾವು ಹತ್ಯೆಯಿಂದ ದೂರವಿರುವುದೇ ಒಳ್ಳೆಯದು. ಅವನನ್ನು ಯಾವ ತರಹದಿಂದಾದರೂ ಸ್ವಾಧೀನಪಡಿಸಿಕೊಂಡರೆ ಸಾಕು."

ಇಷ್ಟು ಮಾತನಾಡಿ ಮೋಡೀನನು ಮೇಜಿನ ಮೇಲೆ ಅರ್ಧ ಬರೆದಿಟ್ಟಿದ್ದ ನೋರಳ ಕಾಗದವನ್ನು ಕೈಗೆ ತೆಗೆದುಕೊಂಡು ನೋಡಿದನು. ಅನಂತರ ನಸು ನಗುತ್ತ ಹೇಳಿದನು:—"ನೋರಳ ಬರೆವಣಿಗೆಯು ಬಹಳ ಸುಂದರವಾಗಿ ಯೂ ಸುಬದ್ಧವಾಗಿಯೂ ಇದೆ. ಇದರ ನಕಲು ಮಾಡುವದು ಸರ್ ಕಥವರ್ಟನ ಬರೆವಣಿಗೆಗಿಂತಲೂ ಎಷ್ಟೋ ಪಾಲು ಸುಲಭವಿದೆ. ಇರಲಿ. ಹೋಗು. ನಿನ್ನ ಹೆಂಡತಿಗೆ ನೋರಳ ಬಟ್ಟೆ-ಬರೆಗಳನ್ನು ತೆಗೆದು ಪರೀಕ್ಷಿಸಲು ಹೇಳು. ನಾನೀಗ ಹೊರಡುವೆನು."

ಸ್ವಲ್ಪ ಹೊತ್ತಿನೊಳಗೇ ಅಲ್ಲಿಗೆ ಕೊಳಕು ರೂಪದ ಜೇನ್ ಹಿಗ್ಸಳು ಬಂದು ಡಾಕ್ಟರನ ಅಪ್ಪಣೆಯಂತೆ ನೋರಳ ಬಟ್ಟೆ-ಬರೆಗಳನ್ನು ತೆಗೆಯತೊಡಗಿದಳು. ಆಕೆಯು ನೋರಳ ಜೇಬಿನಲ್ಲಿದ್ದ ರೂಪಾಯಿಗಳನ್ನೂ ಕೈಯಲ್ಲಿದ್ದ ರತ್ನ ಮುಂಗುರವನ್ನೂ ತನ್ನ ವಶಪಡಿಸಿಕೊಂಡಳು.

(೭)

"ಏಳಿರಿ, ಗ್ರೇ! ಏಳು ಗಂಟೆ ಹೊಡೆದರೂ ಇನ್ನೂ ಮಲಗಿರುವಿರಲ್ಲ! ಎದ್ದು ನಿಮ್ಮ ಬಟ್ಟೆ-ಬರೆಗಳನ್ನು ಬದಲಾಯಿಸಿಕೊಳ್ಳಿರಿ. ನಿಮ್ಮಿಂದ ಈಗ ಬಹಳ ಕೆಲಸವಾಗಬೇಕಾಗಿದೆ. ನೀವು ಸ್ವಲ್ಪ ಕಾಲ ವೆಂಟವರ್ತ್ ಆಸ್ಪತ್ರೆಯ ಹೊರಬಾಗಿಲಿನ ಬಳಿಯಲ್ಲಿ ಸುಳಿದಾಡಬೇಕಾಗುವದು. ನೀವೇ ಹೇಳಿರಿ, ಯಾವ ವೇಷದಿಂದಿದ್ದರೆ ನೀವು ಸುಲಭವಾಗಿ ಈ ಕೆಲಸ ಪೂರೈಸಬಲ್ಲಿರಿ?"

ಡಾಕ್ಟರ್ ಗ್ರೇ ಬ್ಲೇಕನ ಮಾತಿನಿಂದ ಹಾಸಿಗೆಯಿಂದೆದ್ದು ಕಣ್ಣುಜ್ಜಿಕೊಳ್ಳುತ್ತ ಹೇಳಿದನು:—"ಮುದುಕಮನುಷ್ಯನೊಬ್ಬನು ಆಗಾಗ್ಗೆ ಆಸ್ಪತ್ರೆಯ ಹೊರಬಾಗಿಲ ಬಳಿಯಲ್ಲಿ ನಿಂತು ಚಿತ್ರಪಟ, ಸಾಬೂನು, ಬೆಂಕೀಪೆಟ್ಟಿಗೆ ಮುಂತಾದವುಗಳನ್ನು ಮಾರಾಟ ಮಾಡುತ್ತಿದ್ದನು. ಈಗ ನಾನೂ ಕೂಡ ಆ ವೇಷವನ್ನೇ ಧರಿಸಿ, ಆ ಸಾಮಾನುಗಳನ್ನೇ ಮಾರುವನಂತೆ ಅಲ್ಲಿ ಸುಳಿದಾಡಿದರೆ, ಯಾರೂ ಯಾವ ತರಹದಿಂದಲೂ ನನ್ನನ್ನು ನೋಡಿ ಶಂಕಿಸಲಾರರು."

ವೇಷವು ತಯಾರಾಗಿ ಇಬ್ಬರೂ ಬೆಳಗಿನ ಊಟಕ್ಕೆ ಕುಳಿತರು. ಆಗ ಟಿಂಕರನು ಅಲ್ಲಿಗೆ ಬಂದು ನೋಡಿದನು. ಮೊದಮೊದಲು ಆ ಮುದುಕನನ್ನು ಗುರುತಿಸಲು ಟಿಂಕರನಿಂದಲೂ ಸಾಧ್ಯವಾಗಲಿಲ್ಲ. ಟಿಂಕರನೂ ಅವರ ಬಳಿಯಲ್ಲಿಯೇ ಕುಳಿತುಕೊಂಡು ಮಾತಾಡತೊಡಗಿದನು--"ನೀವು ಕೊಟ್ಟ ಔಷಧವನ್ನು ಕುಡಿದು ಇಷ್ಟು ಹೊತ್ತು ವಿಶ್ರಾಂತಿಯನ್ನು ಪಡೆದದ್ದರಿಂದ ಈಗ ನನ್ನ

ದೇಹಸ್ಥಿತಿಯು ಸುಧಾರಿಸಿದೆ. ಇನ್ನೇನೂ ತೊಂದರೆ ಇಲ್ಲ. ಊಟವಾಗಿಬಿಟ್ಟಿತೆಂದರೆ, ಮುಂಚಿನಂತೆಯೇ ಯಾವ ಕಾರ್ಯಕ್ಕೆ ಬೇಕಾದರೂ ತಯಾರಾಗುವೆನು. ನನ್ನಿಂದ ಏನಾಗಬೇಕು ಈಗ?''

ಬ್ಲೇಕ್—''ನೀನು ಊಟಮಾಡಿದ ನಂತರ ಡಾಕ್ಟರ್ ಗ್ರೇಯ ಬಿಡಾರಕ್ಕೆ ಹೋಗಿ ಅಲ್ಲಿ ಸುಮ್ಮನೆ ಕುಳಿತುಕೋ. ಆ ಮನೆಯ ಮೇಲೆ ಯಾರಾದರೂ ದೃಷ್ಟಿಯಿಟ್ಟಿರುವುದು ನಿನಗೆ ತಿಳಿದು ಬಂದರೆ, ಅವರನ್ನು ಥಟ್ಟನೆ ಬೆನ್ನಟ್ಟಿ ಹೋಗು; ಆದರೆ ಈ ಸಾರೆ ತಪ್ಪಬೇಡ, ಜಾಗರೂಕತೆಯಿಂದ ವರ್ತಿಸು.''

ಟಿಂಕರ್ -''ಇಲ್ಲ ಸ್ವಾಮೀ! ಇನ್ನೆಂದೂ ಹಾಗಾಗದು. ನಾನು ಯಾವ ವೇಷದಿಂದ ಆ ಮನೆಯನ್ನು ಪ್ರವೇಶಿಸುವೆನೋ ತಿರುಗಿ ಆ ವೇಷದಿಂದ ಮನೆಯಿಂದ ಹೊರಹೊರಡುವದಿಲ್ಲ. ಈ ಸಾರೆ ನೋಡುವೆನು—ಯಾರು ಹೇಗೆ ನನ್ನನ್ನು ಗುರುತಿಸಿ ಮೋಸಪಡಿಸುವರು ಎಂದು.''

ಬ್ಲೇಕ್: -''ಚೆನ್ನಾಗಿದೆ ನಿನ್ನ ಈ ಯುಕ್ತಿ.''

ಗ್ರೇ:—''ಒಳ್ಳೇದು ಮಿಸ್ಟರ್ ಬ್ಲೇಕ್! ನನಗೆ ಮೊದಲೇ ತಿಳಿಸಿರಿ. ನಾನು ಅಲ್ಲಿ ಯಾವ ಯಾವ ಕಾರ್ಯವನ್ನು ಮಾಡಬೇಕು? ನಾನು ಆಸ್ಪತ್ರೆಯಲ್ಲಿ ಇಲ್ಲದಿರುವಾಗ ಅಲ್ಲಿ ಯಾರಾದರೂ ಕೆಲವರು ಲಾಭಪಡೆಯಬಹುದು.''

ಬ್ಲೇಕ್:—''ನೀವು ಸರಿಯಾಗಿ ಹೇಳಿದಿರಿ ಡಾಕ್ಟರ್ ಗ್ರೇ! ಪುಂಡರು ನಿಮ್ಮನ್ನು ಜೈಲಿಗೆ ಕಳುಹಿಸಲು ಮಾಡಿದ್ದ ಪ್ರಯತ್ನವನ್ನು ನೋಡಿದರೆ, ನನಗೆ ಅದರಲ್ಲಿ ಎರಡೇ ಕಾರಣಗಳು ಕಾಣಿಸುತ್ತವೆ. ಒಂದು—ಡಾಕ್ಟರ್ ಮೇಡೀನನು ನಿಮ್ಮ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಹೀಗೆ ಮಾಡಿರಬಹುದಾಗಿದೆ. ಇನ್ನೊಂದೇನೆಂದರೆ, ಪುಂಡರ ಯಾವದೋ ಒಂದು ತಂಡವು ಆಸ್ಪತ್ರೆಯಲ್ಲಿ ನೀವಿಲ್ಲದಿರುವಾಗ ತಮ್ಮ ಕಾರ್ಯಕ್ರಮವನ್ನು ನಡೆಸುವದಕ್ಕಾಗಿ ನಿಮ್ಮನ್ನು ಆಸ್ಪತ್ರೆಯಿಂದ ದೂರ ಇರಿಸಬೇಕಾಗಿ ಬಂದಿರುವುದು. ನಿಮಗೆ ತಿಳಿದಿರಬಹುದು, ಆಸ್ಪತ್ರೆಯಲ್ಲೀಗ ಬಹು ಬೆಲೆ ಬಾಳುವ ವಸ್ತುವೆಂದರೆ ರೇಡಿಯಮ್. ಅದನ್ನು ಆಸ್ಪತ್ರೆಯಿಂದ ಹಾರಿಸಿಬಿಡುವ ಆಲೋಚನೆಯಿಂದಲೇ ಈ ಎಲ್ಲ ಫಿತೂರಿಯು ರಚಿಸಲ್ಪಟ್ಟಿರಬಹುದಾದ ಸಂಭವವೂ ಇದೆ; ಆದರೆ ರೇಡಿಯಮ್ಮಿನಿಂದ ಆ ಪುಂಡರು ಯಾವ ಲಾಭವನ್ನು ಪಡೆಯಬಲ್ಲರೆಂಬುದೇ ನನ್ನ ಬುದ್ಧಿಗೆ ತಿಳಿಯದಾಗಿದೆ.''

ಗ್ರೇ:—ಹಾಗಾದರೆ ಆಸ್ಪತ್ರೆಗೆ ದುಷ್ಟಾಲೋಚನೆಯಿಂದ ಬರತಕ್ಕವರನ್ನು ಗುರುತಿಸುವದಕ್ಕಾಗಿ ನಾನು ಅಲ್ಲಿಯ ಬಾಗಿಲ ಬಳಿ ಇರಬೇಕೆಂದು ನಿಮ್ಮ ಅಭಿಪ್ರಾಯವೇ?''

ಬ್ಲೇಕ್:-ಹೌದು. ನನ್ನ ಅಭಿಪ್ರಾಯವು ಇದೇ ಇರುವುದು. ನಿಮ್ಮ ಕೈಯಿಂದ ಉಳಿದ ಯಾವನಾದರೊಬ್ಬ ರೋಗಿಯು ಈ ಥಿಯೇಟರಿಯಲ್ಲಿ ಸೇರಿರಬಹುದಾದ ಸಂಭವವಿದೆ. ನಿಜವಾದ ಸಂಗತಿ ಏನೆಂದರೆ—ನನಗಿದ ಕ್ಕಿಂತ ಹೆಚ್ಚಿಗೆ ಇನ್ನೊಂದು ಕಾರಣವೇ ಕಾಣಿಸುವದಿಲ್ಲ; ಯಾಕೆಂದರೆ, ನಿಮ್ಮನ್ನು ಆಸ್ಪತ್ರೆಯಿಂದ ನಾಲ್ಕಾರು ದಿನಗಳವರೆಗೆ ಹೊರಗೆ ಇಟ್ಟು ತಮ್ಮ ಕಾರ್ಯಕ್ರಮವನ್ನು ನಡೆಸುವುದೇ ಅವರ ಧ್ಯೇಯವಾಗಿದ್ದರೆ, ನಿಮ್ಮನ್ನು ಹೇಗೋ ಗಾಯಗೊಳಿಸಿ. ಅಷ್ಟರಿಂದಲೇ ತಮ್ಮ ಕಾರ್ಯವನ್ನು ನಡೆಸಿಬಿಡು ತ್ತಿದ್ದರು; ನಿಮ್ಮ ವಿರುದ್ಧವಾಗಿ ಇಷ್ಟೆಲ್ಲ ಪ್ರಮಾಣಗಳನ್ನು ತಯಾರಿಸುವ ಕಷ್ಟವನ್ನನುಭವಿಸಬೇಕಾದ ಅಗತ್ಯವೇ ಅವರಿಗಿರಲಿಲ್ಲ.''

ಗ್ರೇ—''ಹಾಗಾದರೆ ಡಾಕ್ಟರ್ ಮೇಡೀನನು ನನ್ನ ಮೇಲೆ ಸೇಡು ತೀರಿಸಿಕೊಳ್ಳುವದಕ್ಕಾಗಿಯೇ ಇಷ್ಟೆಲ್ಲ ಮಾಡಿರಬಹುದೆಂದು ನೀವು ಅಭಿ ಪ್ರಾಯಪಡುತ್ತೀರಾ?''

ಬ್ಲೇಕ್—''ಮೇಡೀನನಂತಹ ಸುಪ್ರಸಿದ್ಧ ಡಾಕ್ಟರನೂ ಕೂಡ ಯಾವುದೋ ಒಂದು ಪುಂಡ-ಪೋಕರಿಗಳ ಸಂಗಡದೊಂದಿಗೆ ಸೇರಬಲ್ಲನೆಂಬ ವಿಷಯದ ಮೇಲೆ ವಿಶ್ವಾಸವಿಡುವುದಾದರೆ ನೀವಂದಂತೆಯೇ ಅಭಿಪ್ರಾಯ ಪಡಬೇಕು. ಇದು ಏನೇ ಇರಲಿ. ನಾನು ಸೇವಾಯಿಲ್ಲಿನ ನನ್ನ ಸ್ಪ್ಯಾನಿಷ್ ಏಜಂಟನಿಗೆ ಈ ಡಾಕ್ಟರ್ ಮೇಡೀನನ ಗತ ಜೀವನಚರಿತ್ರೆಯ ಸಂಬಂಧ ವಾಗಿ ತಿಳಿಸಲು ಕಾಗದ ಬರೆದಿರುವೆನು. ಇರಲಿ. ಇನ್ನೀಗ ಇಲ್ಲಿ ತಡಮಾಡ ಬೇಕಾದ ಅಗತ್ಯವೇನೂ ಇಲ್ಲ. ಅಲ್ಲಿಗೆ ಹೋಗೋಣ. ನೀವು ಹೊರ ಬಾಗಿ ಲಿನ ಹತ್ತಿರ ಇರಬೇಕು. ನಾನೂ ಕೂಡ ಅಲ್ಲಿಯೇ ಆಚೆ-ಈಚೆ ಹತ್ತಿರ ದಲ್ಲಿಯೇ ಗೂಢವಾಗಿ ಇರುವೆನು. ಒಂದುವೇಳೆ ನಾನು ಅಲ್ಲಿ ಆಸ್ಪತ್ರೆಯೊಳಗೆ ಹೋಗಿರಬೇಕಾದ ಅಗತ್ಯವೂ ಬೀಳಬಹುದು.''

ವೆಂಟ್‌ವರ್ತ್ ಆಸ್ಪತ್ರೆಯ ಹೊರಬಾಗಿಲಿನ ಬಳಿ ಡಾಕ್ಟರ್ ಗ್ರೇ ಮು ದುಕನ ವೇಷದಲ್ಲಿ ಸಾಮಾನುಗಳನ್ನು ಮಾರುವ ಕೆಲಸದಲ್ಲಿ ನಿಂತುಕೊಂಡಿ ದ್ದನು. ಸರಿಯಾಗಿ ಹತ್ತುಗಂಟೆಯ ಹೊತ್ತಿಗೆ ಡಾಕ್ಟರ್ ಮೇಡೀನನ ಮೋಟರು ಆಸ್ಪತ್ರೆಯ ಹೊರಬಾಗಿಲ ಬಳಿಗೆ ಬಂದು ನಿಂತಿತು. ಮೋಟ ರೊಳಗೆ ಡಾಕ್ಟರ ಮೇಡೀನನು ಪತ್ರಿಕೆಯೋದುತ್ತ ಕುಳಿತಿದ್ದನು. ಇದೇ ಸಮಯದಲ್ಲಿ ಯಾವನೋ ಒಬ್ಬನು ಪತ್ರಿಕೆ ಕೊಂಡುಕೊಳ್ಳುವದಕ್ಕಾಗಿ ಡಾಕ್ಟರ್ ಗ್ರೇಯ ಬಳಿಗೆ ಬಂದು ಬಹು ಮಂದಸ್ವರದಿಂದ ಮಾತಾಡಿದನು: ''ನೋಡಿರಿ, ಮಿಸ್ಟರ್ ಗ್ರೇ! ಗಾಬರಿಯಾಗಬೇಡಿರಿ. ಪತ್ರಿಕೆಕೊಳ್ಳುವ ನವ

ದಿಂದ ನಾನೀಗ ನಿಮ್ಮ ಹತ್ತಿರ ನಿಂತಿರುವೆನು. ಈ ಮೋಟರಿನಲ್ಲಿ ಕುಳಿತಿರುವನನು ಮೋಡೀನನೇ ಅಷ್ಟೆ? ಮನುಷ್ಯನು ಆಕಾರದಲ್ಲಿ ಬಹಳ ಭವ್ಯಪುರುಷನಾಗಿ ಕಾಣಿಸುತ್ತಾನೆ. ಒಳ್ಳೇದು. ಆ ಡ್ರೈವರನು ಮುಂಚಿನವನೊ-ಬೇರೆಯವನೊ?''

ಗ್ರೇ ಮೆಲ್ಲಗೆ ಹೇಳಿದನು—"ಡ್ರೈವರನ ವಿಚಾರ ತಿಳಿಯದು. ಪತ್ರಿಕೆಯೋದುತ್ತ ಕುಳಿತಿರುವ ಮನುಷ್ಯನು ಮಾತ್ರ ಮೋಡೀನನೇ ಸರಿ."

ಕೂಡಲೆ ಬ್ಲೇಕನು ಅಲ್ಲಿಂದ ಇನ್ನೊಂದು ಕಡೆಗೆ ತಿರುಗಿ, ಆಗತಾನೇ ಅತ್ತ ಬರುತ್ತಿದ್ದ ಒಬ್ಬ ಮನುಷ್ಯನ ಬಳಿಗೆ ಹೋಗಿ ಮಾತಾಡಿಸಿದನು— "ಹ್ಯಲೋ ವಿಂಟನ್! ನೀವಿಲ್ಲೇಕೆ ಬಂದಿರುವಿರಿ?''

ವಿಂಟನನು ಮೂರ್ಡಿನ ಒಬ್ಬ ಪ್ರಧಾನ ವ್ಯಕ್ತಿಯಾಗಿದ್ದನು. ವಿಂಟನನು ಬಹಳ ಬುದ್ಧಿವಂತನಾಗಿಯೂ, ಜಾಗರೂಕನಾಗಿಯೂ, ಕೈಕಾಲುಗಳಿಂದ ಧಷ್ಟಪುಷ್ಟನಾಗಿಯೂ ಇದ್ದನು. ಕೂಡಲೆ ಅವನು ಉತ್ತರವಿತ್ತನು:-"ನೀವು ಈ ಸುದ್ದಿಯನ್ನು ಕೇಳಿರಬಹುದು-ಸರ್ ಕಥವರ್ಟ್ ನಾವೆಲ್ಲರು ಈ ಸಮಯದಲ್ಲಿ ಡಾಕ್ಟರ್ ಮೋಡೀನರ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರು."

ಬ್ಲೇಕ್—"ಹೌದು, ಅದು ಗೊತ್ತಿದೆ. ಹಾಗಾದರೇನು. ಈಗ ಅವರ ಚಿಕಿತ್ಸೆಗಾಗಿ ಡಾಕ್ಟರ್ ಮೋಡೀನರು ಇಲ್ಲಿಂದ ರೇಡಿಯಮ್ಮನ್ನು ಒಯ್ಯಲಿಚ್ಛಿಸುತ್ತಾರೆಯೊ?"

ವಿಂಟನ್—"ನಿಜ. ರೇಡಿಯಮ್ಮನ್ನು ಇಲ್ಲಿಂದ ಒಯ್ಯುವಾಗಲೂ, ಪುನಃ ಇಲ್ಲಿಗೆ ತರುವಾಗಲೂ ಅದನ್ನು ರಕ್ಷಿಸುವ ಭಾರವು ನನ್ನ ಮೇಲೆಯೇ ಇಡಲ್ಪಟ್ಟಿವೆ. ಕೆಲಸವೇನೂ ಕಠಿಣವಾಗಿಲ್ಲ. ಅದಲ್ಲದೆ ರೇಡಿಯಮ್ ಅಪಹರಣದಿಂದ ಯಾರಿಗೆ ತಾನೆ ಏನು ಲಾಭವಿದೆ?''

ಬಹಳ ಮೆಲ್ಲಗೆ ಬ್ಲೇಕ್ ಹೇಳಿದನು—"ನೀವು ಹೇಳುವುದೇನೋ ಸರಿಯಾಗಿದೆ, ಮಿಸ್ಟರ್ ವಿಂಟನ್! ಆದರೆ ನಾನೀಗ ಇಷ್ಟು ಮಾತ್ರ ಹೇಳದಿರಲಾರೆನು—ಈ ರೇಡಿಯಮ್ಮಿನ ವಿಷಯದಲ್ಲಿ ಖಂಡಿತವಾಗಿಯೂ ಯಾವುದಾದರೊಂದು ನವೀನ ಘಟನೆಯು ಒದಗುವುದಿದೆ."

ವಿಂಟನ್—"ನೀವು ನಿಶ್ಚಿಂತೆಯಿಂದ ಇರಿ, ಮಿಸ್ಟರ್ ಬ್ಲೇಕ್! ನಾನು ಈ ವಿಷಯದಲ್ಲಿ ಜಾಗರೂಕನಾಗಿ ವರ್ತಿಸುವೆನು."

ಹೀಗೆ ಹೇಳಿ ವಿಂಟನನು ಮುಂದೆ ಹೊರಟು ಹೋದನು. ಅಲ್ಲವನು ಡಾಕ್ಟರ್ ಮೋಡೀನನ ಡ್ರೈವರನ ಜೊತೆಗೆ ಸ್ವಲ್ಪ ಮಾತಾಡಿ, ಅನಂತರ ಮೋಡೀನನೊಡನೆ ಆಸ್ಪತ್ರೆಯೊಳಗೆ ಹೋದನು.

ಎರಡು ಗಂಟೆಗಳು ಕಳೆದವು. ಅನಂತರ ಡಾಕ್ಟರ್ ಮೋಡೀನಾ ಮತ್ತು ಸೆಕ್ರೆಟರಿ ಫೆಂಟನ್ ಇವರು ಇಬ್ಬರು ಸೇವಕರೊಂದಿಗೆ ಹೊರಗೆಬಂದರು. ಅವರ ಕೈಯಲ್ಲಿ ಭಾರವಾದ ಹೊರೆಯೊಂದಿದ್ದಿತು. ಅದಿನ್ನೇನೂ ಅಲ್ಲ; ಮರದ ಪೆಟ್ಟಿಗೆ. ಅದರೊಳಗೆ ರೇಡಿಯಮ್ಮಿನ ದೊಡ್ಡ ಬ್ಯಾಟರಿ ಇದ್ದಿತು. ಪೆಟ್ಟಿಗೆಯು ಒಯ್ಯಲ್ಪಟ್ಟು ಮೋಟಾರಿನ ಮುಂಭಾಗದಲ್ಲಿ ಇಡಲ್ಪಟ್ಟಿತು. ಮೋಡೀನಾ ಮತ್ತು ಫೆಂಟನರು ಹಿಂಭಾಗದ ಸೀಟಿನಲ್ಲಿ ಕುಳಿತುಕೊಂಡರು. ಡ್ರೈವರನು ಬಾಗಿಲುಗಳನ್ನೆಲ್ಲಾ ಇಕ್ಕಿ ತನ್ನ ಸ್ಥಳದಲ್ಲಿ ಕುಳಿತುಕೊಂಡನು. ಅನಂತರ ಮೋಟಾರು ಅಲ್ಲಿಂದ ಹೊರಹೊರಟಿತು; ಆದರೆ ಎದುರಿನಿಂದ ಒಂದು ಮೋಟಾರ್ ಬಸ್ ಬಂದುದರಿಂದ ಈ ಮೋಟಾರ್ ಸ್ವಲ್ಪ ನಿಲ್ಲಬೇಕಾಯಿತು. ಆಗ ಮೋಟಾರಿಗೆ ಸ್ವಲ್ಪ ದೂರದಲ್ಲಿಯೇ ನಿಂತಿದ್ದ ಗ್ರೇಯ ಮೇಲೆ ಡಾಕ್ಟರ್ ಮೋಡೀನನ ತೀಕ್ಷ್ಣ ನೋಟವು ಬಿದ್ದಿತು. ಒಂದು ಕ್ಷಣ ಹಾಗೆಯೇ ನಟ್ಟ ದೃಷ್ಟಿಯಿಂದ ಗ್ರೇಯನ್ನು ಅಂಗಾಲಿನಿಂದ ತಲೆಯವರೆಗೆ ನೋಡಿದನು. ಮೋಟಾರು ಅಷ್ಟರಲ್ಲಿಯೇ ಮುಂದಕ್ಕೆ ವೇಗವಾಗಿ ಹೊರಟು ಹೋಯಿತು. ಆದರೂ ಮೋಟಾರಿನ ಹಿಂಭಾಗದ ಕನ್ನಡಿಯ ಕಿಟಕಿಯಿಂದ ಮೋಡೀನನು ತನ್ನನ್ನೇ ಲಕ್ಷ್ಯಪೂರ್ವಕವಾಗಿ ನೋಡುತ್ತಾ ಹೋಗುತ್ತಿರುವನೆಂದು ಗ್ರೇ ಅರಿತನು.

ಮನಸ್ಸೊಳಗೇ ಗ್ರೇ ಆಲೋಚಿಸಿದನು—"ಏನು? ಮೋಡೀನನ ಕಾಕದೃಷ್ಟಿಯು ನನ್ನನ್ನು ನಿಜವಾಗಿಯೂ ಗುರುತಿಸಿತೇ?"

ಈ ಸಂಶಯವು ಗ್ರೇಯ ಹೃದಯವನ್ನು ಕಲಕಿಬಿಟ್ಟಿತು. ಆ ವೇಳೆಯಲ್ಲಿಯೇ ಬ್ಲೇಕನು ಅವನ ಹತ್ತಿರ ಬಂದನು. ಗ್ರೇ ಮೆಲ್ಲನೆ ಕೇಳಿದನು: "ಈಗ ಒಯ್ದಿರುವುದೇ ರೇಡಿಯಮ್ಮಿನ ದೊಡ್ಡ ಬ್ಯಾಟರಿ. ಅದು ಸುರಕ್ಷಿತವಾಗಿರುವದೆಂದು ನೀವು ತಿಳಿದಿರಾ? ಅದನ್ನು ಸ್ವಾಧೀನಪಡಿಸಿಕೊಳ್ಳಲು ಪುಂಡರು ಯಾವುದೋ ಒಂದು ಫಿತೂರಿಯನ್ನು ತಯಾರಿಸುತ್ತಿರುವರೆಂದು ನೀವು ಹೇಳುತ್ತಿರಲಿಲ್ಲವೆ?"

ಬ್ಲೇಕ್:—"ಈ ವಿಷಯದಲ್ಲಿ ನಾನು ಈಗಲೆ ಏನನ್ನೂ ಹೇಳಲಾರೆನು. ಪ್ರಸಿದ್ಧ ಪತ್ತೆದಾರಿಯಾದ ವಿಂಟನ್ ಎಂಬುವನು ಅದರ ಬಳಿಯಲ್ಲಿ ಕುಳಿತಿರುವನು. ಪ್ರಯತ್ನಪಟ್ಟಾದರೂ ವಿಂಟನನು ಅದನ್ನು ರಕ್ಷಿಸದಿರಲಾರನು. ಅಗೋ, ನೋಡಿರಿ. ಆಸ್ಪತ್ರೆಯ ಮೆಟ್ಟಿಲಿನಲ್ಲಿ ನಿಂತಿರುವವರು ಯಾರು? ಯಾರಾದರೂ ಆಸ್ಪತ್ರೆಯ ಅಧಿಕಾರಿಗಳೇ?"

ಗ್ರೇ:—"ಹೌದು. ಅವರೇ ಆಸ್ಪತ್ರೆಯ ಸೆಕ್ರೆಟರಿ ಮಿ. ಫೆಂಟನ್."

ಬ್ಲೇಕ್:—"ಹಾಗಾದರೆ ನಾನೀಗ ಅವರ ಬಳಿಯಲ್ಲಿ ಸ್ವಲ್ಪ ಮಾತಾಡಿ ಬರುತ್ತೇನೆ. ನೀವೀಗ ನೆಟ್ಟಗೆ ಬೇಕರ್ ಸ್ಟ್ರೀಟಿಗೆ ಹಿಂದಿರುಗುವುದಲ್ಲದೆ, ನಾನು ಬರುವವರೆಗೆ ಅಲ್ಲಿಯೇ ನನ್ನನ್ನು ಪ್ರತೀಕ್ಷಿಸಿರಿ."

ಗ್ರೇ ಸ್ವಲ್ಪ ಶಂಕಿಸುತ್ತ: "ನನ್ನ ಇಚ್ಛೆ ಏನಿರುವುದೆಂದರೆ, ಮಿಸ್ ಎಂಡರ್ಬಿಯ ಹತ್ತರ ಒಂದೆರಡು ಮಾತಾಡಬೇಕೆಂದಿದೆ. ನೀವುಅನುಮತಿ...."

ಮುಂದೆ ಮಾತಾಡಲವಕಾಶವನ್ನೀಯದೆ ಬ್ಲೇಕನು ಸ್ವಲ್ಪ ಸಿಟ್ಟಿನಿಂದಲೇ ಹೇಳಿದನು:—"ಸಾಕು ಸಾಕು ನಿಲ್ಲಿಸಿರಿ. ಸಮಯಾಸಮಯವನ್ನರಿಯದೆ ಕೆಲಸ ಮಾಡಬೇಡಿರಿ. ನಾನೇ ಹೋಗಿ ನಿಮ್ಮ ಬಿಡುಗಡೆಯ ಸುದ್ದಿಯನ್ನು ಮಿಸ್ಟರ್ ಫೆಂಟನರಿಗೆ ತಿಳಿಸಿ ಬರುವೆನು. ಇನ್ನು ಎರಡು-ಮೂರು ದಿನಗಳ ವರೆಗೆ ನೀವು ಅಡಗಿಯೇ ಇರಬೇಕು. ನಿಮ್ಮ ಹಿತಕ್ಕಾಗಿಯೇ ಹೀಗೆ ನಾನು ನಿರ್ಬಂಧಿಸಬೇಕಾಗಿದೆ. ಹಾಗಿಲ್ಲದೆ ಹೋದರೆ ಏನಾದರೊಂದು ತೊಂದರೆಯಾಗಬಹುದಾದ ಸಂಭವವಿದೆ. ನೀವು ಮನೆಗೆ ಹೋಗಿ ಮೆ. ವಾರ್ಡೇಲಳಿಗೆ ಹೇಳಿರಿ. ಅವಳು ನಿಮ್ಮ ಊಟದ ಏರ್ಪಾಡು ಮಾಡುವಳು."

ನಿರುಪಾಯನಾಗಿ ಗ್ರೇ ಅಲ್ಲಿಂದ ಬೇಕರ್ ಸ್ಟ್ರೀಟಿಗೆ ಹಿಂದಿರುಗಿದನು. ಮನೆಗೆ ತಲುಪಿದಾಗ ಮೆ. ವಾರ್ಡಲಳು ಬ್ಲೇಕನ ವಿಷಯವಾಗಿ ವಿಚಾರಿಸಿದಳು. ಗ್ರೇ ಹೇಳಿದನು:—"ಅವರು ಸ್ವಲ್ಪ ಹೊತ್ತಿನ ಮೇಲೆ ಬರುವರು. ಅಷ್ಟರೊಳಗೆ ನೀನು ನನ್ನ ಊಟವನ್ನು ಸಿದ್ಧಪಡಿಸು."

ಮೆ. ವಾರ್ಡೇಲಳು ಸ್ವಲ್ಪ ಖಿನ್ನಳಾಗಿ ಹೇಳಿದಳು:—"ಅವರಿಗೆ ಯಾವಾಗಲೂ ಇದೇ ಅಭ್ಯಾಸವಾಗಿ ಬಿಟ್ಟಿದೆ. ಕೆಲಸದ ಭರದಲ್ಲಿ ಅವರಿಗೆ ಹಸಿವು-ನೀರಡಿಕೆಗಳ ಯೋಚನೆಯೇ ಇರುವದಿಲ್ಲ."

ಮೆ. ವಾರ್ಡೇಲಳು ಇನ್ನೂ ಏನೇನೋ ಬಡಬಡಿಸುವವಳಿದ್ದಳು; ಆದರೆ ಅಷ್ಟರಲ್ಲಿಯೇ ಟೆಲಿಫೋನಿನ ಗಂಟೆಯು ಹೊಡೆಯತೊಡಗಿತು. ಕೂಡಲೆ ಅವಳು ಟೆಲಿಫೋನಿನ ಬಳಿಗೆ ಹೋಗಿ, ಕೊಳವೆಯನ್ನೆತ್ತಿ, ಕಿವಿಗೆ ಹಿಡಿದು ಆಲಿಸಿದಳು. ಅನಂತರ ಹಿಂದಿರುಗಿ ಬಂದು ಹೇಳಿದಳು:—"ಟೆಂಕರನು ಫೋನ್ ಮಾಡುತ್ತಾನೆ ಸ್ವಾಮೀ! ನೀವಿನ್ನೂ ಹಿಂದಿರುಗಿ ಬಂದಿರೋ ಇಲ್ಲವೋ ಎಂಬುದನ್ನು ಅವನು ತಿಳಿಯಲಿಚ್ಛಿಸಿದನು. ನೀವೇ ಅವನಿಗೆ ಉತ್ತರ ವಿತ್ತರೆ ಚೆನ್ನಾಗಿರುವದು."

ಕೂಡಲೆ ಗ್ರೇ ಟೆಲಿಫೋನಿನ ಬಳಿಗೆ ಹೋಗಿ ಕೊಳವೆಯನ್ನೆತ್ತಿ ಹಿಡಿದುಕೊಂಡನು.

ಟಿಂಕರನು ಹೇಳಿದನು—"ಹೊಸ ಸುದ್ದಿ ಏನಾದರೂ ಇದೆಯೇ ಡಾಕ್ಟರ್? ಈಗಲೂ ನಾನು ನಿಮ್ಮ ಕೋಣೆಯಲ್ಲಿಯೇ ಇರುವೆನು. ಯಾರೂ ಇಷ್ಟರವರೆಗೆ ಈ ಮನೆಯ ಮೇಲೆ ದೃಷ್ಟಿಯಿಟ್ಟಿರುವದು ನನಗೆ ಕಂಡುಬರಲಿಲ್ಲ. ಆಸ್ಪತ್ರೆಯಲ್ಲಿ ಏನಾದರೂ ಹೊಸಘಟನೆಯು ಸಂಘಟಿಸಿತೇ? ಯಜಮಾನರೆಲ್ಲಿರುವರು?"

ಗ್ರೇ ಹೇಳಿದನು:—"ಅವರಿನ್ನೂ ಆಸ್ಪತ್ರೆಯಲ್ಲಿಯೇ ಇರುವರು. ಅಲ್ಲೇನೂ ಹೊಸ ಘಟನೆ ನಡೆಯಲಿಲ್ಲ. ಯಾರ್ಡಿನ ಪತ್ತೇದಾರಿಯಾದ ವಿಂಟನನ ಸಂರಕ್ಷತೆಯಲ್ಲಿ ಡಾಕ್ಟರ್ ಮೇಡೀನನು ಆಸ್ಪತ್ರೆಯ ರೇಡಿಯಮ್ಮಿನ ದೊಡ್ಡ ಬ್ಯಾಟರಿಯನ್ನು ಮೋಟರಿನಲ್ಲಿಟ್ಟುಕೊಂಡು ತನ್ನ ಮನೆಗೆ ಹೋದನು. ಇದನ್ನು ಹೇಳಿರಿ—ನಾನಿಲ್ಲದಿರುವಾಗ ಅಲ್ಲಿ ನನ್ನ ವಿಳಾಸಕ್ಕೆ ಯಾವುದಾದರೂ ಕಾಗದ-ಪತ್ರಗಳು ಬಂದಿವೆಯೇ?"

ಟಿಂಕರ್—"ಬಂದಿವೆ. ಎಷ್ಟೋ ಪ್ರಕಟನಾಪತ್ರಿಕೆಗಳೂ ಒಂದು ಲಕ್ಕೋಟೆಯೂ ಬಂದಿವೆ. ಲಕ್ಕೋಟೆಯ ಮೇಲೆ ಹೆಂಗಸಿನ ಕೈಯಿಂದ ಬರೆಯಲ್ಪಟ್ಟ ಸುಂದರವಾದ ಮುದ್ದಾದ ವಿಳಾಸವಿದೆ. ಕಾಗದವು ದಪ್ಪ ಊದಾ ಬಣ್ಣದ್ದಿದೆ. ಲಕ್ಕೋಟೆಯ ಮೇಲೆ ಮುದ್ರಿಸಲ್ಪಟ್ಟ ಮೋನೋಗ್ರಾಮಿನ ಮೇಲೆ ಎನ್. ಇ. ಎಂದಿದೆ."

ಗ್ರೇಯ ಮುಖಮಂಡಲದಲ್ಲಿ ಪ್ರಸನ್ನತೆಯುಂಟಾಗಿ ಒಂದು ನಸುನಗುವು ಮಿನುಗಿತು. ಆ ಲಕ್ಕೋಟೆಯು ಇನ್ನಾರದ್ದೂ ಆಗಿರದೆ, ತನ್ನ ಪ್ರಿಯಳಾದ ನೋರಾ ಎಂಡರ್ಬಿಯದೇ ಎಂದು ಅರಿತನು. ಪುನಃ ಫೋನ್‌ಮಾಡಿದನು: "ಸಾಧ್ಯವಾದಷ್ಟು ಬೇಗನೆ ನಾನು ಆ ಲಕ್ಕೋಟೆ ನೋಡಲಿಚ್ಛಿಸುತ್ತೇನೆ."

ಟಿಂಕರ್—"ಯಜಮಾನರ ಆಜ್ಞೆಯಿಲ್ಲದೆ ನಾನು ಇಲ್ಲಿಂದ ಹೊರಹೊರಡಲಾರೆನು. ಆಜ್ಞೆಯಿದ್ದಿದ್ದರೆ ಇಷ್ಟರೊಳಗೇ ನಾನು ಇದನ್ನು ನಿಮಗೆ ತಂದುಕೊಡದೇ ಇರುತ್ತಿರಲಿಲ್ಲ. ಯಜಮಾನರು ಮನೆಗೆ ಬಂದೊಡನೆಯೇ ನನಗೆ ಫೋನ್‌ಮಾಡಿರಿ."

ಗ್ರೆ:-"ಆಗಲಿ. ತೊಂದರೆ ಏನೂ ಇಲ್ಲ. ಈಗ ನಾನೇ ಅಲ್ಲಿಗೆ ಬರುವೆನು."

ಟಿಂಕರ್—"ಆದರೆ ಯಜಮಾನರಿಗೆ ಅಲ್ಲೇನಾದರೂ ನಿಮ್ಮ ಆವಶ್ಯಕತೆ ಬೀಳಬಹುದು."

ಆದರೆ ಇದಕ್ಕಿಂತ ಹೆಚ್ಚಿಗೆ ಟಿಂಕರನು ಮಾತಾಡಲು ಸಾಧ್ಯವಾಗಲಿಲ್ಲ. ಯಾಕೆಂದರೆ, ಅಷ್ಟರೊಳಗೇ ಡಾಕ್ಟರ್ ಗ್ರೇ ಟೆಲಿಫೋನಿನ ಕೊಳವೆಯನ್ನು ಕೆಳಗಿಟ್ಟುಬಿಟ್ಟಿದ್ದನು.

ಕೂಡಲೆ ಟ್ಯಾಕ್ಸಿಯೊಂದನ್ನು ತೆಗೆದುಕೊಂಡು ಗ್ರೇ ಮನೆಯಿಂದ ಹೊರಟನು. ದಾರಿಯಲ್ಲಿ ಬರುವಾಗ ಗ್ರೇ ಮನದೊಳಗೇ ಆಲೋಚಿಸಿದನು: "ಆದರೆ ನಾನು ಈಗ ಬಿಡುಗಡೆಹೊಂದಿರುವೆನೆಂಬ ಸುದ್ದಿಯು ಸೋರಳಿಗೆ ತಿಳಿದು ಬಂದುದು ಹೇಗೆ?"

ಈ ಪ್ರಶ್ನೆಗೆ ಯಾವ ಉತ್ತರವೂ ಅವನ ಬುದ್ಧಿಗೆ ಹೊಳೆಯಲಿಲ್ಲ. ಫೆಂಟ್‌ಸ್ಟೋನ್‌ಮೆನ್ಶನ್ನಿನ ಬಳಿಗೆ ಬಂದೊಡನೆ ಟ್ಯಾಕ್ಸಿಯಿಂದ ಕೆಳಗೆ ಇಳಿದು ತನ್ನ ಬಿಡಾರದ ಕಡೆಗೆ ಹೋದನು. ಅಲ್ಲಿ ಸ್ವಲ್ಪ ಹೊತ್ತು ದೂರದಲ್ಲಿಯೇ ಕಾದು ನಿಂತು, ಕಾವಲುಗಾರನಾದ ಹಾಬ್ಸನು ಬಾಗಿಲಿನಿಂದ ಸ್ವಲ್ಪ ಬೇರೆ ಕಡೆ ಹೋದಾಗ ಮೆಲ್ಲನೆ ಕಟ್ಟಡದ ಹಿಂಭಾಗದಿಂದ ಮನೆಯನ್ನು ಪ್ರವೇಶಿಸಿ ಟೆಂಕರನ ಬಳಿಗೆ ಹೋದನು.

ಟೆಂಕರನು ಲಕ್ಕೋಟೆಯನ್ನು ಕೊಟ್ಟು ಬ್ಲೇಕನ ಅನುಮತಿಯನ್ನು ಪಡೆಯದೆ ಹಾಗೆ ಬಂದುದಕ್ಕಾಗಿ ತಿರಸ್ಕರಿಸಿದನು.

"ಏನೂ ತೊಂದರೆಯಿಲ್ಲ, ಟೆಂಕರ್! ಅವರು ಮನೆಗೆ ಹಿಂದಿರುಗುವುದರೊಳಗಾಗಿಯೇ ನಾನು ಮನೆಯಲ್ಲಿ ಇರುವೆನು." ಎಂದು ಹೇಳುತ್ತಾ, ಕೂಡಲೆ ಗ್ರೇ ಅಲ್ಲಿಂದ ಹೊರಹೊರಟನು. ಗ್ರೇ ಹೊರಟ ಕೂಡಲೆ ಟೆಂಕರನು ಕೋಣೆಯ ಬಾಗಿಲನ್ನು ಇಕ್ಕಿಕೊಂಡನು. ಗ್ರೇ ಮೆಟ್ಟಿಲುಗಳ ಮೇಲೆ ಬರುವಾಗಲೇ ಲಕ್ಕೋಟೆಯ ಒಳಗೆ ಏನಿರುವುದೆಂದರಿಯಲು ತವಕಪಟ್ಟು, ಅಲ್ಲಿಯೇ ನಿಂತು ಲಕ್ಕೋಟೆಯನ್ನೊಡೆದು ಕಾಗದವನ್ನು ಓದತೊಡಗಿದನು. ಅದರ ಬರವಣಿಗೆಯ ಕ್ರಮವು ಹೀಗೆ ಇದ್ದಿತು—

"ಪ್ರಿಯ ಜೆಫ್ರಿ! ನಾನು ಮೇಡೀನನ ಮನೆಗೆ ಸರ್ ಕಥವರ್ಟ್ ನಾವೆಲ್ಸರ ದೇಹಸ್ಥಿತಿಯನ್ನು ನೋಡಿಕೊಳ್ಳುವುದಕ್ಕಾಗಿ ಬಂದಿರುವೆನು. ಸರ್ ಕಥವರ್ಟ್ ನಾವೆಲ್ಸರು ಡೀ 3 ಕೆನ್ಸರ್‌ರೋಗಕ್ಕೆ ತುತ್ತಾಗಿರುವರು; ಆದರೆ ಆ ರೋಗದಿಂದ ಕೆಲವು ದಿನಗಳೊಳಗೇ ಗುಣಹೊಂದಬಲ್ಲರೆಂದು ಡಾಕ್ಟರ್ ಮೇಡೀನರಿಗೆ ದೃಢವಿಶ್ವಾಸವಿದೆ. ಹನ್ನೊಂದನೇ ನಂಬರಿನ ರೋಗಿಯ ವಿಷಯದಲ್ಲಿ ನೀನು ಮೋಸಹೋಗಿರುವಿಯೆಂದು ನಾನೀಗ ಊಹಿಸುತ್ತೇನೆ. ಯಾಕಂದರೆ ಯಾವುದೋ ಮಾತಿನ ಸಂದರ್ಭದಲ್ಲಿ "ಹನ್ನೊಂದನೆ ನಂಬರಿನ ರೋಗಿಯು ಆ ರೀತಿಯಾಗಿ ಕೆನ್ಸರ್ ರೋಗಕ್ಕೆ ಸಿಲುಕಿದುದು ನನಗಾಶ್ಚರ್ಯವಾಗಿದೆ" ಎಂದು ಡಾಕ್ಟರ್ ಮೇಡೀನರೇ ಹೇಳಿದರು. ಆಸ್ಪತ್ರೆಯಿಂದ ಹೊರದೂಡಲ್ಪಟ್ಟ ರಾಲ್ಸನೇ ಹಾಗೆ ಮಾಡಿರಬಹುದೆಂದು ಡಾಕ್ಟರ್ ಮೇಡೀನರ ಅಭಿಪ್ರಾಯವಿದೆ. ಅದು ಏನೇ ಇರಲಿ, ಅದರ ವಿಷಯವಾಗಿ

ನಾವಿಬ್ಬರೂ ಸಂದರ್ಶಿಸಿದಾಗ ಪುನಃ ಮಾತಾಡೋಣ. ಈಗಿಲ್ಲಿ ನನಗೊಬ್ಬ ಮನುಷ್ಯನ ಮೇಲೆ ಸಂಶಯ ಬಂದಿದೆ. ಅವನು ನಿನ್ನೆ ಮಧ್ಯಾಹ್ನ ಮತ್ತು ಸಾಯಂಕಾಲ ಈ ಮನೆಯ ಹತ್ತಿರ ಆಚೆ ಈಚೆ ಸುಳಿದಾಡುತ್ತಿದ್ದನು. ಮನೆಯೊಳಗಿನ ಯಾರಾದರೊಬ್ಬರಿಗೆ ಆತನೊಡನೆ ಯಾವದಾದರೊಂದು ಸಂಪರ್ಕವಿರಬಹುದೆಂದು ನನಗನಿಸುತ್ತದೆ. ಸರ್ ಕಥವರ್ಟ್ ನಾವೆಲ್ಲರ ಶರೀರಕ್ಕೆ ಅವನು ಯಾವ ತರಹದಿಂದಾದರೂ ಅಪಾಯವನ್ನುಂಟುಮಾಡಬಹುದಾಗಿ ತೋರುತ್ತದೆ. ನೀನು ಬೇಗನೆ ಒಂದು ಬಾರಿ ಇಲ್ಲಿಗೆ ಬಂದು ನನ್ನನ್ನು ನೋಡುವೆಯಾದರೆ, ಈ ವಿಷಯದಲ್ಲಿಯೂ ಇತರ ವಿಷಯದಲ್ಲಿಯೂ ಹೆಚ್ಚು ಮಾತಾಡಬಹುದು. ಈ ಮನೆಯ ಹಿಂಭಾಗದಲ್ಲಿ ಪೊದರುಗಳಿವೆ. ನಾನು ಅಲ್ಲಿಗೆ ಬಂದು ನಿನ್ನನ್ನು ನಿರೀಕ್ಷಿಸುತ್ತಾ ಇರುತ್ತೇನೆ. ಯಾವ ಮನುಷ್ಯನ ಮೇಲೆ ನನಗೆ ಸಂಶಯವಿದೆಯೋ, ಆ ಮನುಷ್ಯನು ಡಾಕ್ಟರ್ ಮೇಡೀವರಿಗೆ ಬಹಳ ವಿಶ್ವಾಸಪಾತ್ರನಂತಿರುವದರಿಂದ ನಾನು ಇಷ್ಟರೊಳಗೆ ಈ ನನ್ನ ಸಂಶಯವನ್ನು ಮೇಡೀವರ ಬಳಿಯಲ್ಲಿ ತಿಳಿಸಲಿಲ್ಲ; ಯಾಕಂದರೆ ನಾನು ಈ ವಿಷಯವನ್ನು ಹೇಳಿದಾಗ ಅವರು ಸಿಟ್ಟಾಗಬಹುದಲ್ಲವೆ, ಇದರ ಒಳಗುಟ್ಟನ್ನು ಕಂಡುಹಿಡಿಯುತ್ತಿರುವ ನಮ್ಮ ಕಾರ್ಯಕ್ಕೂ ಹಾನಿಯೊದಗಬಹುದು. ಈ ವಿಷಯದಲ್ಲಿ ನಾನು ನಿನ್ನೊಡನೆ ಮಾತನಾಡಿ ಹೆಚ್ಚಿನ ವಿಚಾರವನ್ನು ನಿನಗೆ ತಿಳಿಸುವದಕ್ಕಿಂತ ಮುಂಚೆ ಈ ಕಾಗದದ ವಿಚಾರವನ್ನು ನೀನು ಇನ್ಯಾರಿಗೂ ಮರೆತು ಕೂಡ ತಿಳಿಸಬಾರದಾಗಿ ಅಪೇಕ್ಷಿಸುತ್ತೇನೆ.

ನಿನ್ನನ್ನೊಂದು ಸಲ ನೋಡಿ ಆನಂದಿಸಲು ತುಂಬಾ ಹಾತೊರೆಯುತ್ತಿರುವೆನು.

ನಿನ್ನ ಪ್ರಾಣಪ್ರಿಯೆ,

ನೋರಾ ಎಂಡರ್ಬಿ."

ಈ ವಿಚಾರದಲ್ಲಿ ಗ್ರೇ ಒಂದು ಕ್ಷಣ ಕಾಲದ ವರೆಗೆ ಆಲೋಚನೆ ಮಾಡಿದನು. ಅವನು ಆ ಕಾಗದವನ್ನು ಬ್ಲೇಕನಿಗೆ ತೋರಿಸಿ ಅವನ ಸಲಹೆಯಂತೆ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವದು ವಾಸ್ತವಿಕವಾಗಿಯೂ ಅಗತ್ಯವಾಗಿದ್ದಿತು; ಆದರೆ ನೋರಳು ಅದನ್ನು ಇನ್ಯಾರಿಗೂ ತೋರಿಸಬಾರದೆಂದು ಬರೆದುಬಿಟ್ಟಿದ್ದಳಾದ್ದರಿಂದ ಗ್ರೇ ನಿರುಪಾಯನಾದನು. ಎಲ್ಲಕ್ಕಿಂತ ಮುಂಚೆ ನೋರಳನ್ನು ಸಂದರ್ಶಿಸಿ ಬರುವದೇ ಉಚಿತವೆಂದು ಗ್ರೇ ನಿರ್ಧರಿಸಿದನು. ನೋರಳೊಡನೆ ಮಾತಾಡಿ ಬಂದನಂತರ ಬ್ಲೇಕನ ಹತ್ತಿರ ಎಲ್ಲ ವಿಚಾರವನ್ನು ತಿಳಿಸಲು ಅನುಕೂಲವಾಗುವುದೆಂದು ನಿಶ್ಚೈಸಿ, ಗ್ರೇ ಲಕ್ಕೋಟೆಯನ್ನು ಜೇಬಿನೊಳಗಿಟ್ಟುಕೊಂಡು ವಾಟರ್ಲೂವಿನ ಕಡೆಗೆ ಹೊರಟನು.

ಆದರೆ ಆ ಷ್ಟೇಶನ್ನನ್ನು ತಲ್ಪಿದ ನಂತರ ಟ್ರೇನು ಬರುವದಕ್ಕೆ ಇನ್ನೂ ತಡವಿದೆ ಎಂದು ತಿಳಿದು ಬಂದಿತು. ಮಿಸ್ಟರ್ ಬ್ಲೇಕನಿಗೆ ಫೋನ್ ಮಾಡಿ ಎರಡು ಗಂಟೆಗಳ ಕಾಲ ರಜೆಯನ್ನು ಪಡೆಯುವದು ಉತ್ತಮವೆಂದು ಭಾವಿಸಿ, ಆತನು ಬೇಕರ್ ಸ್ಟ್ರೀಟಿಗೆ ಫೋನ್ ಮಾಡಿದನು; ಆದರೆ ಬ್ಲೇಕನು ಇನ್ನೂ ಮನೆಗೆ ಹಿಂದಿರುಗಿರಲಿಲ್ಲವೆಂದು ತಿಳಿಯಿತು. ಮೆ. ವಾರ್ಡೇಲಳು ಉತ್ತರ ವಿತ್ತಳು:"ಏನೂ ತೊಂದರೆ ಇಲ್ಲ. ಯಜಮಾನರು ಬಂದೊಡನೆಯೇ ನೀವಿನ್ನು ಎರಡು ಗಂಟೆಗಳೊಳಗಾಗಿ ಬರುತ್ತೀರೆಂದು ನಾನು ಅವರಿಗೆ ತಿಳಿಸುವೆನು."

ಆಗ ಗ್ರೇಗೆ ಬಹಳ ಹಸಿವಾಗಿದ್ದಿತು; ಆದರೂ ಅದನ್ನೆಣಿಸದೆ ನೆಟ್ಟಗೆ ವೆಂಬಲ್ಡನ್ನಿಗೆ ಹೋದನು. ಅವನು ಹಿಂದೊಂದು ಸಲ ಡಾ. ಮೇಡೀನ ನೊಂದಿಗೆ ಎಂಬೋಲಾಗಿಗೆ ಹೋಗಿ ಬಂದಿದ್ದನು. ಆದರಿಂದ ಅವನಿಗೆ ಆ ಸ್ಥಳವನ್ನು ತಲುಪಲು ಹೆಚ್ಚು ತಡವಾಗಲಿಲ್ಲ. ಟ್ಯಾಕ್ಸಿಯನ್ನು ಮನೆಗೆ ಸ್ವಲ್ಪ ದೂರದಲ್ಲಿಯೇ ನಿಲ್ಲಿಸಲು ಹೇಳಿ, ಅಲ್ಲಿ ಇಳಿದು, ಡ್ರೈವರನಿಗೆ ಬಾಡಿಗೆ ಯನ್ನಿತ್ತು ಅವನನ್ನು ಕಳುಹಿಸಿದ ಮೇಲೆ, ಮೆಲ್ಲಮೆಲ್ಲನೆ ಮೇಡೀನನ ಬಂಗ್ಲೆಯ ಹಿಂಭಾಗದಲ್ಲಿರುವ ಉದ್ಯಾನವನದ ಕಡೆಗೆ ನಡೆದನು.

ನೋರಾ ಎಂಡರ್ಬಿಯು ಅಷ್ಟರೊಳಗೆ ಅಲ್ಲಿಗೆ ಬಾರದಿರುವದನ್ನು ಕಂಡು ಗ್ರೇ ಪೊದರೆಗಳ ಬಳಿಯಲ್ಲಿಯೇ ಅಡಗಿ ನಿಂತು ಅವಳು ಬರುವದನ್ನೇ ಪ್ರತೀಕ್ಷಿಸಿದನು. ಹೀಗೆ ನಿಂತಿರುವಾಗಲೆ ಹತ್ತು ಮಿನಿಟುಗಳು ಕಳೆದವು, ಸ್ವಲ್ಪ ಹೊತ್ತಿನ ಮೇಲೆ ಹತ್ತಿರದ ಪೊದರೆಯ ಹತ್ತಿರ ಸರಸರ ಶಬ್ದವಾಯಿತು; "ಡಾಕ್ಟರ್ ಗ್ರೇ!" ಎಂಬುದೊಂದು ಮೃದುಶಬ್ದವೂ ಆ ದಿಕ್ಕಿನಿಂದ ಬಂದಿತು.

ಗ್ರೇ ಕೂಡ ಅಷ್ಟೇ ಮಂದವಾದ ಸ್ವರದಿಂದ ಉತ್ತರವಿತ್ತನು:— "ಹೌದು-ಹೌದು. ನಾನು."

ಇನ್ನೊಂದು ಶಬ್ದವು ಬಂದಿತು:—"ಸರಿ. ಈಗಲೇ ನಾನು ಬರು ತ್ತೇನೆ."

ಎರಡನೆಯ ಕ್ಷಣದಲ್ಲಿಯೇ ಅವನ ಪಕ್ಕದ ಪೊದರೆಯು ಅಲುಗಾಡಿತು. ಒಬ್ಬ ಉದ್ದ ಕೈಕಾಲಿನ ಮನುಷ್ಯನು ಗ್ರೇಯ ಎದುರಿಗೆ ಬಂದು ನಿಂತನು. ಅವನು ಮೆಲ್ಲನೆ ಹೇಳಿದನು:—"ನೀವು ಸುಮ್ಮನೆ ಈಗ ನನ್ನೊಡನೆ ಬನ್ನಿರಿ. ಈಗಿಲ್ಲೊಂದು ವಿಚಿತ್ರ ಘಟನೆಯು ನಡೆದಿದೆ. ಎಚ್ಚರದಿಂದ ಬನ್ನಿರಿ. ಸ್ವಲ್ಪವೂ ಶಬ್ದವಾಗದಿರಲಿ."

ಗ್ರೇ ಆ ಮನುಷ್ಯನನ್ನು ಹಿಂಬಾಲಿಸಿ ಮುಂದೆ ನಡೆದನು. ಮನೆಯ ಹಿಂಭಾಗದ ಒಂದು ಕಿಡಕಿಯ ಮೂಲಕವಾಗಿ ಗ್ರೇ ಆ ಮನುಷ್ಯನೊಡನೆ

ಮನೆಯನ್ನು ಪ್ರವೇಶಿಸಿದನು. ಅನಂತರ ಆ ಮನುಷ್ಯನು ಒಂದು ಕೋಣೆಯೊಳಗೆ ಗ್ರೇಯನ್ನು ಕರೆದುಕೊಂಡು ಹೋಗಿ ಕಿವಿಯ ಹತ್ತಿರ ಮೆಲ್ಲನೆ ಹೇಳಿದನು:—"ಮಾತಾಡದೆ ಸುಮ್ಮನೆ ಇಲ್ಲಿ ಕುರ್ಚಿಯ ಮೇಲೆ ಕುಳಿತಿರಿ. ನಾನು ಈಗಲೇ ಬರುತ್ತೇನೆ."

ಅವನ ಮಾತಿಗೊಪ್ಪಿ ಗ್ರೇ ಕುರ್ಚಿಯ ಮೇಲೆ ಕುಳಿತುಕೊಳ್ಳಬೇಕೆಂದು ಮುಂದೆ ಹೋಗುತ್ತಿರಲು, ಹಿಂದಿನಿಂದ ಆ ಮನುಷ್ಯನು ಬಟ್ಟೆಯೊಳಗೆ ಅಡಗಿಸಿಟ್ಟುಕೊಂಡಿದ್ದ ಕಬ್ಬಿಣದ ಒಂದು ಚಿಕ್ಕ ತುಂಡನ್ನು ಥಟ್ಟನೆ ಹೊರತೆಗೆದು, ಅದರಿಂದ ಗ್ರೇಯ ತಲೆಬುರುಡೆಗೆ ಬಲವಾಗಿ ಬಡಿದನು. ಬಾಯಿಂದ ಒಂದು ಶಬ್ದವೂ ಹೊರಡದೆ ಗ್ರೇಯ ಶರೀರವು ದೊಪ್ಪನೆ ನೆಲದ ಮೇಲೆ ಉರುಳಿತು!

ಕೂಡಲೆ ಆ ಮನುಷ್ಯನು ಗ್ರೇಯನ್ನೆತ್ತಿ ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿದನು. ಶೀಸೆಯಲ್ಲಿ ಇಟ್ಟಿದ್ದ ಒಂದು ತರಲಪದಾರ್ಥವನ್ನು ಹೈಪೋಡರ್‌ಮಿಕ್ ಸಿರಿಂಜಿನಲ್ಲಿ ತುಂಬಿ, ಅದನ್ನು ಗ್ರೇಯ ಮಣಿಕಟ್ಟಿನೊಳಗೆ ಸೇರಿಸಿದನು.

ಅನಂತರ ಕೋಣೆಯ ಬಾಗಿಲನ್ನು ಸ್ವಲ್ಪ ತೆರೆದು ಹೊರಗಿನ ಸಪ್ಪಳವನ್ನು ಆಲಿಸಿದನು. ಅಡಿಗೆಯ ಮನೆಯಿಂದ ಮಾತ್ರ ಮಾತಾಡುವ ಶಬ್ದವು ಕೇಳಿಸುತ್ತಿದ್ದಿತು. ಉಳಿದೆಡೆಯಲ್ಲೆಲ್ಲ ನಿಃಶಬ್ದವಾಗಿದ್ದಿತು. ಆದರಿಂದ ಸಮಾಧಾನ ತಾಳಿ, ಆ ನರಘಾತುಕನಾದ ಇಬಾನೇಜನು ಆ ನಿಸ್ಸಂಜ್ಞ ದೇಹವನ್ನು ಹೊತ್ತುಕೊಂಡು ಮೆಟ್ಟಿಲುಗಳ ಮೂಲಕವಾಗಿ ಉಪ್ಪರಿಗೆಯನ್ನು ಹತ್ತಿ, ಅಲ್ಲೊಂದು ಕೋಣೆಯೊಳಗೆ ಬೆಂಚಿನ ಮೇಲೆ ಮಲಗಿಸಿದನು. ಗಂಟೆ ಎಷ್ಟೆಂದು ಕೈಗಡಿಯಾರವನ್ನು ನೋಡಿಕೊಂಡು ಅಲ್ಲಿಂದ ಕೆಳಗಿಳಿದು ಬಂದನು. ಅಲ್ಲಿ ಫೋನಿನ ಮೂಲಕವಾಗಿ ಯಾರೊಡನೆಯೋ ಮಾತಾಡಿದನು. ಅದಕ್ಕವನಿಗೆ ಸಂತೋಷಜನಕವಾದ ಉತ್ತರವೇ ಬಂದಿರಬೇಕು. ಯಾಕಂದರೆ, ಟೆಲಿಫೋನಿನ ಕೊಳವೆಯನ್ನು ಕೆಳಗಿಡುವಾಗ ಅವನ ತುಟಿಗಳಲ್ಲಿ ನಸುನಗುವು ಮಿನುಗುತ್ತಿದ್ದುದು ಕಾಣಿಸುತ್ತಿತ್ತು.

(೭)

ಬ್ಲೇಕನು ಈ ವೇಳೆಯಲ್ಲಿ ಆಸ್ಪತ್ರೆಯ ಮೆಟ್ಟಿಲುಗಳ ಮೇಲೆ ನಿಂತಿದ್ದ ಫೆಂಟನನಿದ್ದಲ್ಲಿಗೆ ಒಂದು ನಿಶ್ಚಿತಾಭಿಪ್ರಾಯದಿಂದ ಹೊರಟಿರಲಿಲ್ಲ. ಫೆಂಟನನು ಮೆಟ್ಟಿಲಿನ ಮೇಲೆ ಸುಮ್ಮನೆ ನಿಂತುಕೊಂಡು ಸಿಗರೇಟನ್ನು ಸೇದುತ್ತಿದ್ದನು. ಆಸ್ಪತ್ರೆಯ ಒಳಗೆ ಸಿಗರೇಟ್ ಸೇದಬಾರದಾಗಿದ್ದಿತು; ಆದರೆ ಕೆಲಸ

ಮಾಡುವದಕ್ಕಿಂತ ಮುಂಚೆ ಒಂದು ಸಿಗರೇಟನ್ನು ಸೇದಬೇಕಾದುದು ಅತ್ಯಗತ್ಯವಾಗಿದ್ದಿತು.

ಫೆಂಟನನ ಬಳಿಗೆ ಹೋಗುತ್ತಲೆ ಬ್ಲೇಕನು ಹೇಳಿದನು:– "ತಮ್ಮ ಹೆಸರು ಮಿಸ್ಟರ್ ಫೆಂಟನ್ ಎಂದಲ್ಲವೆ? ನಾನು ಸ್ಯಾಕ್ಸ್ಟನ್ ಬ್ಲೇಕ್"

ಈ ಮಾತನ್ನು ಕೇಳುತ್ತಲೆ ಫೆಂಟನನ ವದನಮಂಡಲವು ಅರಳಿತು. ಇನ್ಸ್‌ಪೆಕ್ಟರ್ ಹಾರ್ಕರನ ಬಾಯಿಂದ ಬ್ಲೇಕನ ವಿಷಯವನ್ನು ಅವನು ಅರಿತಿದ್ದನು. ಆನಂದಿತನಾಗಿ ಫೆಂಟನನು ಬ್ಲೇಕನ ಕೈ ಕುಲುಕಿಸಿ ಉತ್ಸುಕತೆಯಿಂದ ವಿಚಾರಿಸಿದನು:— "ತಾವು ಬಂದುಬಿಟ್ಟು ನಮ್ಮ ಡಾಕ್ಟರ್ ಗ್ರೇಯ ಮೊಕದ್ದಮೆಯ ಭಾರವನ್ನು ವಹಿಸಿಕೊಂಡಿರುವಿರೆಂದು ಕೇಳಿದ್ದೇನೆ. ಗ್ರೇಯ ಮೇಲೆ ಬಂದಿರುವ ಆ ವ್ಯವಹಾರವು ಬಹಳ ವಿಚಿತ್ರವಾಗಿರುವದಲ್ಲದೆ, ಕೇವಲ ಸುಳ್ಳಿನ ಕಂತೆಯಿಂದ ತುಂಬಿದೆ. ಆ ವಿಚಾರದಲ್ಲಿ ಇಷ್ಟರ ವರೆಗೆ ತಾವು ಏನೇನು ಮಾಡಿರುವಿರಿ?"

ಬ್ಲೇಕ್:– ಡಾಕ್ಟರ್ ಗ್ರೇಗೆ ವಿರುದ್ಧವಾಗಿ ತೋರಿ ಬಂದ ಆವನ ಬೆರಳ ಗುರುತುಗಳೆಲ್ಲವೂ ಕೇವಲ ಕಪಟಮಯವಿದ್ದಿರುವುವೆಂದು ನಾನು ಇನ್ಸ್‌ಪೆಕ್ಟರ್ ಹಾರ್ಕರರಿಗೆ ತಿಳಿಸಿರುವೆನು. ಆದರಿಂದ ಕಳೆದ ರಾತ್ರಿ ಗ್ರೇಯು ಬಿಡುಗಡೆಯಾಯಿತು. ಈಗ ಡಾಕ್ಟರ್ ಗ್ರೇ ಸ್ವತಂತ್ರರಾಗಿರುವರು. ಇನ್ನೆರಡು ದಿನಗಳೊಳಗೇ ಅವರ ನಿರ್ದೋಷತೆಯು ಉದ್ಘೋಷಿಸಲ್ಪಡುವುದು; ಆದರೆ ಈ ನಡುವೆ ಒಂದು ವಿಶೇಷ ಕೆಲಸಕ್ಕಾಗಿ ನಾನು ಅವರಿಗೆ ಗುಪ್ತವಾಗಿರಲು ಹೇಳಿರುವೆನು.

ಫೆಂಟನ್:– "ಹಾಗಾದರೆ ಗ್ರೇಯನ್ನು ಜೈಲಿಗೆ ಕಳುಹಿಸಲು ಏನೋ ದೊಡ್ಡ ಫಿತೂರಿ ನಡೆದಿರುವದೆಂದು ನಿಶ್ಚಿತವಾಗಿ ತೋರುತ್ತದೆ. ಕೊನೆಗೆ ಇದು ಯಾವ ಅಭಿಪ್ರಾಯದಿಂದ ಆಗಿರಬಹುದು?"

ಬ್ಲೇಕ್:– "ಈ ಜಟಿಲಸಮಸ್ಯೆಯ ಕಗ್ಗಂಟನ್ನು ಬಿಡಿಸುವದರಲ್ಲಿಯೇ ನಾನೀಗ ತೊಡಗಿರುವೆನು. ಈ ವ್ಯವಹಾರವು ಬಲು ತೊಡಕಿನದಾಗಿದೆ. ಆದರೂ ಕೂಡ ಈಗ ತಿಳಿದುಬಂದಿರುವಷ್ಟರಲ್ಲಿ ಹೇಳುವುದಾದರೆ, ಆ ಫಿತೂರಿಗೂ ಈ ನಿಮ್ಮ ಆಸ್ಪತ್ರೆಗೂ ಏನೋ ಒಂದು ವಿಧವಾದ ಸಂಬಂಧವಿದೆ. ಅದಿರಲಿ. ಈಗ ಡಾಕ್ಟರ್ ಮೋಹೀನರು ಒಂದು ಪೆಟ್ಟಿಗೆಯನ್ನು ತಮ್ಮ ಜೊತೆಗೆ ಒಯ್ದುದಷ್ಟೆ? ಅದರೊಳಗೆ ರೇಡಿಯಮ್ಮಿನ ದೊಡ್ಡ ಬ್ಯಾಟರಿ ಇರುವುದೇ? ಅದರಿಂದ ಬ್ಯಾಟರಿಯನ್ನು ಯಾವ ವಿಧದಿಂದಾದರೂ ತೆಗೆದಿರುವ ಸಂಭವವಿಲ್ಲವೇ?"

ಫೆಂಟನ್:—"ಇಲ್ಲ, ಹಾಗಾಗಲು ಸಾಧ್ಯವೇ ಇಲ್ಲ. ಯಾವ ಮನುಷ್ಯನಾದರೂ ಅಜಾಗರೂಕತೆಯಿಂದ ಅದನ್ನು ಮುಟ್ಟಿದರೆ ಥಟ್ಟನೆ ಮರಣಹೊಂದುವುದು ನಿಶ್ಚಯ. ಅದಲ್ಲದೆ ಖಜಾನೆಯಿಂದ ಪೆಟ್ಟಿಗೆಯನ್ನು ತೆಗೆಯುವಾಗ ಡಾಕ್ಟರ್ ಮೇಡೀನ, ಡಾಕ್ಟರ್ ಸ್ಟೆಂಟನ್ ಮತ್ತು ನಾನು ಆ ಪೆಟ್ಟಿಗೆಯೊಳಗೆ ಬ್ಯಾಟರಿಯಿರುವುದನ್ನು ನೋಡಿರುವೆವು; ಆದರೆ ಯಾರಾದರೂ ದುಷ್ಟರು ಅದನ್ನು ವಶಪಡಿಸಿಕೊಂಡರೆ, ಅವರು ಅದರಿಂದ ಯಾವ ತರಹದ ಲಾಭ ಹೊಂದಬಲ್ಲರೆಂಬುದೇ ನನ್ನ ಬುದ್ಧಿಗೆ ತೋರದಾಗಿದೆ."

ಬ್ಲೇಕ್:—"ಇದೇನೋ ಸರಿ; ಆದರೆ ಡಾಕ್ಟರ್ ಗ್ರೇಗೆ ವಿರುದ್ಧವಾಗಿ ಆ ತರಹದ ಪಿತೂರಿಯನ್ನು ರಚಿಸಿರುವುದೆಂಬುದು ಏನೋ ಒಂದು ಒಳ್ಳೆ ಬೆಲೆ ಬಾಳುವ ವಸ್ತುವಿನ ಲಾಭಕ್ಕಾಗಿಯೇ ನಡೆಸಿರಬಹುದಾಗಿದೆ. ಅದಲ್ಲದೆ ನಿಮ್ಮ ಬ್ಯಾಟರಿಯು ಬಲು ಬೆಲೆಬಾಳುವಂತಹುದಾದ ಕಾರಣವೇ ಬ್ಯಾಟರಿಗೂ ಪಿತೂರಿಗೂ ಏನೋ ಒಂದು ತರಹದ ಸಂಪರ್ಕವಿರಲು ಸಂಭವವಿದೆ ಎಂದು ನನಗೆ ಅನುಮಾನ ಬಂದಿದೆ."

ಫೆಂಟನ್:—"ಬ್ಯಾಟರಿಯ ರಕ್ಷಣಾ ವಿಷಯದಲ್ಲಿ ಡಾಕ್ಟರ್ ಮೇಡೀನರು ಮೊದಲಿನಿಂದಲೂ ಬಹಳ ಜಾಗರೂಕರಾಗಿರುವರು. ಅದಲ್ಲದೆ ಬ್ಯಾಟರಿಯು ಮನೆಗೆ ಕ್ಷೇಮವಾಗಿ ತಲ್ಪಿದೊಡನೆಯೇ ಫೋನಿನ ಮೂಲಕವಾಗಿ ತಿಳಿಸುತ್ತೇವೆಂದೂ ಅವರು ಹೇಳಿರುವರು. ಡಾಕ್ಟರ್ ಸ್ಟೆಂಟನರು ಮಾತ್ರ ಬ್ಯಾಟರಿಯ ರಕ್ಷಣೆಯ ವಿಷಯದಲ್ಲಿ ಬಹಳ ಚಿಂತಾಕ್ರಾಂತರಾಗಿರುವರು. ಸ್ಟೆಂಟನರು ಆಸ್ಪತ್ರೆಯ ಟ್ರಸ್ಟಿಯೊಳಗೊಬ್ಬರು. ಆದ್ದರಿಂದ ರೇಡಿಯಮ್ಮಿನ ರಕ್ಷಣಾಭಾರವು ಅವರ ತಲೆಯ ಮೇಲೆಯೇ ಇದೆ. ಆಗಲಿ. ಬನ್ನಿರಿ ಒಳಗೆ. ರೇಡಿಯಮ್ ಯಾವುದೊಂದು ತೊಂದರೆಯೂ ಇಲ್ಲದೆ ಮನೆಗೆ ತಲ್ಪಿರುವದೆಂದು ಡಾಕ್ಟರ್ ಮೇಡೀನರು ತಿಳಿಸುವ ವರೆಗೆ ತಾವು ನಮ್ಮ ಆಫೀಸಿನಲ್ಲಿಯೇ ಸ್ವಲ್ಪ ಕಾಲ ಕುಳಿತುಕೊಳ್ಳೋಣಾಗಲಿ."

ಇವರು ಆಫೀಸಿನಲ್ಲಿ ಕುಳಿತಿದ್ದಂತೆಯೇ ಬಹಳ ಕಾಲ ಕಳೆದು ಹೋಯಿತು. ಬ್ಲೇಕನು ಗಡಿಯಾರವನ್ನು ನೋಡಿದನು. ಮೆಬ್ಲಡನ್ ತಲ್ಪಲು ಬೇಕಾದ ಸಮಯವು ಕಳೆದು ಹೋಯಿತು. ರಸ್ತೆಗಳಲ್ಲಿ ಜನಸಂದಣಿ ಇದ್ದು ಆದರಿಂದ ಸ್ವಲ್ಪ ತಡವಾಗುವ ಸಂಭವವಿದ್ದರೂ ಕೂಡ ಮೋಟಾರು ಅಲ್ಲಿಗೆ ತಲ್ಪಲು ಇಪ್ಪತ್ತು ಮಿನಿಟು ಸಾಕಾಗಿದ್ದಿತು; ಆದರೆ ಅರ್ಧಗಂಟೆಯು ಕಳೆಯಿತು. ಆದರೂ ಯಾವ ವಿಧವಾದ ವರ್ತಮಾನವೂ ಬರಲಿಲ್ಲ. ಕೂಡಲೆ ಫೆಂಟನನು ಎಂಬೋಲಾಂಗಿಗೆ ಫೋನ್ ಮಾಡಿದನು.

"ಡಾಕ್ಟರ್ ಮೇಡೀನರು ಇನ್ನೂ ಮನೆಗೆ ಬಂದಿಲ್ಲ" ಉತ್ತರ ಬಂದಿತು.

ಬ್ಲೇಕನ ಕಡೆ ನೋಡುತ್ತಾ ಫೆಂಟನ್ ಹೇಳಿದನು—"ಇಷ್ಟು ಹೊತ್ತಾದರೂ ಇನ್ನೂ ಕೂಡ ಮೇಡೀನರ ಮೋಟಾರು ಎಂಬೋಲಾಂಗಿಗೆ ಹೋಗಿರುವದಿಲ್ಲ, ಮಿಸ್ಟರ್ ಬ್ಲೇಕ್! ಎಲ್ಲಾದರೂ ದಾರಿಯಲ್ಲಿಯೇ ಯಾವುದಾದರೊಂದು ದುರ್ಘಟನೆಯೊದಗಿರಬಹುದೇ?"

ಬ್ಲೇಕ್—"ಐದು ಮಿನಿಟಿನ ನಂತರ ಪುನಃ ಅಲ್ಲಿನ ವರ್ತಮಾನವನ್ನು ಇಲ್ಲಿಗೆ ತಿಳಿಸಬೇಕೆಂದು ಎಂಬೋಲಾಂಗಿಗೆ ಫೋನ್ ಮಾಡಿರಿ. ದಾರಿಯಲ್ಲಿ ದುರ್ಘಟನೆಯೊದಗುವದೇನೂ ಅಸಂಭವವಲ್ಲ. ಮೇಡೀನರ ಡ್ರೈವರನು ಜಾಣನಾದ ಮನುಷ್ಯನಷ್ಟೆ?"

ಫೆಂಟನ್—"ಹಾಗೆಂದೇ ನನಗೆ ತೋರುತ್ತದೆ. ಮೇಡೀನರು ಇತ್ತೀಚಿಗೆ ಈ ಹೊಸಬನನ್ನು ನೇಮಿಸಿಕೊಂಡಿರುತ್ತಾರೆ. ಹೆಚ್ಚು ಮದ್ಯಪಾನ ಮಾಡಿದ ಕಾರಣದಿಂದ ಹಿಂದಿನ ಡ್ರೈವರನನ್ನು ಮೇಡೀನರು ಕೆಲಸದಿಂದ ತಳ್ಳಿಬಿಟ್ಟರು."

ಬ್ಲೇಕ್—"ಹಾಗೋ? ಹಾಗಾದರೆ ನನಗೇನೋ ಇದರಲ್ಲಿ ಸ್ವಲ್ಪ ಸಂಶಯವು ತಲೆದೋರುತ್ತಿದೆ, ಮಿಸ್ಟರ್ ಫೆಂಟನ್! ಡಾಕ್ಟರ್ ಗ್ರೇಯ ಮೇಲೆ ನಡೆದ ಫಿತೂರಿಯನ್ನೂ, ಇನ್ನೂ ಎರಡು ಮೂರು ಸಂಗತಿಗಳನ್ನೂ ನೋಡಿದ ನನ್ನ ಮನಸ್ಸಿನಲ್ಲೀಗ ಸಂಶಯವುಂಟಾಗುತ್ತಿದೆ. ಒಳ್ಳೇದು. ಡಾಕ್ಟರ್ ಮೇಡೀನರ ಮೋಟಾರಿನ ನಂಬರ್ ಎಷ್ಟು?"

ಫೆಂಟನ್—"ಅದೇನೋ ನನಗೆ ತಿಳಿಯದು; ಆದರೆ...."

ಅಷ್ಟರಲ್ಲಿ ಟೆಲಿಫೋನಿನ ಗಂಟೆಯು ಹೊಡೆಯತೊಡಗಿತು. ಕೊಳವೆಯನ್ನು ಕಿವಿಗಿಟ್ಟುಕೊಂಡು ಆಲಿಸಿ, ಅನಂತರ ಫೆಂಟನನು ಹೇಳಿದನು—"ಡಾಕ್ಟರ್ ಮೇಡೀನರು ಇನ್ನೂ ಮನೆಗೆ ಬಂದಿಲ್ಲ. ಹಾಗಾದರೆ ನಾನೀಗ ಕೂಡಲೆ ಪೋಲೀಸರಿಗೆ ಫೋನ್ ಮಾಡಲು ಹೇಳಿಬಿಡಲೊ?"

"ಉಹುಂ, ಬೇಡ. ಈ ಕೆಲಸವು ಪೋಲೀಸರದಲ್ಲ, ಪತ್ತೆದಾರಿಗಳದು" ಎಂದು ಹೇಳುತ್ತಾ ಬ್ಲೇಕನು ಫೋನಿನ ಬಳಿಗೆ ಹೋಗಿ ಕೂಡಲೆ ಸ್ಕಾಟ್ಲೆಂಡ್ ಯಾರ್ಡಿಗೆ ಫೋನ್ ಮಾಡಿದನು. ಅನಂತರ ಫೆಂಟನನ ಕಡೆಗೆ ತಿರುಗಿ ಹೇಳಿದನು—"ಸ್ಕಾ. ಯಾರ್ಡು ೨ ಮಿನಿಟುಗಳೊಳಗೇ ನೂರು ಮೈಲುಗಳೊಳಗಿನ ಎಲ್ಲಾ ಸ್ಟೇಷನ್‌ಗಳಿಗೂ ಸೂಚನೆ ಕೊಡಬಲ್ಲುದು. ಏನಾದರೂ ಹೊಸ ವರ್ತಮಾನ ತಿಳಿದರೆ ಥಟ್ಟನೆ ನಮಗೆ ತಿಳಿಸುವುದು. ಈಗ ನಾನು ನೆಟ್ಟಗೆ ಮನೆಗೆ ಹೋಗುವೆನು. ವ್ಯವಹಾರವೇನೋ ಬಹಳ ತೊಡಕಾಗುತ್ತಿದೆ."

ಬ್ಲೇಕನು ಮನೆಗೆ ಬಂದು ನೋಡಿದಾಗ ಗ್ರೇ ಕಾಣಿಸಲಿಲ್ಲ. ಈ ವಿಷಯ ದಲ್ಲಿ ಮಿ. ವಾರ್ಡೇಲಳನ್ನು ವಿಚಾರಿಸಿದಾಗ ಅವನೆಲ್ಲಿಯೋ ಹೊರಗೆ ಹೋಗಿ ರುವನೆಂದು ಅವಳು ಹೇಳಿದಳು. ಅದಲ್ಲದೆ ಟಿಂಕರನು ಫೋನ್ ಮಾಡಿದ್ದ ನೆಂದೂ, ಅದಕ್ಕುತ್ತರವಾಗಿ ಗ್ರೇ 'ನಾನೀಗಲೇ ಬರುತ್ತೇನೆ.' ಎಂದು ಹೇಳಿ ಹೊರಟು ಹೋದನೆಂದೂ, ಸ್ವಲ್ಪ ಕಾಲದ ಮೇಲೆ ನಾನಿನ್ನು ಎರಡು ಗಂಟೆ ಗಳ ಮೇಲೆ ಮನೆಗೆ ಬರುವೆನೆಂದು ಗ್ರೇ ಫೋನಿನ ಮೂಲಕವಾಗಿ ತಿಳಿಸಿದ ನೆಂದೂ ವಾರ್ಡೇಲಳು ಹೇಳಿದಳು.

ಅವಳ ಮಾತನ್ನು ಕೇಳಿ ಬ್ಲೇಕನಿಗೆ ಗ್ರೇಯ ಮೇಲೆ ಬಹಳ ಸಿಟ್ಟು ಬಂದಿತು. ಕೂಡಲೆ ಬ್ಲೇಕನು ಟಿಂಕರನಿಗೆ ಫೋನ್ ಮಾಡಿದನು. ಟಿಂಕ ರನು ಉತ್ತರವಿತ್ತನು:—"ಗ್ರೇ ಇಲ್ಲಿಗೆ ಬಂದು ತನ್ನ ವಿಳಾಸಕ್ಕೆ ಬಂದಿದ್ದ ಒಂದು ಲಕ್ಕೋಟೆಯನ್ನು ತೆಗೆದುಕೊಂಡು ಕೂಡಲೆ ಹೊರಟು ಹೋದನು. ಲಕ್ಕೋಟೆಯ ಮೇಲೆ ಎನ್. ಇ. ಎಂದು ಮೋನೋಗ್ರಾಮ್ ಮುದ್ರಿಸಲ್ಪ ಟ್ಟಿದ್ದಿತು." ಹೀಗೆ ಹೇಳಿ ಟಿಂಕರನು ಪುನಃ ಹೇಳಿದನು:—"ಈ ಮನೆಯ ಮೇಲೆ ಯಾರ ದೃಷ್ಟಿಯೂ ಬಿದ್ದಿರುವದಿಲ್ಲ. ನಾನಿನ್ನು ತಮ್ಮ ಬಳಿಗೆ ಬರಲೊ?"

"ಹುಂ" ಎಂದು ಉತ್ತರವಿತ್ತು ಬ್ಲೇಕನು ಟೆಲಿಫೋನಿನ ಬಳಿಯಿಂದ ಸರಿದು ಉದಾಸೀನ ಭಾವದಿಂದ ಬಳಿಯಲ್ಲಿಯೇ ಇದ್ದ ಕುರ್ಚಿಯೊಂದರ ಮೇಲೆ ಕುಳಿತುಕೊಂಡನು. ಮನದೊಳಗೇ ಹೇಳಿಕೊಂಡನು:—"ಎನ್. ಇ. ಅಂದರೆ? ತಿಳಿಯಿತು-ನೋರಾ ಎಂಡರ್ಬೀ ಎಂದು. ನೋರಾ ಎಂಡರ್ಬಿ ಯೊಡನೆಯೇ ಗ್ರೇಗೆ ಮದುವೆಯಾಗುವ ಆಲೋಚನೆ ಇದ್ದಿತು; ಆದರೆ ಗ್ರೇ ಜೈಲಿನಿಂದ ಬಿಡುಗಡೆಹೊಂದಿದನೆಂಬುದನ್ನು ನೋರಾ ಎಂಡರ್ಬಿಯು ಅರಿತ ಬಗೆ ಹೇಗೆ? ಹಾಗಾದರೇನು? ಅವಳನ್ನು ಭೇಟಿ ಮಾಡಲು ಡಾಕ್ಟರ್ ಗ್ರೇ ಆಸ್ಪತ್ರೆಗೇ ಹೋದನೆ? ಊಹುಂ. ಹಾಗಿದ್ದರೆ ನಾನು ಆಸ್ಪತ್ರೆಯಲ್ಲಿದ್ದಾಗಲೇ ಅವನು ಅಲ್ಲಿಗೆ ಬರುತ್ತಿದ್ದನು."

ಕ್ಷಣಕಾಲ ಆಲೋಚಿಸಿದ ಮೇಲೆ ನೋರಾ ಎಂಡರ್ಬಿಯು ಒಂದು ದಿನಕ್ಕೆ ಮುಂಚೆಯೇ ಡಾಕ್ಟರ್ ಮೋಡೀನನ ಮನೆಗೆ ಸರ್ ಕಥವರ್ಟ್ ನಾವೆ ಲ್ಸರ ದೇಹಸ್ಥಿತಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಹೋಗಿದ್ದ ಳೆಂಬದು ನೆನಪಿಗೆ ಬಂದಿತು.

ಬ್ಲೇಕನು ವಿಚಾರಸಾಗರದಲ್ಲಿ ಮುಳುಗೇಳತೊಡಗಿದನು. ಅಷ್ಟರಲ್ಲಿ ಟಿಂಕರನು ಎದುರಿಗೆ ಬಂದನು. ಅವನನ್ನು ಕಂಡು ಬ್ಲೇಕನು ಪುನಃ ಸಿಟ್ಟಾ ದನು; ಆದರೆ ಸಿಟ್ಟನ್ನು ಥಟ್ಟನೆ ತಡೆದು ಹೇಳಿದನು:—"ಈ ವ್ಯವಹಾರವು

ಬಹಳ ತೊಡಕಿನದಾಗಿದೆ ಟಿಂಕರ್! ಬುದ್ಧಿಗೇನೂ ಹೊಳೆಯುವದಿಲ್ಲ. ಗ್ರೇ ನನ್ನ ಒಪ್ಪಿಗೆಯಿಲ್ಲದೆ ಇಲ್ಲಿಂದ ಹೊರಟು ಹೋಗುವಷ್ಟು ಮೂರ್ಖತನವನ್ನು ಪ್ರಕಟಿಸಿದನು. ಇರಲಿ. ತಿಳಿದಿರುವಷ್ಟರಮಟ್ಟಿಗೆ ಹೇಳುವದಾದರೆ, ಈಗ ಗ್ರೇ ನಿಶ್ಚಯವಾಗಿಯೂ ವೆಂಬ್ಲಡನ್ನಿನಲ್ಲಿಯೇ ಇರಬಹುದಾಗಿದೆ. ಹೊರಡು ಈಗ, ಮೋಟಾರನ್ನು ತೆಗೆದುಕೊಂಡು ಬಾ."

.... .... .... ....

ಉದ್ದ ಕೈಕಾಲಿನ ಮನುಷ್ಯನೊಬ್ಬನು ಬಾಗಿಲಿಗೆ ಬಂದು ಬ್ಲೇಕನೊಡನೆ ಸಂಭಾಷಿಸತೊಡಗಿದನು.

ಬ್ಲೇಕ್ ಹೇಳಿದನು:—"ಏನ್ರೀ, ಡಾಕ್ಟರ್ ಮೋಡೀನರ ವರ್ತಮಾನ ವೇನಾದರೂ ತಿಳಿದುಬಂದಿತೇ?"

ಅವನು ಹೇಳಿದನು: "ಇಲ್ಲ ಸ್ವಾಮೀ! ಸ್ಕಾಟ್ಲಿಂಡ್ ಯಾರ್ಡಿನವ್ರು ಕೂಡ ಎಷ್ಟೋ ಬಾರಿ ವಿಚಾರಿಸಿಯಾಯಿತು. . ಇಷ್ಟರವರೆಗ ಯಾವ ವರ್ತಮಾನವೂ ಬರಲಿಲ್ಲ. ಏನು, ನೀವೂ ಕೂಡ ಯಾರ್ಡಿನವರೇ ಇರುವಿರೋ?"

ಬ್ಲೇಕ್:—"ನಾನೀಗ ಮಿಸ್ ಎಂಡರ್ಬಿಯೊಡನೆ ಸ್ವಲ್ಪ ಮಾತನಾಡ ಬೇಕಾಗಿದೆ."

ಆ ಮನುಷ್ಯ:—"ಮಿಸ್ ಎಂಡರ್ಬೀ ಈಗ ಸ್ವಲ್ಪಹೊತ್ತಿಗೆ ಮುಂಚೆ ಎಲ್ಲಿಗೋ ತಿರುಗಾಡಲು ಹೊರಟುಹೋದಳು."

ಬ್ಲೇಕ್—"ಡಾಕ್ಟರ್ ಗ್ರೇ ಇಲ್ಲಿಗೆ ಬಂದಿದ್ದರೇ?"

ಆ ಮನುಷ್ಯ—"ಇಲ್ಲ."

ಬ್ಲೇಕ್:-"ಒಳ್ಳೇದು. ಸರ್ ಕಥವರ್ಟ್ ನಾವೆಲ್ಸರ ದೇಹಸ್ಥಿತಿ ಹೇಗಿದೆ? ನಾನೀಗ ಅವರನ್ನು ಸ್ವಲ್ಪ ಭೇಟಿಮಾಡಬಹುದಷ್ಟೆ?"

ಮನುಷ್ಯ—"ಊಹುಂ, ಅವರೀಗ ನಿದ್ರಿಸುತ್ತಿರುವರು. ಡಾಕ್ಟರ್ ಮೋಡೀನರು ನನಗೆ ಆಜ್ಞೆಮಾಡಿರುವರು—ಯಾವ ಮನುಷ್ಯನೂ ಸರ್ ಕಥವರ್ಟ್ ನಾವೆಲ್ಸರನ್ನು ಭೇಟಿಮಾಡಲಾಗದು. ಭೇಟಿಮಾಡಿದಾಗ ಸಂಭಾಷಣೆಗೆ ತೊಡಗಬೇಕಾಗಿ ಬರಬಹುದು. ಸಂಭಾಷಣೆಯಿಂದ ಅವರಿಗೆ ಹಾನಿ ಯೊದಗದಿರಲಾರದು."

ಬ್ಲೇಕ್—"ರೋಗಿಯ ವಿಷಯದಲ್ಲಿ ಅಗತ್ಯವಾಗಿ ಮಾಡಬೇಕಾದು ದೆಲ್ಲವನ್ನು ನೀವೂ ಚನ್ನಾಗಿ ಅರಿತಿರುವಿರಿ!"

ಮನುಷ್ಯ—"ಸರಿಯಾಗಿ ಹೇಳಿದಿರಿ ನೀವು. ನಿಜ. ನಾನು ಡಾಕ್ಟರ್ ಮೋಡೀನರೊಡನೆ ಇದ್ದು ಬಹಳ ಕಾಲ ಕೆಲಸಮಾಡಿರುವೆನು. ಆದರಿಂದ

ರೋಗಿಯ ಮೇಲ್ವಿಚಾರಣೆಯನ್ನು ಹೇಗೆ ನೋಡಿಕೊಳ್ಳಬೇಕೆಂಬುದು ನನಗೆ ಚೆನ್ನಾಗಿ ತಿಳಿದಿದೆ.”

ಬ್ಲೇಕ್ —“ಒಳ್ಳೇದು, ಡಾಕ್ಟರ್ ಮೋಡೀನರ ಆ ಹೊಸ ಡ್ರೈವರನ ವಿಷಯವಾಗಿ ಏನಾದರೂ ನೀವು ತಿಳಿದಿರುವಿರಾ? ಮೊದಲಿದ್ದ ಡ್ರೈವರನು ಹೆಚ್ಚು ಮದ್ಯಪಾಯಿಯಾದ ಕಾರಣದಿಂದಲೇ ಬಿಡಿಸಲ್ಪಟ್ಟನಲ್ಲವೇ?”

ಮನುಷ್ಯ: “ಹೌದು. ಇದಕ್ಕಿಂತ ಹೆಚ್ಚಿಗೆ ನನಗೇನೂ ತಿಳಿಯದು; ಆದರೆ ಡಾ. ಮೋಡೀನರು ಹಿಂದಿನ ಡ್ರೈವರನಾಗಿದ್ದ ಡಿಲ್‌ನನ್ನು ಹೊರಡಿಸಿ ದೊಡ್ಡ ತಪ್ಪು ಮಾಡಿದರೆಂದು ನಾನೆನ್ನುತ್ತೇನೆ. ಯಾಕೆಂದರೆ, ಡಿಲ್ ಬಹಳ ದಿನದಿಂದ ಇವರ ಸೇವೆ ಮಾಡಿದ್ದನು. ಅದಲ್ಲದೆ ಒಂದೇ ಒಂದು ಅಲ್ಪ ಕಾರಣಕ್ಕಾಗಿ ಅವನನ್ನು ಬಿಡಬೇಕಾಗಿರಲಿಲ್ಲ. ಅದಕ್ಕಿಂತ ಮುಂಚೆ ಡಿಲ್ ಮದ್ಯಪಾನ ಮಾಡುತ್ತಿದ್ದುದನ್ನು ನಾನೆಂದೂ ಕಂಡಿರಲಿಲ್ಲ. ಆ ದಿನ ಡಾಕ್ಟರ್ ಮೋಡೀನರು ಎಲ್ಲಿಯೋ ಹೊರಗೆ ಹೊರಡುವವರಾಗಿದ್ದರು. ಆಗಿನ ಅವನ ಸ್ಥಿತಿಯನ್ನು ನೋಡಿ ಒಂದೇಸಾರಿಗೆ ಸಿಟ್ಟಾದರು. ಒಡನೆಯೇ ಅವನನ್ನು ದೂರ ಮಾಡಿದರು. ಆ ದಿನ ಅವರು ತಾವೇ ಮೋಟರನ್ನು ನಡೆಸಿಕೊಂಡು ಹೋದರು. ಮಾರನೆಯ ದಿನವೇ ಈ ಹೊಸ ಡ್ರೈವರ ಫ್ರಾಸ್ಟನನ್ನು ನೇಮಿಸಿಕೊಂಡರು.”

ಬ್ಲೇಕ್ “ಒಳ್ಳೇದು. ಅಂದಿನಿಂದ ಡಿಲ್ ಎಲ್ಲಿ ಇರುವನೆಂಬುದು ನಿಮಗೆ ಗೊತ್ತಿರಲಾರದು, ಅಲ್ಲವೇ?”

ಮನುಷ್ಯ—“ಯಾಕಿಲ್ಲ? ಅವನಿಗೆ ಆ ದಿನವೇ ರೋಹೆಂಪ್ಟನಿನ ವೆಸ್ಟಲಿ ಗ್ಯಾರೇಜಿನಲ್ಲಿ ಕೆಲಸ ದೊರೆಯಿತು. ಯಾಕೆಂದರೆ ಡಿಲ್ ಬಹಳ ನಿಪುಣನಾದ ಮೆಕೇನಿಕ್ ಇರುವನು.”

ಬ್ಲೇಕ್—“ಹಾಗಾದರೆ ನಾನೀಗ ಅವನನ್ನು ನೋಡುವುದಕ್ಕಾಗಿಯೇ ಹೋಗುತ್ತೇನೆ. ಸಾಧ್ಯವಾದಷ್ಟರಮಟ್ಟಿಗೆ ನಾನು ಹೇಳುವುದಾದರೆ ಡ್ರೈವರ್ ಫ್ರಾಸ್ಟನು ಯಾವುದೋ ಪುಂಡರ ತಂಡಕ್ಕೆ ಸೇರಿದವನು. ಡಾಕ್ಟರ್ ಮೋಡೀನರು ರೇಟಿಯವನ್ನೊಂದಿಗೆ ಈ ರೀತಿಯಾಗಿ ಪತ್ತೆಯಿಲ್ಲದಿರುವ ವಿಷಯದಲ್ಲಿ ನಿಶ್ಚಯವಾಗಿ ಫ್ರಾಸ್ಟನ ಕೈಯೂ ಸೇರಿರುವುದು. ಒಳ್ಳೇದು. ಮಿಸ್ ಎಂಡರ್ಬಿ ಹಿಂದಿರುಗಿ ಬಂದ ನಂತರ ಈ ವಿಳಾಸಕ್ಕೆ ಫೋನ್ ಮಾಡಲು ತಿಳಿಸಿರಿ.”

ಎಂದು ಹೇಳಿ ಬ್ಲೇಕನು ವಿಜಿಟಿಂಗ್ ಕಾರ್ಡನ್ನು ಆ ಮನುಷ್ಯನ ಕೈಗಿತ್ತು ಅಲ್ಲಿಂದ ಮೋಟರ್ ಹತ್ತಿ ಹೊರಟುಹೋದನು.

ಬ್ಲೇಕನು ಹೊರಟು ಹೋದ ನಂತರ ಇಬಾನೇಜನು ಮನದೊಳಗೇ

ನಸುನಗುತ್ತಾ ಹೇಳಿದನು-"ನೀನೇ ದೊಡ್ಡ ಜಾಣನೆಂದು ತಿಳಿದೆಯಾ, ಬ್ಲೇಕ್! ಆದರೆ ಈ ಸಲ ನಿನ್ನ ಬುದ್ಧಿವಂತಿಕೆಯು ಏನೂ ಕೆಲಸ ಮಾಡಲಾರದು. ಡಿಲ್ಲ ನೊಡನೆ ಮಾತಾಡುವುದರಿಂದ ನಿನಗ್ಯಾವ ಲಾಭವಾಗುವಂತೆಯೂ ಇಲ್ಲ.''

ಅನಂತರ ಇಬಾನೇಜನು ಮೆಟ್ಟಿಲನ್ನು ಹತ್ತಿ ಮೇಲೆ ಹೋದನು. ಅಲ್ಲಿ ಒಂದು ಕೋಣೆಯಲ್ಲಿ ತಲೆ ಹಾಕಿ ನೋಡಿದನು. ಸರ್ ಕಥವರ್ಟ್ ನಾವೆಲ್ಸ್, ನೋರಾ ಎಂಡರ್ಬಿ, ಡಾಕ್ಟರ್ ಗ್ರೇ ಈ ಮೂರು ಜನರೂ ಎಚ್ಚರವಿಲ್ಲದೆ ಮಲ ಗಿದ್ದರು ನಸುನಗುತ್ತಾ ಇಬಾನೇಜನು ಈಚೆಗೆ ಬಂದು ರಸ್ತೆಯ ಪಕ್ಕದಲ್ಲಿದ್ದ ಕಿಟಕಿಯ ಬಳಿಗೆ ಹೋಗಿ ಅಲ್ಲಿ ಕಾವಲು ಮಾಡುತ್ತಾ ಕುಳಿತನು ಅಲ್ಲಿನ ಕಾವಲುಗಾರಿಕೆಯು ಅವನದಾಗಿದ್ದಿತು. ಮನೆಯೊಳಗೆ ನಿಶ್ಶಬ್ದತೆಯು ಹರ ಡಿದ್ದಿತು. ಮನೆಯಲ್ಲಿ ಈಗ ಇಬಾನೇಜ್, ಅವನ ಹೆಂಡತಿಯಾದ ಜೇನ್ ಹಿಗ್ಸ್ ಮತ್ತು ಅಡಿಗೆಯುವಳಾದ ಮೆ. ಬ್ಲೈಡೇಲ್ ಇವರಲ್ಲದೆ ಇನ್ನ್ಯಾರೂ ಇರಲಿಲ್ಲ. ಉಳಿದಿಬ್ಬರು ಸೇವಕರೀಗ ಮನೆಯೊಳಗಿರಲಿಲ್ಲ.

ಬ್ಲೇಕನು ಮೇಡೀನನ ಬಂಗ್ಲೆಯಿಂದ ಹೊರಟು ನೆಟ್ಟಗೆ ವೆನ್ಸಲೆ ಗ್ಯಾರೇ ಜಿಗೆ ಹೋದನು. ಅಲ್ಲಿ ಡಿಲ್ ಮಾತನಾಡಲು ಸಿಕ್ಕಿದನು. ಬ್ಲೇಕನ ಪ್ರಶ್ನೆಗೆ ಡಿಲ್ ಉತ್ತರ ಕೊಟ್ಟನು—"ಇದರಲ್ಲಿ ನನ್ನದೇನೂ ತಪ್ಪಿರಲಿಲ್ಲ, ಸ್ವಾಮೀ! ನಾನು ಹೆಚ್ಚು ಮದ್ಯವನ್ನು ಯಾವಾಗಲೂ ಕುಡಿಯುವದಿಲ್ಲ. ಇತ್ತೀಚೆಯ ಯಾವ ಡ್ರೈವರನೂ ಕೂಡ ಹೆಚ್ಚು ಮದ್ಯಪಾಯಿಯಾಗಿ ತನ್ನ ಕೆಲಸವನ್ನು ಸ್ಥಿರಪಡಿಸಿಕೊಳ್ಳಲಾರನು. ಮೋಟರನ್ನು ನಡೆಸುವಾಗಲಾದರೋ ನಾನು ಮದ್ಯವನ್ನು ಕೈಯಿಂದ ಕೂಡ ಮುಟ್ಟುವುದಿಲ್ಲ. ಆ ದಿನ ರಾತ್ರಿ ಮೇಡೀನರು ಎಲ್ಲಿಯೂ ಹೊರಗೆ ಹೊರಡತಕ್ಕವರೇ ಇರಲಿಲ್ಲ. ಆದ್ದರಿಂದ ನಾನು ನಿತ್ಯದಂತೆ ರೆಡ್‌ಮ್ಯಾನನಲ್ಲಿಗೆ ಹೋಗಿ ಎರಡು ಪಾಯಿಂಟ್ ಬೀಯರನ್ನು ಕೊಂಡೆನು."

ಬ್ಲೇಕ್:—"ಅಲ್ಲಿ ನೀನು ನಿಶ್ಚಯವಾಗಿಯೂ ಯಾರೊಡನೆಯಾದರೂ ಸಂಭಾಷಣೆ ಮಾಡಿರಬಹುದು. ಆಗ ಅವನು ನಿನ್ನ ಬೀಯರಿನಲ್ಲಿ ಯಾವು ದಾದರೊಂದು ಮಾದಕ ಪದಾರ್ಥವನ್ನು ಸೇರಿಸಿರಬಹುದು. ಆ ಮನುಷ್ಯನು ಹೇಗಿದ್ದನು? ಹೇಳು.''

ಡಿಲ್:—"ಹೌದು. ಕೇವಲ ಒಬ್ಬ ಮನುಷ್ಯನೇ ಆ ವೇಳೆ ನನಗಲ್ಲಿ ಸಿಕ್ಕಿದನು. ಅವನೊಡನೆಯೇ ನಾನು ಸಂಭಾಷಣೆ ಮಾಡಿದ್ದೆನು. ಅವನು ನನಗೆ ಕಣ್ಣುಕಟ್ಟಿನ ಆಟವನ್ನು ತೋರಿಸಲು ಆರಂಭಿಸಿದನು.''

ಬ್ಲೇಕ್:—"ಯಾವಾಗ ನಿನ್ನ ಲಕ್ಷ್ಯವನ್ನು ಆ ಆಟದ ಕಡೆಗೆ ಸೆಳೆ ದನೋ; ಆಗಲೆ ನಿನ್ನ ಬೀಯರಿನಲ್ಲಿ ಆತನು ಮಾದಕ ಪದಾರ್ಥವೇನನ್ನೋ

ಸೇರಿಸಿಬಿಟ್ಟನು. ಸರಿ, ಒಳ್ಳೇದು. ಆ ಮನುಷ್ಯನ ರೂಪ ಮತ್ತು ಆಕಾರವನ್ನು ಸ್ವಲ್ಪ ತಿಳಿಸಬಲ್ಲೆಯಾ?"

ಡಿಲ್—"ಅವನು ನನ್ನಷ್ಟೇ ಎತ್ತರದ ಮನುಷ್ಯನಾಗಿದ್ದನು. ಅವನ ತಲೆಗೂದಲು ಬಹಳ ಸುಂದರವಾಗಿದ್ದವಲ್ಲದೆ ಬಹಳ ಕಪ್ಪಾಗಿಯೂ ಇದ್ದವು. ಅವನ ಗಡ್ಡದಲ್ಲಿ ಯಾವ ಸಮಯದಲ್ಲಿಯೋ ಆಗಿದ್ದ ಗಾಯದ ಗುರುತೂ ಇದ್ದಿತು."

ಬ್ಲೇಕ್—"ಈ ನಿನ್ನ ಮಾತು ಬಹಳ ಚಿತ್ತಾಕರ್ಷಕವಾಗಿದೆ. ನಿನ ಮಾತಿನ ಮೇಲಿಂದ ಊಹಿಸಿ ಹೇಳುವುದಾದರೆ, ಸೇಜ್ ಎಂಬೊಬ್ಬ ಪುಂಡನೇ ಆ ಮನುಷ್ಯನು. ತಿಳಿದು ತಿಳಿದೇ ಅವನು ಹಾಗೆ ಮಾಡಿದನು. ಒಳ್ಳೇದು. ಆಮೇಲೇನಾಯಿತು? ಬೀಯರನ್ನು ಕುಡಿದ ನಂತರ ನಿನಗೆ ಮದವೇರಿದಂತೆ ತೋರಿತೇ? ಆಗ ಅವನು ನಿನಗೆ ಬೆಂಬಲವಿತ್ತು ಮನೆಗೆ ತಲ್ಪಿಸಿದನಲ್ಲವೆ?"

ಡಿಲ್—"ಹೌದು ಸ್ವಾಮಿ! ನಾನು ಮನೆಗೆ ತಲ್ಪಿದೊಡನೆಯೇ ನನ್ನ ಯಜಮಾನರು ನನ್ನನ್ನು ಬೈಯತೊಡಗಿದರು. ಕೂಡಲೆ ನನಗೆ ಸಲ್ಲತಕ್ಕ ಹಣವನ್ನು ನನ್ನ ಮುಂದೆ ಎಸೆದು, ಥಟ್ಟನೆ ಮನೆಯಿಂದ ಹೊರಟುಹೋಗುವಂತೆ ಆಜ್ಞೆಮಾಡಿದರು. ನಿಜವಾಗಿಯೂ ಆ ವೇಳೆಯಲ್ಲಿ ಮೇಡೀನರ ಬುದ್ಧಿಯು ಸ್ವಲ್ಪ ತಿರುಗಿದ್ದಿತು; ಯಾಕೆಂದರೆ, ಪ್ರತಿಸಲವೂ ಅವರು ನನ್ನ ಮಾತನ್ನು ಲಕ್ಷ್ಯವಿಟ್ಟು ಆಲಿಸುತ್ತಿದ್ದರು. ಆ ದಿನ ಮಾತ್ರ ಅವರು ನನ್ನ ಮಾತನ್ನು ಕೇಳುವ ಗೊಡವೆಗೇ ಹೋಗಲಿಲ್ಲ. ಹೌದು. ಈಗ ನನ್ನ ಬುದ್ಧಿಗೆ ತೋರುತ್ತಿದೆ—ನಿಶ್ಚಯವಾಗಿಯೂ ನನ್ನೊಡನೆ ಮಾತಾಡಿದ್ದ ಆ ಮನುಷ್ಯನೇ ನನ್ನ ಮೇಲೊಂದು ಆಟತೋರಿಸಿದನು; ಆದರೆ ಅವನು ಹಾಗೇಕೆ ಮಾಡಿದನೆಂಬುದು ಮಾತ್ರ ನನ್ನ ಬುದ್ಧಿಗೆ ಹೊಳೆಯುವದಿಲ್ಲ. ನನ್ನ ಸ್ಥಾನದಲ್ಲಿ ಇನ್ನಾವನೋ ಒಬ್ಬ ದುಷ್ಟನನ್ನು ಸೇರಿಸುವುದಕ್ಕಾಗಿಯೇ ಆ ಮನುಷ್ಯನು ಹಾಗೆ ಮಾಡಿರಲಾರನೆ?"

ಬ್ಲೇಕ್—"ನೀನು ಸರಿಯಾಗಿ ಹೇಳಿದಿ, ಡಿಲ್! ಈಗ ಡಾಕ್ಟರ್ ಮೇಡೀನಾ ರೇಡಿಯಮ್ ಬಾಕ್ಸ ಮತ್ತು ಸ್ಕಾಟ್ಲೆಂಡ್ ಯಾರ್ಡಿನ ಒಬ್ಬ ಪತ್ತೇದಾರಿ ಇವರೆಲ್ಲ ಒಟ್ಟಿಗೇ ಮಾಯವಾಗಿರುವರು. ಇರಲಿ. ನೀನು ಮಾತ್ರ ಜಾಗರೂಕನಾಗಿ ಇರು, ಡಿಲ್! ನಿನಗೆ ದುಷ್ಟರ ಯಾವುದಾದರೂ ಸುಳಿವು ತಿಳಿದು ಬಂದರೆ ಅಥವಾ ಎಂಬೋಲಾಂಗಿನ ಆಚೆ-ಈಚೆ ಏನಾದರೂ ಸಂದೇಹಜನಕವಾದ ಸಂಗತಿಯು ಗೊತ್ತಾದರೆ ಒಡನೆಯೇ ಅದನ್ನು ನನಗೆ ತಿಳಿಸಬೇಕು."

"ಅಗತ್ಯವಾಗಿಯೂ ತಿಳಿಸಬಲ್ಲೆನು" ಎಂದು ಹೇಳಿ, ಡಿಲ್ ಬ್ಲೇಕನು ಕೊಟ್ಟ ಒಂದು ವ್ಹಿಜಟಿಂಗ ಕಾರ್ಡನ್ನು ಬಹಳ ಎಚ್ಚರಿಕೆಯಿಂದ ತೆಗೆದಿಟ್ಟನು.

ಅಲ್ಲಿಂದ ಹಿಂದಿರುಗಿ ಬ್ಲೇಕನು ಟಿಂಕರನನ್ನು ಕುರಿತು ಹೇಳಿದನು: "ಕೊನೆಗೆ ನನ್ನ ಅಭಿಪ್ರಾಯವೇ ನಿಜವಾಗುತ್ತಾ ಬರುತ್ತಿದೆ ಟಿಂಕರ್! ಸೇಜನು ಬೀಯರಿನಲ್ಲಿ ಮದವನ್ನು ಸೇರಿಸಿದನು. ಎಂಬೋಲಾಂಗಿನ ಹತ್ತಿರ ಸ್ವಲ್ಪ ಮೋಟಾರನ್ನು ನಿಲ್ಲಿಸು. ಮಿಸ್ ಎಂಡರ್ಬಿಯನ್ನು ಸ್ವಲ್ಪ ಮಾತಾಡಿಸ ಬೇಕೆಂದಿರುವೆನು. ಇಷ್ಟರೊಳಗೆ ಅವಳು ಮೇಡೀನನ ಬಂಗ್ಲೆಗೆ ಹಿಂದಿರುಗಿ ಬಂದಿರಬಹುದು"

ಮೋಟರು ಪುನಃ ಡಾಕ್ಟರ್ ಮೇಡೀನನ ಮನೆಯ ಭಾಗಿಲಲ್ಲಿ ನಿಂತಿತು; ಆದರೆ ಇಬಾನೇಜನು ಮುಂದೆ ಬಂದು ತಲೆಯಾಡಿಸಿ ಹೇಳಿದನು: "ನೋರಾ ಎಂಡರ್ಬಿಯು ಇನ್ನೂ ಬಂದಿಲ್ಲ. ನನಗೂ ಕೂಡ ಈಗ ಅವಳ ವಿಷಯದಲ್ಲಿ ಗಾಬರಿಯಾಗಿದೆ ಮಿಸ್ಟರ್ ಬ್ಲೇಕ್! ಈ ವಿಷಯವನ್ನು ನಾನೀಗ ಪೋಲೀಸರಿಗೆ ತಿಳಿಸಲೊ?"

ಬ್ಲೇಕ್:—"ಅಗತ್ಯವಾಗಿ ತಿಳಿಸಿರಿ. ಒಳ್ಳೇದು. ಇನ್ನೀಗ ಸರ್ ಕಥ ವರ್ಟ್ ನಾವೆಲ್ಲರ ವಿಷಯದಲ್ಲಿ ಹೇಗೆ? ಏನು, ಈ ನಡುವೆ ಅವರ ಮೇಲ್ವಿ ಚಾರಣೆಯನ್ನು ನೋಡಿಕೊಳ್ಳಲು ತಕ್ಕ ಜನರು ಬೇಕಾಗಲಾರರೇ? ನನ್ನ ಅಭಿಪ್ರಾಯದಲ್ಲೀಗ ಇನ್ನೊಬ್ಬ ಯೋಗ್ಯ ಡಾಕ್ಟರನನ್ನು ಅವರನ್ನು ನೋಡಿ ಕೊಳ್ಳುವದಕ್ಕಾಗಿ ಏರ್ಪಾಡು ಮಾಡುವದು ಅತ್ಯಗತ್ಯವೇ ಸರಿ. ಮೇಡೀನರು ಬರುವವರೆಗೆ ಡಾಕ್ಟರ್ ಸ್ಟೆಂಟನರೇ ಇಲ್ಲಿಗೆ ಬಂದು ನೋಡಿಕೊಳ್ಳಬಹು ದಲ್ಲವೆ?"

ಇಬಾನೇಜ್:—"ಈಗೇನೂ ಆ ಏರ್ಪಾಡಿನ ಅಗತ್ಯವಿರುವದಿಲ್ಲ. ಒಂದೆರಡು ದಿನದ ವರೆಗೆ ನಾನೇ ಸರ್ ಕಥವರ್ಟ್‌ರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬಲ್ಲೆನು. ಅಷ್ಟರೊಳಗೆ ಹೇಗೂ ಡಾಕ್ಟರ್ ಮೇಡೀನರು ಬರದಿರಲಾರರೆಂಬ ನಂಬಿಕೆಯು ನನಗಿದೆ; ಆದರೆ ಮಿಸ್ಟರ್ ಬ್ಲೇಕ್, ಪುಂಡ ರಾರಾದರೂ ನಮ್ಮ ಡಾಕ್ಟರರನ್ನು ಕೊಲ್ಲಲಾರರಲ್ಲವೆ?"

ಈ ಕೊನೆಯ ಮಾತನ್ನು ಇಬಾನೇಜನು ಗದ್ಗದ ಸ್ವರದಿಂದ ಹೇಳಿ ದನು. ಬ್ಲೇಕನು ಅವನನ್ನು ಸಂತೈಸುತ್ತ ಹೇಳಿದನು:—"ಇಲ್ಲ. ಇಲ್ಲ, ಹಾಗಾಗುವಂತಿಲ್ಲ. ಅಷ್ಟು ಗಾಬರಿಪಡಬೇಕಾದ ಅಗತ್ಯವೇನೂ ಇಲ್ಲ. ಸ್ಕಾಟಲಂಡ ಯಾರ್ಡು ಈ ವಿಷಯದಲ್ಲಿ ತಕ್ಕ ಪ್ರಯತ್ನವನ್ನು ಮಾಡುತ್ತಾ ಇದೆ. ಒಳ್ಳೇದು. ಈ ನಡುವೆ ನಿಮಗೇನಾದರೂ ಹೊಸ ವರ್ತಮಾನವು

ತಿಳಿದು ಬಂದರೆ ಅಥವಾ ಮಿಸ್ ಎಂಡರ್ಬಿ ಹಿಂದರುಗಿ ಬಂದರೆ ಕೂಡಲೆ ನೀವು ಮರೆಯದೆ ನನಗೆ ಫೋನ್ ಮಾಡಬೇಕು.''

ಬ್ಲೇಕನು ಅಲ್ಲಿಂದ ಹೊರಟು ಹೋದ ನಂತರ ಇಬಾನೇಜನ ಹೆಂಡತಿಯಾದ ಜೇನ್ ಹಿಗ್ಸ ಬಂದು ಕೇಳಿದಳು:—''ಆ ಮನುಷ್ಯನು ಬಂದು ಏನು ಹೇಳುತ್ತಿದ್ದನು?''

ನಗುತ್ತಾ ಇಬಾನೇಜನು ಹೇಳಿದನು:—''ಅವನ ಬುದ್ಧಿಯು ಈಗ ಯಾವ ಕೆಲಸವನ್ನೂ ಮಾಡುತ್ತಿರುವಂತೆ ಕಾಣಿಸಲಿಲ್ಲ; ಆದರೆ ಈ ವ್ಯವಹಾರವೀಗ ಕ್ಷಣಕ್ಷಣಕ್ಕೂ ಜಟಿಲವಾಗುತ್ತ ಬರುತ್ತಿದೆ. ಈ ದುಷ್ಟರಾದ ಗ್ರೇ ಮತ್ತು ಎಂಡರ್ಬಿ ಇವರು ಎಲ್ಲವನ್ನೂ ಗಡಿಬಿಡಿ ಮಾಡಿಬಿಟ್ಟಿರುವರು. ಈಗ ಡಾಕ್ಟರ ಮೇಡೀನರು ಬಂದು ಬಿಟ್ಟರೆಂದರೆ ಎಲ್ಲವೂ ಸರಿಹೋಗುವದು. ನಾವು ಒಂದು ನಿಶ್ಚಿತವಾದ ಕಾರ್ಯಕ್ರಮದಿಂದ ಮುನ್ನಡೆಯಲು ಅವರು ಆಜ್ಞಾಪಿಸುವರು. ಏನೇ ಇರಲಿ. ಈ ಸಮಯದಲ್ಲಿ ಇಲ್ಲಿಂದ ಫರಾರಿಯಾಗಲು ನೀನು ಸಕಲ ಸಿದ್ಧತೆಯನ್ನೂ ಮಾಡಿಕೊಂಡಿರು. ಈ ಬ್ಲೇಕನು ಬಹಳ ದುಷ್ಟನಿರುವನು. ಇವನಿಗೆ ಸ್ವಲ್ಪವಾದರೂ ಈ ನಮ್ಮ ರಹಸ್ಯದ ಸುಳಿವು ಸಿಕ್ಕಿತೆಂದರೆ, ಇವನು ಎಲ್ಲವನ್ನೂ ತಲೆಕೆಳಗೆ ಮಾಡದಿರಲಾರನು. ಎಲ್ಲಿಯಾದರೂ ಸ್ವಲ್ಪ ಗಡಿಬಿಡಿಯು ತೋರಿತೆಂದಾದೊಡನೆಯೇ ನಾವು ಇಲ್ಲಿಂದ ಮಾಯವಾಗಬೇಕು.''

* * * * *

ಬ್ಲೇಕನು ಟಿಂಕರನೊಡನೆ ಮನೆಗೆ ಬಂದು ಒಳಹೊಕ್ಕೊಡನೆಯೇ ಟೆಲಿಫೋನಿನ ಗಂಟೆಯು ಜೋರಾಗಿ ಹೊಡೆಯತೊಡಗಿತು. ಅದಕ್ಕೆ ಕಿವಿಯಿಟ್ಟು ಕೇಳಿ ಆ ಮೇಲೆ ಬ್ಲೇಕನು ಒಂದು ನಿಮಿಷವೂ ಅಲ್ಲಿ ನಿಲ್ಲದೆ, ತನ್ನ ಜೊತೆಗೆಬರಲು ಟಿಂಕರನಿಗೆ ಸಂಜ್ಞೆಮಾಡಿ ತಾನು ಕೂಡಲೆ ಹೆಬ್ಬಾಗಿಲಿಗೆ ಹೊರಟನು. ಮೇ. ಬಾರ್ಡೇಲಳು ಅವರಿಬ್ಬರಿಗೂ ಊಟ ಮಾಡಿಕೊಂಡು ಹೋಗಲು ಹೇಳಿದಳು; ಆದರೆ ಆವಳ ಮಾತಿನ ಕಡೆಗೆ ಸ್ವಲ್ಪವೂ ಲಕ್ಷ್ಯವಿಡದೆ, ಬ್ಲೇಕನು ತವಕದಿಂದ ಹೋಗಿ ಮೋಟಾರನ್ನು ಹತ್ತಿದನು. ಟಿಂಕರನಿಗೆ ಹೇಳಿದನು—''ಮೋಟಾರನ್ನು ನೆಟ್ಟಗೆ ಯಾರ್ಡಿಗೆ ಬಿಡು. ಮೇಡೀನಾ ಮತ್ತು ವಿಂಟನರು ಗಿಲ್ಡ್ ಫೋರ್ಡ್ ರೋಡಿನ ಬಳಿಯ ಅಡವಿಯಲ್ಲಿ ತಮ್ಮ ಮೋಟಾರಿನೊಳಗೇ ಮೂರ್ಛಿತರಾಗಿ ಬಿದ್ದಿರುವರು. ಡ್ರೈವರ್ ಮತ್ತು ರೇಡಿಯಮ್ಮಿನ ಪತ್ತೆಯೇ ಇಲ್ಲ. ಆ ಮೋಟಾರಿನ ನಂಬರು ಕಪಟದ್ದಿರುವದೆಂದು

ತಿಳಿದು ಬಂದಿದೆ. ಯಾರ್ಡಿನ ಕೆಲವು ಅಧಿಕಾರಿಗಳು ಈಗಲೇ ಅಲ್ಲಿಗೆ ಹೋಗಿ ಬಿಟ್ಟಿರುವರು. ಹಾರ್ಕರನು ನನಗೀಗ ಫೋನ್ ಮಾಡಿದನು."

ಇಬ್ಬರೂ ಸ್ವಲ್ಪ ಹೊತ್ತಿನೊಳಗೇ ಯಾರ್ಡನ್ನು ಸೇರಿದರು. ಹಾರ್ಕರನು ಹೇಳಿದನು—"ಮೋಟಾರು ಆ ಕಾಡಿನಲ್ಲಿ ಬಿದ್ದಿರುವದನ್ನು ಹುಡುಗನೊಬ್ಬನು ನೋಡಿದನು. ಮೋಟಾರಿನೊಳಗೆ ಇಬ್ಬರು ಸತ್ತು ಬಿದ್ದಿರುವರೆಂದು ತಿಳಿದು ಹುಡುಗನು ಅಲ್ಲಿಂದ ಓಡಿ ಹೋದನು. ಅದೃಷ್ಟವಶಾತ್ತಾಗಿ ದಾರಿಯಲ್ಲಿಯೇ ಒಬ್ಬ ಪೋಲೀಸನು ಆ ಹುಡುಗನಿಗೆ ಸಿಕ್ಕಿದನು. ಆದರಿಂದ ವಿಷಯವೆಲ್ಲವೂ ತಿಳಿದು ಬಂದಿತು. ಈಗ ಮೇಡೀನಾ ಮತ್ತು ವಿಂಟನರು ಅಲ್ಲೊಂದು ಕಡೆ ಚಿಕಿತ್ಸೆ ಮಾಡಲ್ಪಡುತ್ತಿರುವರು. ಯಾವುದೋ ಒಂದು ತರಹದ ಗ್ಯಾಸ್ ಅವರ ಮೇಲೆ ಉಪಯೋಗಿಸಲ್ಪಟ್ಟಿದ್ದಿತು. ಮೋಟಾರಿನ ಕಿಟಿಕಿಗಳು ಮುಚ್ಚಲ್ಪಟ್ಟಿದ್ದವು. ಮೋಟಾರಿನೊಳಗೆ ಒಂದು ರೀತಿಯ ಗ್ಯಾಸ್ ತುಂಬಿರಬಹುದು. ಆದರಿಂದ ಅವರಿಬ್ಬರೂ ಆ ಸ್ಥಿತಿಗೊಳಗಾದರು. ಆಸ್ಪತ್ರೆಯಿಂದ ಹೊರಟು ಹೋದ ಸ್ವಲ್ಪ ಹೊತ್ತಿನೊಳಗೇ ಆ ಅತ್ಯಾಚಾರವು ನಡದುಹೋಗಿದೆ. ಆ ದಿನ ಶೀಡ್ಮನ್ನನ ಮೇಲೆ ಉಪಯೋಗಿಸಲಾಗಿದ್ದ ಗ್ಯಾಸೇ ಇವರ ಮೇಲೆಯೂ ಈಗ ಉಪಯೋಗಿಸಲ್ಪಟ್ಟಿರಬಹುದೆಂದು ನಾನು ಊಹಿಸುತ್ತೇನೆ."

"ಕಳೆದ ರಾತ್ರಿ ಗ್ರೇಯ ಮೇಲೂ ಕೂಡ ಅದರ ಉಪಯೋಗವಾಗಿದೆ." ಎಂದು ಹೇಳಿ, ಬ್ಲೇಕನು ಆ ಎಲ್ಲಾ ಕಥೆಯನ್ನೂ ವಿವರಿಸಿ ಹೇಳಿದನು.

ಹಾರ್ಕರ್—"ಹಾಗಾದರೆ ಈಗ ಗ್ರೇ ಮತ್ತು ಎಂಡರ್ಬಿ ಇವರಿಬ್ಬರೂ ಪತ್ತೆಯಿಲ್ಲದಾದರು. ನನಗಾದರೋ ತಿರುಗಿ ಈಗ ಅದೇ ಸಂದೇಹವು ತಲೆದೋರುತ್ತಿದೆ. ಮಿಸ್ಟರ್ ಬ್ಲೇಕ್! ನಿಶ್ಚಯವಾಗಿಯೂ ಈ ವ್ಯವಹಾರದಲ್ಲಿ ಗ್ರೇಯ ಕೈಯೂ ಸೇರಿರಬಹುದು. ಗ್ರೇ ಫೋಟೋಗ್ರಾಫಿಯ ಡಿಶ್ಯಗಳ ಮೇಲೆ ತಿಳಿದು ತಿಳಿದೇ ನಮ್ಮನ್ನು ಮೋಸಗೊಳಿಸುವದಕ್ಕಾಗಿಯೇ ಹೀಗೆಲ್ಲ ಮಾಡಿರಬಹುದು: ಎಂಡರ್ಬಯೂ ಕೂಡ ಈ ಕಾರ್ಯದಲ್ಲಿ ಗ್ರೇಯೊಡನೆ ಸೇರಿರುವಳು. ನೀವೇ ಹೇಳಿರಿ ನೋಡೋಣ, ಅವರಿಬ್ಬರೂ ಈ ರೀತಿಯಾಗಿ ಮಾಯವಾಗಿರಲು ಬೇರೆ ಕಾರಣವೇನು?"

ಬ್ಲೇಕ್—"ಅವರು ಮಾಯವಾಗಿರುವದಕ್ಕೆ ಸರಿಯಾದ ಕಾರಣವನ್ನು ಈ ವೇಳೆಯಲ್ಲಿ ನಾನೇನೂ ತಿಳಿಸಲಾರೆನು; ಆದರೆ ಈಗ ಇಷ್ಟು ಮಾತ್ರ ಹೇಳಬಲ್ಲೆನು—ಈ ವ್ಯವಹಾರದಲ್ಲಿ ಅವರಿಬ್ಬರೂ ಕೇವಲ ನಿರಪರಾಧಿಗಳಿರುವರು. ನೀವೇ ಸ್ವಲ್ಪ ಆಲೋಚಿಸಿ ಹೇಳಿರಿ—ಗ್ರೇ ತಾನೇ ತನ್ನ ವಿರುದ್ಧ

ವಾದ ಸಾಕ್ಷ್ಯಗಳನ್ನು ತಯಾರಿಸಿಕೊಳ್ಳುವನೇ? ನಾನು ಹೇಳುವುದಾದರೆ ಇಷ್ಟೇ ಸರಿ—ಸ್ವಲ್ಪ ಸಮಯದ ವರೆಗೆ ಅವನನ್ನು ತಮ್ಮ ದಾರಿಯಿಂದ ದೂರ ವಿರಿಸುವದಕ್ಕಾಗಿ ಫುಂಡರೇ ಗ್ರೇಗೆ ವಿರುದ್ಧವಾದ ಸಾಕ್ಷ್ಯಗಳನ್ನು ತಯಾರು ಮಾಡಿಸಿರುವರು. ಆದದಂತೆ ಈಗಲೂ ಕೂಡ ಫುಂಡರೇ ಗ್ರೇಯನ್ನು ತಮ್ಮ ಧೀನದಲ್ಲಿಟ್ಟುಕೊಂಡಿರುವರು. ಗ್ರೇಯಂತೆ ಎಂಡರ್ಬಿಯೂ ಕೂಡ ಆ ಫುಂಡರ ಕೆಲವು ರಹಸ್ಯಗಳನ್ನು ಅರಿತಿರಬಹುದು. ಅದಕ್ಕಾಗಿ ಎಂಡರ್ಬಿ ಯನ್ನೂ ಅವರೇ ಅಡಗಿಸಿಟ್ಟಿರಬಹುದು."

ಸ್ವಲ್ಪ ಸಿಟ್ಟಿನಿಂದ ಹಾರ್ಕರನು ಹೇಳಿದನು–"ಈ ಕೊನೆ-ಬುಡ ವಿಲ್ಲದ ಗಲಾಟೆಯೊಂದಿಗೆ ಈಗ ಆ ಇಬ್ಬರ ಪತ್ತೆಹಚ್ಚುವ ಕಾರ್ಯಭಾರವೂ ಒಂದು ಬಂದು ನಮ್ಮ ಮೇಲೆಯೇ ಬಿದ್ದಿದೆ. ನಿಮ್ಮ ಅಭಿಪ್ರಾಯವೇ ಸ್ವಲ್ಪ ನಿಜವಿರುವ ಸಂಭವವಿದೆ, ಮಿಸ್ಟರ್ ಬ್ಲೇಕ್! ನಾನು ಕೇವಲ ನನ್ನ ಮನ ದೊಳಗುಂಟಾದ ಉದ್ವೇಗವನ್ನು ನಿಮ್ಮ ಬಳಿಯಲ್ಲಿ ವಿವರಿಸಿರುವೆನು. ಡಾಕ್ಟರ್ ಮೇಡೀನರು ಶೀಘ್ರದಲ್ಲಿಯೇ ಸ್ವಸ್ಥರಾಗಿಬಿಡುವರೆಂದು ನನಗಾಶೆಯಿದೆ. ಸರ್ ಕಥವರ್ಟ್ ನಾವೆಲ್ಲರ ರೋಗವು ಸಾಮಾನ್ಯತರಹದ್ದಿರುವದಿಲ್ಲ. ಅತ್ತ ಅವರ ಕಡೆಗೂ ನಾವು ಸ್ವಲ್ಪ ಲಕ್ಷ್ಯವಿಟ್ಟಿರಬೇಕು"

ಬ್ಲೇಕ್—"ನಾನು ಡಾಕ್ಟರ್ ಮೇಡೀನರ ಮನೆಯಾಳಿನೊಂದಿಗೆ ಮಾತಾಡಿ ಬಂದಿರುವೆನು. ಇನ್ನೂ ಒಂದೆರಡು ದಿನ ಅವರಿಗೆ ಯಾವ ತರಹ ಹಾನಿಯೊದುಗುವ ಸಂಭವವೂ ಇಲ್ಲವೆಂದು ಅವನು ಹೇಳಿದನು."

ಅನಂತರ ಇವರು ಯಾರ್ಡಿನಿಂದ ಹೊರಟು ಎಲ್ಲಕ್ಕಿಂತ ಮುಂಚೆ ಡಾಕ್ಟರ್ ಮೇಡಿನಾ ಮತ್ತು ವಿಂಟನರನ್ನು ಡಾಕ್ಟರರ ಸಂರಕ್ಷತೆಯಲ್ಲಿಟ್ಟಿದ್ದ ಸ್ಥಳಕ್ಕೆ ಹೋಗಿ ನೋಡಿದರು. ಇಬ್ಬರೂ ಈಗ ತಾನೆ ಎಚ್ಚರಹೊಂದಿದ್ದರು; ಇನ್ನೂ ಅವರ ದೇಹಸ್ಥಿತಿಯು ಸುಧಾರಿಸಿರಲಿಲ್ಲ; ಆದರೂ ತಕ್ಕಮಟ್ಟಿಗೆ ಮಾತನಾಡಲು ಶಕ್ತರಾಗಿದ್ದರು. ತಮ್ಮ ಮೇಲೆ ಆಕಸ್ಮಾತ್ ಒದಗಿದ್ದ ಸಂಕ ಟದ ವಿಚಾರದಲ್ಲಿ ಇಬ್ಬರೂ ಹೆಚ್ಚೇನೂ ಹೇಳಲಾರದವರಾಗಿದ್ದರು.

ಡಾಕ್ಟರ್ ಮೇಡೀನನು ಹೇಳಿದನು-"ನಾವು ಆಸ್ಪತ್ರೆಯಿಂದ ಹೊರಟು ವೆಸ್ಟಮಿನಿಸ್ಟರನ್ನು ದಾಟಿ ಹೋಗಿದ್ದೆವು ಅಷ್ಟೇ. ಅಷ್ಟರೊಳಗೇ ಮೋಟಾರು ಯಾವುದೋ ಒಂದು ವಿಧದ ಗ್ಯಾಸಿನಿಂದ ತುಂಬಿದೆಯೆಂದು ತಿಳಿಯಿತು. ಯಾವುದೋ ಒಂದು ಪದಾರ್ಥದ ಕಟುವಾದ ವಾಸನೆಯು ನನ್ನ ಮೂಗಿ ನೊಳಗೆ ಹೊಕ್ಕಿತು. ಕೂಡಲೆ ನಾನು ಮೂರ್ಛಿತನಾದೆನು. ಇದಕ್ಕಿಂತ ಹೆಚ್ಚಿಗೆ ಇನ್ನೇನೂ ನನಗೆ ತಿಳಿಯಲವಕಾಶವಾಗಲಿಲ್ಲ. ಗ್ಯಾಸುಗಳ ವಿಷಯ

ದಲ್ಲಿ ನನಗೆ ಹೆಚ್ಚಿನ ತಿಳಿವಳಿಕೆ ಇಲ್ಲದಿರುವ ಕಾರಣದಿಂದ ಆ ಗ್ಯಾಸ್ ಎಂತಹ ದೆಂಬುದನ್ನೂ ಕೂಡ ನಾನು ಕಂಡು ಹಿಡಿಯಲಾರದಾದೆನು.''

ವಿಂಟನನೂ ಕೂಡ ಡಾಕ್ಟರ್ ಮೇಡೀನನ ಮಾತನ್ನೇ ಅನುಮೋದಿಸಿ ಹೇಳಿದನು—''ಸೇತುವೆಯನ್ನು ದಾಟಿದೊಡನೆಯೇ ಡ್ರೈವರನು ಹಿಂದಕ್ಕೆ ತಿರುಗಿ ನೋಡಿದನು. ಆ ಕ್ಷಣವೇ ಗ್ಯಾಸ್ ನಮ್ಮ ಮೇಲೆ ಹರಡಿತು. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಆ ಗ್ಯಾಸ್ ಮೋಟಾರಿನ ಕೆಳಭಾಗದಲ್ಲಿನ ಯಾವುದೋ ಒಂದು ತೂತಿನಿಂದ ಹೊರ ಹೊರಟಿದ್ದಿತು''

ಮೇಡೀನನು ಹೇಳಿದನು—''ಇನ್ನೊಂದು ಗಂಟೆಯೊಳಗೇ ನಾನು ತಿರುಗಾಡಲು ಶಕ್ತನಾಗುವೆನು. ಮಿಸ್ಟರ್ ಬ್ಲೇಕ್! ನೀವೀಗ ದಯವಿಟ್ಟು ನನ್ನನ್ನು ನನ್ನ ಬಂಗ್ಲೆಯ ವರೆಗೆ ಕಳುಹಿಸುತ್ತೀರಾ? ನಾನೀಗ ಮೊದಲು ಸರ್ ಕಥವರ್ಟ್ ನಾವೆಲ್ಲರ ಸ್ಥಿತಿಯು ಹೇಗಿರುವದೆಂದು ನೋಡುವುದು ಅತ್ಯಗತ್ಯವಾಗಿದೆ. ರೇಡಿಯಮ್ಮಿನ ಈ ಕಳವಿನಿಂದ ಅವರ ಚಿಕಿತ್ಸೆಗೆ ನಿಶ್ಚಯವಾಗಿಯೂ ಸ್ವಲ್ಪ ಧಕ್ಕೆ ತಗಲಬಹುದಾಗಿದೆ.''

''ಮೋಟಾರು ನಿಂತಿದ್ದಲ್ಲಿಗೆ ಹೋಗಿ ಅಲ್ಲಿನ ಸ್ಥಿತಿಯನ್ನು ಸ್ವಲ್ಪ ಪರೀಕ್ಷಿಸಿ ನಾನು ಈಗಲೇ ಬರುವೆನು.'' ಎಂದು ನುಡಿದು, ಬ್ಲೇಕನು ಹಾರ್ಪರ ನೊಡನೆ ಮೋಟಾರನ್ನು ಪರೀಕ್ಷಿಸುವದಕ್ಕಾಗಿ ತೆರಳಿದನು.

ಮೋಟಾರು ಆಗಲೂ ಮೊದಲಿದ್ದಲ್ಲಿಯೇ ಇದ್ದಿತು. ಮೋಟಾರಿನ ನಂಬರನ್ನು ಬದಲಾಯಿಸಲು ಒಂದು ವಿಚಿತ್ರ ರೀತಿಯ ಕ್ರಮವು ಅದರಲ್ಲಿ ಏರ್ಪಡಿಸಲ್ಪಟ್ಟಿದ್ದಿತು ಒಳಗಿನ ಭಾಗದಲ್ಲಿ ಮಾಡಿದ್ದ ಫ್ಲವರ್ ಹೋಲ್ಡರಿನ ತೂತಿನಲ್ಲಿ ಕೊಳವೆಯಂತಿರುವ ಒಂದು ವಸ್ತುವಿದ್ದಿತು. ಎಲ್ಲಿಯೋ ಗುಪ್ತವಾಗಿದ್ದ ಗುಂಡಿಯನ್ನು ಒತ್ತಿದರೆ ಅದರಿಂದ ಗ್ಯಾಸ್ ಬರಲು ಅನುಕೂಲವಾಗಿದ್ದಿತು.

ಬೆರಳ ಗುರುತುಗಳನ್ನು ಕಂಡುಹಿಡಿಯುವ ವಿಶೇಷಜ್ಞನೊಬ್ಬನು ಯಾರ್ಡಿನಿಂದ ಮುಂಚೆಯೇ ಬಂದಿದ್ದು ಅದರ ಪರೀಕ್ಷೆಯಲ್ಲಿ ತೊಡಗಿದ್ದನು. ಮೋಟಾರಿನ ಕಿಟಕಿಯ ಮೇಲೆ ಬೆರಳಿನ ಕೆಲವು ಗುರುತುಗಳು ಅವನಿಗೆ ದೊರೆತವು. ಅವನು ಅವುಗಳ ಮೇಲೆ ಪೌಡರನ್ನು ಹರಡಿ ಅವುಗಳ ಫೋಟೋವನ್ನು ತೆಗೆಯುತ್ತಿದ್ದನು. ಆಗ ಬ್ಲೇಕನು ಹೇಳಿದನು—''ಅಷ್ಟೆಲ್ಲಾ ಕಷ್ಟಪಡಬೇಕಾದ ಅಗತ್ಯವೇನೂ ಇಲ್ಲ. ಈ ಗುರುತುಗಳು ಯಾರದ್ದಿರಬಹುದೆಂಬುದನ್ನು ನಾನು ಮೊದಲು ನೋಡಿದೊಡನೆಯೇ ತಿಳಿದುಬಿಟ್ಟಿರುವೆನು.'' ಹೀಗೆ ಹೇಳಿ ಬ್ಲೇಕನು ಜೇಬಿನಿಂದ ಬೆರಳಚ್ಚುಗಳ ಒಂದು

ಫೋಟೋವನ್ನು ಹೊರತೆಗೆದು ಹೇಳಿದನು—"ಇಗೋ ತೆಗೆದುಕೊಳ್ಳಿರಿ. ಇದಕ್ಕೆ ಅದನ್ನು ಹೋಲಿಸಿ ನೋಡಿರಿ. ಇವು ಡಾಕ್ಟರ್ ಗ್ರೇಗೆ ವಿರುದ್ಧವಾದ ಸಾಕ್ಷ್ಯಗಳಲ್ಲಿ ಒಂದಾಗಿವೆ, ಮಿಸ್ಟರ್ ಹಾರ್ಕರ್!"

ಹಾರ್ಕರ್:—"ನಿಜ. ಆದುದರಿಂದಲೇ ಡಾಕ್ಟರ್ ಗ್ರೇ ಈಗ ಪತ್ತೆ ಇಲ್ಲದಾಗಿರುವನು; ಆದರೆ ನನಗೆ ಇದೂ ಕೂಡ ಆ ಪುಂಡರ ಒಂದು ಪುಂಡಾಟಿಕೆಯಾಗಿಯೇ ತೋರುತ್ತದೆ. ನಮ್ಮ ಕಣ್ಣಿಗೆ ಮಣ್ಣೆರಚುವದಕ್ಕಾಗಿ ಇದೊಂದು ರಚನೆ ನಡೆದಿದೆ. ಹಾ! ನೀವದೇನನ್ನು ನೋಡುತ್ತಿರುವಿರಿ?"

ಬ್ಲೇಕನು ಈ ವೇಳೆಯಲ್ಲಿ ಡ್ರೈವಿಂಗ ಸೀಟಿನ ಪಕ್ಕದಲ್ಲಿದ್ದ ಪಾಕೆಟ್ಟಿನೊಳಗೆ ಕೈ ಹಾಕಿ ಏನೋ ಪರೀಕ್ಷಿಸುತ್ತಿದ್ದನು. ಕೂಡಲೆ ಅದರೊಳಗಿಂದ ಬ್ಲೇಕನು ಡಾರ್ಕಿಂಗ ಜಿಲ್ಲೆಯ ಭೂಪಟವೊಂದನ್ನು ಹೊರ ತೆಗೆದನು. ಆ ಭೂಪಟದಲ್ಲಿ ಎಂಬಿಗ್ಟರಿನ ಹತ್ತಿರದ ಒಂದು ಸೊಂಪಾದ ಸ್ಥಳದಲ್ಲಿ ಪೆನ್ಸಿಲಿನಿಂದ ಗುರುತು ಮಾಡಿರುವದು ಕಾಣಿಸುತ್ತಿದ್ದಿತು.

ಈಗ ಬ್ಲೇಕನು ಹಾರ್ಕರನ ಕಡೆ ನೋಡಿ ಹೇಳಿದನು:—"ನಿಶ್ಚಯವಾಗಿಯೂ ಡಾಕ್ಟರ್ ಮೇಡೀನನ ಆ ಹೊಸ ಡ್ರೈವರನು ಹಿಂದೆ ನಿಶ್ಚಯಿಸಿಕೊಂಡ ಯಾವುದೋ ಒಂದು ಕಾರ್ಯಕ್ರಮವನ್ನು ಅನುಸರಿಸಿಯೇ ಈ ಕೆಲಸ ಮಾಡಿರುವನು. ಒಳ್ಳೇದು. ಹಾರ್ಕರ್, ಮೇಡೀನರ ವಿಷಯದಲ್ಲಿ ನೀವೇನು ಹೇಳುವಿರಿ?"

ಹಾರ್ಕರ್:—"ಅವರು ಗಾಬರಿಯಾಗಿರುವಂತೆ ನನಗೆ ಕಾಣಿಸಿದರು. ಅವರ ಮುಖದಲ್ಲಿ ನನಗೊಂದು ವಿಚಿತ್ರವಾದ ರೀತಿಯೇ ಕಾಣಿಸಿತು. ಯಾವಾಗಲೋ ತಮ್ಮ ಮುಖದಲ್ಲಿ ಉಂಟಾದ ಎಷ್ಟೋ ಗಾಯಗಳ ಗುರುತನ್ನು ಹೇಗಾದರೂ ಅಳಿಸಲು ಯತ್ನಿಸುತ್ತಿರುವಂತೆ ನನಗೆ ಕಂಡಿತು."

ಬ್ಲೇಕ್:—"ನನ್ನ ಅಭಿಪ್ರಾಯವೂ ಹೀಗೆಯೇ ಇದೆ. ಒಳ್ಳೇದು. ಸ್ವಲ್ಪ ಇತ್ತ ಕಡೆ ಲಕ್ಷ್ಯವಿಟ್ಟು ನೋಡಿರಿ" ಹೀಗೆ ಹೇಳಿ, ಬ್ಲೇಕನು ಮಿದುವಾದ ಮಣ್ಣಿನಲ್ಲಿ ಬಿದ್ದಿದ್ದ ಕಾಲು ಹೆಜ್ಜೆಗಳನ್ನು ತೋರಿಸುತ್ತ ಪುನಃ ಹೇಳಿದನು:—"ರೇಡಿಯಮ್ ಪತ್ತೆಯಿಲ್ಲದಿರುವದಕ್ಕೆ ಇದೇ ಸೂತ್ರವಿರುವದು. ಹೇಳು ಟಿಂಕರ್, ಏನು ಸಮಾಚಾರ?"

ಬ್ಲೇಕನು ಕೊನೆಯ ಮಾತನ್ನು ಟಿಂಕರನನ್ನುದ್ದೇಶಿಸಿ ಹೇಳಿದ್ದನು. ಟಿಂಕರ್:—"ಅಲ್ಲಿ ನೋಡೋಣಾಗಲಿ. ರಸ್ತೆಯ ಪಕ್ಕದಲ್ಲಿ ಇನ್ನ್ಯಾವುದೋ ಒಂದು ಮೋಟಾರು ಬಂದು ನಿಂತಿರುವ ಗುರುತು ಚೆನ್ನಾಗಿ ಕಾಣಿಸುತ್ತಿದೆ. ಇದನ್ನು ನೋಡಿರಿ, ಟಾಯರಿನ ಗುರುತು. ಇದು ಹೊಸ ಫರೇಲೀ

ಟಾಯರಿನ ಗುರುತಾಗಿ ಕಾಣಿಸುತ್ತಿದೆ. ನನಗೇನೋ ಆ ಮೋಟಾರು ಇಟಾಲಿಯಾ ನಂ. ೩೩ ಎಂದು ಹೊಳೆಯುತ್ತಿದೆ.''

ಹಾರ್ಕರ್:—''ನಿನಗಿದು ಹೇಗೆ ತಿಳಿಯಿತು ಟಿಂಕರ್! ಇತ್ತೀಚೆಗಾದರೋ ಎಷ್ಟೋ ಮೋಟಾರುಗಳಿಗೆ ಫೆರೇಲೀ ಟೈರನ್ನು ಉಪಯೋಗಿಸುತ್ತಿರುವದು ಕಾಣಿಸುತ್ತದೆ.''

ಟಿಂಕರ್—''ಅದು ನಿಜ. ಕೆಲವು ಮೋಟಾರುಗಳಿಗೆ ಈ ತರಹದ ಮೂರು ನಾಲ್ಕು ಟೈರನ್ನು ಹಾಕಿರುವುದೂ ಕಾಣಿಸುತ್ತದೆ; ಆದರೆ ಅದು ಕೇವಲ ವಿದೇಶೀಯವಾದ ಮೋಟಾರುಗಳಿಗೆ. ಇದರಲ್ಲಿನ್ನೂ ಒಂದು ಸಂಗತಿಯಿದೆ ಇದರ ಮೇಲೆ ಸ್ವಲ್ಪ ಲಕ್ಷ್ಯವಿಟ್ಟು ನೋಡೋಣಾಗಲಿ—ನಾನು ನೋಡಿರುವುದರಲ್ಲಿ ಕೇವಲ ಇಟಾಲಿಯಾ ಮೋಟರು ಮಾತ್ರ ಪಕ್ಕದಲ್ಲಿ ಎಕ್ಜಾಸ್ಟ್ ಪೈಪನ್ನು ಹಾಕಿಕೊಂಡಿರುತ್ತದೆ ಇದನ್ನು ನೋಡಿರಿ—ಮೋಟಾರು ನಿಂತ ಮೇಲೆಯೂ ಸ್ವಲ್ಪ ಹೊತ್ತು ಮೋಟಾರಿನ ಎಂಜಿನ್ನು ನಡೆದಿದೆ. ಇಲ್ಲಿನ ಹುಲ್ಲು ಮುಂತಾದುದು ಎಕ್ಜಾಸ್ಟಿನ ಹೊಗೆಯು ಹೊರಟಿರುವ ಕಾರಣದಿಂದಲೇ ಕಪ್ಪಾಗಿದೆ. ಇದನ್ನು ಮೂಸಿ ನೋಡಿದರೆ ಈ ಸಂಗತಿಯು ಹೌದೆಂದು ಗೊತ್ತಾಗುವದು.''

ಹಾರ್ಕರ್—''ಹೌದು. ನೀನನ್ನುತ್ತಿರುವುದು ನನಗೂ ಸರಿದೋರುತ್ತಿದೆ. ಆಗಲಿ. ಈಗಲೇ ನಾನು ಫರೇಲೀ ಟೈರ್ ಹಾಕಿರುವ ಇಟಾಲಿಯಾ ಮೋಟಾರನ್ನು ಪತ್ತೆಹಚ್ಚುವದಕ್ಕಾಗಿ ಎಲ್ಲಾ ಸ್ಟೇಷನ್ನುಗಳಿಗೂ ವರ್ತಮಾನವನ್ನು ಕಳುಹಿಸುತ್ತೇನೆ. ಆ ಮೋಟಾರು ಹೊಸದಲ್ಲವೆಂದು ಹೇಳುವುದಕ್ಕೂ ಆಗುವಂತಿಲ್ಲ; ಯಾಕೆಂದರೆ ಅದನ್ನು ಎಲ್ಲಿಂದಾದರೂ ಕದ್ದು ತಂದಿರಲೂ ಬಹುದು.''

ಬ್ಲೇಕ್:—''ಉಹುಂ. ನಿಮ್ಮ ಈ ಅಭಿಪ್ರಾಯವನ್ನು ಒಪ್ಪಲು ನಾನು ಸಿದ್ಧನಿಲ್ಲ ಮಿಸ್ಟರ್ ಹಾರ್ಕರ್! ಇಂತಿಂತಹ ಭೀಷಣ ಸಾಹಸದ ಅದ್ಭುತ ಕಾರ್ಯಕ್ರಮದ ಏರ್ಪಾಡನ್ನಿಟ್ಟುಕೊಂಡಿರುವಾತನು ತನ್ನ ಕಾರ್ಯಸಾಧನೆಗಾಗಿ ಇತರರು ಸುಲಭವಾಗಿ ಗುರುತಿಸಬಹುದಾದಂತಹ ಕಳವಿನ ಮೋಟರನ್ನು ಉಪಯೋಗಿಸುವಷ್ಟು ಮುಠ್ಠಾಳನಾಗುವನೆ?'' ಹೀಗೆ ಹೇಳಿ, ಬ್ಲೇಕನು ಸ್ವಲ್ಪ ಹೊತ್ತಿನ ವರೆಗೆ ಆ ಭೂಪಟವನ್ನು ಏಕಾಗ್ರತೆಯಿಂದ ನೋಡುತ್ತ ನಿಂತು, ನಂತರ ಅದನ್ನು ತನ್ನ ಜೇಬಿಗೆ ಸೇರಿಸಿದನು.

ಹಾರ್ಕರ್ ಹೇಳಿದನು:—''ಏಕೆ? ಒಂದು ಸಲ ಆ ಭೂಪಟದ ಮೇಲೆ ಬಿದ್ದಿರುವ ಬೆರಳ ಗುರುತನ್ನೂ ಪರೀಕ್ಷಿಸಬಹುದಲ್ಲ?''

ಬ್ಲೇಕ್—"ಅದರಿಂದೇನೂ ಲಾಭವಿಲ್ಲ, ಮಿಸ್ಟರ್ ಹಾರ್ಕರ್! ಒಂದು ವೇಳೆ ಬೆರಳ ಗುರುತುಗಳಿದ್ದರೂ ಅವೂ ಕೂಡ ಡಾಕ್ಟರ್ ಗ್ರೇಯ ಬೆರಳ ಗುರುತುಗಳೇ ಸರಿ. ಸ್ವಲ್ಪ ಕಾಲದ ವರೆಗೆ ಈ ಭೂಪಟವು ನನ್ನ ಬಳಿಯಲ್ಲಿಯೇ ಇರಲಿ. ಇದು ಹೊಸದು. ಆದಕಾರಣ ಖಂಡಿತವಾಗಿಯೂ ಹೇ ಮಾರ್ಕೆಟ್ಟಿನ ಗಿಲೆಟ್ಟಿನ ಅಂಗಡಿಯಿಂದಲೇ ಇದನ್ನು ಕೊಂಡುಕೊಂಡಿರಬಹುದಾಗಿದೆ. ಇದನ್ನು ಯಾರು ಕೊಂಡುಕೊಂಡರೆಂಬುದು ಆ ಅಂಗಡಿಯವರಿಗೆ ನೆನಪಿರುವ ಸಂಭವವಿದೆ. ಇದರೊಡನೆ ಇನ್ನಾ್ಯವುದಾದರೂ ಭೂಪಟಗಳನ್ನು ಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನೂ ಅವರು ಅರಿತಿರಬಹುದು. ಸರಿ. ಈಗ ಆ ಕಾಲು ಹೆಜ್ಜೆಗಳ ಗುರುತನ್ನು ನೀವು ಒಂದು ಸಲ ಪರೀಕ್ಷಿಸಿ, ನಿಮ್ಮ ನೋಟ್‌ಬುಕ್ಕಿನಲ್ಲಿ ಬರೆದುಕೊಳ್ಳಿರಿ. ಈ ನಡುವೆ ನಾನು ಸರ್ ಕಥವರ್ಟ್ ನಾವೆಲ್ಸರ ಚಿಕಿತ್ಸೆಮಾಡತಕ್ಕ ಆ ಡಾಕ್ಟರ್ ಮೇಡೀನರನ್ನು ಕೂಡಲೆ ಅವರ ಬಂಗ್ಲೆಗೆ ಕಳುಹಿಸುವ ಏರ್ಪಾಡುಮಾಡುತ್ತೇನೆ. ಟಿಂಕರನು ಮೇಡೀನರ ಮೋಟಾರನ್ನು ನನ್ನ ಹಿಂದೆ ತೆಗೆದುಕೊಂಡು ಬರಲಿ. ನೀವು ವಿಂಟನರನ್ನು ವಿಚಾರಿಸಿಕೊಳ್ಳಿರಿ. ಅವರೀಗ ತಮ್ಮ ಕೆಲಸದಲ್ಲಿ ಅಸಫಲರಾಗಿರುವರು."

ಅನಂತರ ಬ್ಲೇಕನು ಮೇಡೀನನಿದ್ದೆಡೆಗೆ ಹೋಗಿ ತನ್ನ ಮೋಟಾರಿನಲ್ಲಿ ಅವರನ್ನು ಕುಳ್ಳಿರಿಸಿಕೊಂಡು ಅವರ ಬಂಗ್ಲೆಯ ಕಡೆಗೆ ಹೊರಟನು. ಟಿಂಕರನು ಮೇಡೀನನ ಮೋಟಾರನ್ನು ತೆಗೆದುಕೊಂಡು ಬ್ಲೇಕನನ್ನು ಹಿಂಬಾಲಿಸಿದನು.

ದಾರಿಯಲ್ಲಿ ಮೇಡೀನನು ಬಹಳ ಕಡಿಮೆ ಮಾತಾಡಿದನು. ನರ್ಸ್ ನೋರಾ ಎಂಡರ್ಬಿ ಮತ್ತು ಡಾಕ್ಟರ್ ಗ್ರೇ ಇವರು ಪತ್ತೆಯಿಲ್ಲದಿರುವ ವಾರ್ತೆಯನ್ನು ಬ್ಲೇಕನು ಹೇಳಿದಾಗ ಮೇಡೀನನ ಮುಖದಲ್ಲಿ ಎಲ್ಲಿಂದಲೋ ಆವೇಶದ ಭಾವನೆಯು ಬಂದು ತೋರಿದಂತಾಯಿತು.

ಮೇಡೀನನು ಹೇಳಿದನು—"ಆದರೆ ಎಂಡರ್ಬಿಯನ್ನು ಹೀಗೆ ಮೋಸಗೊಳಿಸಿ ಯಾರು ತಮ್ಮ ಕಾರ್ಯಸಾಧನೆಯನ್ನು ಮಾಡಿಕೊಳ್ಳಲಿಚ್ಛಿಸಿರಬಹುದು? ಮಿಸ್ಟರ್ ಬ್ಲೇಕ್, ನಾನು ಹೇಳುವುದಾದರೆ ಅವಳು ಎಲ್ಲಿಯೋ ಡಾಕ್ಟರ್ ಗ್ರೇಯ ಜೊತೆಗೇ ಹೋಗಿರುವಳು. ಅವರಿಬ್ಬರಲ್ಲಿ ಸ್ವಾಭಾವಿಕವಾದ ಪ್ರೇಮವೂ ಇದೆ. ಅವರಿಬ್ಬರು ಎಷ್ಟೋ ಸಾರೆ ಜೊತೆಗೂಡಿ ಪ್ರೇಮದಿಂದ ಗುಟ್ಟಾಗಿ ಮಾತನಾಡುತ್ತಿದ್ದುದನ್ನು ನಾನು ಬಲ್ಲೆನು; ಆದರೆ ಎಂಡರ್ಬಿಯು ದೂರವಾಗಿ ಬಿಟ್ಟಳೆಂದರೆ, ಅದರಿಂದ ನನಗೀಗ ಬಹಳ ತೊಂದರೆಯಾಗಬಹುದಾಗಿದೆ. ಸರ್ ಕಥವರ್ಟ್ ನಾವೆಲ್ಸರ ದೇಹಸಿತಿಯನ್ನು ನೋಡಿ

ಕೊಳ್ಳಲು ಎಂಡರ್ಬಿಯ ಸ್ಥಾನದಲ್ಲಿ ಇನ್ನೊಬ್ಬ ನರ್ಸಳನ್ನು ನಾನಿನ್ನು ನೇಮಿಸಿ ಕೊಳ್ಳಬೇಕಾಗಿ ಬರುವುದು.''

ಬ್ಲೇಕನು ಕೇಳಿದನು—''ಈಗ ರೇಡಿಯಮ್ ಕದಿಯಲ್ಪಟ್ಟಿರುವುದಷ್ಟೆ? ಅದರಿಂದ ಸರ್ ಕಥವರ್ಟ್ ನಾವೆಲ್ಸರ ಚಿಕಿತ್ಸೆಗೆ ತಡೆಯುಂಟಾಗಲಿಲ್ಲವೇ?''

ಮೇಡಿನಾ—''ಆಗಿದೆ. ಅವರ ಚಿಕಿತ್ಸೆಯನ್ನು ಒಂದೆರಡು ದಿನಗಳ ವರೆಗೆ ನಿಲ್ಲಿಸಿ ಇನ್ನಾವ್ಯವುದಾದರೂ ಬೇರೆ ಆಸ್ಪತ್ರೆಯಿಂದ ರೇಡಿಯಮ್ಮವನ್ನು ತರಬೇಕಾಗಿ ಬರಬಹುದು. ರೇಡಿಯಮ್ಮಿನ ಏರ್ಪಾಡಾಗದೆ ಹೋದರೆ, ಪ್ರಾಯಶಃ ಅವರ ರೋಗವು ಗುಣವಾಗುವದು ಕಠಿಣವಿದೆ.''

ಬ್ಲೇಕ್:-''ಹಾಗಾದರೆ ನೀವನ್ನುತ್ತಿರುವುದೇನು? ಪ್ರಾಣಸಂಶಯವೇ?''

ಮೇಡೀನಾ—''ಹಾಗಾಗುವ ಸಂಭವವೂ ಇದೆ. ಕಡಿಮೆಪಕ್ಷ ನಾನೀಗ ಸರ್ ಕಥವರ್ಟ್ ಸಾಹೇಬರ ಆರೋಗ್ಯ ವಿಷಯದಲ್ಲಿ ನಿಶ್ಚಯವಾಗಿ ಏನನ್ನೂ ಹೇಳಲಾರದವನಾಗಿರುವೆನು ''

ಮೇಡೀನನ ಈ ಮಾತನ್ನು ಕೇಳಿ ಯಾವ ವಿಚಾರವೊಂದು ಬ್ಲೇಕನ ತಲೆಯಲ್ಲಿ ಹೊಕ್ಕಿತೋ, ಆ ವಿಚಾರವನ್ನು ಕೂಡಲೆ ಪ್ರಕಟಿಸುತ್ತ ಬ್ಲೇಕನು ಹೇಳಿದನು—''ಹಾಗಾದರೆ ಯಾರಾದರೂ ಪುಂಡ-ಪೋಕರಿಗಳು ಸರ್ ಕಥ ವರ್ಟ್ ನಾವೆಲ್ಸರ ಮೇಲಿನ ಯಾವುದಾದರೂ ಸೇಡನ್ನು ತೀರಿಸಿಕೊಳ್ಳುವ ಇಚ್ಛೆಯಿಂದ ಹೀಗೆ ಮಾಡಿರಲಾರರೇ? ಯಾಕೆಂದರೆ, ಸರ್ ಕಥವರ್ಟರು ಎಂದಾದರೂ ಯಾರಿಗಾದರೂ ತಪ್ಪಿಗೆ ತಕ್ಕ ಶಿಕ್ಷೆಯಿತ್ತು, ಪುಂಡರ ವೈರವನ್ನು ಸಂಪಾದಿಸಿರಬಹುದಾಗಿದೆ ''

ಮೇಡೀನಾ—ಹೀಗಾಗುವುದೂ ಅಸಂಭವವಲ್ಲ, ಮಿಸ್ಟರ್ ಬ್ಲೇಕ್! ಯಾಕೆಂದರೆ ರೇಡಿಯಮ್ಮಿನಿಂದ ಡಾಕ್ಟರೀಪ್ರಪಂಚದಲ್ಲೊಂದರಲ್ಲಲ್ಲದೆ ಇನ್ನೆಲ್ಲಿ ಲಾಭಹೊಂದಲು ಸಾಧ್ಯವಿದೆ?

ಬ್ಲೇಕ್—''ರೇಡಿಯಮ್ಮಿನ ಈ ಕಳವು ಹಿಂದೆಯೇ ನಿಶ್ಚಯಿಸಿಕೊಂ ಡಿದ್ದ ಫಿತೂರಿಯೊಂದರ ಫಲವಿರಬಹುದು; ಆದರೆ ನೀವು ಇಂದೇ ಆಸ್ಪತ್ರೆ ಯಿಂದ 'ಅದನ್ನು ಮನೆಗೊಯ್ಯುವಿರೆಂಬ ವರ್ತಮಾನವು ಆ ಪುಂಡರಿಗೆ ದೊರೆತ ಬಗೆ ಹೇಗೆ? ರೇಡಿಯಮ್ಮನ್ನು ತರುವದಕ್ಕಿಂತ ಮುಂಚೆ ನೀವೂ ಕೂಡ ಈ ವರ್ತಮಾನವನ್ನು ಎಲ್ಲಿಯೂ-ಇನ್ನಾರ್ಯರ ಬಳಿಯಲ್ಲಿಯೂ ತಿಳಿಸಿರ ಲಾರಿರಿ, ಅಲ್ಲವೇ?''

ಮೇಡೀನಾ-''ಆಸ್ಪತ್ರೆಯ ಅಧಿಕಾರಿಗಳು, ಸಾರ್ಜಂಟ್ ವಿಂಟನನನ್ನು ನನ್ನ ಜೊತೆಗೆ ಕಳುಹಿಸಲೇರ್ಪಾಡು ಮಾಡಿದ್ದ ಸರ್ ಕಥವರ್ಟ್ ನಾವೆಲ್ಸ್

ಇವರಿಷ್ಟು ಜನರಲ್ಲದೆ ಇನ್ಯಾರ ಹತ್ತಿರವೂ ನಾನು ತಿಳಿಸಿರಲಿಲ್ಲ. ನನ್ನ ಮತ್ತು ಸರ್ ಕಥವರ್ಟ್ ನಾವೆಲ್ಸರ ಭೇಟಿಯು ಒಂದು ದಿನ ಹಿಂದೆಯೇ ಆಗಿದ್ದಿತು. ಸರ್ ಕಥವರ್ಟ್ ನಾವೆಲ್ಸರು ನಂಬರ್ ಮೂರನೆಯ ಕೆನ್ಸರ್ ರೋಗಗ್ರಸ್ತರಾಗಿರುವರೆಂದು ತಿಳಿದು ನಾನು ನನ್ನ ಮನೆಗೆ ಬಂದಿರಲು ಅವರನ್ನು ಒತ್ತಾಯಪಡಿಸಿದೆನು. ನಿಜವಾದ ಸಂಗತಿ ಏನಂದರೆ, ಬಹಳ ಬೇಗನೆ ಅವರಿಗೆ ಆರೋಗ್ಯ ಲಾಭವಾಗುವದೆಂದು ನನಗೆ ನಿಶ್ಚಯವಿದ್ದಿತು; ಆದರೆ ಈಗ ಈ ರೇಡಿಯಮ್ಮಿನ ಕಳವಾದುದರಿಂದ ಅವರು ಗುಣಮುಖರಾಗುವ ವಿಷಯದಲ್ಲಿ ನನಗೆ ಎಷ್ಟೋತರಹದ ಯೋಚನೆಗಳು ಒಳಗೊಳಗೇ ಉಂಟಾಗುತ್ತಿವೆ. ಈಗ ನನ್ನ ಮನಸ್ಸಿಗೆ ಹೊಳೆಯುವುದೇನಂದರೆ, ಯಾವನೋ ಒಬ್ಬ ಆಸ್ಪತ್ರೆಯ ಅಧಿಕಾರಿಯಿಂದಲೇ ಈ ರೇಡಿಯಮ್ ತರುವ ಸಂಗತಿಯು ಹೊರಬಿದ್ದಿರಬೇಕು. ಯಾವದೋ ಒಂದರ ಪರೀಕ್ಷೆಗಾಗಿ ನನಗೆ ರೇಡಿಯಮ್ಮಿನ ದೊಡ್ಡ ಬ್ಯಾಟರಿಯ ಆಗತ್ಯ ಬೀಳುವುದೆಂದು ನಾನು ಒಂದು ವಾರದ ಮುಂಚೆಯೇ ಡಾಕ್ಟರ್ ಸ್ಟೆಂಟನಿಗೆ ತಿಳಿಸಿದ್ದೆನು. ಆಗವರು ಒಪ್ಪಿಯೂ ಇದ್ದರು. ಡಾಕ್ಟರ್ ಸ್ಟೆಂಟನರಾಗಲಿ ಅಥವಾ ನಾವಿಬ್ಬರು ಮಾತಾಡುತ್ತಿದ್ದಾಗ ಅಲ್ಲಿ ಹಾಜರಿದ್ದ ಡಾಕ್ಟರ್ ಗ್ರೇಯಾಗಲಿ ಈ ವಾರ್ತೆಯನ್ನು ಇನ್ನ್ಯಾರ ಬಳಿಯಲ್ಲಿಯೂ ತಿಳಿಸದೆ ಇದ್ದಿದ್ದರೆ, ಇನ್ನ್ಯಾರು ತಿಳಿಸುವರು? ಏನೋ, ನನಗೆ ಈ ವಿಷಯದಲ್ಲಿ ಏನೂ ಹೊಳೆಯುವುದಿಲ್ಲ. ಇರಲಿ. ಈಗ ಕಳವಾಗಿ ಹೋಗಿರುವ ರೇಡಿಯಮ್ಮನ್ನು ತಿರುಗಿ ಪಡೆಯಲು ಏನು ಏರ್ಪಾಡಾಗಿದೆ?''

ಬ್ಲೇಕ್—''ಆ ಕೆಲಸವು ಸ್ಕಾಟ್ಲಂಡ್ ಯಾರ್ಡಿನದು. ಆ ವಿಷಯದಲ್ಲಿ ನಾನೇನೂ ಹೇಳಲಾರೆನು. ನಾನೀಗ ಇಷ್ಟೇ ಹೇಳಬಲ್ಲೆನು-ಈ ಭೀಷಣ ಸಾಹಸದ ಕಾರ್ಯಕ್ರಮವು ಬಹಳ ಎಚ್ಚರದೊಂದಿಗೆ ನಡೆಸಲ್ಪಡುತ್ತಿದೆ.''

ಮೇಡೀನಾ—''ಹಾಗಾದರೇನು ಪುಂಡರ ಯಾವುದಾದರೂ ಸೂತ್ರವು ದೊರಕಿತೇ?''

ಬ್ಲೇಕ್—''ಕೆಲವು ಕಾಲು ಹೆಜ್ಜೆಗಳ ಗುರುತಲ್ಲದೆ ಇನ್ನ್ಯಾವ ಮುಖ್ಯ ಸೂತ್ರವೂ ಸಿಗಲಿಲ್ಲ. ಆ ಗುರುತುಗಳು ಪುಂಡರನ್ನು ಹಿಡಿಯುವ ವಿಷಯದಲ್ಲಿ ಸಹಾಯಕವಾಗಲಾರವು. ಆದರೂ ಪುಂಡರ ಮೇಲಿದ್ದ ಆರೋಪಗಳನ್ನು ಇನ್ನೂ ದೃಢಪಡಿಸಬಲ್ಲವು.''

ಇದಕ್ಕಿಂತ ಹೆಚ್ಚಿಗೆ ಇನ್ನ್ಯಾವ ವಿಷಯವನ್ನೂ ಮೇಡೀನನಿಗೆ ತಿಳಿಸುವ ಗೊಡವೆಗೆ ಬ್ಲೇಕನು ಹೋಗಲಿಲ್ಲ. ಮೋಟಾರು ಮೇಡೀನನ ಬಂಗ್ಲೆಯನ್ನು ತಲ್ಪುತ್ತಲೇ ಇಬಾನೇಜನು ಒಳಗಿನಿಂದ ಬಂದು ಬಾಗಿಲನ್ನು ತೆರೆದನು;

ಮತ್ತು ಪ್ರಸನ್ನ ಮುಖಮುದ್ರೆಯಿಂದ ತನ್ನ ಯಜಮಾನನನ್ನು ಅಭಿವಂದಿಸಿದನು. ಅನಂತರ ಅವನು ಬ್ಲೇಕನನ್ನು ನೋಡಿ ತಾನಾಗಿಯೇ ಹೇಳಿದನು- "ಮಿಸ್ ಎಂಡರ್ಬಿಯು ಇನ್ನೂ ಬಂಗ್ಲೆಗೆ ಹಿಂದಿರುಗಿ ಬರಲಿಲ್ಲ, ಸ್ವಾಮಿ! ಡಾಕ್ಟರ್ ಗ್ರೇಯ ವರ್ತಮಾನವೂ ಇಲ್ಲ."

"ಸರಿ. ಹಾಗಾದರೆ ಪೋಲೀಸರಿಗೆ ಈ ಸುದ್ದಿಯನ್ನು ತಿಳಿಸುವದು ಅಗತ್ಯವಾಗಿದೆ." ಎಂದು ಬ್ಲೇಕನು ಹೇಳಿ, ಆದರದಿಂದ ಭೋಜನಕ್ಕೆ ಆಹ್ವಾನಿಸುತ್ತಿದ್ದ ಡಾಕ್ಟರ ಮೇಡೀನನ ಪ್ರಾರ್ಥನೆಯನ್ನು ಮನ್ನಿಸದೆ ಅಲ್ಲಿಂದ ಹಿಂದಿರುಗತೊಡಗಿದನು. ಟಿಂಕರನೂ ಕೂಡ ಆಗಲೆ ಡಾಕ್ಟರನ ಮೋಟಾರನ್ನು ತಂದು ನಿಲ್ಲಿಸಿ ಬ್ಲೇಕನ ಮೋಟಾರನ್ನು ಹತ್ತಿದನು. ಕೂಡಲೆ ಆ ಮೋಟಾರು ಹೊರಟು ಹೋಯಿತು.

ಬಹಳ ಹೊತ್ತಾದುದರಿಂದ ಆಗಲೆ ಹೇ ಮಾರ್ಕೆಟ್ಟಿನ ಗಿಲೇಟಿನ ಅಂಗಡಿಗೆ ಹೋಗಲಾಗಲಿಲ್ಲ. ನೆಟ್ಟಗೆ ಬೇಕರ್ ಸ್ಟ್ರೀಟಿಗೆ ಬಂದರು.

ಮನೆಯೊಳಗೆ ಪ್ರವೇಶಿಸಿದೊಡನೆಯೇ ಮಿ. ವಾರ್ಡೇಲಳು ಊಟದ ತಟ್ಟೆಯನ್ನು ತಂದು ಎದುರಿಗಿಟ್ಟಳು; ಆದರೆ ಬ್ಲೇಕನು ಭೋಜನದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸದೆ ಬೇಗನೆ ಒಂದೆರಡು ವಸ್ತುಗಳನ್ನು ರುಚಿನೋಡಿ, ಉಳಿದುದನ್ನು ಹಾಗೆಯೆ ಬಿಟ್ಟಿದ್ದನು; ಮತ್ತು ಸೋಫಾದ ಮೇಲೆ ಹೋಗಿ ಮಲಗಿಕೊಂಡು ಗಂಭೀರ ಚಿಂತೆಯಲ್ಲಿ ಮುಳುಗಿದನು.

ಸುಮಾರು ಒಂದು ಗಂಟೆಯ ವರೆಗೆ ಹಾಗೆಯೇ ಸೋಫಾದ ಮೇಲೆ ಬಿದ್ದುಕೊಂಡಿದ್ದನು. ಟಿಂಕರನು ಹತ್ತಿರದಲ್ಲಿಯೇ ಕುರ್ಚಿಯೊಂದರಲ್ಲಿ ಕುಳಿತು ನಟ್ಟದೃಷ್ಟಿಯಿಂದ ಅವನ ಮುಖಭಾವನೆಗಳನ್ನೇ ನೋಡುತ್ತಿದ್ದನು.

ಸ್ವಲ್ಪ ಹೊತ್ತಿನ ಮೇಲೆ ಬ್ಲೇಕನು ಟಿಂಕರನ ಕಡೆ ಹೊರಳಿ ಅಂದನು: "ಇದು ಬಹಳ ತೊಡಕು-ತೊಡಕಾಗಿದೆ ಟಿಂಕರ್!"

ಟಿಂಕರ್:—"ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನಂದರೆ, ಡಾ. ಗ್ರೇಯ ಹತ್ತಿರ ಕೆಲವು ರಹಸ್ಯಗಳಿರಬಹುದು. ಅವು ಎಲ್ಲಾದರೂ ಹೊರಪಡಬಹುಬೆಂಬ ಭಯವು ಆ ಪುಂಡರಿಗೆ ಉಂಟಾಗಿರಬಹುದು. ಆದ್ದರಿಂದಲೇ ಪುಂಡರು ಗ್ರೇಯನ್ನು ದೂರವಿರಿಸಲು ಇಚ್ಛಿಸುತ್ತಾರೆ."

ಬ್ಲೇಕ್:—"ನಿಜ. ನನ್ನ ಅಭಿಪ್ರಾಯವೂ ಹೀಗೆಯೇ ಇದೆ. ಕೆನ್ನೆಯಲ್ಲಿ ಏನೋ ಗಾಯದ ಗುರುತು ಬಿದ್ದಿರುವ ಒಬ್ಬ ಮನುಷ್ಯನ ಚಿಕಿತ್ಸೆಯನ್ನು ಹಿಂದೆ ಮಾಡಿದ್ದೆನೆಂದು ಡಾಕ್ಟರ್ ಗ್ರೇ ವರ್ಣಿಸಿದ್ದನು. ಆ ಮನುಷ್ಯನೂ ಕೂಡ ಯಾವುದೋ ಅಪರಾಧಿಯಾಗಿರಬಹುದಲ್ಲದೆ ಈ ಫಿತೂರಿ

ಯೊಳಗೆ ಸೇರಿರಲೂ ಬಹುದು. ಗ್ರೇ ಎಲ್ಲಾದ್ಯರೂ ಆ ಮನುಷ್ಯನನ್ನು ನೋಡಿದಾಗ ಗುರುತಿಸಿ ಬಿಡಬಹುದೆಂಬ ಅಂಜಿಕೆಯು ಆ ಪುಂಡರ ತಂಡಕ್ಕೆ ಇರಬಹುದು; ಆದರೆ ಆ ಅಪರಾಧಿ ಮನುಷ್ಯನಾದರೂ ವೆಂಟ್‌ವರ್ತ್ ಆಸ್ಪತ್ರೆಯ ಬಳಿಯಲ್ಲಿ ಏಕೆ ಸುತ್ತಾಡುವನು?"

ಟಿಂಕರ್:—"ಇನ್ನೊಂದು ವಿಚಾರವಿದೆ ಸ್ವಾಮಿ! ನನ್ನ ಮುಖದ ಮೇಲೆ ಆ ದಿನ ಗ್ಯಾಸನ್ನುಪಯೋಗಿಸಲು ಯಾವ ಸ್ಥಳದಲ್ಲಿ ಹವಣಿಸಲಾಗಿದ್ದಿತೋ, ಆ ಸ್ಥಳವು ಡಾಕ್ಟರ್ ಮೇಡೀನನ ಬಂಗ್ಲೆಗೆ ಬಹಳ ದೂರವಿರಲಿಲ್ಲ. ಆ ಪುಂಡನು ತಿಳಿದು ತಿಳಿದೇ ಬೇಕೆಂದೇ ನನ್ನನ್ನು ಅಲ್ಲಿಯ ವರೆಗೆ ಕರೆದೊಯ್ದನೆಂದು ನಾನು ಭಾವಿಸುತ್ತೇನೆ. ಪ್ರಾಯಶಃ ಮೇಡೀನನ ಬಂಗ್ಲೆಯ ಅಕ್ಕಪಕ್ಕಗಳ ಸಮೀಪದಲ್ಲಿ ಮೊದಲಿನಿಂದಲೂ ಕೆಲವು ಪುಂಡರು ಕಾದು ಕುಳಿತಿದ್ದಿರಬಹುದು. ಒಂದು ವೇಳೆ ನನ್ನನ್ನು ಎಚ್ಚರದಪ್ಪಿಸಿ ಇತರ ಜೊತೆಗಾರರನ್ನು ತನ್ನ ಸಹಾಯಕ್ಕೆ ತೆಗೆದುಕೊಳ್ಳುವ ಇಚ್ಛೆಯಿಂದಲೇ ಆ ಪುಂಡನು ಹಾಗೆ ಅಲ್ಲಿಯ ವರೆಗೆ ನನ್ನನ್ನು ಒಯ್ದಿರಬಹುದು."

ಬ್ಲೇಕ್:-"ಹಾಗಿರುವುದು ಅಸಂಭವವೇನೂ ಅಲ್ಲ. ಆ ದುಷ್ಟ ಫ್ರಾಸ್ಟನು ಖಂಡಿತವಾಗಿಯೂ ಆ ಪುಂಡರ ತಂಡದೊಳಗೇ ಸೇರಿರುವನು."

ಟಿಂಕರ್—"ಯಾಕೆ? ನಾನೀಗ ವೇಷವನ್ನು ಮಾರ್ಪಡಿಸಿಕೊಂಡು ಮೇಡೀನನ ಬಂಗ್ಲೆಯ ಹತ್ತಿರ ಆಚೆ-ಈಚೆ ಸ್ವಲ್ಪ ಸುಳಿದಾಡಿ ನೋಡಿ ಬರಲೋ? ಒಂದು ವೇಳೆ ನನಗಲ್ಲಿ ಎಂಡರ್ಬೀ ಮತ್ತು ಗ್ರೇಯರ ಸುದ್ದಿ ಏನಾದರೂ ತಿಳಿದು ಬರಬಹುದಲ್ಲವೇ?"

ಬ್ಲೇಕ್—ಈಗದು ಬೇಡ, ಟಿಂಕರ್! ಈ ಸಮಯದಲ್ಲಿ ನಾವೀಗ ಎಲ್ಲಕ್ಕಿಂತ ಮುಂಚೆ ಮಾಡತಕ್ಕ ಕಾರ್ಯವೇನೆಂದರೆ—ರೇಡಿಯಮ್ಮನ್ನು ಪತ್ತೆ ಹಚ್ಚುವುದು. ಉಳಿದ ಕೆಲಸವನ್ನೆಲ್ಲ ಸದ್ಯಕ್ಕೆ ಯಾರ್ಡಿನ ಮೇಲೆ ಬಿಟ್ಟು ಬಿಡುವುದೇ ಒಳ್ಳೆಯದು. ನಾಳೆ ನಾನು ಗಿಲೆಟ್ಟನ ಅಂಗಡಿಗೆ ಹೋಗಿ ಭೂಪಟದ ವಿಷಯದಲ್ಲಿ ಪತ್ತೆಹಚ್ಚುವ ಪ್ರಯತ್ನ ಮಾಡುವೆನು. ಪ್ರಾಯಶಃ ನನಗೆ ಅಲ್ಲಿ ಯಾವುದಾದರೂ ಹೊಸ ಸುದ್ದಿಯು ತಿಳಿದು ಬರಬಹುದು. ಹಳೆಯ ಭೂಪಟಗಳ ಮಾರಾಟವು ಈ ಸಮಯದಲ್ಲಿ ಬಹಳ ಕಡಿಮೆ; ಯಾಕೆಂದರೆ, ಹೊಸ ಭೂಪಟವು ಈಗಲೇ ಹೊರಡುವುದಾಗಿದೆ. ಇರಲಿ. ಆ ಭೂಪಟವನ್ನು ಕೊಂಡುಕೊಂಡವರ್ಯಾರೆಂಬುದು ಅಂಗಡಿಯವನಿಗೆ ನೆನಪಿರಬಹುದು. ಒಳ್ಳೇದು. ಇನ್ನು ಸ್ವಲ್ಪ ವಿಶ್ರಾಂತಿಪಡೆಯೋಣ."

---

## (೮)

ಬ್ಲೇಕನ ಅದೃಷ್ಟವು ಈ ವೇಳೆಯಲ್ಲಿ ಸ್ವಲ್ಪ ಚೆನ್ನಾಗಿದ್ದಿತೆಂದು ಕಾಣುತ್ತದೆ; ಯಾಕೆಂದರೆ, ಯಾವ ವ್ಯಾಪಾರಿಯು ಆ ಭೂಪಟವನ್ನು ಮಾರಿದ್ದನೋ ಆ ವ್ಯಾಪಾರಿಗೆ ಅದರ ಸಂಬಂಧವಾದ ಎಲ್ಲ ಸಂಗತಿಗಳೂ ಚೆನ್ನಾಗಿ ನೆನಪಿದ್ದವು. ಒಂದು ವಾರದ ಹಿಂದೆ ಆ ಭೂಪಟವನ್ನು ಮಾರಲಾಗಿದ್ದಿತು. ಯಾವ ಮನುಷ್ಯನು ಕೊಂಡುಕೊಳ್ಳಲು ಬಂದಿದ್ದನೋ, ಅವನು ಆ ಭೂಪಟದ ಜೊತೆಗೆ ಇನ್ನೂ ಎಷ್ಟೋ ಇತರ ಭೂಪಟಗಳನ್ನೂ ಕೊಂಡಿದ್ದನು. ಅಂಗಡಿಯ ಕೆಲಸಗಾರನಿಗೆ ಆ ಮನುಷ್ಯನ ಆಕಾರ-ವೇಷಗಳೂ ನೆನಪಿದ್ದವು. ಆ ಮನುಷ್ಯನ ತಲೆಗೂದಲುಗಳು ಸುಂದರವಾಗಿದ್ದವು. ಗಡ್ಡದಲ್ಲಿ ಯಾವುದೋ ಒಂದು ಗಾಯದ ಗುರುತಿದ್ದಿತು.

ಬ್ಲೇಕನು ಮನದೊಳಗೇ ಹೇಳಿಕೊಂಡನು—"ಅಹಾ! ತಿರುಗಿಯೂ ಅದೇ ಸೇಜ್! ಇದೂ ಕೂಡ ಶೀಡ್ಮನ್ನನ ಅಂಗಡಿಯಲ್ಲಾದ ಕಳವಿಗಿಂತ ಸ್ವಲ್ಪ ಮುಂಚೆ."

ಬ್ಲೇಕನು ಕೇಳಿದನು—"ಒಳ್ಳೇದು. ಅವನು ಬೇರೆ ಯಾವ ಯಾವ ಭೂಪಟಗಳನ್ನು ಕೊಂಡೊಯ್ದನು?"

ಅಂಗಡಿಯ ಕೆಲಸಗಾರನು ಉತ್ತರಕೊಟ್ಟನು—"ಡಾರ್ಕಿಂಗ್ ಜಿಲ್ಲೆಯಲ್ಲದೆ ಟಾಕ್ವೆ, ಡಾರ್ತ್‌ಮೌತ್, ಪೆಂಜೆನ್ಸ್, ಲ್ಯೆಂಡ್ಸ್, ಎಂಡ್ಸ್, ಫಾಲ್‌ಮೌತ್, ಐಲ್ ಆಫ್ ವೇಟ್, ಲ್ಯೂ ಫಾಟಿಂಟ್, ಕೋಲ್ಚೆಸ್ಟರ್ ಮತ್ತು ಹಾರ್ವಿಚ್ ಇವುಗಳದ್ದು"

ಬ್ಲೇಕನು ಮನದೊಳಗೇ ನಕ್ಕು ತಿಳಿದುಕೊಂಡನು—"ಈ ಫಿತೂರಿಯ ಕಾರ್ಯಕ್ರಮವನ್ನು ಯಾವ ಚತುರನಾದ ಸಾಹಸಿಯು ತಯಾರಿಸಿರುವನೋ, ಆತನು ಯಾವ ಸ್ಥಳದಲ್ಲಿಯೂ ತಪ್ಪಿ ಹೋಗಿರುವುದಿಲ್ಲ. ಎಲ್ಲಿ ಡಾಕ್ಟರ್ ಮೋಡಿನನ ಮೋಟಾರು ನಿಂತು ರೇಡಿಯಮ್ ಅಪಹರಿಸಲ್ಪಟ್ಟಿತೋ, ಆ ಸ್ಥಳದ ಕಡೆಗೇ ಡಾರ್ಕಿಂಗ್ ಜಿಲ್ಲೆಯ ಭೂಪಟವು ನಿರ್ದೇಶಮಾಡಿ ತೋರಿಸುತ್ತದೆ. ತಮ್ಮ ನಿಶ್ಚಿತ ಸ್ಥಾನವು ಇತರರ್ಯಾರಿಗೂ ತಿಳಿಯಬಾರದೆಂಬುದಕ್ಕಾಗಿಯೇ ಡಾರ್ಕಿಂಗ್ ಜಿಲ್ಲೆಯ ಭೂಪಟದೊಡನೆ ಇನ್ನೂ ಅನೇಕ ಭೂಪಟಗಳನ್ನು ಕೊಂಡುಕೊಳ್ಳಲಾಗಿದೆ."

ಬ್ಲೇಕನು ಪುನಃ ಕೇಳಿದನು—"ಆ ಮನುಷ್ಯನು ತಾನು ಕೊಂಡುಕೊಳ್ಳಬೇಕಾದ ಭೂಪಟಗಳ ಪಟ್ಟಿಯೊಂದನ್ನು ಜೊತೆಗೆ ತಂದಿದ್ದನೇ?"

ಅವನು ಹೇಳಿದನು—"ಇಲ್ಲ, ಸ್ವಾಮೀ! ಅವನು ಎಲ್ಲಕ್ಕಿಂತ ಮುಂಚೆ

ಡಾರ್ಕಿಂಗ್ ಜಿಲ್ಲೆಯ ಭೂಪಟವನ್ನೇ ವಿಚಾರಿಸಿದನು. ಅನಂತರ ನನ್ನ ಬಳಿಯಲ್ಲುಳಿದಿದ್ದ ಭೂಪಟಗಳನ್ನು ನೋಡಿ 'ಇವುಗಳಿಂದಲೂ ಉಪಯೋಗವಿದೆ.' ಎಂದು ಹೇಳುತ್ತಾ ಅವುಗಳನ್ನೂ ಕೊಂಡುಕೊಂಡನು.''

ಬ್ಲೇಕನು ಮನದೊಳಗೇ ಯೋಚಿಸಿದನು—''ಆ ಭೂಪಟದ ವಿಮರ್ಶೆಗಾಗಿ ಯಾರಾದರೂ ಅಂಗಡಿಗೆ ಬಂದರೆ ಕೇವಲ ಒಂದೇ ಜಿಲ್ಲೆಯ ಭೂಪಟದಲ್ಲಿ ತನಗೆ ಆಸಕ್ತಿ ಇದ್ದಿತೆಂಬುದನ್ನು ಅವರು ತಿಳಿಯಬಾರದೆಂಬುದಕ್ಕಾಗಿಯೇ ಆ ಮನುಷ್ಯನು ಈ ಉಪಾಯವನ್ನು ನಿಶ್ಚಯವಾಗಿ ಹೂಡಿರುವನು.''

ಭೂಪಟದ ವಿಚಾರದಲ್ಲಿ ಇನ್ನಾವ್ಯವ ಹೊಸ ಸೂತ್ರವೂ ದೊರೆಯುವ ಆಶೆಯನ್ನು ಕಾಣದೆ ಬ್ಲೇಕನು ಇಲ್ಲಿನ್ನು ವ್ಯರ್ಥವಾಗಿ ಸಮಯವನ್ನು ಹಾಳು ಮಾಡವುದುಚಿತವಲ್ಲವೆಂದು ಭಾವಿಸಿದನು. ಇನ್ನೀಗ ಉಳಿದಿರುವುದೆಂದರೆ ಕೇವಲ ಒಂದು ಇಟಾಲಿಯಾ ಮೋಟಾರಿನ ಸೂತ್ರ; ಆದರೆ ಆ ಮೋಟಾರಿನ ನಂಬರಾಗಲಿ, ಬಣ್ಣವಾಗಲಿ, ಇನ್ನಾವ್ಯವುದೇ ವಿಷಯವಾಗಲಿ ತಿಳಿದಿರಲಿಲ್ಲ. ಎಷ್ಟೋ ಹಣವಂತರು ಈ ಸಮಯದಲ್ಲಿ ಇಟಾಲಿಯಾ ಮೋಟಾರುಗಳನ್ನು ಇಟ್ಟುಕೊಂಡಿದ್ದರು. ಆದ್ದರಿಂದ ಈ ಸೂತ್ರದಿಂದಲೂ ಕೂಡ ಯಾವುದೇ ತರಹದ ಲಾಭವಾಗುವ ಆಶೆಯೂ ಕಾಣುತ್ತಿರಲಿಲ್ಲ.

ಅಲ್ಲಿಂದ ಬ್ಲೇಕನು ನೆಟ್ಟಗೆ ವೆಂಡ್‌ವರ್ತ್ ಆಸ್ಪತ್ರೆಗೆ ಹೋದನು. ಎಂಡರ್ಬೀ ಅಥವಾ ಗ್ರೇಯ ವಾರ್ತೆ ಏನಾದರೂ ಫೆಂಟನನಿಗೆ ತಿಳಿದು ಬಂದಿರುವುದೇ ಎಂದು ಕೇಳಿ ವಿಚಾರಿಸುವುದಕ್ಕಾಗಿ ಬ್ಲೇಕನು ಅಲ್ಲಿಗೆ ಬಂದಿದ್ದನು; ಆದರೆ ಡಾಕ್ಟರ್ ಫೆಂಟನನಿಗೂ ಈ ಯಾವ ವರ್ತಮಾನವೂ ತಿಳಿದಿರಲಿಲ್ಲ.

ಫೆಂಟನನು ಹೇಳಿದನು—''ಡಾಕ್ಟರ್ ಮೇಡೀನರ ಆರೋಗ್ಯವು ಸ್ವಲ್ಪ ಸುಧಾರಿಸಿದೆ; ಆದರೆ ಇಂದು ಆಸ್ಪತ್ರೆಗೆ ಬರಲಾರೆವೆಂದು ಫೋನ್ ಮಾಡಿದ್ದಾರೆ. ರೇಡಿಯಮ್ ಕಳವಾದುದರಿಂದ ಈಗ ಡಾಕ್ಟರ್ ಮೇಡೀನರು ನಿರುಪಾಯರಾಗಿ ಸರ್ ಕಥವರ್ಟ್ ನಾವೆಲ್ಲರ ಚಿಕಿತ್ಸೆಯಲ್ಲಿ ವಿಲಂಬ ಮಾಡುತ್ತಿರುವರು. ದಕ್ಷಿಣ ಲಂಡನ್ನಿನ ಆಸ್ಪತ್ರೆಯಿಂದ ರೇಡಿಯಮ್ ದೊರಕುವ ಸಂಭವವಿದೆ ಎಂದು ಈಗವರು ತಿಳಿದಿದ್ದಾರೆ. ಪೋಲೀಸರು ಎಂಡರ್ಬೀ ಮತ್ತು ಡಾಕ್ಟರ್ ಗ್ರೇಯರ ಪತ್ತೆ ಹಚ್ಚುವುದರಲ್ಲಿ ಆಸಕ್ತರಾಗಿರುವರು. ಹಾ; ಆದರೆ ಮಿಸ್ ಎಂಡರ್ಬಿಯ ವಿಳಾಸಕ್ಕೆ ಒಂದು ಕಾಗದವೇನೋ ಈಗ ಇಲ್ಲಿಗೆ ಬಂದಿದೆ. ಈಗದು ನೆನಪಾಯಿತು. ಬೇಕಾದರೆ ನೀವದನ್ನು ನೋಡಬಹುದು.''

ಉತ್ಸಾಹಪೂರ್ಣವಾದ ಸ್ವರದಿಂದ ಬ್ಲೇಕ್ ಹೇಳಿದನು:—''ಕಾಗದ ಬಂದಿದೆಯೇ? ಒಳ್ಳೇದಾಯಿತು. ನಾನದನ್ನು ನೋಡಲೇ ಬೇಕು. ಈ

ವೇಳೆಯಲ್ಲಿ ನಮಗೆ ಯಾವದೊಂದು ಸಣ್ಣ ಸಣ್ಣ ವಿಷಯದಿಂದಲೂ ಕೂಡ ದೊಡ್ಡ ಲಾಭವಾಗುವ ಆಶೆ ಇರುವದು.''

ಫೆಂಟನನು ಒಂದು ಲಕ್ಕೋಟೆಯನ್ನು ತಂದು ಬ್ಲೇಕನ ಕೈಗೆ ಕೊಟ್ಟನು. ಲಕ್ಕೋಟೆಯ ಮೂಲೆಯಲ್ಲಿ "ದಿ ಓಲ್ಡ್ ಸ್ವೈನ್ ಚೆಲೆಸ್ಟೇಡ್'' ಎಂದು ಬರೆದಿದ್ದಿತು.

ಫೆಂಟನ್ ಹೇಳಿದನು:—"ಹಿಂದೆ ನಮ್ಮ ಆಸ್ಪತ್ರೆಯಲ್ಲಿಯೇ ಕೆಲಸ ಮಾಡುತ್ತಿದ್ದ ಒಬ್ಬ ನರ್ಸಳು ಈ ಕಾಗದವನ್ನು ಬರೆದಿರುವಳು. ಇಂದಿಗೆ ಒಂದು ವರ್ಷದ ಮುಂಚೆ ಅವಳು ಮದುವೆಯಾಗಿ ಆಸ್ಪತ್ರೆಯ ಕೆಲಸವನ್ನು ಬಿಟ್ಟು ಹೊರಟು ಹೋದಳು. ಅವಳ ಹೆಸರು ಮಿಸ್ ಕೌನ್ಸ್ಟೆನ್ಸ ಬ್ರೆಂಡಲೇ. ಅವಳ ಗಂಡನ ಹೆಸರು ಹೆಡ್‌ಕೂಂಬ್. ಆತನು ಬ್ರೈಟನ್ ರೋಡಿನಲ್ಲಿ ಒಂದು ಚಿಕ್ಕ ಹೋಟೆಲ್ಲನ್ನಿಟ್ಟು ಆದರಿಂದ ಜೀವನ ನಡೆಸುತ್ತಿರುವನು. ಸ್ವಲ್ಪ ಸಮಯದ ಹಿಂದೆ ನಾನು ಆತ್ತ ಕಡೆಗೆ ಹೋದಾಗ ಮಿಸ್ ಕೌನ್ಸ ಟೆನ್ಸಳನ್ನು ನೋಡಿ ಬರೋಣವೆಂದು ಆತನ ಹೋಟಲಿಗೆ ಹೋದೆ; ಆದರೆ ಆ ಹೋಟಲಿಗೆ ಬಂದು-ಹೋಗುವ ಜನಗಳೆಲ್ಲರೂ ಹೆಚ್ಚಾಗಿ ಪುಂಡ-ಪೋಕರಿಗಳೇ ಇರುವರೆಂದು ನನಗೆ ತೋರಿತು. ಇದರಿಂದ ಆ ಬಡಪಾಯಿ ಕೌನ್ಸ್ಟೆನ್ಸಳ ಜೀವನವೂ ಕೂಡ ಸುಖಮಯವಾಗುವುದೆಂದು ನನಗನಿಸಲಿಲ್ಲ. ಈಗವಳು ತನ್ನ ಮದುವೆಯ ವಿಚಾರದಲ್ಲಿ ತುಂಬಾ ಪಶ್ಚಾತ್ತಾಪಪಡುತ್ತಿರುವಳು. ಆ ಹೋಟಲಿನಲ್ಲಿ ಒಂದು ಸಲ ಸ್ವಲ್ಪ ಗಲಾಟೆಯೂ ಆಗಿ, ಅದರಲ್ಲಿ ಆ ಹೆಡ್‌ ಕೂಂಬನಿಗೆ ಜುಲ್ಮಾನೆಯ ಶಿಕ್ಷೆಯಾಗಿದ್ದಿತು. ಕಾರಣವೇನಂದರೆ, ಕೆಲವು ಪುಂಡ-ಪೋಕರಿಗಳು ಸೇರಿ ಅಲ್ಲಿ ಮದ್ಯಪಾನ ಮಾಡಿ ದೊಡ್ಡ ಗಲಭೆಯೆಬ್ಬಿಸಿದ್ದರು. ಕೂಡಲೆ ನೆರಮನೆ ಜನಗಳು ಪೋಲೀಸರಿಗೆ ದೂರು ಹೇಳಿದರು."

ಬ್ಲೇಕನು ತವಕದಿಂದ ಬೇಗಬೇಗನೆ ಲಕ್ಕೋಟೆಯನ್ನೊಡೆದನು.

"ಗಾಬರಿ ಪಡಬೇಕಾದ ವಿಚಾರವೇನೂ ಇಲ್ಲ, ಫೆಂಟನ್! ಯಾರ ಪ್ರೈವೇಟ್ ಪತ್ರವನ್ನೂ ಓದಿ ನೋಡುವ ಅಭ್ಯಾಸವು ನನಗಿಲ್ಲ; ಆದರೆ ಈಗಿನ ಈ ಪರಿಸ್ಥಿತಿಯಲ್ಲಿ ಅತಿ ಚಿಕ್ಕ ಚಿಕ್ಕ ವಿಚಾರಗಳ ಮೇಲೂ ಕೂಡ ಲಕ್ಷ್ಯವಿಡಬೇಕಾದ ಸಂದರ್ಭವೊದಗಿರುವುದರಿಂದ ಇದನ್ನೀಗ ನೋಡಬೇಕಾಗಿದೆ'' ಎಂದು ಹೇಳಿ ಆ ಕಾಗದವನ್ನು ಓದಿದನು.

ಬರವಣಿಗೆಯು ಹೀಗೆ ಇದ್ದಿತು:—"ಪ್ರಿಯ ನೋರಾ! ನನ್ನ ಈ ನೀರಸ ಜೀವನವನ್ನು ನಾನಿನ್ನು ಹೆಚ್ಚು ಸಮಯದ ವರೆಗೆ ನಡೆಸಬಲ್ಲೆನೇ! ಎಂದು ಭಯವಾಗುತ್ತಿದೆ. ಸಾಧ್ಯವಾದಷ್ಟು ಮಟ್ಟಿಗೆ ನಾನು ರೌಂಡಲಕ

ಸೇವೆಯನ್ನು ಇಷ್ಟರ ವರೆಗೆ ಮಾಡಿದೆನು; ಆದರೆ ಅವನು ಮಾತ್ರ ಒಂದೇ ಸವನೆ ನನ್ನ ಜೀವನವನ್ನು ವಿಷಮಯವಾಗಿಯೇ ಮಾಡುತ್ತಿದ್ದಾನೆ. ಈ ಹೊಟಲಿನಲ್ಲಿ ಈಗ ಪುಂಡ ಜನಗಳಲ್ಲದೆ ಇನ್ನ್ಯಾವ ಸದ್ಗೃಹಸ್ಥನೂ ಕಾಲಿಡುವದಿಲ್ಲ. ಹಗಲೂ ರಾತ್ರಿ ಹೋಟಲೊಳಗೆ ಮದ್ಯಪಾನ-ಜೂಜು ಇವುಗಳ ಗಲಾಟೆ ನಡೆಯುತ್ತಲೇ ಇರುತ್ತದೆ. ರೌಂಡಲನಿಲ್ಲದಿರುವಾಗ ಹೋಟಲಿನ ಮುಖ್ಯ ಕೆಲಸಗಾರನಾದ ಪಾರಡ್ರೀಜನೆಂಬುವನೇ ಇಲ್ಲಿನ ಎಲ್ಲ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವನು ಈತನು ತನ್ನ ಹೆಸರನ್ನು ಮೇಜರ ಡೋಮೋ ಎಂದಿಟ್ಟುಕೊಂಡಿರುವನು. ಈ ಗಲಾಟೆಯನ್ನೆಲ್ಲ ತಡೆಯಲು ನಾನೇನಾದರೂ ಹೇಳಿದರೆ, ಅವನು ನನ್ನನ್ನೇ ಹೀಯಾಳಿಸಿ ಬಿಡುವನು! ಪೋಲೀಸರು ಎರಡು ಸಲ ಇಲ್ಲಿಗೆ ನುಗ್ಗಿದ್ದರು. ಎಷ್ಟೋ ಹೆಂಡಗುಡಕರನ್ನು ಸೆರೆಹಿಡಿದು ಒಯ್ದಿದ್ದರು; ಆದರೂ ಇಲ್ಲಿನ ಅವರ ಉಪಟಳವು ಶಾಂತವಾಗುವ ಸ್ಥಿತಿಯು ಕಾಣುವದಿಲ್ಲ. ನನ್ನಸ್ನೀಗ ಇಲ್ಲಿ ಕೇಳುವವರೇ ಇಲ್ಲದಾಗಿದೆ. ರೌಂಡಲನು ನನ್ನ ಮಾತನ್ನು ಕೇಳಿ ನಕ್ಕು ಬಿಡುವನು. ಅವನು ಹೇಳುತ್ತಿರುವನು:—"ಬೇಗನೆ ತಕ್ಕಷ್ಟು ಐಶ್ವರ್ಯವನ್ನು ಸಂಪಾದಿಸಿ, ಈ ಹೋಟಲನ್ನು ಮುಚ್ಚಿ ಎಲ್ಲಾದರೂ ಒಳ್ಳೆಯ ಸ್ಥಳಕ್ಕೆ ಹೋಗಿ ಸುಖವಾಗಿ ಇದ್ದು ಬಿಡೋಣ" ಎಂದು; ಆದರೆ ನಾನು ಮಾತ್ರ ಇಲ್ಲಿನ್ನು ಸಿಲ್ಲಲಾರೆನು. ರೌಂಡಲನನ್ನು ತ್ಯಜಿಸಿ, ಏಕಾಂತ ಜೀವನವನ್ನು ನಡೆಸಲು ಆಶಿಸುತ್ತಿರುವೆನು. ಈಗ ನಾನು ವೆಂಟ್‌ವರ್ತ ಆಸ್ಪತ್ರೆಗೆ ಬಂದರೆ ನನಗಲ್ಲಿ ಪುನಃ ಕೆಲಸವು ದೊರೆಯಬಹುದೇ? ನೀನು ಈ ವಿಷಯವನ್ನು ಡಾ. ಸ್ಟೆಂಟನರ ಬಳಿಯಲ್ಲಿ ವಿಚಾರಿಸು. ಮದುವೆಯಾದ ನರ್ಸಳನ್ನು ಅವರು ತಿರಸ್ಕರಿಸುತ್ತಾರೆಂಬದನ್ನು ನಾನು ಬಲ್ಲೆನು; ಆದರೆ ನಾನಿನ್ನು ವಿಧವೆಯೆಂದಾದರೂ ತಿಳಿದು, ಪುನಃ ಆಸ್ಪತ್ರಿಯಲ್ಲಿ ಅವಕಾಶಕೊಡಿಸುವ ದಯೆತೋರಿನ ಬೇಕೆಂದು ನೀನು ಸ್ಟೆಂಟನರ ಹತ್ತರ ನನಗಾಗಿ ಪ್ರಾರ್ಥಿಸು. ನೋರಾ! ನೋಡು, ನನ್ನ ಪರಿಸ್ಥಿತಿಯು ಈಗ ಇಲ್ಲಿಯ ವರೆಗೆ ಬಂದು ಮುಟ್ಟಿದೆ. ನಾನು ಅಥವಾ ರೌಂಡಲ್ ಇಬ್ಬರಲ್ಲೊಬ್ಬರು ಈ ಪ್ರಪಂಚದಿಂದ ದೂರವಾಗಲೆಂದು ನಾನು ಬಯಸುತ್ತೇನೆ. ನಿನಗೀ ವಿಚಾರವು ಹಾಸ್ಯಾಸ್ಪದವಾಗಿ ತೋರಬಹುದು; ಆದರೆ ನಾನೇನು ಮಾಡಲಿ ನೋರಾ! ಬಡಪಾಯಿಯಾದ ನನ್ನಲ್ಲಿ ರೌಂಡಲನು ಅಂತಹ ತಿರಸ್ಕಾರವನ್ನು ತೋರಿಸುತ್ತಿರುವನು. ಇರಲಿ. ಎಲ್ಲ ವಿಚಾರಗಳಿಗೂ ಉತ್ತರ ಕೊಡು. ನಿನ್ನ ಗೆಳತಿ,

ಕೌನ್ಸಟೆನ್ಸ್ ಹೆಡ್‌ಕೊಂಬ್"

ಕಾಗದವನ್ನೋದಿ ಮುಗಿಸುವಾಗ ಬ್ಲೇಕನ ಕಣ್ಣುಗಳು ದಯಾರ್ದ್ರವಾಗಿದ್ದವು. ಆತ ಹೇಳಿದನು:—"ಈಕೆಯ ಗಂಡನು ಬಹಳ ಪುಂಡನಾಗಿ ಕಾಣುತ್ತಾನೆ. ಇವಳು ಅತನನ್ನು ಬಿಟ್ಟು ಪುನಃ ಈ ಆಸ್ಪತ್ರೆಗೇ ಬರಲು ಇಚ್ಛಿಸುತ್ತಾಳೆ."

ಫೆಂಟನ್:—"ಅದಕ್ಕೆ ತಕ್ಕ ಏರ್ಪಾಡು ಮಾಡಬಹುದು; ಆದರೆ ಈ ಲಕ್ನೋಟಿಯನ್ನು ಒಡೆದಿರುವ ವಿಷಯವಾಗಿ ಏನುತ್ತರ ಹೇಳೋಣ?"

ಫೆಂಟನನ ಮಾತಿನ ಕಡೆಗೆ ಸ್ವಲ್ಪವೂ ಗಮನ ಕೊಡದೆ ಬ್ಲೇಕನು ಜೇಬಿನಿಂದ ಡಾರ್ಕಿಂಗ್ ಜಿಲ್ಲೆಯ ಭೂಪಟವನ್ನು ಹೊರತೆಗೆದು ಎದುರಿಗಿದ್ದ ಟೇಬಲಿನ ಮೇಲೆ ಅದನ್ನು ಬಿಡಿಸಿಟ್ಟು ಹೇಳತೊಡಗಿದನು—"ನೋಡಿರಿ, ಮಿಸ್ಟರ್ ಫೆಂಟನ್! ಯಾವ ಸ್ಥಳದಲ್ಲಿ ರೇಡಿಯಮ್ಮಿನ ಕಳವು ನಡೆದಿದೆಯೋ ಅಲ್ಲಿಂದ ಈ ದಾರಿಯು ನೆಟ್ಟಗೆ ಬ್ರೈಟನ್ ರೋಡ್-ಚೆಲೆಸ್ಟೈಡಿಗೆ ಹೋಗಿರುವುದು. ರೇಡಿಯಮ್ಮನ್ನು ಕದ್ದು ತೆಗೆದುಕೊಂಡು ಓಡಿ ಹೋಗಿರುವ ಪುಂಡರು ಮದ್ಯಪಾನಕ್ಕಾಗಿ ಸ್ವಲ್ಪ ಹೊತ್ತು ನಿಲ್ಲಲು ದಿ ಓಲ್ಡ್ಸ್ಪೆನ್ ತಕ್ಕ ಸ್ಥಳವಾಗಿದೆ. ಸರಿ. ನಾನೀಗ ಇಲ್ಲಿಂದ ನೆಟ್ಟಗೆ ಅಲ್ಲಿಗೆ ಹೋಗಿ ಒಂದೆರಡು ವಿಷಯಬಿನ್ನು ತಿಳಿಯಬೇಕೆಂದಿರುವೆನು. ಗುಡ್‌ಮಾರ್ನಿಂಗ್!"

ಬ್ಲೇಕನು ನೆಟ್ಟಗೆ ಬೇಕರ್ ಸ್ಟ್ರೀಟಿಗೆ ಹಿಂದಿರುಗಿದನು. ಕೂಡಲೆ ಟಿಂಕರನಿಗೆ ಹೇಳಿದನು—"ಟಿಂಕರ್! ಮೋಟಾರನ್ನು ಪ್ರಯಾಣಕ್ಕೆ ಕೂಡಲೆ ಸಿದ್ಧಮಾಡಿಡು. ಒಂದು ವೇಳೆ ಈ ಸಾರೆ ನಮಗೆ ಒಂದೆರಡು ದಿನ ತಡವಾದರೂ ಆಗಬಹುದು."

ಟಿಂಕರನು ತನ್ನ ಯಜಮಾನನ ಸ್ವಭಾವವನ್ನು ಸಂಪೂರ್ಣ ಅರಿತಿದ್ದುದರಿಂದ ಯಾವ ಪ್ರಶ್ನೆಯನ್ನೂ ಮಾಡದೆ ಕೂಡಲೆ ಎಲ್ಲಾ ವ್ಯವಸ್ಥೆಯನ್ನು ಮಾಡಿಟ್ಟನು. ಅಷ್ಟರಲ್ಲಿ ಬ್ಲೇಕನು ತನ್ನ ವೇಷವನ್ನು ಮಾರ್ಪಡಿಸಿಕೊಂಡು ಹೊರಡಲು ಸಿದ್ಧನಾದನು. ಥಟ್ಟನೆ ನೋಡಿದರೆ ಟಿಂಕರನೂ ಕೂಡ ಗುರುತಿಸಲಾರದಷ್ಟರ ಮಟ್ಟಿಗೆ ಬ್ಲೇಕನ ವೇಷವು ಮಾರ್ಪಾಡಾಗಿದ್ದಿತು. ಅವನು ತನ್ನ ಹೆಸರನ್ನು ಈಗ ಜಾರ್ಜ್ ಪೆಂಟನ್ ಎಂದಿಟ್ಟುಕೊಂಡಿದ್ದನು. ಬ್ಲೇಕನಿಗೆ ತಕ್ಕಂತೆ ಟಿಂಕರನೂ ವೇಷವನ್ನು ಬದಲಾಯಿಸಿಕೊಂಡು ತಯಾರಾದನು. ಸ್ವಲ್ಪ ಹೊತ್ತಿನೊಳಗೇ ಬ್ಲೇಕನು ಟಿಂಕರನೊಡನೆ ಮೋಟಾರಿನಲ್ಲಿ ಕುಳಿತುಕೊಂಡು ಬ್ರೈಟನ್ ರೋಡಿನ ಕಡೆ ಪ್ರಯಾಣ ಮಾಡಿದನು.

ಟಿಂಕರನು ದಿ ಓಲ್ಡ್ಸ್ಪನಿಗೆ ಹೋಗುವ ದಾರಿಯನ್ನು ಚೆನ್ನಾಗಿ ಅರಿತಿದ್ದುದರಿಂದ ಅಲ್ಲಿಗೆ ತಲ್ಪಲು ಏನೂ ಕಷ್ಟವಾಗಲಿಲ್ಲ. ಹೋಟಲಿಗೆ ಸ್ವಲ್ಪ

ದೂರದಲ್ಲಿಯೇ ಟಿಂಕರನು ಮೋಟಾರನ್ನು ನಿಲ್ಲಿಸಿದನು.

ಬ್ಲೇಕನು ಮೆಲ್ಲನೆ ಹೇಳಿದನು—"ನೋಡು, ಸಾಧ್ಯವಾದರೆ ಆ ಇಟಾಲಿಯಾ ಮೋಟಾರು ಇಲ್ಲೆಲ್ಲಿಯಾದರೂ ಬಂದಿದ್ದಿತೇ ಇಲ್ಲವೇ ಎಂಬುದನ್ನು ತಿಳಿಯಲು ಪ್ರಯತ್ನಿಸು; ಆದರೆ ಬಹಿರಂಗವಾಗಿ ಈ ವಿಷಯದಲ್ಲಿ ಯಾರ ಬಳಿಯಲ್ಲಿಯೂ ಮಾತಾಡದಿರು."

ಬ್ಲೇಕನು ಮೋಟಾರಿನಿಂದಿಳಿದು ಹೋಟಲಿಗೆ ಹೋದನು. ಬಾಗಿಲಿಗೆ ಹೋದೊಡನೆಯೇ ಕಾವಲುಗಾರನು ಮುಂದೆ ಬಂದು ಗೌರವದಿಂದ ಆದರಿಸಿ, ಒಳಗೆ ಕರೆದೊಯ್ದು ಕೌಂಟರದ ಬಳಿಯಲ್ಲಿ ಬಿಟ್ಟನು. ಬ್ಲೇಕನು ಕೂಡಲೆ ಹೋಟಲಿನ ರಿಜಿಸ್ಟರಿನಲ್ಲಿ ಜಾರ್ಜ್ ಪೆಂಟನ್ ಎಂದು ತನ್ನ ಹೆಸರನ್ನು ಬರೆದು, ವಾಸಕ್ಕೆ ತನಗೊಂದು ಕೋಣೆಯನ್ನು ಸಿದ್ಧಪಡಿಸಲು ಹೇಳಿ, ಒಂದು ಕುರ್ಚಿಯ ಮೇಲೆ ಕುಳಿತನು. ಆ ಸ್ಥಳದಲ್ಲಿ ಜನರು ಯಾವ ರೀತಿಯಿಂದ ಸೇರುತ್ತಾರೆಂಬುದನ್ನು ಬ್ಲೇಕನು ಒಂದೇಸಾರಿ ಈಚೆ ಆಚೆ ದೃಷ್ಟಿ ಹೊರಳಿಸಿದ ಮಾತ್ರದಿಂದಲೇ ಅರಿತುಬಿಟ್ಟನು.

ಬ್ಲೇಕನು ಕುರ್ಚಿಯ ಮೇಲೆ ಕುಳಿತು ಎರಡು ಮಿನಿಟಾಗುವದರೊಳಗೇ ಒಬ್ಬ ಮನುಷ್ಯನು ಸಮೀಪದಲ್ಲಿ ಬಂದು ನಿಂತುಕೊಂಡು ಹೇಳಿದನು—"ನಾನು ಇಲ್ಲಿನ ಯಜಮಾನ ಮೇಜರ್ ಡೋಮೋ. ಹೇಳೋಣಾಗಲಿ, ತಾವು ತಮ್ಮ ಊಟವನ್ನು ಇಲ್ಲಿಯೇ ಮಾಡುತ್ತೀರಾ, ಅಥವಾ ತಮ್ಮ ಕೋಣೆಯಲ್ಲಿಯೋ?"

"ಈ ಎದುರಿನ ಚಿಕ್ಕಕೋಣೆಯು ಏನಾಗಿದೆ?" ಎಂದು ಕೇಳುತ್ತ, ಬ್ಲೇಕನು ಪಕ್ಕದ ಒಂದು ಚಿಕ್ಕ ಕೋಣೆಯ ಕಡೆಗೆ ಕೈ ತೋರಿಸಿದನು. ಆ ಕೋಣೆಯ ಬಾಗಿಲು ಸ್ವಲ್ಪ ತೆರೆದಿದ್ದಿತು.

ಮೇಜರ್ ಡೋಮೋ ಉತ್ತರವಿತ್ತನು:-"ಅದು ಪ್ರೈವೇಟ್ ರೂಮು, ಸ್ವಾಮೀ! ಅದರಲ್ಲಿ ಮೆ. ಹೆಡ್‌ಕೂಂಬರು ವಾಸವಾಗಿರುತ್ತಾರೆ."

"ಒಳ್ಳೇದು. ಹಾಗಾದರೆ ಇಲ್ಲಿಯೇ ಊಟಮಾಡುತ್ತೇನೆ. ಇಲ್ಲಿಗೇ ಕಳುಹಿಸಿರಿ." ಎಂದು ಹೇಳಿ ಬ್ಲೇಕನು ಕುರ್ಚಿಯ ಮೇಲೆ ಸ್ವಸ್ಥವಾಗಿ ಕುಳಿತನು. ಮೇಜರ್ ಡೋಮೋನನ್ನು ಬ್ಲೇಕನು ಥಟ್ಟನೆ ಗುರುತಿಸಿಬಿಟ್ಟಿದ್ದನು. ಕೌನ್ಸ್‌ಟೆನ್ಸ್ ಹೆಡ್‌ಕೂಂಬಳು ತನ್ನ ಕಾಗದದಲ್ಲಿ ಬರೆದಿದ್ದ ಪಾರಡ್ರೀಜ ಎಂಬವನು ಇವನೇ ಆಗಿದ್ದನು.

ಮೇಜರ್ ಡೋಮೋ ಬ್ಲೇಕನ ಆಜ್ಞೆಯನ್ನು ಪಾಲಿಸುವದಕ್ಕಾಗಿ ಅಲ್ಲಿಂದ ಹೊರಟುಹೋದನು. ಈಗ ಬ್ಲೇಕನು ತನ್ನ ದೃಷ್ಟಿಯನ್ನು ಮೆ.

ಹೆಡ್‌ಕೂಂಬಳಿದ್ದ ಕೋಣೆಯ ಕಡೆಗೆ ಪ್ರಸರಿಸಿದನು.

ಆ ಕೋಣೆಯೊಳಗೆ ಹೆಂಗಸೊಬ್ಬಳು ಕುಳಿತಿದ್ದುದು ಕಾಣಿಸಿತು. ಇವಳೇ ನೋರಾ ಎಂಡರ್ಬಿಗೆ ಕಾಗದ ಬರೆದಿದ್ದ ಹೆಂಗಸೆಂದು ಬ್ಲೇಕನು ನಿಶ್ಚೈಸಿದನು. ಬ್ಲೇಕನು ಲಕ್ಷ್ಯವಿಟ್ಟು ಕೋಣೆಯೊಳಗೇ ಇಣಿಕಿ ನೋಡಿದನು. ಅಷ್ಟರಲ್ಲಿ ಮೆ. ಹೆಡ್‌ಕೂಂಬಳು ತನ್ನ ಕೋಣೆಯಿಂದ ಹೊರಗೆ ಬಂದು ನಡುಮನೆಯ ಮಾರ್ಗವಾಗಿ ಹೋಗಿ ಅಲ್ಲಿಂದ ಮೆಟ್ಟಿಲು ಹತ್ತಿ ಉಪ್ಪರಿಗೆಗೆ ಹೋದಳು. ಕೋಣೆಯ ಬಾಗಿಲು ತೆರೆದಿದ್ದುದು ಹಾಗೆಯೇ ಇದ್ದಿತು.

ಈಗ ಬ್ಲೇಕನು ಹೆಚ್ಚಿನ ಉತ್ಸುಕತೆಯಿಂದ ಆ ಕೋಣೆಯೊಳಗಿನ ಪ್ರತಿಯೊಂದು ವಸ್ತುವನ್ನೂ ನೋಡತೊಡಗಿದನು. ಕೋಣೆಯೊಳಗೆ ಒಂದು ಕುರ್ಚಿ, ಒಂದು ಮೇಜು ಇದ್ದವು. ಎದುರಿಗಿರುವ ಗೋಡೆಯ ಮೇಲೆ ಚಿತ್ರಪಟಗಳು ನೇತುಹಾಕಲ್ಪಟ್ಟಿದ್ದವು ಆ ಚಿತ್ರಗಳ ಮೇಲೆ ಚೆನ್ನಾಗಿ ಬೆಳಕು ಬಿದ್ದಿದ್ದಿತು.. ಅದರಿಂದ ಆ ಚಿತ್ರಗಳು ಹೊರಗಿನಿಂದ ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಅದರಲ್ಲಿ ಒಂದು ಚಿತ್ರವು ಒಬ್ಬ ಮುದುಕಿಯದಾಗಿದ್ದಿತು. ಆಕೆಯ ತಲೆಗೂದಲುಗಳೆಲ್ಲವೂ ಗೋಣಿಯ ನಾರಿನಂತಿದ್ದವು. ಇನ್ನೊಂದು ಚಿತ್ರವು ನರ್ಸಳ ಉಡಿಗೆ-ತೊಡಿಗೆ ತೊಟ್ಟು ನಸುನಗುತ್ತಿದ್ದ ಒಬ್ಬ ಯುವತಿಯದಾಗಿದ್ದಿತು. ಆ ಚಿತ್ರವೇ ಮೆ. ಹೆಡ್‌ಕೂಂಬಳ ಮದುವೆಯಾಗುವದಕ್ಕಿಂತ ಮುಂಚಿನದೆಂದು ಬ್ಲೇಕನು ತಿಳಿದನು. ಆ ಚಿತ್ರದ ಯುವತಿಗೂ ಎದುರಿಗೀಗ ಹೊರಟುಹೋದ ಮೆ. ಹೆಡ್‌ಕೂಂಬಳಿಗೂ ಹೋಲಿಸಿ ನೋಡಿದರೆ, ಚಿಂತೆಯ ಹೊಡೆತದಿಂದ ಅವಳ ಮುಖದಲ್ಲೀಗ ಎಂತಹ ವಿಪರೀತವಾದ ಬದಲಾವಣೆಯಾಗಿದೆ ಎಂಬುದು ತಿಳಿಯುತ್ತಿದ್ದಿತು. ಅದರಿಂದ ಅವಳ ಈಗಿನ ನಿಜವಾದ ಸ್ಥಿತಿಯು ಎಂತಹುದಾಗಿದೆ ಎಂಬದು ಬ್ಲೇಕನಿಗೆ ಮನದಟ್ಟಾಯಿತು. ಮೂರನೆಯ ಚಿತ್ರವು ಒಬ್ಬ ಯುವಕನದಾಗಿದ್ದಿತು. ಬ್ಲೇಕನು ಈಗ ಆ ಚಿತ್ರವನ್ನೇ ಏಕಾಗ್ರತೆಯಿಂದ ನೋಡತೊಡಗಿದನು.

ಆ ಮುಖವು ತನಗೆ ಹಿಂದೆಲ್ಲಿಯೋ ಪರಿಚಯವಾದದ್ದಿರುವುದೆಂದು ಬ್ಲೇಕನಿಗೆ ಅನಿಸಿತು. ಹಿಂದೆ ಆ ರೂಪವನ್ನು ತಾನು ಎಲ್ಲಿ ನೋಡಿರಬಹುದೆಂದು ಬ್ಲೇಕನು ಯೋಚಿಸಿದನು. ರೂಪವನ್ನು ನೋಡಿ ನೆನಪಿಡುವುದರಲ್ಲಿ ಬ್ಲೇಕನು ಚತುರನಿದ್ದನು. ಈಗ ಥಟ್ಟನೆ ನೆನಪಾಯಿತು. ಹಿಂದೆ ಯಾವಾಗ ಅವನನ್ನು ಬ್ಲೇಕನು ನೋಡಿದ್ದನೋ, ಆಗವನ ಮುಖದಲ್ಲಿ ಗಡ್ಡ ಮೀಸೆಗಳಿದ್ದವು. ಈಗವು ಇರಲಿಲ್ಲ. ಮನದೊಳಗೇ ಬ್ಲೇಕನು ಹೇಳಿಕೊಂಡನು— "ಹಾ! ತಿಳಿಯಿತು. ಇದು ರೈಂಡೋಲ್ಫ್ ವೇನಿಂಗನ ಚಿತ್ರ. ಸ್ವಲ್ಪ ಸಮಯದ

ಹಿಂದೆ ಇವನೇ ನ್ಯಾಯಸ್ಥಾನದ ಕಟಾಂಜನದಲ್ಲಿ ನಿಂತು ಸೇಜನ ಪಕ್ಷದಿಂದ ಸಾಕ್ಷ್ಯ ನುಡಿದಿದ್ದನು.''

ಆ ಸಮಯಕ್ಕೆ ಸರಿಯಾಗಿ ಹೋಟಲಿನ ಕೆಲಸಗಾರನೊಬ್ಬನು ಹತ್ತಿರ ಬಂದನು. ಬ್ಲೇಕನು ಅವನನ್ನು ಕರೆದು ಆ ಚಿತ್ರದ ಕಡೆ ಕೈ ತೋರಿಸಿ ಕೇಳಿದನು—''ಯಾರ ಚಿತ್ರವಿದು?''

ಅವನು ಹೇಳಿದನು—''ಅವರೇ ಇಲ್ಲಿಯ ಮುಖ್ಯ ಯಜಮಾನರಾದ ಮಿಸ್ಟರ್ ಹೆಡ್‌ಕೂಂಬರು ಸ್ವಾಮೀ!''

ಬ್ಲೇಕನು ಕುರ್ಚಿಯಿಂದೆದ್ದು ನಿಂತು ಸುಮ್ಮನೆ ಅತ್ತಿತ್ತ ತಿರುಗಾಡತೊಡಗಿದನು. ಅಕ್ಕಪಕ್ಕದಲ್ಲಿದ್ದ ಯಾರಿಗೂ ಬ್ಲೇಕನ ಮೇಲೆ ಗಮನವಿರಲಿಲ್ಲ. ಬ್ಲೇಕನು ಅತ್ತಿತ್ತ ನೋಡಿ ಸೆಟ್ಟಗೆ ಆ ಕೋಣೆಯೊಳಗೆ ಹೋಗಿ, ಆ ಚಿತ್ರವನ್ನೇ ಪುನಃ ನಟ್ಟ ದೃಷ್ಟಿಯಿಂದ ನೋಡಿದನು. ಈಗ ಎಲ್ಲಾ ಸಂಶಯ ನಿವಾರಣೆಯಾಯಿತು. ಕೌಂಡೇಲ್ ಹೆಡ್‌ಕೂಂಬ್ ಮತ್ತು ರೈಂಡೋಲ್ಫ್ ವೇನಿಂಗ್ ಇವೆರಡು ಹೆಸರು ಒಂದೇ ವ್ಯಕ್ತಿಯವೆಂದು ನಿಶ್ಚಯವಾಯಿತು. ಕಿಟಕಿಯ ಪಕ್ಕದಲ್ಲಿದ್ದ ಮೇಜಿನ ಮೇಲೆ ಕೆಲವು ಕಾಗದ ಪತ್ರಗಳಲ್ಲದೆ ಐದಾರು ಭೂಪಟಗಳೂ ಬಿದ್ದಿದ್ದವು. ಅವುಗಳ ಮೇಲಿನ ಗಿಲೆಟ್ಟನ ಲೇಬಲನ್ನು ನೋಡಿದ ಮೇಲಂತೂ ಗಿಲೆಟ್ಟನ ಅಂಗಡಿಯವನಿಂದಲೇ ಕೊಂಡುಕೊಂಡ ಭೂಪಟಗಳಿವು ಎಂದು ನಿಶ್ಚಯವಾಯಿತು.

ಆ ಕೋಣೆಯಲ್ಲಿ ನೋಡಬೇಕಾದ ಇನ್ನೇನೂ ಹೆಚ್ಚಿನ ವಸ್ತುಗಳಿರಲಿಲ್ಲ. ಬ್ಲೇಕನು ಕೋಣೆಯಿಂದ ಹೊರ ಬಂದು ತಾನು ಮೊದಲು ಕುಳಿತ ಸ್ಥಳಕ್ಕೇ ಹೋಗಿ ಸುಮ್ಮನೆ ಕುಳಿತುಕೊಂಡನು. ಸ್ವಲ್ಪ ಹೊತ್ತಿನೊಳಗೇ ಊಟದ ತಟ್ಟೆಯನ್ನು ಹಿಡಿದುಕೊಂಡು ಒಬ್ಬ ಮನುಷ್ಯನು ಬಂದು ಬ್ಲೇಕನೆದುರಿಗಿದ್ದ ಮೇಜಿನ ಮೇಲೆ ಅದನ್ನಿಟ್ಟು ಹೋದನು. ಬ್ಲೇಕನು ನಿಧಾನವಾಗಿ ಊಟ ಮಾಡುತ್ತಾ ವಿಚಾರಚಿಂತೆಯಲ್ಲಿ ಮುಳುಗಿದನು.

ಆ ಹೋಟಲಿನಲ್ಲಿ ಪುಂಡ-ಪೋಕರಿಗಳು ಸೇರುತ್ತಾರೆಂದು ಫೆಂಟನನು ಹೇಳಿದ್ದಾಗಲೇ ಬ್ಲೇಕನು ಊಹಿಸಿದ್ದನು—''ರೇಡಿಯಮ್ಮನ್ನು ಕದ್ದೊಯ್ದ ಕಳ್ಳರು ಮದ್ಯಪಾನಕ್ಕಾಗಿ ಆ ಹೋಟಲಿನಲ್ಲಿ ಸ್ವಲ್ಪ ಹೊತ್ತು ತಂಗಿರಬಹುದು ಎಂದು; ಆದರೆ ಆ ಹೋಟಲಿನ ಯಜಮಾನನೂ ಕೂಡ ಈ ಫಿತೂರಿಯಲ್ಲಿ ಸೇರಿರಬಹುದೆಂದು ಆಗ ಬ್ಲೇಕನು ಸ್ವಲ್ಪವೂ ಶಂಕಿಸಿರಲಿಲ್ಲ. ಈಗ ನೋಡಿದರೆ ಹೋಟಲಿನ ಯಜಮಾನನೂ ಅವರೊಳಗೆ ಸೇರಿದ್ದನೆಂದು ಕಂಡುಬಂದಿತು. ಈ ಹೆಡ್‌ಕೂಂಬನೆಂಬವನೇ ಹಿಂದಿನ ಅಪರಾಧಿಯಾದ ವೇನಿಂಗ

ನಾಗಿದ್ದನು. ಗಿಲೇಟಿನ ಅಂಗಡಿಯಿಂದ ಕೊಂಡುಕೊಂಡು ಬಂದಿರುವ ಭೂಪಟಗಳೂ ಕೂಡ ಇದೇ ಹೋಟಲಿನಲ್ಲಿ ಹಾಜರಿವೆ. ಇದಕ್ಕಿಂತ ಹೆಚ್ಚಿಗೆ ಇನ್ನಾವ ಪ್ರಮಾಣ ಬೇಕು?"

ಬ್ಲೇಕನು ಊಟ ಮಾಡಿ ಮುಗಿಸಿದ್ದನಷ್ಟೆ? ಅಷ್ಟರೊಳಗೇ ಮೇಜರ್ ಡೋಮೋ ಅಥವಾ ಪಾರಡ್ರೀಜನು ಹತ್ತಿರ ಬಂದು ನಿಂತನು. ಸ್ವಲ್ಪ ಹೊತ್ತಿನ ವರೆಗೆ ಬ್ಲೇಕನು ಅವನೊಡನೆ ರಾಜಕೀಯ ವಿಚಾರವಾಗಿ ಮಾತಾಡುತ್ತ ಇದ್ದು, ಅನಂತರ ಊಟದ ಚಾರ್ಜನ್ನು ಕೊಟ್ಟು ಹೇಳಿದನು:— ಒಳ್ಳೇದು. ಮೇಜರ್ ಡೋಮೋ! ರಾತ್ರಿ ಉಳಿದುಕೊಳ್ಳಲು ನನಗೆ ಒಂದು ಒಳ್ಳೆಯ ಕೋಣೆಯ ಏರ್ಪಾಡು ಮಾಡಿರಿ. ಈಗ ನಾನು ಮೋಟರಿನಲ್ಲಿ ಸ್ವಲ್ಪ ಅಲ್ಲಿ-ಇಲ್ಲಿ ತಿರುಗಾಡಿ ಬರುತ್ತೇನೆ."

ಬ್ಲೇಕನು ಹೊರಗೆ ಬಂದು ನೋಡಿದಾಗ ಟಿಂಕರನು ಮೋಟರಿನಲ್ಲಿ ಹಾಜರಿದ್ದನು. ಬ್ಲೇಕನು ಮೋಟರನ್ನು ಹತ್ತಿ ಕುಳಿತುಕೊಂಡನು. ಮೋಟರು ಅಲ್ಲಿಂದ ವೇಗವಾಗಿ ಹೊರಟಿತು. ಸ್ವಲ್ಪ ದೂರ ಹೋದನಂತರ ಬ್ಲೇಕನು ಹೋಟಲಿನೊಳಗೆ ತಾನು ಕಂಡ ವಿಚಾರವನ್ನೆಲ್ಲ ಟಿಂಕರನಿಗೆ ತಿಳಿಸಿದನು. ಟಿಂಕರನು ಹೇಳಿದನು:—"ನೀವು ಹೋಟಲಿನೊಳಗೆ ಹೋದ ನಂತರ ನಾನು ಸುಮ್ಮನೆ ಕುಳಿತಿರಲಿಲ್ಲ. ಗ್ಯಾರೇಜಿಲ್ಲಿ ಒಬ್ಬ ಹಳೆಯ ಡ್ರೈವ್ಹರನು ನನ್ನ ಜೊತೆಗೆ ಮಾತನಾಡಲು ಸಿಕ್ಕಿದ್ದನು. ಆತನು ಮಿ. ಹೆಡ್‌ಕೂಂಬಳನ್ನು ಗೌರವ ದೃಷ್ಟಿಯಿಂದ ನೋಡುತ್ತಾನೆ. ಯಾಕಂದರೆ, ಆ ಡ್ರೈವರನ ಹೆಂಡತಿಯು ರೋಗಗ್ರಸ್ತಳಾಗಿ ಕಂಗಾಲಾಗಿದ್ದಾಗ ಮಿ. ಹೆಡ್‌ಕೂಂಬಳು ಆ ರೋಗಿಯ ಶುಶ್ರೂಷೆಯನ್ನು ಚೆನ್ನಾಗಿ ನಡೆಸಿದ್ದಳು. ಹೆಡ್‌ಕೂಂಬನ ವ್ಯವಹಾರವು ಆ ಡ್ರೈವರನಿಗೆ ಸ್ವಲ್ಪವೂ ರುಚಿಸಿಲ್ಲ. ಹೆಡ್‌ಕೂಂಬನು ತನ್ನ ಹೆಂಡತಿಯೊಡನೆ ಗೌರವಾದರದಿಂದ ವರ್ತಿಸುತ್ತಿಲ್ಲವೆಂದು ಆತನೇ ಹೇಳಿದನು. ಇನ್ನು ಒಂದು ಹೊಸ ಸುದ್ದಿಯು ದೊರಕಿದೆ. ಹೊಸ ಫರೇಲೀ ಟೈರನ್ನು ಹಾಕಿದ್ದ ಒಂದು ಇಟಾಲಿಯಾ ಮೋಟರು ಆ ಗ್ಯಾರೇಜಿನಲ್ಲಿ ಎರಡು ದಿನ ನಿಂತಿದ್ದಿತು. ಅದರ ಬಣ್ಣವು ನೀಲಿ."

ಬ್ಲೇಕನು ರಾತ್ರಿಯಾಗುವವರೆಗೆ ಅಲ್ಲಿ-ಇಲ್ಲಿ ಸುತ್ತಾಡಿ, ಆ ಮೇಲೆ ಮೋಟರನ್ನು ಗ್ಯಾರೇಜಿನಲ್ಲಿ ನಿಲ್ಲಿಸಲು ಹೇಳಿ, ಹೋಟಲಿನೊಳಗೆ ಹೊಕ್ಕು, ತನ್ನ ಕೋಣೆ ಯಾವುದೆಂದು ವಿಚಾರಿಸಿಕೊಂಡು, ಅಲ್ಲಿಗೆ ಹೋಗಿ ವಿಶ್ರಮಿಸಿದನು.

# (೮)

ಬ್ಲೇಕನು ಥಟ್ಟನೆ ಹಾಸಿಗೆಯಿಂದೆದ್ದು ಕುಳಿತನು. ಆಕಸ್ಮಾತ್ತಾಗಿ ಪಕ್ಕದ ಕೋಣೆಯಲ್ಲಿ ಯಾರೋ ನರಳುತ್ತಿರುವ ಶಬ್ದವಾಗುತ್ತಿದ್ದಿತು. ಅದರಿಂದ ಬ್ಲೇಕನು ಎಚ್ಚರವಾದನು. ಗಡಿಯಾರವನ್ನು ನೋಡಿದನು. ರಾತ್ರಿ ಮೂರೂವರೆ ಗಂಟೆಯಾಗಿದ್ದಿತು. ಮನೆಯೊಳಗೆ ಎಲ್ಲ ಕಡೆಗಳಲ್ಲಿಯೂ ನಿಶ್ಶಬ್ದತೆಯು ಕವಿದಿತ್ತು.

ಪುನಃ ಮತ್ತೊಂದು ಸಾರಿ ಪಕ್ಕದ ಕೋಣೆಯಿಂದ ನರಳುವ ಶಬ್ದವಾಯಿತು. ಅದರ ಜೊತೆಗೇ ಒಬ್ಬ ಹೆಂಗಸು ಮೆಲ್ಲನೆ ಮಾತಾಡುತ್ತಿರುವದೂ ಕೇಳಿಸಿತು. ಬ್ಲೇಕನು ಥಟ್ಟನೆ ಎದ್ದು ನಿಂತು, ತನ್ನ ಡ್ರೆಸ್ಸಿಂಗ್ ಗೌನನ್ನು ಧರಿಸಿಕೊಂಡನು. ಬಾಗಿಲನ್ನು ಮೆಲ್ಲನೆ ತೆರೆದು ಹೊರಗೆ ಇಣಿಕಿ ಶಬ್ದವನ್ನು ಆಲೈಸಿದನು. ಪಕ್ಕದ ಕೋಣೆಯ ಬಾಗಿಲು ಮುಚ್ಚಿದ್ದಿತು. ಆದರೂ ಬಾಗಿಲ ಸಂದಿನಿಂದ ಕೋಣೆಯೊಳಗಿನ ಬೆಳಕು ಹೊರಗೆ ಬರುತ್ತಿತ್ತು.

ಬ್ಲೇಕನು ತನ್ನ ಕೋಣೆಯಿಂದ ಮೆಲ್ಲನೆ ಹೊರಟು ಆ ಕೋಣೆಯ ಬಾಗಿಲಿನ ಬಳಿಗೆ ಹೋದನು ನಿಶ್ಶಬ್ದವಾಗಿ ಬಾಗಿಲಿನ ಸಂದಿನಲ್ಲಿ ಕಣ್ಣನ್ನಿಟ್ಟು ಕೋಣೆಯೊಳಗಿನ ಸ್ಥಿತಿಯನ್ನು ತಿಳಿಯಲು ಪ್ರಯತ್ನಿಸಿದನು. ಒಬ್ಬ ಪುರುಷನು ಮಂಚದ ಮೇಲೆ ಮಲಗಿದ್ದನು. ಆತನ ಮುಖವು ವಿಶೇಷವಾಗಿ ಕಳೆಗುಂದಿದ್ದಿತು. ಇತ್ತೀಚೆಗೆ ಮಿಸ್ಟರ್ ಹೆಡ್‌ಕೂಂಬನೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ವೇನಿಂಗನೇ ಆ ಪುರುಷನಾಗಿದ್ದನು. ಅವನ ಹೆಂಡತಿಯು ಹತ್ತಿರವೇ ಬಗ್ಗಿ ನಿಂತಿದ್ದಳು.

ಇಷ್ಟನ್ನು ತಿಳಿದುಕೊಂಡ ನಂತರ ಬ್ಲೇಕನು ಬಾಗಿಲನ್ನು ಮೆಲ್ಲನೆ ದೂಡಿ ಆ ಕೋಣೆಯೊಳಗೆ ಪ್ರವೇಶಿಸಿದನು.

ಆಕಸ್ಮಾತ್ತಾಗಿ ಅಷ್ಟು ರಾತ್ರಿಯಲ್ಲಿ ತಾನಾಗಿ ಪ್ರವೇಶಿಸಿದ್ದ ಆ ಅಪರಿಚಿತ ಮನುಷ್ಯನನ್ನು ಕಂಡು ಆ ಹೆಂಗಸು ಗಾಬರಿಯಾಗಿ ಬ್ಲೇಕನನ್ನು ನೋಡತೊಡಗಿದಳು. ಬ್ಲೇಕನನ್ನು ಒಂದು ಸಾರೆ ಅವಳು ಹಿಂದಿನ ದಿನವೇ ನೋಡಿದ್ದಳು.

ತಬ್ಬಿಬ್ಬಾಗಿ ಬಾಯ್ಬಿಟ್ಟು ನೋಡುತ್ತಿರುವ ಅವಳನ್ನು ಕಂಡು ಬ್ಲೇಕನು ಸಮಾಧಾನಗೊಳಿಸುವ ಸ್ವರದಿಂದ ಮಾತಾಡಿದನು—"ಏನಮ್ಮಾ! ಗಾಬರಿ ಪಡಬೇಡ. ಪಕ್ಕದ ಕೋಣೆಯಲ್ಲಿ ಮಲಗಿದ್ದ ನನಗೆ ಇಲ್ಲಿ ನರಳುವ ಶಬ್ದ ಕೇಳಿಸಿತು. ಆದರಿಂದ ಎಚ್ಚರವಾಗಿ ಎದ್ದು ಬಂದೆನು. ಇವನು ನಿನ್ನ ಗಂಡನಿರಬಹುದು, ಅಲ್ಲವೇ? ಇವನ ದೇಹಾರೋಗ್ಯವು ಬಹಳ ಕೆಟ್ಟುಹೋಗಿರುವಂತೆ ಕಾಣಿಸುತ್ತಿದೆ. ಹಾ! ಇದೇನು?"

ಅಕಸ್ಮಾತ್ತಾಗಿ ಬ್ಲೇಕನ ತೀಕ್ಷ್ಣದೃಷ್ಟಿಯು ಮಲಗಿದ್ದ ಮನುಷ್ಯನ ಬಲಗಾಲಿನ ಹಿಂಬಡದ ಮೇಲೆ ಬಿದ್ದಿತು. ಕೆಂಪಾದ ರಕ್ತದ ಕಲೆಹತ್ತಿದ್ದಿತು. ಅದರಿಂದ ಆ ಮನುಷ್ಯನು ಎಲ್ಲಿಯೋ ಬಲವಾಗಿ ಗಾಯಹೊಂದಿದ್ದಾನೆಂದು ತಿಳಿದು ಬಂದಿತು.

ಬ್ಲೇಕನ ಮಾತಿನಿಂದ ಮೆ. ಹೆಡ್‌ಕೊಂಬಳು ಇನ್ನೂ ಬೆಚ್ಚಿಬಿದ್ದಳು! ತಡಪಡಿಸುತ್ತ ಉತ್ತರ ಹೇಳಿದಳು--"ಹೌದು, ಇವನು ನನ್ನ ಗಂಡ. ಏನೋ ಒಂದು ದುರ್ಘಟನೆಗೆ ಇವನು ಸಿಲುಕಿದನು; ಆದರೆ ಇದಕ್ಕಾಗಿ ಈಗ ಡಾಕ್ಟರರನ್ನು ಕರೆಯಲಿಚ್ಛಿಸುವದಿಲ್ಲ. ಇದರ ಚಿಕಿತ್ಸೆಯನ್ನು ತಕ್ಕಮಟ್ಟಿಗೆ ನಾನೇ ಮಾಡಬಲ್ಲೆನು; ಯಾಕೆಂದರೆ, ನಾನು ಬಹು ಕಾಲ ನರ್ಸಾಗಿದ್ದೆನು. ಇರಲಿ. ಆದರೆ ನೀವು................"

ಅವಳ ಮಾತನ್ನು ಮುಂದುವರಿಯಲವಕಾಶಕೊಡದೆ ಬ್ಲೇಕನು ಹೇಳಿದನು:--"ಮತ್ತು ನಾನೂ ಕೂಡ ಬಹಳ ಕಾಲದ ವರೆಗೆ ಡಾಕ್ಟರನಾಗಿಯೇ ಇದ್ದೆನು. ಇತ್ತೀಚೆಗೇನೋ ಕೆಲವು ಸಮಯದಿಂದ ಆ ಉದ್ಯೋಗವನ್ನು ಬಿಟ್ಟಿರುವೆನು; ಆದರೂ ಕೂಡ ನಾನು ಈ ಕಾರ್ಯದಲ್ಲಿ ನಿನಗೆ ತಕ್ಕಷ್ಟು ಸಹಾಯ ಮಾಡಬಲ್ಲೆನು"

ಸ್ವಲ್ಪ ಹೊತ್ತು ಮೆ. ಹೆಡ್‌ಕೊಂಬಳು ಬ್ಲೇಕನ ಮುಖವನ್ನು ಸಂದಿಗ್ಧ ದೃಷ್ಟಿಯಿಂದ ನೋಡುತ್ತ ನಿಂತಳು. ಹಾಗೆ ನೋಡಿ ಬ್ಲೇಕನ ಹೃದಯ ಭಾವವನ್ನರಿತು, ಸ್ವಲ್ಪ ಧೈರ್ಯವನ್ನವಲಂಬಿಸಿ ಹೇಳಿದಳು: "ಯಾವುದೋ ಮೋಟಾರು ದುರ್ಘಟನೆಯಿಂದಲೇ ಈ ದುರ್ಗತಿಯೊದಗಿತೆಂದು ಇವನು ಹೇಳುತ್ತಾನೆ. ಇಷ್ಟು ಹೊತ್ತಿನ ವರೆಗೆ ನನಗೆ ಇವನ ಗಾಯವನ್ನು ನೋಡಲು ಅವಕಾಶವಾಗಲಿಲ್ಲ."

ಬ್ಲೇಕನು ಅವಳ ಮಾತಿಗೇನೂ ಉತ್ತರ ಕೊಡಲಿಲ್ಲ. ಈಗ ಬ್ಲೇಕನು ಹೆಡ್‌ಕೊಂಬನ ಬಟ್ಟೆಯನ್ನು ಬಿಚ್ಚುವುದರಲ್ಲಿ ತಲ್ಲೀನನಾಗಿದ್ದನು.

ಬ್ಲೇಕ್ ಹೇಳಿದನು--"ಕತ್ತರಿ, ಸ್ವಲ್ಪ ಬಿಸಿನೀರು, ಡ್ರೆಸ್ಸಿಂಗ್ ಬಟ್ಟೆ ಇವುಗಳನ್ನು ತೆಗೆದುಕೊಂಡು ಬಾ. ಗಾಯವು ವಿಷಮಾವಸ್ಥೆಗಿಟ್ಟಿದೆ."

"ಈಗಲೇ ತರುತ್ತೇನೆ" ಎಂದು ನುಡಿದು ಮೆ. ಹೆಡ್‌ಕೊಂಬಳು ಕೋಣೆಯಿಂದ ಹೊರಗೆ ಹೋದಳು.

ಅವಳು ತಿರುಗಿ ಬರುತ್ತಲೇ ಬ್ಲೇಕನು --"ಇವನಿಗೆ ಜ್ವರವೂ ಬಹಳ ಬಂದಿದೆ. ಗಾಯದಿಂದ ಬಹಳ ರಕ್ತವು ಸುರಿದು ಹೋಗಿದೆಯೆಂದು ಕಾಣಿಸುತ್ತದೆ. ಒಳ್ಳೇದು. ಇನ್ನು ಶೀಘ್ರದಲ್ಲಿಯೇ ಗಾಯದ ವಿವರ ತಿಳಿಯುವುದು."

ಹೀಗೆ ಹೇಳಿ ಬ್ಲೇಕನು ಕೂಡಲೆ ಗಾಯುವಾದ ಸ್ಥಳದ ನಾಲ್ಕೂ ಕಡೆಯು ಬಟ್ಟೆಯನ್ನು ಕತ್ತರಿಯಿಂದ ಮೆಲ್ಲನೆ ಕತ್ತರಿಸಿದನು; ಯಾಕೆಂದರೆ, ಆ ಬಟ್ಟೆಯು ಗಾಯದೊಡನೆ ಅಂಟಿಕೊಂಡಿದ್ದಿತು ಅನಂತರ ಬ್ಲೇಕನು ಬೀಸಿನೀರು ಮತ್ತು ಬಟ್ಟೆಯನ್ನು ತೆಗೆದುಕೊಂಡು ಗಾಯದ ಡ್ರೆಸ್ಸಿಂಗ್ ಮಾಡತೊಡಗಿದನು. ಬ್ಲೇಕನು ಮಾಡುವ ಕಾರ್ಯವನ್ನು ನಿಂತು ನೋಡುತ್ತಿದ್ದ ಮೆ. ಹೆಡ್ ಕೂಂಬಳಿಗೆ ಇವನೊಬ್ಬ ಚತುರ ಡಾಕ್ಟರನಿರುವನೆಂಬ ವಿಷಯದಲ್ಲಿ ಸ್ವಲ್ಪವೂ ಸಂಶಯುವುಳಿಯಲಿಲ್ಲ.

ಡ್ರೆಸ್ಸಿಂಗ್‌ಮಾಡುತ್ತಿದ್ದ ಬ್ಲೇಕನು ನಿಧಾನವಾಗಿ ಹೇಳಿದನು:-"ಚೆನ್ನಾಗಿದೆ. ನೀವು ಇದನ್ನು ಮೋಟಾರ ದುರ್ಘಟನೆ ಎಂದು ಹೇಳುತ್ತೀರಿ! ಆದರೆ ಮೆ. ಹೆಡ್‌ಕೂಂಬ್! ಗುಂಡಿನಿಂದಾದ ಗಾಯುವನ್ನು ನೋಡುವ ಸಂದರ್ಭಗಳು ನನ್ನ ಜೀವನದಲ್ಲಿ ಇಷ್ಟರವರೆಗೆ ಎಷ್ಟೋ ಬಂದು ಹೋಗಿವೆ ತಿಳಿಯಿತೇ? ಹಾಗೆ ಈ ಗಾಯುವೂ ಕೂಡ ಅವುಗಳಲ್ಲೊಂದಾಗಿದೆ. ಒಳ್ಳೇದು. ಇಗೋ ನೋಡು, ಸ್ವಲ್ಪ ಎಚ್ಚತ್ತಿರುತ್ತಾನೆ"

ಹೆಡ್‌ಕೂಂಬನು ಕ್ರಮವಾಗಿ ಎಚ್ಚರಗೊಂಡನು. ಅವನು ಒಂದು ಸಾರೆ ಹತ್ತಿರವಿದ್ದ ಬ್ಲೇಕನ ಮುಖದ ಕಡೆಗೆ ನೋಡಿ, ಅನಂತರ ತನ್ನ ಹೆಂಡತಿಯನ್ನು ನೋಡುತ್ತ ಹೇಳಿದನು—"ಏನು ಹೇಳಲಿ ಪ್ರಿಯೆ! ಆ ಮೋಟಾರಿನ ಪುಂಡರು ನನಗೆ ಗುಂಡುಹಾರಿಸಿದರು."

ಇಷ್ಟುಮಾತನ್ನು ಹೇಳಿ ಅವನು ಭಯಗ್ರಸ್ತದೃಷ್ಟಿಯಿಂದ ಬ್ಲೇಕನನ್ನು ನೋಡಿ "ತಾವ್ಯಾರು?" ಎಂದು ಕೇಳಿದನು.

ಬ್ಲೇಕ್—"ನಾನೊಬ್ಬ ಡಾಕ್ಟರನಿರುವೆನು. ಈ ಸಮಯದಲ್ಲಿ ನಾನು ಇದೇ ಹೋಟಲಿನಲ್ಲಿ ವಾಸವಿದ್ದೇನೆ. ನಿಜವಾಗಿ ಹೇಳಿದಿರಿ ನೀವು. ನಿಮಗೆ ಗುಂಡು ತಗಲಿದೆ; ಆದರೆ ಗಾಯುವು ಅಷ್ಟೇನೂ ಹೆಚ್ಚಿನದಾಗಿರುವದಿಲ್ಲ; ಆದರೂ ಕೂಡ ಗಾಯದೊಳಗಿಂದ ಗುಂಡನ್ನೀಗ ಹೊರತೆಗೆಯಬೇಕಾದುದು ಅಗತ್ಯವಾಗಿದೆ. ಆದ್ದರಿಂದ ನಿಮ್ಮನ್ನೀಗ ಆದಷ್ಟು ಬೇಗನೆ ಆಸ್ಪತ್ರೆಗೊಯ್ಯುವುದು ಅತ್ಯಾವಶ್ಯಕವೆನಿಸಿದೆ."

ಹೆಡ್‌ಕೂಂಬನು ಕೂಡಲೆ ಕಿರುಚಿಕೊಂಡು:-"ಬೇಡ-ಬೇಡ ಸ್ವಾಮೀ! ನಾನು ಇಲ್ಲಿಂದ ಹೊರಗೆ ಹೊರಡಲಾರೆ."

ಬ್ಲೇಕ್—"ಆದರೆ ನಾನು ಮಾತ್ರ ಈ ಭಯಂಕರ ದುರ್ಘಟನೆಯ ಸುದ್ದಿಯನ್ನು ಪೋಲೀಸರಿಗೆ ಕೂಡಲೆ ತಿಳಿಸಬೇಕಾಗುವದು."

ಹೆಡ್‌ಕೂಂಬನ ಮುಖವು ಅಂಜಿಕೆಯಿಂದ ಇನ್ನೂ ಕಪ್ಪಿಟ್ಟಿತು. ಅವನು

ಹಾಸಿಗೆಯಿಂದ ಏಳಲಿಚ್ಛಿಸಿದನು; ಆದರೆ ಬ್ಲೇಕನು ಅವನನ್ನು ಅಮುಕಿ ಹಿಡಿದು, ಮೊದಲಿನಂತೆ ಹಾಸಿಗೆಯ ಮೇಲೆ ಮಲಗಿಸಿ ಹೇಳಿದನು:-"ಸುಮ್ಮನೆ ಮಲಗಿಕೊಳ್ಳಿರಿ. ಹಾಗಿಲ್ಲದೆ ಎದ್ದು ನಿಂತರೆ, ಪುನಃ ಗಾಯದಿಂದ ರಕ್ತವು ಸುರಿಯತೊಡಗಿ, ನಿಮ್ಮ ಪ್ರಾಣವುಳಿಯುವದಕ್ಕೇ ತೊಂದರೆ ಬಂದೀತು. ತಿಳಿಯಿತೇ? ಇರಲಿ. ನಾನು ಪೋಲೀಸರಿಗೆ ತಿಳಿಸುವೆನೆಂದು ಹೇಳಿದುದಕ್ಕಾಗಿ ನೀವು ಇಷ್ಟು ಹತಾಶರಾಗುವ ಕಾರಣವೇನು?"

ಹೆಡ್‌ಕೂಂಬನು ಚಡಪಡಿಸುತ್ತಾ ಹೇಳಿದನು—"ತಾವು ಹಾಗೆಲ್ಲಾದರೂ ತಿಳಿಸಿದರೆ, ಪೋಲೀಸರು ನನ್ನನ್ನು ಈ ಸಲ ಎಂದಿಗೂ ಬಿಡಲಾರರು. ಆದಕ್ಕಾಗಿ ಹೇಳುತ್ತಿರುವೆನು."

ಬ್ಲೇಕನು ಈಗ ತನ್ನ ದೃಷ್ಟಿಯನ್ನು ಮಿ. ಹೆಡ್‌ಕೂಂಬಳ ಕಡೆಗೆ ತಿರುಗಿಸಿದನು. ಅವಳೀಗ ಭಯದಿಂದ ನಡುಗುತ್ತಿದ್ದಳು. ಬ್ಲೇಕನು ಅವಳನ್ನು ಕುರಿತು ಹೇಳಿದನು -"ಇವನೊಬ್ಬ ಹಿಂದಿನ ಅಪರಾಧಿ, ಮಿ. ಹೆಡ್‌ಕೂಂಬ್! ಇವನ ಪ್ರಾಚೀನ ಜೀವನದ ಹೆಚ್ಚಿನ ಕಥೆಯನ್ನೆಲ್ಲಾ ನಾನು ಮುಂಚೆಯೇ ಅರಿತಿರುವೆನು."

ಹೆಡ್‌ಕೂಂಬನ ಕಡೆಗೆ ತಿರುಗಿ ಹೇಳಿದನು-"ಕೇಳು. ವೇನಿಂಗ್, ನೀನು ಆ ರೇಡಿಯಮ್ ಕಳವಿನ ವಿಚಾರದಲ್ಲಿನ ಎಲ್ಲಾ ಗುಟ್ಟನ್ನೂ ಮುಚ್ಚುಮರೆಯಿಲ್ಲದೆ ನನಗೀಗ ವಿವರವಾಗಿ ತಿಳಿಸುವಿಯಾದರೆ, ನಾನು ಪ್ರತಿಜ್ಞೆಮಾಡಿ ಹೇಳಬಲ್ಲೆನು—ನಿನ್ನ ಗುಟ್ಟನ್ನು ಎಂದಿಗೂ ಹೊರಗೆಡಹುವುದಿಲ್ಲ. ನಾನು ಯಾರೆಂಬದನ್ನು ನೀನೀಗ ಗುರುತಿಸಿದೆಯಾ?"

ಇಷ್ಟು ಮಾತನ್ನು ಹೇಳಿ ಬ್ಲೇಕನು ತನ್ನ ಮುಖವನ್ನು ಗೋಡೆಯ ಕಡೆಗೆ ತಿರುಗಿಸಿ, ಮುಖದ ಮೇಲಿದ್ದ ಒಂದು ತೆಳುವಾದ ಪರದೆಯನ್ನು ತೆಗೆದನು; ಮತ್ತು ಹಲ್ಲುಗಳಿಗೆ ಸಿಕ್ಕಿಸಿಕೊಂಡಿದ್ದ ರಬ್ಬರ್ ತುಂಡನ್ನೂ ತೆಗೆದನು; ಅನಂತರ ಹೆಡ್‌ಕೂಂಬನ ಕಡೆಗೆ ನೋಡಿ ನಸುನಕ್ಕನು.

ಬ್ಲೇಕನ ಮುಖವನ್ನು ಈಗ ಸ್ಪಷ್ಟವಾಗಿ ನೋಡಿದೊಡನೆ ಅವನು ಇನ್ನೂ ಹೆಚ್ಚು ಹೆದರಿ ಗಡಗಡನೆ ನಡುಗತೊಡಗಿದನು ಹೇಳಿದನು:"ಹೌದು, ಸೇಜನ ಮೊಕದ್ದಮೆಯ ಸಮಯದಲ್ಲಿ ನಾನು ತಮ್ಮನ್ನು ನೋಡಿದ್ದೆನು. ತಮ್ಮ ಹೆಸರು ಸ್ಯಾಕ್ಸ್ಟನ್ ಬ್ಲೇಕ್. ತಾವು ಪತ್ತೇದಾರಿಗಳು."

ದೀರ್ಘ ನಿಟ್ಟುಸಿರೊಂದನ್ನು ಬಿಟ್ಟು ಮಿ. ಹೆಡ್‌ಕೂಂಬಳು ದೀನಸ್ವರದಿಂದ ಹೇಳಿದಳು—"ಅಯ್ಯೋ! ಕೊನೆಗೂ ಆ ದಿನವು ಈಗಲೇ ಬಂದು ಬಿಟ್ಟಿತೇ?"

ಬ್ಲೇಕನು ಹೆಡ್‌ಕೂಂಬನಿಗೆ ಹೇಳಿದನು—"ನಾನು ಏನೇನು ತಿಳಿಯಬೇಕೆಂದಿರುವೆನೋ ಅದೆಲ್ಲವನ್ನೂ ನೀನು ಈಗ ತಿಳಿಸುವೆಯಾದರೆ, ನನ್ನ ಕೈಲಾದ ಪ್ರಯತ್ನವನ್ನೆಲ್ಲಾ ಮಾಡಿ ನಿನ್ನನ್ನು ಆ ಪುಂಡರ ಕೈಯಿಂದ ಬಿಡಿಸಿ ರಕ್ಷಿಸುವೆನು. ಇದನ್ನೇ ಅಲ್ಲವೇ ನೀನೀಗ ಬಯಸುತ್ತಿರುವುದು? ನೀನು ಅವರಿಗೆ ಮೋಸ ಮಾಡಿರುವೆ."

ನಡುಗುವ ಸ್ವರದಿಂದ ಹೆಡ್‌ಕೂಂಬನು ಹೇಳಿದನು--"ಹೌದು-ಹೌದು, ತಮಗೆ ನಾನು ಬೆಂಬಲವೀಯುವೆನು; ಆದರೆ ತಾವೂ ಕೂಡ ಖಂಡಿತವಾಗಿ.... ....ಆ....ಪುಂಡರ ಉಪಟಳದಿಂದ ನನ್ನನ್ನು ಕಾಪಾಡಬೇಕು. ಮುಂದೆ ನಾನು ಒಳ್ಳೆಯ ದಾರಿಯಲ್ಲಿದ್ದು, ಸಾಧು ಜೀವನವನ್ನು ನಡೆಯಿಸಬೇಕೆಂದಿರುವೆನು. ಆದರೆ....ಆದರೆ...."

ಇಷ್ಟು ಮಾತನ್ನು ಹೇಳುತ್ತಿದ್ದಾಗಲೇ ಹೆಡ್‌ಕೂಂಬನ ಮಾತು ನಿಂತು ಕಣ್ಣು ಮುಚ್ಚಿದವು. ಸಂಜ್ಞಾರಹಿತನಾದನು!

ಮೆ. ಹೆಡ್‌ಕೂಂಬಳು ನಿರಾಶಾಪೂರ್ಣವಾದ ದೃಷ್ಟಿಯಿಂದ ಬ್ಲೇಕನ ಮುಖವನ್ನು ನೋಡುತ್ತಾ ಹೇಳಿದಳು—'ನಾನು ಇವನ ಮಾತಿನ ಮೇಲೆ ನಂಬಿಕೆಯುಳ್ಳವಳಾಗಿರುತ್ತೇನೆ, ಸ್ವಾಮೀ! ತಾವು ಹೇಗಾದರೂ ಮಾಡಿ ಆ ಪುಂಡ-ಪೋಕರಿಗಳಿಂದ ಇವನನ್ನು ಉಳಿಸಿಕೊಡೋಣಾಗಲಿ."

ಬ್ಲೇಕ್— "ನಾನು ಹೀಗೆ ಮಾಡುವುದು ಒಂದುವಿಧದಲ್ಲಿ ದುಷ್ಟರೊಡನೆ ಸೇರಿದಂತೆಯೇ ಆಗುವುದು; ಆದರೂ ಕೂಡ ಈಗ ಕೇವಲ ನಿನಗಾಗಿ ಏನು ಬೇಕಾದರೂ ಮಾಡಲು ಸಿದ್ಧನಿರುವೆನು; ಆದರೆ ಮುಂದಾದರೂ ಕೂಡ ಈತನು ಸುಧಾರಿಸುವನೆಂದು ಯಾರು ಹೇಳಬಲ್ಲರು? ಇನ್ನಿವನು ಒಂದು ಗಂಟೆಯ ಕಾಲ ಎಚ್ಚರಗೊಳ್ಳಲಾರನು. ಒಳ್ಳೇದು. ಇವನಿಗೆ ಕ್ಲೋರೋಫಾರ್ಮನ್ನು ಕೊಡಬಲ್ಲೆಯಾ? ಆಸ್ಪತ್ರೆಯಲ್ಲಿ ನೀನು ಬಹುಕಾಲ ನರ್ಸಳ ಉದ್ಯೋಗವನ್ನು ಮಾಡಿರುವಿಯಷ್ಟೆ?"

ಮೆ. ಹೆಡ್‌ಕೂಂಬ್—"ಯಾಕಾಗದು? ಹೇಗಾದರೂ ಮಾಡಿ ನೀವು ಇವನ ಜೀವವನ್ನುಳಿಸುವಿರಾದರೆ ನಾನು ಯಾವುದಕ್ಕೂ ಸಿದ್ಧಳಿರುವೆನು."

ಬ್ಲೇಕ್—"ಆದರೆ ಈಗ ನಿಶ್ಚಯವಾಗಿ ಯಾವುದನ್ನೂ ಹೇಳಲಾರೆನು. ಈಗ ನಾನು ಬಹು ಬೇಗನೆ ಹೋಗಿ ನನ್ನ ಸ್ನೇಹಿತನಾದೊಬ್ಬ ಡಾಕ್ಟರನನ್ನು ಕರೆತರುವೆನು. ಅಷ್ಟರವರೆಗೆ ನೀನಿಲ್ಲಿ ಜಾಗರೂಕತೆಯಿಂದಿರುವುದಲ್ಲದೆ, ಈ ಸುದ್ದಿಯನ್ನು ಹೋಟಲಿನ ಇನ್ನಾವ ಜನರಿಗೂ ತಿಳಿಸಬಾರದು. ಯಾಕಂದರೆ ಈ ಹೋಟಲಿನ ಜನಗಳಲ್ಲಿ ವಿಶ್ವಾಸವಿಡಲು ಯೋಗ್ಯರಾದಂತಹರು ಯಾರೂ

ಇಲ್ಲ. ಅವರೊಳಗೂ ಮುಖ್ಯವಾಗಿ ಪಾರಟ್ರೀಜನ ಮೇಲೆ ಸ್ವಲ್ಪವೂ ನಂಬಿಕೆ ಯಿಡಬಾರದು.''

ಮೆ. ಹೆಡ್‌ಕೂಂಬ್– ''ಒಳ್ಳೇದು. ಅಷ್ಟರವರೆಗೆ ನಾನು ಇಲ್ಲಿಯೇ ಕಾದಿರುವೆನು. ತಾವು ಸಾಧ್ಯವಾದಷ್ಟು ಬೇಗನೆ ಹಿಂದಿರುಗಿ ಬರೋಣಾಗಲಿ.''

ಬ್ಲೇಕನು ಕೂಡಲೆ ಅಲ್ಲಿಂದ ಹೊರಗೆ ಬಂದು ಟಿಂಕರನ ಜೊತೆಗೆ ತನ್ನ ಸ್ನೇಹಿತನಾದ ಡಾಕ್ಟರ್ ಡಾಬನೆಯ ಬಳಿಗೆ ಹೋದನು.

ಒಬ್ಬ ಅಪರಾಧಿ ಮನುಷ್ಯನಿಗೆ ಈ ರೀತಿಯಾಗಿ ರಹಸ್ಯವಿಧಾನದಲ್ಲಿ ಚಿಕಿತ್ಸೆ ನಡೆಸಲು ಮೊದಮೊದಲು ಡಾಕ್ಟರ್ ಡಾಬನೆ ಒಪ್ಪಲಿಲ್ಲ; ಯಾಕೆಂದರೆ ಅಪರಾಧಿಯು ಒಂದು ವೇಳೆ ಮೃತನಾಗಿಬಿಟ್ಟನೆಂದರೆ ಆಗ ಮ್ಯಾಜಿಸ್ಟ್ರೇಟ ನೆದುರಿಗೆ ತಾನೇನು ಉತ್ತರ ಕೊಡುವುದೆಂದು ಅವನಿಗೆ ಭಯವಿದ್ದಿತು; ಆದರೆ ಬ್ಲೇಕನು ಅದರಿಂದ ನಿರಾಶನಾಗದೆ ಕೂಡಲೆ ಹೇಳಿದನು-''ನೋಡಿರಿ, ಮಿಸ್ಟರ್ ಡಾಬನೆ! ಈ ಕೆಲಸವನ್ನು ನಾನೇ ಮಾಡುತ್ತಿದ್ದೆನು. ಆಪರೇಷನ್ ಮಾಡಿ ಒಳ ಹೊಕ್ಕಿರುವ ಗುಂಡನ್ನು ಹೊರ ತೆಗೆಯುವುದು ಅಷ್ಟೇನೂ ಕಠಿಣವಲ್ಲ; ಆದರೆ ಅವನ ಎಪೆಂಡಿಕ್ಸ್ ವಿಶೇಷವಾಗಿ ಉಬ್ಬಿರುವುದು. ಈ ಕೆಲಸವು ಗುಂಡನ್ನು ತೆಗೆಯುವುದಕ್ಕಿಂತ ಕಠಿಣವಿದೆ. ನಾನು ಗುಂಡನ್ನು ಹೊರ ತೆಗೆಯುವೆನು. ನೀವು ಎಪೆಂಡಿಕ್ಸನ್ನು ತೆಗೆಯಿರಿ. ಒಂದು ವೇಳೆ ಅವನಿಗೆ ಮರಣವೇ ಒದಗಿದರೆ, ನಾನು ಮಾಡಿರುವ ಆಪರೇಷನ್ನಿನಿಂದ ಮ್ಯಾಜಿಸ್ಟ್ರೇಟನಿಗೆ ತೃಪ್ತಿಯುಂಟಾಗುವುದು. ಬೇಗನೆ ಹೇಳಿರಿ, ನಿಮ್ಮ ಅಭಿಪ್ರಾಯವೇನು?''

ಡಾಬನೆ ನಿರುಪಾಯನಾಗಿ ಬ್ಲೇಕನೊಡನೆ ಬರಲು ಒಪ್ಪಿದನು. ಅನಂತರ ಆ ಮೂರು ಜನರೂ ಹೋಟಲಿಗೆ ಬಂದರು. ಬಾಗಿಲಿನ ಹತ್ತಿರ ಬಂದೊಡನೆಯೇ ಟಿಂಕರನು ಮೆಲ್ಲನೆ ಹೇಳಿದನು''ಅಗೋ, ಅಲ್ಲಿ ನೋಡಿರಿ; ಆ ಎದುರಿನ ಪೊದರಿನಲ್ಲಿ ಯಾವನೋ ಒಬ್ಬನು ಅಡಗಿ ಕುಳಿತುಕೊಂಡನು. ಅವನು ನಿಶ್ಚಯವಾಗಿ ನಮ್ಮ ಗಮನಾಗಮನವನ್ನು ಹೊಂಚು ಹಾಕಿ ನಿರೀಕ್ಷಿಸುತ್ತಿರುವನು.''

''ನೀನು ಇಲ್ಲಿಯೇ ನಿಂತು ಅವನ ಮೇಲೆ ದೃಷ್ಟಿ ಇಟ್ಟು ನೋಡುತ್ತಿರು" ಎಂದು ಹೇಳಿ, ಬ್ಲೇಕನು ಟಿಂಕರನನ್ನು ಅಲ್ಲಿಯೇ ಕಾವಲಿಗೆ ನಿಲ್ಲಿಸಿ, ಡಾಬನೆಯೊಡನೆ ಹೆಡ್‌ಕೂಂಬನ ಕೋಣೆಗೆ ಹೋದನು.

ಮೆ. ಹೆಡ್‌ಕೂಂಬಳ ಸಹಾಯದಿಂದ ಕೆಲಸವೆಲ್ಲವೂ ಬಲು ಬೇಗನೆ ಪೂರೈಸಿತು. ಬ್ಲೇಕನು ಆಪರೇಷನ್‌ಮಾಡಿ ಗುಂಡನ್ನು ಹೊರತೆಗೆದನು; ಡಾಕ್ಟರ್ ಡಾಬನೆಯು ಎಪೆಂಡಿಕ್ಸನ್ನು ಹೊರತೆಗೆದು, ಅದನ್ನು ಒಂದು ಪಾತ್ರೆಯಲ್ಲಿ ಇಡುತ್ತ ಹೇಳಿದನು:-''ಈ ಮನುಷ್ಯನು ಏನನ್ನು ನುಂಗಿಬಿಟ್ಟದ್ದನೋ

ತಿಳಿಯದು. ಕಲ್ಲಿನಂತೆ ಕಠಿಣವಾದ ಯಾವುದೋ ಒಂದು ವಸ್ತುವು ಈತನ ಎಪೆಂಡಿಕ್ಸಿನಲ್ಲಿ ಇದೆ. ಇದರಿಂದಲೇ ಇವನ ಗತಿಯು ಹೀಗಾಯಿತು.''

ಎರಡೂ ಆಪರೇಷನ್ ಸರಿಯಾಗಿ ಮುಗಿದವು. ಬ್ಲೇಕನು ಎಪೆಂಡಿಕ್ಸಿನ ಪಾತ್ರೆಯನ್ನೆತ್ತಿಕೊಂಡು ಕೈತೊಳೆದುಕೊಳ್ಳುವದಕ್ಕಾಗಿ ಡಾಕ್ಟರನೊಂದಿಗೆ ಪಕ್ಕದ ಕೋಣೆಗೆ ಹೋದನು. ಅಲ್ಲಿ ಎಪೆಂಡಿಕ್ಸನ್ನು ಪರೀಕ್ಷಿಸುತ್ತ, ಡಾಕ್ಟರ್ ಡಾಬನೆಯು ಒಂದು ವಸ್ತುವನ್ನು ಚಿಮಿಟಿಗೆಯ ಮೂಲಕವಾಗಿ ಹೊರತೆಗೆದು ಅದನ್ನು ಅಂಗೈಯಲ್ಲಿ ತೆಗೆದಿಟ್ಟುಕೊಂಡು ನೋಡುತ್ತ ಹೇಳಿದನು:—''ಹಾ! ಇದೇನೋ ಮರಕತ ರತ್ನವಾಗಿ ಕಾಣಿಸುತ್ತದೆ. ಇಂತಹುದು ಅವನ ಹೊಟ್ಟೆಯೊಳಗೆ ಹೋದುದು ಹೇಗೆ? ಆಶ್ಚರ್ಯ!''

ಬ್ಲೇಕನು ಥಟ್ಟನೆ ಅದನ್ನು ತನ್ನ ಕೈಗೆ ತೆಗೆದುಕೊಂಡು ತೀಕ್ಷ್ಣದೃಷ್ಟಿಯಿಂದ ಪರೀಕ್ಷಿಸಿ ಹೇಳಿದನು—''ಊಹುಂ, ಇದು ಮರಕತ ರತ್ನವಲ್ಲ. ವಜ್ರವಿದು. ಇದು ತೂಕದಲ್ಲಿಯೂ ಇಪ್ಪತ್ತೆರಡು ಕ್ಯಾರೆಟ್ಟಿಗೆ ಹೇಗೂ ಕಡಿಮೆಯಾಗದು.''

ಡಾಬನೆ ಸೋಜಿಗದ ಸ್ವರದಿಂದ ಹೇಳಿದನು—''ವಜ್ರ! ಅದರಲ್ಲಿಯೂ ಹಸರು ಬಣ್ಣದ್ದು!''

ಬ್ಲೇಕ್—''ಹೌದು; ಆದ್ದರಿಂದಲೇ ಇದು ಬಲು ಬೆಲೆಯುಳ್ಳದ್ದಾಗಿರುವುದು. ಹಳದೀ ಬಣ್ಣದ ವಜ್ರದ ಬೆಲೆಯು ಬಲು ಕಡಿಮೆಯಾಗಿರುತ್ತದೆ. ಬಿಳೀ ವಜ್ರವು ಹೆಚ್ಚು ಬೆಲೆ ಬಾಳುತ್ತದೆ. ನೀಲಿ ಅಥವಾ ಹಸುರು ಬಣ್ಣದ ವಜ್ರಗಳ ಬೆಲೆಯು ಬಲು ಹೆಚ್ಚು; ಯಾಕೆಂದರೆ ಇವು ದೊರೆಯುವುದು ಬಹಳ ಅಪರೂಪ. ಆದ್ದರಿಂದ ಹೆಚ್ಚಿನ ಬೆಲೆಯುಳ್ಳವುಗಳಾಗಿ ಎಣಿಸಲ್ಪಟ್ಟಿವೆ.''

ಡಾಬನೆ—''ಎಲ್ಲಿಂದಲೋ ಇವನು ಇದನ್ನು ಕದ್ದು ತಂದಿರಬಹುದು. ಗುಟ್ಟುರಟ್ಟಾಗುವ ಅಂಜಿಕೆಯು ಹೆಚ್ಚಾಗಲು ಇದನ್ನು ನುಂಗಿರಬಹುದು. ಹೀಗೆ ಮಾಡಿ ಈ ಮನುಷ್ಯನು ಓಡಿಹೋಗುತ್ತಿದ್ದಾಗಲೇ ಇತರರು ಇವನ ಮೇಲೆ ಗುಂಡನ್ನು ಹಾರಿಸಿರಬಹುದು.''

ಬ್ಲೇಕ್—''ಹಾಗೆಯೇ ಇರುವ ಸಂಭವವಿದೆ. ಒಳ್ಳೇದು. ಈಗ ಈ ವಜ್ರವನ್ನು ನಾನೇ ಹತ್ತಿರವಿಟ್ಟುಕೊಂಡಿರುತ್ತೇನೆ. ಸರಿ. ಇನ್ನೊಂದು ಸಾರೆ ನೀವು ಇವನನ್ನು ನೋಡುವದಕ್ಕಾಗಿ ಇಲ್ಲಿಗೆ ಬಂದು ಹೋಗುವಿರಷ್ಟೆ? ನಾನೊಂದು ತ್ವರಿತವಾದ ಕಾರ್ಯಕ್ಕಾಗಿ ಈಗಲೇ ಇಲ್ಲಿಂದ ಹೊರಡಬೇಕಾಗಿದೆ. ಎಚ್ಚತ್ತ ಮೇಲೆ ಇತನು ಏನನ್ನಾದರೂ ತಿಳಿಸಬಹುದು; ಅಥವಾ ಯಾವುದಾದರೂ ಪ್ರಶ್ನೆಗೆ ಉತ್ತರ ಕೊಡಬಹುದು.''

ಡಾಬನೆ:—"ಈಗ ನೀವು ಈ ವಜ್ರದ ವಿಚಾರವನ್ನು ಮೆ. ಹೆಡ್‌ಕೂಂಬಳಿಗೆ ತಿಳಿಸುವದಿಲ್ಲವೆ?"

ಬ್ಲೇಕ್:—"ಇಲ್ಲ. ಹೆಡ್‌ಕೂಂಬನು ಎಲ್ಲಿಂದಲೋ ಇದನ್ನು ಕದ್ದು ತಂದಿರಬಹುದಾಗಿದೆ. ಪಾಪ! ಆ ಬಡಪಾಯಿ ಹೆಂಗಸಾದರೋ ಈ ಅಪರಾಧವೊಂದನ್ನೂ ಅರಿಯಳು. ಇನ್ನು ಹೋಗೋಣ."

ಬಾಗಿಲಿನ ಬಳಿಯಲ್ಲಿ ಯಾರೋ ಸುಳಿದಾಡಿದಂತೆ ತೋರಿತು. ಥಟ್ಟನೆ ಬ್ಲೇಕನು ಬಾಗಿಲ ಬಳಿಗೆ ನಡೆದನು. ಮೆಟ್ಟಲುಗಳ ಮೇಲೆ ಯಾರೋ ಧಡಧಡನೆ ಹೋಗುತ್ತಿದ್ದಂತೆ ಶಬ್ದವು ಕೇಳಿಸಿತು; ಆದರೆ ಅವರು ಯಾರೆಂಬುದನ್ನು ಮಾತ್ರ ಬ್ಲೇಕನಿಂದ ನೋಡಲಾಗಲಿಲ್ಲ. ಬಲು ಬೇಗನೆ ಆ ವ್ಯಕ್ತಿಯು ಅಲ್ಲಿಂದ ಮಾಯವಾಗಿಬಿಟ್ಟದ್ದಿತು.

ಅನಂತರ ಬ್ಲೇಕನು ಡಾ. ಡಾಬನೆಯನ್ನು ಕಳುಹಿಸಿ, ತಾನು ತನ್ನ ಕೋಣೆಗೆ ಬಂದನು. ಮೆ. ಹೆಡ್‌ಕೂಂಬಳು ಡಾಕ್ಟರನಿಗೆ ಧನ್ಯವಾದಗಳನ್ನರ್ಪಿಸಿ ಅವನನ್ನು ಹೊರಬಾಗಿಲಿನ ವರೆಗೆ ಕಳುಹಿಸಿ, ತಾನು ಹಿಂದಕ್ಕೆ ಬಂದಳು. ಆಗಲೇ ಬ್ಲೇಕನು ರೋಗಿಯ ಕೋಣೆಗೆ ತಿರುಗಿ ಬಂದನು. ಮೆ. ಹೆಡ್‌ಕೂಂಬಳು ಕಿಡಕಿಯೊಳಗೆ ತಲೆ ಹಾಕಿ ಉದಾಸೀನ ಭಾವದಿಂದ ಹೊರಗೆ ನೋಡುತ್ತಿದ್ದಳು.

ಬ್ಲೇಕನು ಕುರ್ಚಿಯನ್ನು ತೋರಿಸುತ್ತ ಹೇಳಿದನು:—"ಬಾ, ಮೆ. ಹೆಡ್‌ಕೂಂಬ! ಕುಳಿತುಕೋ"

ಆದರೆ ಅವಳು ಖಿನ್ನ ಮನಸ್ಸಿನಿಂದ ಹೇಳಿದಳು:—"ಇಲ್ಲ. ಮಿಸ್ಟರ್ ಬ್ಲೇಕ್! ಇನ್ನು ಇಲ್ಲಿ ನಾನು ಒಂದು ಕ್ಷಣಕಾಲವೂ ನಿಲ್ಲಲಾರೆನು. ಈ ಮನೆ ಮತ್ತು ಈ ಮನುಷ್ಯನೊಡನೆ ಇದ್ದ ನನ್ನ ಸಂಬಂಧವೆಲ್ಲವೂ ಇಂದಿಗೆ ಮುಗಿದು ಹೋಯಿತು. ಇವನು ಒಂದೇಸವನೆ ಸುಳ್ಳು ಹೇಳುತ್ತಲೆ ಇದ್ದು, ನನ್ನನ್ನು ಮೋಸಗೊಳಿಸಿದನು. ಪುಂಡರ ತಂಡದೊಂದಿಗೆ ಇವನ ಸಂಪರ್ಕವಿದೆ, ಎಂಬ ವಿಷಯವು ಮದುವೆಯಾದ ನಂತರವೇ ನನಗೆ ತಿಳಿಯಿತು. ಮುಂದೆ ಯಾದರೂ ತಾನು ಪುಂಡ-ಪೋಕರಿಗಳೊಂದಿಗೆ ಸೇರುವುದಿಲ್ಲವೆಂದು ಇವನು ನನ್ನ ಬಳಿಯಲ್ಲಿ ಶಪಥ ಮಾಡಿದನು. ನಿರ್ದೋಷ ಜೀವನವನ್ನು ನಡೆಸುತ್ತ ಇದ್ದು, ಇವನು ಬೇಕಾದರೆ ಅತಿ ಬಡವನಾಗಿ ಇದ್ದರೂ ನಾನು ಸಂತೋಷದಿಂದ ಇವನೊಡನೆ ವಾಸವಾಗಿರುತ್ತಿದ್ದೆನು; ಆದರೆ ಇವನು ಮಾಡಿದ ಶಪಥವನ್ನು ನಡೆಸಲಾರದಾದನು. ಪುಂಡರ ಸಂಪರ್ಕವು ದಿನದಿನವೂ ಹೆಚ್ಚೇ ಆಗತೊಡಗಿತು. ಇನ್ನು ನಾನು ಸಹಿಸಲಾರೆನು. ಇನ್ನೊಂದು

ಕ್ಷಣಕಾಲವೂ ಕೂಡ ನಾನಿವನೊಡನೆ ವಾಸವಿರಲಾರೆನು. ನನಗೆ ಎಲ್ಲಾದರೂ ಉದ್ಯೋಗ ದೊರೆಯಬಹುದು. ಈಗ ಮಾತ್ರ ನಾನು ನನ್ನ ತಂಗಿಯ ಮನೆಗೇ ಹೋಗುವೆನು. ಆ ಮೇಲೆ ಮುಂದಿನ ಉದ್ಯೋಗಕ್ಕೆ ಪ್ರಯತ್ನಿಸುವೆನು. ನಾನು ಕಾಗದದ ಮೂಲಕವಾಗಿ ಮುಂದಿನ ನನ್ನ ವಿಳಾಸವನ್ನು ತಮಗೆ ತಿಳಿಸುವೆನು. ತಾವು ಈ ವೇಳೆಯಲ್ಲಿ ನನಗೆ ಉಪಕಾರ ಮಾಡಿದಿರಿ.''

ಮೃದುಸ್ವರದಿಂದ ಬ್ಲೇಕನು ಹೇಳಿದನು:—ನಿನಗೀಗ ಹಣದ ಅಗತ್ಯವೇನಾದರೂ ಇದ್ದರೆ ಹೇಳು, ಕೊಡುತ್ತೇನೆ.''

''ಬೇಡ. ನನ್ನ ಬಳಿಯಲ್ಲಿ ತಕ್ಕಷ್ಟು ಹಣವು ಇದೆ. ನಾನು ಬಸ್ಸಿನಲ್ಲಿ ನನ್ನ ತಂಗಿಯ ಮನೆಗೆ ಹೋಗುವೆನು.'' ಎಂದು ನುಡಿದು ಮಿ. ಹೆಡ್ ಕೊಂಬಳು ಕೂಡಲೆ ಅಲ್ಲಿಂದ ಹೊರಟು ಹೋದಳು.

ಬ್ಲೇಕನು ಕಿಟಕಿಯಿಂದ ಹೊರಗೆ ನೋಡಿದಾಗ ಕೈಯಲ್ಲೊಂದು ಸೂಟ್ ಕೇಸನ್ನು ಹಿಡಿದುಕೊಂಡು ಅವಳು ರಸ್ತೆಯಲ್ಲಿ ಹೋಗುತ್ತಿರುವುದು ಕಾಣಿಸಿತು ಟಿಂಕರನೂ ಅಡಗಿ ಅಡಗಿ ಅವಳನ್ನು ಹಿಂಬಾಲಿಸುತ್ತಿರುವದನ್ನು ಬ್ಲೇಕನು ನೋಡಿದನು.

ಹತ್ತು ಮಿನಿಟುಗಳು ಕಳೆದವು. ಮನೆಯೊಳಗೆ ಯಾರೋ ಅತ್ತಿತ್ತ ಸುತ್ತಾಡುತ್ತಿದ್ದ ಶಬ್ದವು ಕೇಳಿಸತೊಡಗಿತು. ಅತ್ತ ಟಿಂಕರನು ಹೋಟಲಿಗೆ ಹಿಂತಿರುಗಿ ಬರುತ್ತಿದ್ದುದನ್ನು ಕಂಡು, ಬ್ಲೇಕನು ಕಿಟಕಿಯಿಂದ ಟಿಂಕರನಿಗೆ ಸಂಕೇತ ಮಾಡಿದನು. ಕೂಡಲೆ ಟಿಂಕರನು ಒಳಗೆ ಬಂದು ಹೇಳಿದನು—''ಆ ಯುವತಿಯು ಮೋಟಾರಿನಲ್ಲಿ ಕುಳಿತು ಹೊರಟು ಹೋದಳು. ಪೊದರುಗಳ ಸಂದಿನಲ್ಲಿ ಅಡಗಿದ್ದ ಮನುಷ್ಯನೂ ಕೂಡ ಅವಳು ಹೋಗುತ್ತಿರುವುದನ್ನು ನೋಡಿದನು. ನಾನು ಮೆಲ್ಲನೆ ಹೋಗಿ ಆ ಮನುಷ್ಯನ ರೂಪವನ್ನು ನೋಡಲು ಹವಣಿಸಿದೆನು; ಆದರೆ ಅವನ ಬಳಿಯಲ್ಲಿ ಮೋಟಾರ್ ಸೈಕಲ್ ಇದ್ದಿತಾದುದರಿಂದ ಅವನು ಥಟ್ಟನೆ ಅದನ್ನು ಹತ್ತಿ ಓಡಿ ಹೋದನು.''

ಈಗ ಹೆಡ್‌ಕೊಂಬನು ಸ್ವಲ್ಪ ಎಚ್ಚರಗೊಳ್ಳತೊಡಗಿದನು. ಬಾಯಲ್ಲಿ ಏನೇನೋ ಗೊಣಗಾಡಿದನು—ನನ್ನ ದೇಹಸ್ಥಿತಿಯು ಈ ಕಾರ್ಯಗಳಿಂದ ಈಗ ಪೂರ್ಣವಾಗಿ ಕೆಟ್ಟು ಹೋಗಿದೆ. ನಾನು ಇದೆಲ್ಲವನ್ನೂ ಕಾಲಿನಿಂದೊದ್ದು, ಕೆನಿಯಾ ಪ್ರದೇಶಕ್ಕೆ ಹೊರಟು ಹೋಗುವೆನು. ಅಲ್ಲಿ ನಾನು ಹೊಸ ತರಹದಿಂದ ಜೀವನ ನಡೆಸತೊಡಗುವೆನು. ನನ್ನ ಮೇಲೆ ವಿಶ್ವಾಸವಿಡು. ನನ್ನ ಬಳಿಯಲ್ಲೀಗ ಸಾಕಾದಷ್ಟು ಹಣವಿದೆ. ಈ ಹೋಟಲನ್ನು ಇನ್ನು ಯಾರಿಗಾದರೂ ಮಾರುವೆನು.''

ಹೀಗೆ ಗೊಣಗುಟ್ಟುತ್ತಾ ಹೆಡ್‌ಕೂಂಬನು ಮೆಲ್ಲನೆ ಕಣ್ತೆರೆದು ನೋಡಿದನು. ಸ್ವಲ್ಪ ಹೊತ್ತಿನವರೆಗೆ ಬ್ಲೇಕನ ಮುಖವನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಾ ಇದ್ದು, ಅನಂತರ ಹೇಳಿದನು—"ನಾನು ತಮ್ಮನ್ನು ಗುರುತಿಸಿದೆನು. ತಾವು ಸ್ಯಾಕ್ಸ್ಟನ್ ಬ್ಲೇಕ್"

ಬ್ಲೇಕ್—"ಹೌದು. ನೀನೀಗ ಸ್ವಲ್ಪ ಹೊತ್ತಿನ ಮುಂಚೆ ರೇಡಿಯುಮ್ಮಿನ ಪತ್ತೇ ಹಚ್ಚಲು ನನಗೆ ಸಹಾಯುಮಾಡುವ ಭರವಸೆಯನ್ನು ಕೊಟ್ಟಿರುತ್ತೀ. ನಿನಗೆ ರೇಡಿಯುಮ್ ಕಳವಿನ ಸಕಲ ವಿಷಯುವೂ ಚೆನ್ನಾಗಿ ಗೊತ್ತಿದೆ. ಈ ದೇಶವನ್ನು ಬಿಟ್ಟು ನೀನು ಓಡಿ ಹೋಗುವುದಾದರೆ, ನಾನದರಲ್ಲಿ ನಿನಗೆ ತುಂಬಾ ಸಹಾಯು ಮಾಡಬಲ್ಲೆನು. ನಿಜವನ್ನು ಹೇಳು. ನೀನು ಬಾಯೊಳಗೆ ನುಂಗಿ ಬಿಟ್ಟಿದ್ದ ಆ ಹಸರು ಬಣ್ಣದ ವಜ್ರವು ನಿನಗೆ ಎಲ್ಲಿ ದೊರೆಯಿತು?"

ಕಣ್ಣನ್ನು ಪಿಳಿಪಿಳಿ ಬಿಡುತ್ತ ಹೆಡ್‌ಕೂಂಬನು ವಿಸ್ಮಯು ಸ್ವರದಿಂದ ಕೇಳಿದನು:—"ಏನು ಹೇಳಿದಿರಿ ನೀವು? ವಜ್ರವೇ!"

ಕೂಡಲೆ ಬ್ಲೇಕನು ಜೇಬಿನಿಂದ ಆ ಬಲು ಬೆಲೆಯು ಹಸರು ವಜ್ರವನ್ನು ಹೊರತೆಗೆದು ಅವನಿಗೆ ತೋರಿಸುತ್ತ ಹೇಳಿದನು:—"ಹೌದು. ಇದೇ ವಜ್ರ ಅದು. ಸರಿಯಾಗಿ ನೋಡು. ನೀನೆಲ್ಲಿಯೋ ಓಡಿಹೋಗುತ್ತಿದ್ದಾಗ ಇದನ್ನು ನುಂಗಿ ಬಿಟ್ಟೆ. ಇದು ನಿನ್ನ ಎಪೆಂಡಿಕ್ಸಿನಲ್ಲಿದ್ದಿತು. ಸ್ವಲ್ಪ ಹೊತ್ತಿಗೆ ಮುಂಚೆ ನಾನು ಇನ್ನೊಬ್ಬ ಸ್ನೇಹಿತ ಡಾಕ್ಟರನನ್ನು ಇಲ್ಲಿಗೆ ಕರೆದುಕೊಂಡು ಬಂದು ನಿನ್ನ ಆಪರೇಷನ್ ಮಾಡಲು, ನಿನ್ನ ಹೊಟ್ಟೆಯಿಂದ ಈ ವಜ್ರವು ಹೊರಟಿತು. ಆ ಡಾಕ್ಟರನಾದರೂ ಈ ಸುದ್ದಿಯನ್ನು ಯಾರ ಬಳಿಯುಲ್ಲೂ ತಿಳಿಸಲಾರನು; ಆದರೆ ನೀನು ಮಾತ್ರ ಎಲ್ಲವನ್ನೂ ನನಗೆ ತಿಳಿಸಬೇಕು."

ಹೆಡ್‌ಕೂಂಬನು ಹಾಗೆಯೇ ಕಣ್ಮುಚ್ಚಿ ಹೇಳತೊಡಗಿದನು:—"ಈ ವಜ್ರವು ನನ್ನದೇ ಇರುವದು. ಅವರು ಇದನ್ನು ಕಿತ್ತುಕೊಳ್ಳಬೇಕೆಂದು ಮಾಡಿದ್ದರು. ಆದ್ದರಿಂದಲೇ ನಾನಿದನ್ನು ನುಂಗಿಬಿಟ್ಟೆನು. ಅದರಿಂದ ಅವರು ಆ ಮೇಲೆ ಇದನ್ನು ಹೊಂದಲಾಗಲಿಲ್ಲ. ನಾನು ಅವರಿಂದ ತಪ್ಪಿಸಿಕೊಂಡು ಓಡಿಬಿಡಬಹುದೆಂದು ಎಣಿಸಿದ್ದೆನು; ಆದರೆ ಅವರು ಸುಮ್ಮನಿರದೆ, ಗುಂಡು ಹಾರಿಸಿಬಿಟ್ಟರು. ಈಗಲೂ ಅವರು ಇಲ್ಲಿಗೆ ಬಂದರೆ, ನನ್ನನ್ನೆಂದೂ ಜೀವಸಹಿತವಾಗಿರಲು ಬಿಡುವುದಿಲ್ಲ."

ಕೂಡಲೆ ಬ್ಲೇಕನು ಸಮಾಧಾನ ಹೇಳಿದನು:—"ಇಲ್ಲ. ನಾನಿಲ್ಲಿರುವಾಗ ನಿನಗೆ ಯಾರೂ ಏನನ್ನೂ ಮಾಡಲಾರರು. ನೀನು ವಿಶ್ವಾಸವಿಡು. ಅವರು ಎಂದರೆ ಯಾರು?"

ಆದರೆ ಬ್ಲೇಕನ ಮಾತಿಗೆ ಉತ್ತರ ಕೊಡುವುದಕ್ಕಿಂತ ಮುಂಚೆಯೇ ಹೆಡ್‌ಕೊಂಬನು ತಿರುಗಿ ಮೂರ್ಛಿತನಾದನು.

ಟಿಂಕರನು ಇಷ್ಟು ಹೊತ್ತಿನ ವರೆಗೆ ಅಲ್ಲಿಯೇ ಇದ್ದ ಕುರ್ಚಿಯ ಮೇಲೆ ಇಟ್ಟಿದ್ದ ಅವನ ಬಟ್ಟೆಗಳನ್ನು ಪರೀಕ್ಷಿಸುತ್ತಿದ್ದನು; ಆದರೆ ಅದರಿಂದ ಪ್ರಯೋಜನವಾಗುವಂತಹ ಯಾವ ಸಂಗತಿಯೂ ದೊರೆಯಲಿಲ್ಲ. ಬ್ಲೇಕನು ಆ ವಜ್ರವನ್ನು ಕೈಯಲ್ಲಿಟ್ಟುಕೊಂಡು ಏಕಾಗ್ರತೆಯಿಂದ ನೋಡುತ್ತಿದ್ದನು. ಅಕಸ್ಮಾತ್ತಾಗಿ ಟಿಂಕರನ ಮುಖವು ಮಾರ್ಪಾಡು ಹೊಂದಿದುದನ್ನು ಕಂಡು, ಬ್ಲೇಕನು ಥಟ್ಟನೆ ಹಿಂದಕ್ಕೆ ತಿರುಗಿ ನೋಡಿದನು. ಕೋಣೆಯ ಬಾಗಿಲು ಈಗ ಮೆಲ್ಲಮೆಲ್ಲನೆ ತೆರೆಯಲ್ಪಡುತ್ತಿದ್ದಿತು. ಬಾಗಿಲಿನ ಹಿಂದೆ ಪಾರಟ್ರಿಜನು ನಿಂತುಕೊಂಡು ಇವರ ಕಡೆಗೆ ನೋಡುತ್ತಿದ್ದನು. ಪಾರಟ್ರಿಜನ ಮುಖವು ಒಂದೇಸಮನೆ ಬಿಳುಪೇರುತ್ತಿದ್ದಿತು.

ಅವರು ತನ್ನ ಕಡೆಗೆ ನೋಡಿದುದನ್ನು ಕಂಡು ಪಾರಟ್ರಿಜನು ಹೇಳಿದನು--"ಕ್ಷಮಿಸಬೇಕು ಸ್ವಾಮೀ! ಏನು ವಿಶೇಷ?"

ಬ್ಲೇಕನು ತ್ವರಿತವಾಗಿ ಉತ್ತರ ಕೊಟ್ಟನು—"ಮಿಸ್ಟರ್ ಹೆಡ್‌ಕೊಂಬರು ರಾತ್ರಿ ಹಿಂದಿರುಗಿ ಬಂದರು. ಇವರು ಎಪೆಂಡಿಕ್ಸರೋಗಗ್ರಸ್ತರಾಗಿದ್ದರು. ನಾನು ನನ್ನ ಸ್ನೇಹಿತನಾದ ಡಾಕ್ಟರ್ ಡಾಬನೆಯನ್ನು ಇಲ್ಲಿಗೆ ಇವರ ಚಿಕಿತ್ಸೆಗಾಗಿ ಕರೆದುಕೊಂಡು ಬಂದೆನು. ಆಪರೇಷನ್ ಸುಮುಖವಾಗಿ ನೆರವೇರಿತು. ಈಗಿವರಿಗೇನೂ ಭಯವಿಲ್ಲ. ನಾಳೆ ಇವರನ್ನು ಎಲ್ಲಿಗಾದರೂ ಚಿಕಿತ್ಸೆಗಾಗಿ ಕಳುಹಿಸಲಾಗುವದು; ಆದರೆ ಈ ವೇಳೆಯಲ್ಲಿ ಯಾವ ತರಹದ ಗಲಭೆಯನ್ನೂ ಇಲ್ಲಿ ಮಾಡಲಾಗದು. ಮೆ. ಹೆಡ್‌ಕೊಂಬಳು ಸ್ವಲ್ಪ ಹೊತ್ತು ಮುಂಚೆ ತನ್ನೊಬ್ಬ ಮಿತ್ರಳನ್ನು ಸಂದರ್ಶಿಸಲು ಹೋಗಿರುವಳು. ಹೋಗುವಾಗ ಅವಳು ಇವರ ಶರೀರದ ಮೇಲ್ವಿಚಾರಣೆಯ ಸಮಸ್ತ ಭಾರವನ್ನೂ ನನಗೊಪ್ಪಿಸಿ ಹೋಗಿರುವಳು."

ಪಾರಟ್ರಿಜ -"ಆದರೆ ಮಿಸ್ಟರ್ ಹೆಡ್‌ಕೊಂಬರು ಈ ಹೋಟಲಿನ ಎಲ್ಲ ಮೇಲ್ವಿಚಾರಣೆಯನ್ನೂ ನನಗೊಪ್ಪಿಸಿರುವರು. ಆದ್ದರಿಂದ ಈ........ ವಿಚಾರವೂ ನನಗೆ ತಿಳಿದೇ ಆಗಬೇಕಾಗಿದ್ದಿತು."

ಬ್ಲೇಕ್—"ಮಿಸ್ಟರ್ ಹೆಡ್‌ಕೊಂಬರೊಂದಿಗೆ ನನಗೆ ಇದೇ ಪ್ರಥಮ ಪರಿಚಯ. ಇವರ ಶರೀರಸ್ಥಿತಿಯನ್ನು ಎಲ್ಲ ತರಹದಿಂದಲೂ ನಾನು ನೋಡಿಕೊಳ್ಳುವೆನೆಂದು ವಚನವಿತ್ತಿರುವೆನು. ಮೆ. ಹೆಡ್‌ಕೊಂಬಳ ಅಭಿಪ್ರಾಯವೂ ಅದೇ ಮೇರೆಗಿದ್ದಿತು. ಅವಳು ಈ ವೇಳೆಯಲ್ಲಿ ಇಲ್ಲಿಂದ ಹೊರಟುಹೋದ

ಳೆಂಬುದು ನನಗೆ ದುಃಖಕರವಾಗಿದೆ. ಅವಳು ತನ್ನ ಸಿಶ್ಚಯುವನ್ನು ಬಹಳ ಹಿಂದಿನಿಂದಲೂ ಮಾಡಿಕೊಂಡಿರಬಹುದಾಗಿದೆ. ನಿಮಗಾದರೋ ಅದೆಲ್ಲವೂ ತಿಳಿದೇ ಇರಬಹುದಲ್ಲವೇ?"

ಪಾರಿಟ್ರಿಜ:—"ಹೌದು. ಈಗ ಇವರ ಚಿಕಿತ್ಸೆಗಾಗಿ ಯಾರಾದರೊಬ್ಬ ನರ್ಸಳ ಏರ್ಪಾಡು ಮಾಡಲೊ?"

ಬ್ಲೇಕ್:—"ಹಾಗೇನೂ ಅಗತ್ಯವಿಲ್ಲ. ನನ್ನ ಈ ಸಂಗಡಿಗನು ಎಲ್ಲ ಕೆಲಸವನ್ನೂ ಚೆನ್ನಾಗಿ ಅರಿತಿರುವನು. ನಾವು ಎಲ್ಲ ಏರ್ಪಾಡನ್ನೂ ಮಾಡಿಕೊಳ್ಳಬಲ್ಲೆವು ನೀವೀಗ ಮುಖ್ಯವಾಗಿ ಮಾಡಬೇಕಾದುದುನೇನಂದರೆ, ಯಾರೂ ಈ ಕೋಣೆಯ ಒಳಗೆ ಬರದಿರಲಿ."

ಪಾರಟ್ರಿಜನು ನಸುನಕ್ಕು ಅವರಿಬ್ಬರ ಮುಖವನ್ನೇ ದಿಟ್ಟಿಸಿ ನೋಡುತ್ತ ನಿಂತು, ಅನಂತರ ಹೊರಟು ಹೋದನು.

ಬ್ಲೇಕನು ಟಿಂಕರನನ್ನು ಕುರಿತು:-"ನನಗೆ ಸಂಶಯ ಬಂದಿದೆ. ಇವನ ಗೃಧ್ರ ದೃಷ್ಟಿಯು ನನ್ನ ಕೈಯಲ್ಲಿನ ವಜ್ರದ ಮೇಲೇನೂ ಬೀಳಲಿಲ್ಲವಷ್ಟೆ?"

ಟಿಂಕರ್:—"ಉಹುಂ. ಖಂಡಿತವಾಗಿಯೂ ಬಿದ್ದಿರಬಹುದು. ಈಗಿವನ ಚಿಕಿತ್ಸಾಕ್ರಮವು ಹೇಗೆ ನಡೆಯುವದು? ನಾನೀಗ ಕೂಡಲೆ ಇನ್ಸಪೆಕ್ಟರ ಹಾರ್ಕರನಿಗೆ ಫೋನಿನ ಮೂಲಕವಾಗಿ ಸೂಚನೆ ಕೊಡಲೊ?"

ಬ್ಲೇಕ್:—"ಹಾರ್ಕರನಿಗೆ ತಿಳಿಸಬೇಕಾದಷ್ಟು ಮುಖ್ಯವಾದ ಸಂಗತಿ ಯಾವುದೂ ಇಷ್ಟರವರೆಗೆ ಇಲ್ಲಿ ನಡೆದಿರುವದಿಲ್ಲ. ಸ್ವಲ್ಪ ನೋಡೋಣ. ಈ ವೇಳೆಯಲ್ಲಿ ಹೆಡ್‌ಕೂಂಬನನ್ನು ರಕ್ಷಿಸಿಕೊಳ್ಳುವುದೇ ನಮ್ಮ ಕರ್ತವ್ಯವಾಗಿದೆ. ಯಾಕಂದರೆ, ಇವನಿಂದ ರೇಡಿಯಮ್ ಪತ್ತೆಯಿಲ್ಲದಿರುವ ರಹಸ್ಯವು ತಿಳಿಯಬಹುದಾಗಿದೆ."

---

## (೧೦)

ಇನ್ಸಪೆಕ್ಟರ ಹಾರ್ಕರನ ಮೆದಳು ಈ ವೇಳೆಯಲ್ಲಿ ಏನೂ ಕೆಲಸಮಾಡಲಾರದಾಗಿದ್ದಿತು. ಇದಕ್ಕಿಂತ ಹಿಂದೆ ಎಷ್ಟೋ ಮೊಕದ್ದಮೆಗಳಲ್ಲಿ ಇವನ ಜೊತೆಗೆ ಸಹಕರಿಸಿ ಕೆಲಸ ಮಾಡಿದ್ದ ಇವನ ಸಂಗಡಿಗನಾದ ಸಾರ್ಜಂಟ ಬ್ರೌನನೂ ಕೂಡ ಈಗ ಗಾಬರಿಯಾಗಿದ್ದನು.

ಇನ್ಸಪೆಕ್ಟರನು ವಿಚಾರ ತಂದ್ರಿಯಲ್ಲಿ ಮುಳುಗಿರುವದನ್ನು ಕಂಡು ಬ್ರೌನ ಕೇಳಿದನು:—"ಸರ್ ಕಥವರ್ಟ ನಾವೆಲ್ಸರ ವರ್ತಮಾನವೇನಾದರೂ ಬಂದಿದೆಯೇ?"

ಹಾರ್ಕರ್:--"ಏನು ಹೇಳಲಿ ಬ್ರೌನ್! ರೇಡಿಯುವರ್ ಕಳವಾದುದರಿಂದ ಡಾಕ್ಟರ್ ಮೋಡೀನನ ಬುದ್ಧಿಯು ಏನೂ ಕೆಲಸವಮಾಡಲಾರದಾಗಿದೆ. ಆದರೂ ಕೂಡ ಮೋಡೀನನು ಈಗ ಬೇರೆ ಆಸ್ಪತ್ರೆಗಳಿಂದಾದರೂ ರೇಡಿಯುಮ್ಮನ್ನು ಸಂಪಾದಿಸಿ ತರುವ ಪ್ರಯತ್ನದಲ್ಲಿರುವನು. ಅವನ ಈ ಪ್ರಯತ್ನವು ಸಫಲವಾದರೆ, ಆ ಮೇಲೇನೂ ಶಂಕಿಸುವ ಸಂದರ್ಭವಿಲ್ಲ."

ಬ್ರೌನ:--"ಒಂದುವೇಳೆ ಕೂಡಲೆ ರೇಡಿಯುಮ್ಮನ್ನು ಶೇಖರಿಸಲು ಸಾಧ್ಯವಾಗದೆ ಹೋದರೆ-ಆಗ?"

ವಿಷಾದದಿಂದ ಹಾರ್ಕರನು ಹೇಳಿದನು:--"ಆಗ ಪೋಲೀಸ ಕಮಿಷನರರ ಜೀವವುಳಿಯುವದು ಸಂಶಯಾಸ್ಪದವೇ ಸರಿ"

ಬ್ರೌನ್--"ಹಾಗಾದರೆ ಈಗ ಚಿಕಿತ್ಸಾಕ್ರಮವು ನಿಂತಿದೆಯಲ್ಲವೆ? ನಾನು ನಿನ್ನೆಯಿಂದಲೂ ನಿಮ್ಮ ಬಳಿಯಲ್ಲೊಂದು ವಿಚಾರವನ್ನು ಹೇಳಬೇಕೆಂದಿದ್ದೆನು. ಇಂತಹ ಸಂಕಟ ಸಮಯದಲ್ಲಿ ಒಂದು ಸಲವಾದರೂ ನೀವಲ್ಲಿಗೆ ಹೋಗಿ, ಅವರನ್ನು ಸಂದರ್ಶನ ಮಾಡಿ ಬರಲಾರಿರಾ?

ಹಾರ್ಕರ್--"ನಿಜ, ಸರಿಯಾಗಿ ಹೇಳಿದಿ ನೀನು ಬ್ರೌನ! ಹಾಗಾದರೆ ನಾನು ಈಗಲೇ ಅಲ್ಲಿಗೊಂದು ಸಲ ಹೋಗಿ ನೋಡಿ, ವಿಚಾರಿಸಿ ಬರುವೆನು."

ಹಾರ್ಕರನು ಮೋಡೀನನ ಮನೆಗೆ ಬಂದಾಗ ಮೋಡೀನನು ಹಾರ್ಕರನಿಗೆ ಮೇಲ್ಮೇಲೆ ಬೇಕಾದಷ್ಟು ಆದರ ಸತ್ಕಾರವನ್ನು ತೋರಿಸಿದನು; ಆದರೆ ಮನಸ್ಸಿನೊಳಗೆ ಮಾತ್ರ ಸ್ವಲ್ಪವೂ ಪ್ರಸನ್ನತೆ ಅಥವಾ ಒಪ್ಪಿಗೆಯಿರಲಿಲ್ಲ. ಮೋಡೀನನು ಹೇಳಿದನು --"ನೀವು ಬೇಕಾದರೆ ನಾವೆಲ್ಲರನ್ನು ಅಗತ್ಯವಾಗಿ ನೋಡಬಹುದು; ಆದರೆ ಅದು ಕೇವಲ ಅವರ ಹತ್ತಿರ ವಂದನೆ-ಪ್ರತಿವಂದನೆಗಳಷ್ಟಕ್ಕೆ ಮಾತ್ರ ಎಂಬ ಶರತ್ತಿನ ಮೇಲೆ. ಯಾಕೆಂದರೆ ಇನ್‌ಸ್ಪೆಕ್ಟರ್, ಅವರ ಕುತ್ತಿಗೆಯ ಈಗಿನ ಸ್ಥಿತಿಯು ಬಲು ನಾಜೂಕಾಗಿರುವದು. ಸ್ವಲ್ಪ ಒತ್ತಡ ಹೆಚ್ಚಾದರೂ ಕೂಡ ಥಟ್ಟನೆ ಮರಣ ಒದಗುವಂತಹ ಭಯಂಕರ ಸಂಕಟ ಒದಗಬಹುದಾಗಿದೆ. ಅದಲ್ಲದೆ ಬಹಳ ಇಂಜೆಕ್ಷನ್ ಕೊಟ್ಟಿರುವೆನು. ಆದರಿಂದ ಮಾತನಾಡುವುದಕ್ಕೂ ಕೂಡ ಅವರಿಗೆ ಬಹಳ ತೊಂದರೆಯಾಗುವುದು. ಆಗಲಿ. ತಮಗೆ ಉತ್ಕಟೇಚ್ಛೆಯಿರುವುದಾದರೆ ಆಡಬೇಕಾದರೆ ಒಂದೆರಡು ಮಾತನ್ನು ಮಾತ್ರ ಆಡಬಹುದು. ನಾನು ಅವರ ಹತ್ತಿರ ರೇಡಿಯುವರ್ ಕಳವಾಗಿ ಹೋಗುವ ವರ್ತಮಾನವನ್ನು ಇನ್ನೂ ತಿಳಿಸಿಲ್ಲ; ಯಾಕೆಂದರೆ ಆ ವರ್ತಮಾನವು ಅವರಿಗೇ ಸಂಬಂಧಪಟ್ಟಿರುವುದಾದ್ದರಿಂದ, ಅದನ್ನು ಕೇಳಿ ಅವರು ಒಡನೆಯೇ ಎದೆಯೊಡೆಯಬಹುದು. ನೀವೂ ಕೂಡ ಅಂತಹ ಸುದಿ

ಯನ್ನೀಗ ಅಲ್ಲಿ ಎತ್ತಬಾರದು. ಈ ನಿಮ್ಮ ಭೇಟಿಗಾಗಿ ಈಗ ನಾನು ನಿಮಗೆ ಎರಡು ಮಿನೀಟಿಗಿಂತ ಹೆಚ್ಚಿನ ಸಮಯವನ್ನು ಕೊಡಲಾರೆನು.''

ಇನ್‌ಸ್ಪೆಕ್ಟರನು ಮೇಡೀನನನ್ನು ಮನದೊಳಗೇ ಬೈಯುತ್ತಾ ಗತ್ಯಂತರವಿಲ್ಲದೆ ಅವನ ಮಾತಿಗೆಲ್ಲಾ ಒಪ್ಪಬೇಕಾಯಿತು. ಮೇಡೀನನು ಹಾರ್ಕರನನ್ನು ಕರೆದುಕೊಂಡು ಹೋಗಿ ಸರ್ ಕಥವರ್ಟ್ ನಾವೆಲ್ಸರ ಬಳಿಯಲ್ಲಿ ಬಿಟ್ಟನು. ಆ ಸಮಯದಲ್ಲಿ ಸರ್ ಕಥವರ್ಟ್ ನಾವೆಲ್ಸನು ಒಂದು ಆರಾಮ ಕುರ್ಚಿಯ ಮೇಲೆ ಅರ್ಧ ಮಲಗಿದ್ದನು. ಅವನ ಕುತ್ತಿಗೆಯ ಮೇಲೆ ಎಷ್ಟೋ ಪಟ್ಟಿಗಳು ಕಟ್ಟಲ್ಪಟ್ಟಿದ್ದವು.

ಎದುರಿಗೆ ಹೋದೊಡನೆ ಡಾಕ್ಟರ್ ಮೇಡೀನನು ಹೇಳಿದನು—''ಇನ್‌ಸ್ಪೆಕ್ಟರ್ ಹಾರ್ಕರರು ಕೇವಲ ತಮ್ಮನ್ನೊಂದು ಬಾರಿ ನೋಡಿಕೊಂಡು ಹೋಗುವುದಕ್ಕಾಗಿ ಬಂದಿರುವರು; ಆದರೆ ಎಚ್ಚರಿಕೆ! ಬಾಯಿಂದ ಒಂದು ಶಬ್ದವನ್ನೂ ಹೊರಡಿಸಲಾಗದು.''

ಇಷ್ಟು ಮಾತನ್ನು ಹೇಳಿ ಮೇಡೀನನು ಕೋಣೆಯ ಬಾಗಿಲನ್ನು ಇಕ್ಕಿಕೊಂಡು ಹೊರಗೆ ಹೋದನು.

ಹಾರ್ಕರನು ಸರ್ ಕಥವರ್ಟ್ ನಾವೆಲ್ಸನನ್ನು ವಂದಿಸಿ ಹೇಳಿದನು— ''ತಮ್ಮ ಸ್ಥಿತಿಯು ಉತ್ತಮ ಪ್ರಕಾರವಿರುವದನ್ನು ಕಂಡು ಈಗ ನನಗೆ ಸಂತೋಷವಾಯಿತು. ತಾವು ಬಲು ಬೇಗನೆ ಗುಣಹೊಂದಿ ಹಿಂದಿರುಗುವಂತಾಗಲು ಈಶ್ವರನು ಅನುಗ್ರಹಿಸಲೆಂದು ನಾವೆಲ್ಲರೂ ಪ್ರಾರ್ಥಿಸುತ್ತಿದ್ದೇವೆ''

ಸರ್ ಕಥವರ್ಟನು ನಕ್ಕನು. ಹತ್ತಿರ ಮೇಜಿನ ಮೇಲಿದ್ದ ಪೆನ್ಸಿಲನ್ನೆತ್ತಿಕೊಂಡು ಒಂದು ಕಾಗದದ ಮೇಲೆ ಬರೆದನು:—''ಹೊಸ ಸುದ್ದಿ ಏನೂ ಇಲ್ಲವಷ್ಟೆ?''

ಹಾರ್ಕರನು ಹೇಳಿದನು—''ಹ್ಯಾಡನ್: ಗಾರ್ಡನ್ನಿನಲ್ಲಿ ಕಳವಾದ ಮೇಲೆ ಮತ್ತ್ಯಾವ ಹೊಸ ಸಂಗತಿಯೂ ನಡೆಯಲಿಲ್ಲ. ಆ ಕಳ್ಳರನ್ನು ಕಂಡು ಹಿಡಿಯಲು ಸಂಪೂರ್ಣ ಪ್ರಯತ್ನವನ್ನು ನಡೆಸಲಾಗುತ್ತಿದೆ. ತಾವೀಗ ನನಗೆ ಏನಾದರೂ ವಿಶೇಷವಾದ ಆಜ್ಞೆ ಮಾಡಲು ಇಚ್ಛಿಸೋಣಾಗುವುದೇ?''

ಆಗಲೆ ಕೋಣೆಯ ಬಾಗಿಲು ಸ್ವಲ್ಪ ಸ್ವಲ್ಪ ತೆರೆಯಲ್ಪಡತೊಡಗಿತು. ಸರ್ ಕಥವರ್ಟನ ಪೆನ್ಸಿಲು ಕಾಗದದ ಮೇಲೆ ವೇಗವಾಗಿ ಚಲಿಸತೊಡಗಿತು: ''ನಾಳೆ ಬಂದು ಭೇಟಿಮಾಡಿರಿ. ನನ್ನ ದೇಹಸ್ಥಿತಿಯು ಬಹಳ ದುರ್ಬಲವಾಗುತ್ತಿದೆ.''

ಅದನ್ನು ಓದಿ ನೋಡಿ ಹಾರ್ಕರನು ಹೇಳಿದನು—''ಅಗತ್ಯವಾಗಿ

ನಾಳೆ ನಿಮ್ಮ ಸನ್ನಿಧಾನಕ್ಕೆ ಬರುವೆನು; ಆದರೆ...........ಡಾಕ್ಟರರು ಇದಕ್ಕೇನಾದರೂ ಆಕ್ಷೇಪಣೆ ಮಾಡಿದರೆ..........."

ಅಷ್ಟರೊಳಗೇ ಮೇಡೀನನು ಕೋಣೆಯೊಳಗೆ ಬಂದು ಬಿಟ್ಟಿದ್ದನು. ಹಾರ್ಕರನ ಮಾತಿಗೆ ಉತ್ತರವಿತ್ತನು—"ನನ್ನದೇನೂ ಆಕ್ಷೇಪಣೆಯಿಲ್ಲ, ಮಿಸ್ಟರ್ ಹಾರ್ಕರ್! ಸರ್ ಕಥವರ್ಟ್ ನಾವೆಲ್ಲರ ಬಾಯಿಂದ ಮಾತ್ರ ಒಂದು ಶಬ್ದವೂ ಹೊರಡಲಾಗದೆಂದು ನಾನು ಜಾಗರೂಕನಾಗಿರುತ್ತೇನೆ. ಒಳ್ಳೇದು ಇನ್‌ಸ್ಪೆಕ್ಟರ್! ಇನ್ನು ವೇಳೆಯಾಯಿತು."

ಸರ್ ಕಥವರ್ಟ್‌ನಿಗೆ ವಂದಿಸಿ ಹಾರ್ಕರನು ಮೇಡೀನನ ಕೋಣೆಯಿಂದ ಹೊರಗೆ ಬಂದನು. ಎಂಡರ್ಬೀ ಮತ್ತು ಗ್ರೇಯು ವಿಷಯುವಾಗಿ ಯಾವ ತರಹದ ವಾರ್ತೆಯೂ ಇಷ್ಟರವರೆಗೆ ಬಂದಿರುವದಿಲ್ಲವೆಂದು ಮೇಡೀನನ ಬಾಯಿಂದ ಕೇಳಿ, ಇನ್‌ಸ್ಪೆಕ್ಟರನು ಇನ್ನು ಅಲ್ಲಿ ಸುಮ್ಮನೆ ನಿಲ್ಲುವುದರಿಂದ ಪ್ರಯೋಜನವೇನೂ ಇಲ್ಲವೆಂದು ಭಾವಿಸಿ, ಅಲ್ಲಿಂದ ಹೊರಡಲು ಸಿದ್ಧವಾದನು; ಆದರೆ ಅಷ್ಟರೊಳಗೇ ಟೆಲಿಫೋನಿನ ಗಂಟೆಯು ಗಟ್ಟಿಯಾಗಿ ಹೊಡೆಯತೊಡಗಿತು. ಕೂಡಲೆ ಮೇಡೀನನು ಅದರ ಬಳಿಗೆ ಹೋಗಿ ಕೊಳವೆಯನ್ನೆತ್ತಿ ಕಿವಿಗಿಟ್ಟುಕೊಂಡು ಆಲಿಸಿದನು. ತಿರುಗಿ ಎರಡನೆಯ ಕ್ಷಣದಲ್ಲಿಯೇ ಕೊಳವೆಯನ್ನು ಕೆಳಗೆ ಇಟ್ಟು ಪ್ರಸನ್ನಮುಖವಾಗಿ ನಗೆದಾಡುತ್ತ ಹಾರ್ಕರನೊಂದಿಗೆ ಮಾತನಾಡಿದನು—"ಬಹಳ ಒಳ್ಳೆಯ ವರ್ತಮಾನವೊಂದು ಬಂದಿದೆ ಇನ್‌ಸ್ಪೆಕ್ಟರ್! ರೇಡಿಯಮ್ಮಿನ ಪತ್ತೆಯಾಯಿತು. ಅದು ಆಸ್ಪತ್ರೆಯ ಹೊರಬಾಗಿಲಿನ ಬಳಿಯಲ್ಲಿ ಒಂದು ಕಾಗದದಿಂದ ಸುತ್ತಲ್ಪಟ್ಟು ದೊರೆತಿದೆ."

ಇದನ್ನು ಕೇಳಿ ಇನ್‌ಸ್ಪೆಕ್ಟರನಿಗೂ ಬಹಳ ಆನಂದವಾಯಿತು; ಅದರ ಜೊತೆಗೇ ಬಹಳ ಆಶ್ಚರ್ಯವೂ ಆಯಿತು. ಕೂಡಲೆ ಹಾರ್ಕರನು ಈ ಸುದ್ದಿಯನ್ನು ತನ್ನ ಆಫೀಸಿಗೆ ಫೋನಿನಿಂದ ತಿಳಿಸಿದನು. ಅನಂತರ ಮೇಡೀನನನ್ನು ಬೀಳ್ಕೊಂಡು ನೆಟ್ಟಗೆ ವೆಂಟ್‌ವರ್ತ್ ಆಸ್ಪತ್ರೆಗೆ ಹೋದನು.

ಅಲ್ಲಿಗೆ ಹೋದೊಡನೆ ರೇಡಿಯಮ್ ಸಿಕ್ಕಿದ ವಾರ್ತೆಯೇನೋ ಸತ್ಯವೆಂದು ತಿಳಿಯಿತು; ಆದರೆ ಅದು ಯಾವ ಆಶ್ಚರ್ಯಜನಕವಾದ ರೀತಿಯಲ್ಲಿ ದೊರಕಿದ್ದಿತೋ ಆ ವಿಷಯದಲ್ಲಿ ಮಾತ್ರ ಇಷ್ಟೇ ತಿಳಿದುಬಂದಿತು—ದ್ವಾರರಕ್ಷಕನು ಅಷ್ಟು ಹೊತ್ತಿನ ವರೆಗೆ ಬಾಗಿಲಿನ ಬಳಿಯಲ್ಲಿ ಯಾವ ಪದಾರ್ಥವಿರುವುದನ್ನೂ ಕಂಡಿರಲಿಲ್ಲ; ಆದರೆ ಎರಡೇ ಮಿನಿಟಿನ ನಂತರ ಕಾಗದದಲ್ಲಿ ಸುತ್ತಿದ್ದ ಒಂದು ಪಾರ್ಸಲ್ ಅಲ್ಲಿ ಬಿದ್ದಿರುವುದು ಕಾಣಿಸಿತು. ಕೂಡಲೆ

ಅವನು ಅದರ ಹತ್ತಿರ ಹೋಗಿ ಅದನ್ನು ನೋಡಿದನು. ಪತ್ರಿಕೆಗಳಲ್ಲೆಲ್ಲ ಅದರ ಯಾವ ಆಕಾರವು ಮುದ್ರಿಸಲ್ಪಟ್ಟಿದ್ದಿತೋ ಅದೇ ಆಕಾರದ ಮರದ ಪೆಟ್ಟಿಗೆಯು ಆ ಕಾಗದವನೊಳಗೆ ಇದ್ದಿತು. ಹತ್ತಿರ ಅಚೆ-ಈಚೆಗೆ ಆ ವೇಳೆಯಲ್ಲಿ ಯಾವ ಮನುಷ್ಯನೂ ಯಾವ ವಾಹನವೂ ಅವನಿಗೆ ಕಾಣಿಸಲಿಲ್ಲ. ಅನಂತರ ಅವನು ಆ ಪೆಟ್ಟಿಗೆಯನ್ನು ಡಾಕ್ಟರ್ ಸ್ಟೆಂಟನರಿಗೆ ಒಪ್ಪಿಸಿದನು.

ಹಾರ್ಕರನು ಡಾಕ್ಟರ್ ಸ್ಟೆಂಟನರ ಆಫೀಸಿಗೆ ಹೋದನು. ವಂದನೆ-ಪ್ರತಿವಂದನೆಗಳಾದ ಮೇಲೆ ಹಾರ್ಕರನು ವಿಚಾರಿಸಿದುದಕ್ಕೆ ಸ್ಟೆಂಟನ್ ಉತ್ತರವಿತ್ತನು:—"ಆ ಮರದ ಪೆಟ್ಟಿಗೆಯಲ್ಲಿ ರೇಡಿಯಮ್ ಮೊದಲಿದ್ದಂತೆಯೇ ಇದೆ."

ಎಂಡರ್ಬಿ ಮತ್ತು ಗ್ರೇಯ ವರ್ತಮಾನವು ಸ್ಟೆಂಟನನಿಗೂ ತಿಳಿದು ಬಂದಿರಲಿಲ್ಲ. ಸ್ವಲ್ಪ ಹೊತ್ತು ಮಾತಾಡಿ, ಅನಂತರ ಹಾರ್ಕರನು ಯಾರ್ಡಿಗೆ ಹೊರಟು ಹೋದನು.

---

## (೧೧)

"ಅಗೋ, ನೋಡಿರಿ! ತಿರುಗಿ ಅವನು ಕಾಣಿಸಿದನು" ಎಂದು ಮೆಲ್ಲನೆ ಹೇಳುತ್ತ ಟೆಂಕರನು ಕಿಟಕಿಯಿಂದ ಹೊರಗಿನ ಉದ್ಯಾನದ ಕಡೆಗೆ ಕೈ ತೋರಿಸಿ, ಮತ್ತೆ ಹೇಳಿದನು:—"ಮಿ. ಹೆಡ್‌ಕೊಂಬಳು ಹೊರಟು ಹೋಗುವಾಗ ಕಾದು ನಿಂತು ನೋಡುತ್ತಿದ್ದ ಮನುಷ್ಯನು ಇವನೇ ಇರುವನು."

ಬ್ಲೇಕನು ತೀಕ್ಷ್ಣ ದೃಷ್ಟಿಯಿಂದ ಆ ಮನುಷ್ಯನನ್ನು ನೋಡಿ ಹೇಳಿದನು:—"ಓಹೋ! ತಿಳಿಯಿತು. ಇವನು ಇನ್ನಾರೂ ಅಲ್ಲ, ಸ್ಲಿಮ್ ಟಾಮಿ. ಈಗ ಇವನು ತನ್ನ ಮೀಸೆ-ಗಡ್ಡ ಬೋಳಿಸಿಕೊಂಡಿರುವನು; ಆದರೆ ವಿಚಿತ್ರ ರೀತಿಯಿಂದ ಒಂದು ಪಾರ್ಶ್ವಕ್ಕೆ ತಲೆಯಾಡಿಸತಕ್ಕ ತನ್ನ ಅಭ್ಯಾಸವನ್ನು ಇವನು ನನ್ನ ಬಳಿಯಲ್ಲಿ ಅಡಗಿಸಲು ಸಾಧ್ಯವಿಲ್ಲ. ನೀನೀಗ ಸುಮ್ಮನೆ ಹೋಗಿ ಅವನನ್ನು ಸ್ವಾಧೀನಪಡಿಸಿಕೋ. ಸ್ವಲ್ಪ ಬೆದರಿಸಿ-ಗದರಿಸಿದರೆ ಅವನು ಗುಟ್ಟನ್ನೆಲ್ಲ ಉಗುಳಿ ಬಿಡುವನು. ಓಹೋ! ನೋಡು. ಅವನೀಗ ಅಲ್ಲಿಂದ ಹೊರಡುತ್ತಿದ್ದಾನೆ. ಕೂಡಲೆ ನೀನು ಮೋಟಾರನ್ನು ಹತ್ತಿ ಅವನನ್ನು ಬೆನ್ನಟ್ಟಿಕೊಂಡು ಹೋಗು. ಅವನು ಯಾವ ಕಡೆಗೆ ಹೋದನೆಂಬುದನ್ನು ನೀನು ಹೊರಗೆ ಹೋದಾಗ ಕಿಟಕಿಯಿಂದ ನಾನು ಸಂಕೇತ ಮಾಡುವೆನು; ಹೋಗು."

ಹಿಂದೆ ಯಾವ ಮನುಷ್ಯನ ಮಾತಿನಿಂದ ಇನ್ಸಪೆಕ್ಟರ ಹಾರ್ಕರನು ಡಾ. ಗ್ರೆಯನ್ನು ಸೆರೆಹಿಡಿದಿದ್ದನೋ ಆ ಮನುಷ್ಯನೇ ಈ ಸ್ಲಿಮ್ ಟಾಮಿ.

ಈಗವನಿಗೆ ಯಾರೋ ಮನೆಯೊಳಗಿನವರು ಎಚ್ಚರಿಕೆ ಇತ್ತರು. ಅದರಿಂದವನು ಜಾಗರೂಕನಾಗಿ ಕೂಡಲೆ ತಾನಿದ್ದ ಸ್ಥಳದಿಂದ ಹೊರಟು ಹೊರಬಾಗಿಲಿನ ಕಡೆಗೆ ಮುಂದುವರಿದನು.

ಟಿಂಕರನು ಕೋಣೆಯಿಂದ ಹೊರಹೊರಟಾಗ ಟಾಮಿಯು ಹೊರಬಾಗಿಲನ್ನು ದಾಟಿ ಎಡಗಡೆಗೆ ತಿರುಗಿದನು. ಬ್ಲೇಕನು ಇದನ್ನು ನೋಡುತ್ತಲೇ ಇದ್ದನು. ಎರಡನೆಯ ಕ್ಷಣದಲ್ಲಿಯೇ ಮೋಟಾರು ಸೈಕಲ್ಲಿನ ಶಬ್ದವು ಗಾಳಿಯಲ್ಲಿ ಮೊಳಗಿತು.

ಅಕಸ್ಮಾತ್ತಾಗಿ ಮೆಟ್ಟಿಲಿನ ಮೇಲೆ ಒಂದು 'ಧುಡುಂ' ಶಬ್ದವಾದುದನ್ನು ಕೇಳಿ ಬ್ಲೇಕನು ಥಟ್ಟನೆ ಕೋಣೆಯಿಂದ ಹೊರಗೆ ಬಂದು ನೋಡಿದನು. ಟಿಂಕರನನ್ನು ಯಾರೋ ಕೆಡವಿಬಿಟ್ಟಿದ್ದರು ಆ ಶಬ್ದವೇ ಬ್ಲೇಕನಿಗೆ ಕೇಳಿಸಿದ್ದಿತು; ಆದರೆ ಅಚೆ ಈಚೆಗೆ ನೋಡಿದಾಗ ಬ್ಲೇಕನಿಗೆ ಯಾರೂ ಕಾಣಿಸಲಿಲ್ಲ. ಆಗಲೇ ಟಿಂಕರನು ಎದ್ದು ಮೆಟ್ಟಿಲುಗಳಿಂದ ಕೆಳಗೆ ಓಡಿ ಹೋಗಿದ್ದನು. ಬ್ಲೇಕನು ಪುನಃ ಕೋಣೆಯೊಳಗೆ ಬಂದನು. ಇನ್ನೊಂದು ಕ್ಷಣದಲ್ಲಿಯೇ ಟಿಂಕರನ ಮೋಟಾರು ಹೊರ ಬಾಗಿಲಿನ ಬಳಿಗೆ ಬಂದಿತು. ಕೂಡಲೆ ಬ್ಲೇಕನು ಎಡಭಾಗದ ಕಡೆ ಸಂಕೇತ ಮಾಡಿದನು. ಟಿಂಕರನ ಮೋಟಾರು ಎಡಗಡೆಗೆ ಬಲು ವೇಗದಿಂದ ಹೊರಟು ಹೋಯಿತು.

ಮೆಟ್ಟಿಲುಗಳ ಮೇಲೆ ಟಿಂಕರನ ದಾರಿಗೆ ಯಾರೋ ಅಡ್ಡಿಮಾಡಿದ್ದರು. ಸ್ಲಿವರ್ ಟಾಮಿಗೂ ಕೂಡ ಮನೆಯೊಳಗಿನಿಂದ ಯಾರೋ ಎಚ್ಚರವಿತ್ತಿದ್ದರು. ಯಾರೋ ಕೋಣೆಯ ಹೊರಗೆ ನಿಂತು ಇವರ ಮಾತನ್ನು ಆಲಿಸಿದ್ದರು.

ಇದನ್ನೆಲ್ಲ ಆಲೋಚಿಸಿ ಇನ್ನು ಅಪಾಯವು ಸಮೀಪಿಸಿತೆಂದು ಬ್ಲೇಕನು ಕೋಣೆಯ ಬಾಗಿಲಿಗೆ ಒಳಗನಿಂದ ಅಗಳಿ ಹಾಕಿದನು; ಆದರೆ ಅಪಾಯವು ಬ್ಲೇಕನ ಮೇಲಿರದೆ, ಗಾಯಹೊಂದಿ ಹಾಸಿಗೆ ಹಿಡಿದು ಮೂರ್ಛಿತನಾಗಿ ಮಲಗಿದ್ದ ಹೆಡ್‌ಕೂಂಬನ ಮೇಲಿದ್ದಿತು; ಯಾಕೆಂದರೆ ಅವನು ಪುಂಡರ ಕೈಯೊಳಗಿನ ವಜ್ರವೊಂದನ್ನು ನುಂಗಿಬಿಟ್ಟಿದ್ದನು. ಈಗ ಈ ವೇಳೆಯಲ್ಲಿ ಆ ಪುಂಡರು ಅವನ ಮೇಲೆ ಸೇಡುತೀರಿಸಿಕೊಳ್ಳುವವರಾಗಿದ್ದರು. ಅವನ ಪ್ರಾಣವನ್ನು ಹಿಂಡಿ ತೆಗೆದೇ ಅವರು ಶಾಂತರಾಗುವ ಸಂಭವವಿದ್ದಿತು.

ಈಗ ಹೋಟಲಿನ ಕೆಲಸಗಾರರು ಎದ್ದು ಕೆಲಸ ಮಾಡುವ ವೇಳೆಯಾಗಿದ್ದಿತು; ಆದರೂ ಕೂಡ ಮನೆಯೊಳಗೆ ಇಷ್ಟರವರೆಗೆ ಭೀಷಣ ನಿಶ್ಶಬ್ದತೆಯೇ ಹರಡಿದ್ದಿತು. ಪಾರಟ್ರಿಜನು ಆ ಕೋಣೆಗೆ ಬಂದಾಗ ಬ್ಲೇಕನು ಅವನ ಮುಖದ ಮೇಲಾದ ವಿಚಿತ್ರ ಭಾವನೆಯನ್ನು ನೋಡಿದ್ದನು. ಈಗ

ಮೆಟ್ಟಲುಗಳ ಮೇಲೆ ಪುನಃ ಸುಳಿದಾಡುವ ಶಬ್ದವೂ ಕೇಳಿಸುತ್ತಿದ್ದಿತು.

ಬಳಿಕ ಅಕಸ್ಮಾತ್ತಾಗಿ ಯಾರೋ ಬಾಗಿಲನ್ನು ತಟ್ಟಿದರು. ಎರಡನೆಯ ಕ್ಷಣದಲ್ಲಿಯೇ ಪಾರಟ್ರಿಜನ ಮಾತು ಕೇಳಿಸಿತು:—"ಸ್ವಾಮೀ! ನಾನೀಗ ತಮ್ಮ ಹತ್ತಿರ ಬಹಳ ಅತ್ಯಗತ್ಯವಾದ ಮಾತು ಮಾತಾಡಲು ಬಂದಿರುತ್ತೇನೆ. ನೌಕರರೆಲ್ಲರೂ ಹೋಟಲಿನಿಂದ ಓಡಿಹೋದರು. ಮನೆ ಹಿಂಭಾಗದಲ್ಲೀಗ ಕೆಲವು ಸಂಶಯಗ್ರಸ್ತ ವ್ಯಕ್ತಿಗಳು ತಿರುಗಾಡುತ್ತಿರುವದು ಕಾಣಿಸುತ್ತಿದೆ."

ಬ್ಲೇಕನು ಒಂದು ಕ್ಷಣ ಕಾಲ ಆಲೋಚಿಸಿದನು; ಆದರೆ ಎರಡನೆಯ ಕ್ಷಣದಲ್ಲಿಯೇ ಈಗ ಬಾಗಿಲನ್ನು ತೆರೆಯುವದು ಒಳ್ಳೇದಲ್ಲವೆಂದು ನಿರ್ಧರಿಸಿ, ಮೆಲ್ಲನೆ ಹೇಳಿದನು:—"ನೋಡಿರಿ, ಗುಲ್ಲೆಬ್ಬಿಸಬೇಡಿರಿ. ಪೋಲೀಸರಿಗೆ ಫೋನ್ ಮಾಡಿರಿ. ಈ ಸಮಯದಲ್ಲಿ ನಿಮ್ಮ ಹೆಡ್‌ಕೂಂಬನಿಗೆ ಸ್ವಲ್ಪವಾದರೂ ತೊಂದರೆ ಕೊಡುವದು ಒಳ್ಳೇದಲ್ಲ, ತಿಳಿಯಿತೇ? ನಿಮಗೆ ನಾನು ಮುಂಚೆಯೇ ತಿಳಿಸಿಬಿಟ್ಟಿರುವೆನು, ಇಲ್ಲಿ ಗಲಾಟೆ ಮಾಡಬೇಡಿರೆಂದು."

ಬ್ಲೇಕನ ಮಾತಿಗೆ ಯಾವ ಉತ್ತರವೂ ಬರಲಿಲ್ಲ; ಆದರೆ ಎರಡನೆಯ ಕ್ಷಣದಲ್ಲಿಯೇ ಕೋಣೆಯ ಬಾಗಿಲಿನ ಮೇಲ್ಭಾಗದ ಕನ್ನಡಿಯು ದೊಡ್ಡ ಶಬ್ದಮಾಡುತ್ತ ಒಡೆದು, ಚೂರುಚೂರಾಗಿ ನೆಲದ ಮೇಲೆ ಬಿದ್ದಿತು. ಪೆಟ್ರೋಲೊಳಗೆ ಅದ್ದಿ ಬೆಂಕಿಹೊತ್ತಿಸಿದ ಕೆಲವು ಬಟ್ಟೆಗಳು ಆ ತೂತಿನಿಂದಲೇ ಕೋಣೆಯೊಳಗೆ ಬಂದು ಬಿದ್ದವು. ಇನ್ನೊಂದು ಸಲವೂ ಹಾಗೆಯೇ ಬಂದು ಬಿದ್ದವು; ಆದರೆ ಈ ಸಾರೆ ಮೇಲಕ್ಕೆ ಹಾರಿ ಅವುಗಳನ್ನು ಹೆಡ್‌ಕೂಂಬನ ಹಾಸಿಗೆಯ ಮೇಲೆಯೇ ಎಸೆದಿದ್ದರು. ಕೂಡಲೆ ಹೆಡ್‌ಕೂಂಬನ ಮೈಮೇಲಿನ ಬಟ್ಟೆಗೆ ಬೆಂಕಿತಗಲಿತು. ಎರಡನೆಯ ಕ್ಷಣದಲ್ಲಿಯೇ ಹೆಡ್‌ಕೂಂಬನು ಹಾರಿ ಕುಳಿತನು; ಆದರೆ ಅವನು ತಡೆಯಲಾರದೆ ಪುನಃ ಹಾಸಿಗೆಯ ಮೇಲೆಯೇ ಬಿದ್ದನು!

ಒಂದೇ ನೆಗೆತದಲ್ಲಿ ಹಾರಿ ಬ್ಲೇಕನು ಅವನ ಬಟ್ಟೆಯನ್ನು ಕಸುವಿನಿಂದ ಕಿತ್ತು ಕಿಟಕಿಯಿಂದ ಹೊರಗೆಸೆದನು. ಇಷ್ಟರೊಳಗೆ ಬಾಗಿಲಿನ ಹತ್ತಿರ ನೆಲದ ಮೇಲೆ ಹಾಸಿದ್ದ ರತ್ನಗಂಬಳಿಗೂ ಬೆಂಕಿ ಹತ್ತಿತು. ಬ್ಲೇಕನು ಅಲ್ಲಿಗೂ ಹಾರಿ ಬೂಟ್ಸಿನಿಂದ ಬಲವಾಗಿ ಒದೆದು ಬೆಂಕಿಯನ್ನು ನೊಂದಿಸಿದನು.

ಇಷ್ಟಕ್ಕೇ ನಿಲ್ಲಲಿಲ್ಲ. ಬಂದೂಕದಿಂದ ಹೊರಟ ಒಂದು ಗುಂಡು ಸುಯ್ಗುಟ್ಟುತ್ತ ಒಳಗೆ ಬಂದಿತು. ಬ್ಲೇಕನು ಥಟ್ಟನೆ ಹೆಡ್‌ಕೂಂಬನ ಮಂಚದ ಕೆಳಗೆ ಸೇರಿದನು. ಬಾಗಿಲಿನ ತೂತಿನ ಮೂಲಕವಾಗಿ ಥಣ ಥಣ ಎನ್ನುತ್ತ ಗುಂಡುಗಳು ಬರುತ್ತಿದ್ದವು. ಇದ್ದುದರಲ್ಲಿ ಕ್ಷೇಮವೇನೆಂದರೆ, ಬಾಗಿ

ಲಿನ ಅಗಳಿಯು ಹಾಕಲ್ಪಟ್ಟಿದ್ದಿತು. ಇಲ್ಲದಿದ್ದರೆ ಇಷ್ಟರೊಳಗೆ ಬ್ಲೇಕನ ಪ್ರಾಣಗಳು ಉಳಿಯುವ ಸಂಭವವಿರಲಿಲ್ಲ.

ಗುಂಡುಗಳ ಸುರಿಮಳೆಯು ನಿಂತಿತು. ಬ್ಲೇಕನು ಮಂಚದ ಕೆಳಗೆ ಕುಳಿತುಕೊಂಡೇ ಒಂದು ಕೈಯಿಂದ ಹೆಡ್‌ಕೂಂಬನ ನಾಡಿಯನ್ನು ಹಿಡಿದು ನೋಡಿದನು; ಆದರೆ ಆಗಲೇ ಹೆಡ್‌ಕೂಂಬನ ಪ್ರಾಣವು ತೆರಳಿದ್ದಿತು. ಒಬ್ಬ ದೊಡ್ಡ ಸಾಕ್ಷಿದಾರನು ಈ ಸಮಯದಲ್ಲಿ ಕೈಯಿಂದ ಜಾರಿಹೋದಂತಾಯ್ತು.

ಬ್ಲೇಕನು ಬಾಗಿಲನ್ನು ತೆರೆದು ಹೊರಗೆ ಇಣುಕಿ ನೋಡಿದನು; ಆದರೆ ಆಗ ಹೊರಗೆ ಯಾರ ಸುಳಿವೂ ಇರಲಿಲ್ಲ ಕೇವಲ ನಿಃಶಬ್ದತೆ ಇದ್ದಿತು. ಹೊರಗೆ ಹೋಗತಕ್ಕ ದಾರಿಯನ್ನು ಪುಂಡರು ಮುಳ್ಳಿನ ತಂತಿಯಿಂದ ಕಟ್ಟಿ ಬಿಟ್ಟಿದ್ದರು.

ಬ್ಲೇಕನು ಅದನ್ನು ತುಂಡು ಮಾಡಿ ಬೇಗ ಬೇಗನೆ ಮೆಟ್ಟಲುಗಳನ್ನಿಳಿದು ಕೆಳಗೆ ಹೋಗಿ ನೋಡಿದನು; ಆದರೆ ಅಲ್ಲಿಯೂ ಕೂಡ ಕಣ್ಣಿಗೆ ಯಾರೂ ಕಾಣಿಸಲಿಲ್ಲ. ಟೆಲಿಫೋನಿನ ತಂತಿಯೂ ಕತ್ತರಿಸಿ ಹಾಕಲ್ಪಟ್ಟಿದ್ದಿತು. ಅಕ್ಕಪಕ್ಕದ ಕೋಣೆಗಳಿಂದ ಜನರು ಕಿರಿಚಾಡುತ್ತಿದ್ದ ಶಬ್ದವು ಕೇಳಿಬರುತ್ತಿದ್ದಿತು. ಬ್ಲೇಕನು ಅಲ್ಲಿಗೆ ಹೋಗಿ ಬಾಗಿಲನ್ನು ತೆರೆದು ನೋಡಿದಾಗ ಅಲ್ಲಿ ಒಂದು ದೃಶ್ಯವು ಕಾಣಿಸಿತು. ಐದು ಜನ ಗಂಡಸರು, ಇಬ್ಬರು ಹೆಂಗಸರು ಇವರಿಷ್ಟು ಮಂದಿ ಟೇಬಲ್ಲಿನ ನಾಲ್ಕೂ ಕಡೆಗೆ ಕಟ್ಟಲ್ಪಟ್ಟಿದ್ದರು.

ಬ್ಲೇಕನು ಪುನಃ ಮೆಟ್ಟಲನ್ನು ಹತ್ತಿ ಮೇಲೆ ಹೋದನು. ಅಲ್ಲೊಂದು ಕೋಣೆಯೊಳಗೆ ಯಾವನೋ ಒಬ್ಬನು ಕಿರಿಚಾಡುತ್ತಿದ್ದನು. ಬ್ಲೇಕನು ಬಾಗಿಲನ್ನು ತೆರೆದನು. ಒಳಗಿದ್ದ ಮನುಷ್ಯನನ್ನು ನೋಡಿ ಬ್ಲೇಕನು ಗುರುತಿಸಿದನು. ಅವನು ಸೀಸರ್ ಮಾಲಪಸ್ ಎಂಬೊಬ್ಬ ರತ್ನವ್ಯಾಪಾರಿಯಾಗಿದ್ದನು. ಅಲ್ಲಿ ಅವನಿರುವುದನ್ನು ಕಂಡು ಬ್ಲೇಕನಿಗೆ ಬಲು ಸೋಜಿಗವಾಯಿತು. ಬ್ಲೇಕನನ್ನು ನೋಡಿದೊಡನೆ ಆತನು ಕೂಗಾಡಿದನು– "ಕೊನೆಗೆ ಇದೆಲ್ಲ ಏನು ಸ್ವಾಮಿ! ನನ್ನನ್ನು ಈ ಕೋಣೆಯಲ್ಲಿ ಬಂಧಿಸಿದವರ್‍ಯಾರು?"

ಬ್ಲೇಕ್—"ನನಗೂ ವಿಸ್ಮಯವಾಗಿದೆ. ನಿಮ್ಮದೇನಾದರೂ ಸಾಮಾನು ಕಳವಾಯಿತೇ?"

ಮಾಲಪಸ್—"ಇಲ್ಲ; ಆದರೆ........"

"ಬನ್ನಿ. ಈಗ ನನಗೆ ಸ್ವಲ್ಪ ಸಹಾಯಮಾಡಿರಿ." ಎಂದು ಹೇಳುತ್ತ, ಬ್ಲೇಕನು ಅವನನ್ನೂ ಜೊತೆಗೆ ಕರೆದುಕೊಂಡು ಉಳಿದ ಕೋಣೆಗಳಿಗೆ ಹೋದನು. ಪ್ರಾಯಶಃ ಎಲ್ಲ ಕೋಣೆಗಳಲ್ಲಿಯೂ ಜನರು ಬಂಧಿಸಲ್ಪಟ್ಟಿದ್ದರು.

ಆದರೆ ಬ್ಲೇಕನು ಪಾರಟ್ರಿಜನನ್ನು ಮಾತ್ರ ಎಲ್ಲಿಯೂ ಕಾಣಲಿಲ್ಲ. ಈಗ ಮನೆಯೊಳಗಿದ್ದವರೆಲ್ಲ ಒಟ್ಟು ಸೇರಿದರು. ಬ್ಲೇಕನು ಅವರಿಗೆ ಹೆಡ್ ಕೂಂಬನ ಚರಿತ್ರೆಯನ್ನು ಸಂಕ್ಷೇಪವಾಗಿ ತಿಳಿಸಿದನು.

ಹೆಡ್‌ಕೂಂಬನ ಮರಣವಾರ್ತೆಯನ್ನು ಕೇಳಿದೊಡನೆಯೇ ಮಾಲಪಸನು ಕಿರಿಚಿಕೊಂಡು—"ಹೆಡ್‌ಕೂಂಬನು ಹೋಗಿಬಿಟ್ಟನೇ? ಅಯ್ಯೋ! ಬಹಳ ಕೆಡುಕಾಯಿತು; ಆದರೆ........"

ಬ್ಲೇಕನು ತನ್ನ ಮುಖವನ್ನು ಇನ್ನೊಂದು ಪಕ್ಕಕ್ಕೆ ತಿರುಗಿಸಿ ತನ್ನ ನಿಜರೂಪವನ್ನು ಧರಿಸಿಕೊಂಡನು. ಈಗ ಮಾಲಪಸನ ಕಡೆಗೆ ಒಂದು ಸಲ ನೋಡಿ ಎಲ್ಲರನ್ನೂ ಕುರಿತು ಹೇಳಿದನು—"ನೀವೆಲ್ಲರೂ ಈ ಹೆಸರನ್ನು ಕೇಳಿ ಅರಿತಿರಬಹುದು; ನನ್ನ ಹೆಸರು ಸ್ಯಾಕ್ಸ್ಟನ್ ಬ್ಲೇಕ್."

ಈ ಹೆಸರನ್ನೇನೋ ಅಲ್ಲಿದ್ದ ಪ್ರತಿಯೊಬ್ಬರೂ ಕೇಳಿದ್ದರು ಮಾಲಪಸನಂತೂ ಚೆನ್ನಾಗಿ ಅರಿತಿದ್ದನು. ಆತ ಬ್ಲೇಕನನ್ನು ಗುರುತಿಸಿ ಅಂಜತೊಡಗಿದನು.

ಆ ಜನರೊಳಗೆ ಒಬ್ಬನು ಹೇಳಿದನು—"ನನ್ನ ಹೆಸರು ಸೇಮೂರ್. ನಾನೀಗ ಏನಾದರೂ ತಮ್ಮ ಸೇವೆಮಾಡಬಲ್ಲೆನೇ?"

ಬ್ಲೇಕ್—"ಟೆಲಿಫೋನಿನ ತಂತಿಯು ಕತ್ತರಿಸಲ್ಪಟ್ಟಿದೆ. ಆದ್ದರಿಂದ ನೀವೀಗ ಸಹಾಯ ಮಾಡುವಿರಾದರೆ, ಇಲ್ಲಿಂದ ಸುಮಾರು ಮುನ್ನೂರು ಗಜ ದೂರದಲ್ಲಿ ರಸ್ತೆಯ ಬಲಪಕ್ಕದಲ್ಲಿರುವ ಪ್ರೈವೇಟ್ ಟೆಲಿಫೋನಿರುವ ಮನೆಗೆ ಹೋಗಿ ಪೋಲಿಸ್ ಸ್ಟೇಷನ್ನಿಗೆ ಈ ವರ್ತಮಾನವನ್ನೆಲ್ಲ ತಿಳಿಸಿರಿ."

ಸೇಮೂರನು ಆಗಲೆಂದು ಹೇಳಿ ಅಲ್ಲಿಂದ ಹೊರಟು ಹೋದನು. ಬ್ಲೇಕನು ಅಲ್ಲಿ ಉಳಿದ ಜನಗಳಿಗೆ ಹೇಳಿದನು—"ಇಲ್ಲಿಗೆ ಪೋಲೀಸರು ಬರುವ ವರೆಗೆ ನೀವೆಲ್ಲರೂ ಇಲ್ಲಿಯೇ ಇರಬೇಕಾಗುವದು; ಯಾಕೆಂದರೆ, ನಿಮ್ಮೆಲ್ಲರ ಸಾಕ್ಷ್ಯದ ಆವಶ್ಯಕತೆಯುಂಟಾಗಬಹುದು. ಅದುವರೆಗೆ ನೀವೆಲ್ಲರೂ ಆ ದೊಡ್ಡ ಚೌಕಿನಲ್ಲಿ ಒಟ್ಟಿಗೆ ಕುಳಿತಿರಬೇಕು. ಮಿಸ್ಟರ್ ಮಾಲಪಸ್, ನೀವೀಗ ದಯವಿಟ್ಟು ನನಗೆ ಸ್ವಲ್ಪ ಸಹಾಯಮಾಡಬೇಕು."

"ಬಹಳ ಸಂತೋಷದಿಂದ ಮಾಡುವೆನು, ಸ್ವಾಮಿ!" ಎಂದು ಹೇಳಿ ಮಾಲಪಸನು ಬ್ಲೇಕ್ ಮತ್ತು ಉಳಿದ ಜನಗಳೊಂದಿಗೆ ದೊಡ್ಡ ಚೌಕಿಗೆ ಬಂದನು. ಬ್ಲೇಕನು ಎಲ್ಲರಿಗೂ ಅಲ್ಲಿಯೇ ಕುಳಿತು ಕಾದಿರಲು ಹೇಳಿ, ಮಾಲಪಸನೊಂದಿಗೆ ಪಕ್ಕದ ಕೋಣೆಯೊಳಗೆ ಹೋದನು. ಬ್ಲೇಕನು ಕುರ್ಚಿಯನ್ನು ತೋರಿಸುತ್ತ ಹೇಳಿದನು:—"ಮಿಸ್ಟರ ಮಾಲಪಸ, ಕುರ್ಚಿಯ ಮೇಲೆ ಕುಳಿತುಕೊಂಡು ನನ್ನ ಮಾತನ್ನು ಸಾವಧಾನವಾಗಿ ಆಲಿಸಿರಿ."

ಮಾಲಪಸನು ಶಂಕಿಸುತ್ತ ಮುಂದೆ ಹೋಗಿ ಬ್ಲೇಕನು ತೋರಿಸಿದ ಕುರ್ಚಿಯ ಮೇಲೆ ಕುಳಿತು ಬ್ಲೇಕನ ಮುಖಭಾವನೆಯನ್ನು ತಿಳಿಯಲೆತ್ನಿಸಿದನು. ಬ್ಲೇಕನು ಮಾಲಪಸನೆದುರಿಗೇ ಇನ್ನೊಂದು ಕುರ್ಚಿಯಲ್ಲಿ ಕುಳಿತು ಮಾತಾಡತೊಡಗಿದನು:—'ಇಂದಿಗೆ ಒಂಬತ್ತು ವರ್ಷದ ಹಿಂದಿನ ಮಾತು, ಮಾಲಪಸ್! ಯಾವುದೋ ಕಾರಣದಿಂದ ನಾನು ಜೋಹಾನ್ಸ ಬರ್ಗಿಗೆ ಹೋಗಿದ್ದೆನು. ಆ ಸಮಯದಲ್ಲಿ ಕೋರ್ಟಿನಲ್ಲಿ ಮೂರು ಜನರ ಮೇಲೆ ಒಂದು ಮೊಕದ್ದಮೆಯು ನಡೆಯುತ್ತಿದ್ದಿತು. ನನಗೆ ಅಂತಹ ಮೊಕದ್ದಮೆಗಳಲ್ಲಿ ಬಹಳ ಅಭಿರುಚಿ ಇದ್ದಿತು. ಆದಕ್ಕಾಗಿ ನಾನು ಕೂಡಲೆ ಕೋರ್ಟಿಗೆ ಹೋದೆನು. ಆ ಮೂರು ಜನರ ಹೆಸರು ಎಡೆಲ್‌ಸ್ಟೀನ್, ರಾಫ್ಸ್ ಮತ್ತು ಡೀಡ್ರಿಚ್.''

ಥಟ್ಟನೆ ಮಾಲಪಸನ ಮುಖವು ಕಂದಿಹೋಯಿತು ಬ್ಲೇಕನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತ ಹೇಳುತ್ತಿದ್ದನು:—''ಆ ಮೊಕದ್ದಮೆಯಲ್ಲಿ ಎಡೆಲ್‌ಸ್ಟೀನ್ ಮತ್ತು ರಾಫ್ಸ್ ಎಂಬಿಬ್ಬರಿಗೆ ಐದೈದು ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು. ಡೀಡ್ರಿಚನಿಗೆ ಮೂರು ವರ್ಷದ ಶಿಕ್ಷೆ ವಿಧಿಸಲ್ಪಟ್ಟಿತು. ರೂಪ ಮತ್ತು ಆಕಾರವನ್ನು ಕಂಡು ಅದನ್ನು ನೆನಪಿಟ್ಟುಕೊಳ್ಳುವದರಲ್ಲಿ ನನಗೆ ಹೆಚ್ಚಾಗಿ ಅಭ್ಯಾಸವಿದೆ ಮಾಲಪಸ್! ಆ ಮೇಲೆ ಪುನಃ ಎಡೆಲ್‌ಸ್ಟೀನ್ ಮತ್ತು ರಾಫ್ಸ್ ಎಂಬಿಬ್ಬರನ್ನು ನಾನೆಂದೂ ನೋಡಲಿಲ್ಲ. ರಾಫ್ಸ್ ಜೈಲಿನಲ್ಲಿಯೇ ಸತ್ತು ಹೋದನೆಂದು ನನ್ನ ಅಭಿಪ್ರಾಯವಿದೆ. ನಾನು ಒಂದು ಸಮಯದಲ್ಲಿ ಎಂಟ್ವರ್ಪಿನಲ್ಲಿದ್ದಾಗ ಡೈಮಂಡ್ ಎಕ್ಸ್ಚೇಂಜಿನ ಕೆಲವು ಮೆಂಬರರು ಒಂದು ಸತ್ಕಾರಕೂಟಕ್ಕೆ ನನ್ನನ್ನು ಆಹ್ವಾನಿಸಿದ್ದರು. ಆ ಮೆಂಬರರಲ್ಲಿ ಡೀಡ್ರಿಚನೂ ಒಬ್ಬನಾಗಿದ್ದನು; ಆದರೆ ಅವನು ತನ್ನ ಹಿಂದಿನ ಹೆಸರನ್ನು ಮಾರ್ಪಡಿಸಿಕೊಂಡು ಎಕ್ಸ್ಚೇಂಜಿನ ಮೆಂಬರರಲ್ಲಿ........''

ಇನ್ನು ಮಾಲಪಸನಿಂದ ತಡೆದುಕೊಳ್ಳಲಾಗಲಿಲ್ಲ. ಬಹಳ ಕರುಣ ಸ್ವರದಿಂದ ದೈನ್ಯವನ್ನು ವ್ಯಕ್ತಗೊಳಿಸುತ್ತ ಹೇಳಿದನು:—''ಸ್ವಾಮಿ! ಆ ರಹಸ್ಯವನ್ನೆಲ್ಲ ಹೊರಗೆಡವಿ ನನ್ನ ಈ ಜೀವನವನ್ನು ಹಾಳು ಮಾಡಬಾರದು. ನಾನು ತಮಗೆ ವಿಶ್ವಾಸವೀಯುತ್ತೇನೆ. ಜೋಹಾನ್ಸಬರ್ಗಿನ ಆ ಮೊಕದ್ದಮೆಯು ನನಗೆ ವಿರುದ್ಧವಾದ ಒಂದು ಫಿತೂರಿಯಾಗಿದ್ದಿತು ನಾನು........''

ಅವನ ಮಾತನ್ನು ತಡೆದು ಬ್ಲೇಕನು ಹೇಳಿದನು:—''ಸಾಕು; ಸುಮ್ಮನಿರಿ. ಇಂತಹ ವ್ಯರ್ಥವಾದ ಮಾತುಗಳನ್ನು ನಾನು ಕೇಳಲಿಚ್ಛಿಸುವದಿಲ್ಲ. ರತ್ನಗಳ ವಿಷಯದಲ್ಲಿ ಆಗಲೂ ಕೂಡ ನಿಮಗೆ ಬಲು ಚೆನ್ನಾದ ತಿಳುವಳಿಕೆ

ಇದ್ದಿತೆಂದು ನಾನು ನಿಶ್ಚಯವಾಗಿ ತಿಳಿದಿರುವೆನು. ನೀವೇನು ಮಾಡುತ್ತಿದ್ದಿರೆಂಬುದನ್ನು ನೀವೇ ಅರಿತಿದ್ದಿರಿ. ಒಳ್ಳೇದು. ಈಗ ಆ ವಿಚಾರಗಳು ಹೋಗಲಿ ಬಿಡಿ ನನ್ನ ಅಭಿಪ್ರಾಯ:ವೇನಂದರೆ, ಒಳ್ಳೆಯ ಅದೃಷ್ಟದಿಂದಲೇ ನೀವಿಂದು ಎಕ್ಸ್ಛೇಂಜಿನ ಮೆಂಬರರಾಗಿರುವಿರಿ. ನಾನು ತಿಳಿದಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಬಹಳ ಪರೀಕ್ಷಿಸಿ, ಆಲೋಚಿಸಿ, ವಿಚಾರಿಸಿಯೇ ಎಕ್ಸ್ಛೇಂಜಿಗೆ ಮೆಂಬರರು ಚುನಾಯಿಸಲ್ಪಡುವರು.''

ಮಾಲಪಸನು ಅಧೀನನಾಗಿ ಹೇಳಿದನು—"ಇದೇ ನನ್ನ ಜೀವನವಾಗಿದೆ. ತಾವೇನಾದರೂ ನನ್ನ ರಹಸ್ಯವನ್ನು ಹೊರಪಡಿಸಿದ್ದಾದರೆ, ನನ್ನ ಜೀವನವು ಹಾಳಾಗಿ ಹೋಗುವುದಲ್ಲದೆ, ನಾನು ಆತ್ಮಹತ್ಯೆಯನ್ನೇ ಮಾಡಿಕೊಳ್ಳಬೇಕಾಗುವುದು. ತಾವು ನಂಬೋಣಾಗಲಿ—ನಾನು ಅಂದಿನಿಂದ ಇದುವರೆಗೆ ನಿರ್ದೋಷ ಜೀವನವನ್ನೇ ನಡೆಸುತ್ತ ಬಂದಿರುವೆನು. ಆ ಇಬ್ಬರು ದುಷ್ಟರು ಮೋಸ ಮಾಡಿ ನನ್ನನ್ನು ಆ ಸಮಯದಲ್ಲಿ ಸೂರೆಗೊಂಡರು. ನನ್ನ ಕೈಯಲ್ಲಿ ಕೊಡಲಾಗಿದ್ದ ರತ್ನಗಳು ಕಳವಿನವಾಗಿದ್ದವೆಂಬ ವಿಷಯವು ಕನಸಿನಲ್ಲಿಯೂ ನನಗಾಲೋಚನೆ ಬಂದಿರಲಿಲ್ಲ. ಅವರು ನನಗೆ ಕ್ರಮವಾಗಿ ರಸೀದಿಯನ್ನೂ ತೋರಿಸಿದ್ದರು. ಆದರೂ ಕೂಡ ಈಗ ಆ ಸಂಗತಿಗಳೆಲ್ಲವೂ ಪ್ರಕಟವಾದವೆಂದಾದರೆ, ಇಷ್ಟು ದಿನಗಳ ವರೆಗಿನ ನನ್ನ ನಿರ್ದೋಷ ಜೀವನವೂ ಮಣ್ಣುಪಾಲಾಗುವುದು, ನನ್ನ ಆಸ್ತಿಯು ಜಪ್ತಿಯಾಗಿ ಹೋಗುವುದು, ನನ್ನ ಸರ್ವಸ್ವವೂ ನಾಶವಾಗುವುದು.''

ದೃಢಸ್ವರದಿಂದ ಬ್ಲೇಕನು-"ಹೌದು; ನಿಶ್ಚಯವಾಗಿಯೂ ಜಪ್ತಿಯಾಗಿ ಹೋಗುವುದು. ಆದಕ್ಕಾಗಿ ಆ ಮಾತುಗಳು ನನ್ನ ಬಾಯಿಂದ ಹೊರಡುವುದು ಅಥವಾ ಹೊರಡದಿರುವುದು ಇದು ನಿಮ್ಮ ಕೈಯ್ಯಲ್ಲಿಯೇ ಇದೆ ಎಂದು ತಿಳಿಯಿರಿ. ಈಗ ನಿಜವಾಗಿ ಹೇಳಿರಿ—ನೀವು ಇಲ್ಲಿಗೆ ಬಂದಿರುವುದು ಯಾಕೆ? ರತ್ನಚೋರನ ಮನೆಯಲ್ಲಿ ರತ್ನವ್ಯಾಪಾರಿಯು ಹೀಗೆ ಕಾಣಿಸುವುದೆಂಬುದು ಆಕಸ್ಮಾತ್ತಾಗಿ ಎಂದೊಪ್ಪಲು ಸಾಧ್ಯವೇ ಇಲ್ಲ."

ನಿರಾಶಭಾವದಿಂದ ಮಾಲಪಸನು ಹೇಳಿದನು "ಹಾ! ಏನಂದಿರಿ? ರತ್ನಚೋರನೇ? ನನಗಿದು ನಿಜವಾಗಿಯೂ ತಿಳಿಯದು, ಸ್ವಾಮೀ! ಹೆಡ್‌ಕೂಂಬನು ಒಬ್ಬ ಕಳ್ಳನೆಂಬುದನ್ನು ನಾನು ತಿಳಿಯೆನು. ನಾನಿಲ್ಲಿಗೆ ಬಂದಿದ್ದುದು ನನ್ನ ಕಕ್ಷಿಗಾರನೊಬ್ಬನನ್ನು ನೋಡುವುದಕ್ಕಾಗಿ. ಹೆಡ್‌ಕೂಂಬನು ಅಂತಹ ಮನುಷ್ಯನಿರುವನೆಂಬ ಸುಳುವು ಕೂಡ ನನಗಿರಲಿಲ್ಲ.''

ಬ್ಲೇಕ್—"ನಿಮ್ಮದು ಯಾವುದಾದರೂ ಸಾಮಾನು ಕಳವಾಯಿತೇ

ಎಂದು ನಾನು ನಿಮ್ಮನ್ನು ಸ್ವಲ್ಪ ಮುಂಚೆ ಕೇಳಿದಾಗ ನಿಮ್ಮ ಕೈಯು ಥಟ್ಟನೆ ಎದೆಯಮೇಲಿನ ಜೇಬಿನ ಕಡೆಗೆ ಹೋಯಿತು. ಅದರಿಂದ ನೀವಿಲ್ಲಿಗೆ ರತ್ನಗಳನ್ನು ಕೊಂಡುಕೊಳ್ಳುವುದಕ್ಕಾಗಿಯೇ ಬಂದಿದ್ದೀರೆಂದು ತಿಳಿದು ಬರುವದು. ನಿಜವನ್ನು ನುಡಿಯಿರಿ. ಈಗ ಯಾವ ಬಗೆಯ ರತ್ನಗಳನ್ನು ಕೊಂಡುಕೊಳ್ಳುವ ಇಚ್ಛೆಯಿಂದ ನೀವಿಲ್ಲಿಗೆ ಬಂದಿದ್ದಿರಿ? ವಜ್ರಗಳನ್ನೇನು?''

ಮಾಲಪಸ್—''ಹೌದು, ನಾನು ವಜ್ರಗಳನ್ನೇ ಕೊಂಡುಕೊಳ್ಳಲು ಬಂದಿದ್ದೆನು. ಹಿಂದೊಂದು ಸಾರಿ ಇದೇ ವಜ್ರಗಳನ್ನು ಕೊಂಡುಕೊಳ್ಳುವುದರಲ್ಲಿಯೇ ನಾನು ಮೋಸ ಹೋಗಿ ಬಿಟ್ಟಿದ್ದೆನು. ಆ ಸಮಯದಿಂದ ಇಷ್ಟರವರೆಗೆ ನಾನು ಹೆಚ್ಚಾದ ಎಚ್ಚರಿಕೆಯಿಂದ ಕೆಲಸ ಮಾಡುತ್ತಿರುವೆನು. ಯಾವ ವಜ್ರಗಳನ್ನು ಕೊಂಡುಕೊಳ್ಳಲು ನಾನಿಲ್ಲಿಗೆ ಬಂದಿದ್ದೆನೋ ಆ ವಜ್ರಗಳು ಮಾತ್ರ ಕಳವಿನವಲ್ಲವೆಂದು ಬಹಳ ಚೆನ್ನಾಗಿ ಅರಿತಿರುವೆನು.''

ಬ್ಲೇಕ್—''ಇಂತಹ ನಿಶ್ಚಯುವು ನಿಮಗಾದ ಬಗೆ ಹೇಗೆ?''

ಮಾಲಪಸ್—''ವಜ್ರಗಳು ಒಬ್ಬನ ಕೈಯಿಂದ ಇನ್ನೊಬ್ಬನ ಕೈಗೆ ಹೋದರೆ ಅವುಗಳ ಸೂಚನೆಯು ನಮ್ಮ ಬಳಿಯಲ್ಲಿ ಸಿದ್ಧವಿರುತ್ತದೆ. ನಾವು ಎಕ್ಸ್ಚೇಂಜಿನಲ್ಲಿ ಬಹು ಬೆಲೆಯುಳ್ಳ ವಜ್ರಗಳ ಮೇಲೆ ಯಾವಾಗಲೂ ದೃಷ್ಟಿಯಿಟ್ಟಿರುತ್ತೇವೆ. ಯಾವ ವಜ್ರಗಳನ್ನು ಕೊಂಡುಕೊಳ್ಳಲು ನಾನಿಲ್ಲಿಗೆ ಬಂದಿರುವೆನೋ, ಅವೆಲ್ಲವೂ ಬಹಳ ದೊಡ್ಡ ದೊಡ್ಡ ವಜ್ರಗಳಿರುವವು. ಆದರಲ್ಲಿಯೂ ವಿಶೇಷವೇನೆಂದರೆ, ಅವೆಲ್ಲವೂ ಹಸರು ಬಣ್ಣದವು.''

ಬ್ಲೇಕ್—''ಹಸರು ಬಣ್ಣದ ವಜ್ರಗಳಾದರೋ ಬಲು ಬೆಲೆಯುಳ್ಳವಲ್ಲವೇ ಮಾಲಪಸ್!''

ಮಾಲಪಸ್:-''ಅದರಲ್ಲೇನು ಸಂಶಯ? ಅಂಥವು ಸಾಮಾನ್ಯವಾಗಿ ಸಿಗತಕ್ಕವುಗಳಲ್ಲ. ಪೇಟೆಯಲ್ಲಿ ಅವುಗಳಿಗೆ ಬಹಳ ಬೆಲೆಯು ದೊರೆಯುವುದು.''

ಬ್ಲೇಕ್—''ಆದರೆ ಮಾಲಪಸ್, ನೀವಿಲ್ಲಿಗೆ ಯಾವ ವಜ್ರಗಳನ್ನು ಕೊಂಡುಕೊಳ್ಳಲು ಬಂದಿರುವಿರೋ ಅವೂ ಕೂಡ ಒಂದು ವೇಳೆ ಕಳವಿನ ಮಾಲೇ ಆಗಿದ್ದರೆ-ಆಗ?''

ಮಾಲಪಸನು ದೃಢನಿಶ್ಚಯದಿಂದ ಉತ್ತರವಿತ್ತನು—''ಹಾಗೇನೂ ಆಗುವಂತಿಲ್ಲ. ಅವು ಒಂದು ವೇಳೆ ಕಳವಿನವಾಗಿದ್ದರೆ ಪೋಲೀಸರು ಕೂಡಲೆ ಆ ವರ್ತಮಾನವನ್ನು ವ್ಯಾಪಾರಿಗಳಿಗೆ ತಿಳಿಸದೆ ಇರುತ್ತಿರಲಿಲ್ಲ. ಶಾವಿಲ್ಲಿ ನೋಡೋಣಾಗಲಿ—ಇಷ್ಟರ ವರೆಗೆ ಕಳವಾಗಿರುವ ಎಲ್ಲ ರತ್ನಗಳ ಪಟ್ಟಿಯೂ ನನ್ನ ಬಳಿಯಲ್ಲಿ ಇದೆ.''

ಹೀಗೆ ಹೇಳುತ್ತ ಮಾಲಪಸನು ತನ್ನ ಜೇಬಿನಿಂದ ಎಷ್ಟೋ ಕಾಗದಗಳನ್ನು ತೆಗೆದು ಬ್ಲೇಕನಿಗೆ ತೋರಿಸಿದನು. ಅವುಗಳಲ್ಲಿ ಒಂದು ಕಾಗದದ ಮೇಲ್ಗಡೆ "ಹೈಡನ್ ಗಾರ್ಡನ್ನಿನ ರತ್ನವ್ಯಾಪಾರಿಯಾದ ಶೀಡ್ಸನ್ನನಲ್ಲಿ ಕಳವಾದವುಗಳು." ಎಂದು ಬರೆಯಲ್ಪಟ್ಟಿದ್ದಿತು. ಕೆಳಗಡೆ ಕಳವಾದ ರತ್ನಗಳ ಪಟ್ಟಿಯೂ ಅವುಗಳ ಬಣ್ಣ ಮತ್ತು ತೂಕವೂ ವಿವರವಾಗಿ ಇದ್ದಿತು.

ಬ್ಲೇಕ್ ಹೇಳಿದನು-- "ಸರಿ. ಹಾಗಾದರೆ ಮಾಲಪಸ್, ಈ ಪಟ್ಟಿಗಳಲ್ಲಿರುವ ರತ್ನಗಳ್ಯಾವವನ್ನೂ ಕಳವಿನವೆಂದು ನೀವು ಕೊಂಡುಕೊಳ್ಳಲಾರಿರಿ, ಅಲ್ಲವೇ?"

ಮಾಲಪಸ್—"ನಾನು ಮುಂಚೆಯೇ ತಮಗೆ ತಿಳಿಸಿಬಿಟ್ಟಿರುವೆನು. ಈಗ ನಾನು ಅಂತಹ ತಪ್ಪುಗಾರನಾಗುವದಿಲ್ಲ. ಯಾವ ವಜ್ರಗಳನ್ನು ಕೊಂಡು ಕೊಳ್ಳುವದಕ್ಕಾಗಿ ನಾನಿಲ್ಲಿಗೆ ಬರುವ ಶ್ರಮವಹಿಸಿದೆನೋ, ಅವು ಹಸರು ಬಣ್ಣದವು. ಆ ವಜ್ರಗಳೂ ಒಂದು ವೇಳೆ ಕದಿಯಲ್ಪಟ್ಟವಾಗಿದ್ದರೆ, ಕೂಡಲೆ ಆ ವಾರ್ತೆಯು ನಮಗೆ ಬಂದೇಬರುತ್ತಿದ್ದಿತು; ಹಾಗೇನೂ ಬಂದಿಲ್ಲ. ಇಷ್ಟೆಲ್ಲ ವಿಚಾರವನ್ನು ತಾವು ಆಲಿಸಿದ ಮೇಲೆ ಈಗಾದರೂ ತಮ್ಮ ಮನಸ್ಸಿಗೆ "ಇವನು ಇಲ್ಲಿಗೆ ಮೋಸದ ಕೃತ್ಯಕ್ಕಾಗಿ ಬಂದವನಲ್ಲ." ಎಂಬ ವಿಶ್ವಾಸವು ಉಂಟಾಗದಿರಲಾರದು."

ಬ್ಲೇಕ್—"ನೀವು ಕೊಂಡುಕೊಳ್ಳಬೇಕೆಂದಿರುವ ವಜ್ರಗಳ ಪಟ್ಟಿಯು ನಿಮ್ಮ ಬಳಿಯಲ್ಲೀಗ ಹಾಜರಿರಬಹುದಲ್ಲವೇ?"

"ಇದ್ದೇ ಇರುವದು" ಎಂದು ನುಡಿದು, ಮಾಲಪಸನು ತನ್ನ ಪಾಕೇಟ್ ಬುಕ್ಕಿನಲ್ಲಿದ್ದ ಒಂದು ಕಾಗದವನ್ನು ತೆಗೆದು ಬ್ಲೇಕನ ಕೈಗೆ ಕೊಟ್ಟನು ಅದರಲ್ಲಿ ಹೀಗೆ ಇದ್ದಿತು:—"ಹತ್ತು ಹಸರು ಬಣ್ಣದ ವಜ್ರಗಳು, ಒಬ್ಬ ವ್ಯಾಪಾರಿಯು ಸ್ವಂತ ಸಂಪತ್ತು, ವರ್ಷಗಟ್ಲೆ ಕಷ್ಟಬಟ್ಟು ಸಂಪಾದಿಸಿದುದು, ಇವೆಲ್ಲವೂ ನಿರ್ದೋಷವಾಗಿವೆ, ಬಲು ಬೆಲೆಯುಳ್ಳವುಗಳಾಗಿವೆ. ತೂಕವು ಕ್ರಮವಾಗಿ ಹೀಗೆ ಇದೆ: ೨೨, ೨೦, ೧೮, ೧೪, ೧೬, ೧೬, ೧೫, ೯, ೧೨, ೧೧. ಕೆತ್ತನೆಯ ಕೆಲಸವು ಪಕ್ಕದಲ್ಲಿದೆ."

ಬ್ಲೇಕ್:—"ಈ ವ್ಯಾಪಾರಿಯ ಹೆಸರೇನು?"

ಮಾಲಪಸ್:—"ಹೆನರಿ ಜೋನ್ಸ. ಡೆಬೆನ್ ಹೆಮ್ ಆ್ಯಂಡ್ ಸ್ಟ್ರಥರ್ಸ ಎಂಬ ರತ್ನವ್ಯಾಪಾರಿಗಳ ಟ್ರಾವಲಿಂಗ್ ಏಜಂಟ್. ಆ ಫರ್ಮಿನ ಎಲ್ಲ ರತ್ನಗಳನ್ನೂ ಮಾರಾಟಮಾಡಲಿಕ್ಕೆ ಇವನಿಗೆ ಸಂಪೂರ್ಣ ಅಧಿಕಾರವಿದೆ. ಇಂದು ರಾತ್ರಿ ಇದೇ ಸ್ಥಳದಲ್ಲಿ ನನ್ನನ್ನು ನೋಡುವೆನೆಂದು ಆತನು ಹೇಳಿಹೋಗಿದ್ದನು."

ಕೂಡಲೆ ಬ್ಲೇಕನಿಗೆ ನೆನಪಾಯಿತು. ಇದೇ ಫಾರ್ಮಿನ ಹೆಸರನ್ನು ಡಾಕ್ಟರ್ ಗ್ರೇಗೂ ಕೂಡ ಸ್ಪೈನೋ ಹೋಟಲಿನಲ್ಲಿ ತಿಳಿಸಲಾಗಿದ್ದಿತು.

ಬ್ಲೇಕನು ಹೇಳಿದನು:—"ಇಪ್ಪತ್ತೆರಡು ಕ್ಯಾರೆಟ್ಟಿನ ವಜ್ರವು ನಿಮ್ಮ ಅಭಿಪ್ರಾಯದಲ್ಲಿ ಎಷ್ಟು ಬೆಲೆಯುಳ್ಳದ್ದಾಗಬಹುದು?"

ಮಾಲಪಸ್: "ಅದರ ಬಣ್ಣವು ಬಿಳಿಯದಾಗಿದ್ದರೆ ನಾನು ಅದಕ್ಕೆ ಏಳು ಸಾವಿರ ಪೌಂಡಿನವರೆಗೆ ಕೊಡಲು ಸಿದ್ಧನಿರುವೆನು"

ಕೂಡಲೆ ಬ್ಲೇಕನು ಜೇಬಿನಿಂದ ಹಸರು ವಜ್ರವನ್ನು ಹೊರ ತೆಗೆದು ತೋರಿಸುತ್ತ ಹೇಳಿದನು: "ಈ ವಜ್ರವೂ ಕೂಡ ಸುಮಾರು ಅಷ್ಟೇ ತೂಕದ್ದಾಗಿ ಕಾಣಿಸುತ್ತದೆ. ನೀವು ಇದಕ್ಕೇನು ಬೆಲೆ ಕಟ್ಟುತ್ತೀರಿ?"

ಥಳಥಳಿಸುತ್ತಿದ್ದ ಆ ವಜ್ರದ ಮೇಲೆ ದೃಷ್ಟಿ ಬೀಳುತ್ತಲೆ ಮಾಲಪಸನ ಕಣ್ಣುಗಳು ಕುಕ್ಕಿದವು. ಕೂಡಲೆ ಅವನು ಆ ವಜ್ರವನ್ನು ತನ್ನ ಕೈಗೆ ತೆಗೆದುಕೊಂಡು ಬಹಳ ಲಕ್ಷ್ಯವಿಟ್ಟು ನೋಡಿ, ಪರೀಕ್ಷಿಸಿ ಹೇಳಿದನು:—"ಅಹಾ! ಏನು ವಜ್ರವಿದು? ಎಷ್ಟು ಸುಂದರವಾಗಿದೆ ಇದರ ಬಣ್ಣ! ನೀವಿದನ್ನು ಎಲ್ಲಿ ಪಡೆದಿರಿ?"

ಬ್ಲೇಕ್:—"ಹೆಡ್‌ಕೊಂಬನ ಹೊಟ್ಟೆಯಿಂದ ಇದನ್ನು ಪಡೆಯಲಾಗಿದೆ. ಅವನು ಇದನ್ನು ಎಲ್ಲಿಯೋ ಕದ್ದು ತಂದಿರಬಹುದು. ಇತರರ ದೃಷ್ಟಿಗೆ ಬೀಳಬಹುದೆಂಬ ಅಂಜಿಕೆಯಿಂದ ಇದನ್ನು ಅಡಗಿಸಿಡುವುದಕ್ಕಾಗಿ ಆತ ನುಂಗಿಬಿಟ್ಟಿರಬಹುದು. ನಿಮಗೆ ಪರಿಚಿತನಾದ ಆ ಹೆನರೀ ಜೋನ್ಸ ಎಂಬ ವ್ಯಾಪಾರಿಯು ಸ್ಕಾಟಲಂಡ ಯಾರ್ಡಿನಲ್ಲಿ ಸೇಜನೆಂಬ ಹಳೆಯ ಅಪರಾಧಿಯಾಗಿ ದಾಖಲಾಗಿರುವನು. ಇದು ವರೆಗೆ ಅವನು ಎಷ್ಟೋ ಮೊಕದ್ದಮೆಗಳಲ್ಲಿ ಜೈಲಿನ ಶಿಕ್ಷೆಯನ್ನು ಅನುಭವಿಸಿರುವನು. ಅವನೇ ಶೀಡ್ಮನ್ನನ ಅಂಗಡಿಯಲ್ಲಿ ವಜ್ರಗಳನ್ನು ಎತ್ತಿಹಾಕಿದ್ದನು. ಖಜಾನೆ ಪೆಟ್ಟಿಗೆಯನ್ನು ಮುರಿಯುವುದರಲ್ಲಿ ಅವನು ಅದ್ವಿತೀಯನಿರುವನು. ಈ ವಜ್ರವನ್ನು ನೋಡಿದ ನನಗೀಗ ನಿಮ್ಮ ಪಟ್ಟಿಯಲ್ಲಿರುವ ಹತ್ತು ವಜ್ರಗಳ ಮೇಲೂ ಸಂಶಯವುಂಟಾಗಿದೆ."

ಮಾಲಪಸನು ಹೌಹಾರಿ ದೈನ್ಯದಿಂದ ಹೇಳಿದನು:—"ಅಯ್ಯೋ! ಹಾಗಾದರೆ ನಾನು ಈ ಸಲವೂ ಅಂತಹ ದೊಡ್ಡ ಸಂಕಟದಲ್ಲೇ ಬೀಳುತ್ತಿದ್ದೆನು. ತಾವು ಬಂದು ನನ್ನನ್ನು ಈ ವಿಪತ್ತಿನಿಂದ ಪಾರುಮಾಡಿದಿರಿ ಸ್ವಾಮಿ!"

ಬ್ಲೇಕ್—"ಆದರೆ ಈ ಉಪಕಾರಕ್ಕಾಗಿ ನೀವು ಆ ಜೋನ್ಸ್ ಅಥವಾ ಸೇಜನ ನಿಜವಾದ ವಾಸಸ್ಥಳವನ್ನು ನನಗೀಗ ತಿಳಿಸುತ್ತೀರಾ? ಅವನು ನಿಮಗೆ ತನ್ನ ಯಾವ ವಿಳಾಸವನ್ನು ಕೊಟ್ಟಿದ್ದನು?"

ಮಾಲಪಸ್—"ಅಯ್ಯೋ! ಏನನ್ನಲಿ? ಈ ಹೋಟಲಿನ ವಿಳಾಸವನ್ನೇ ಅವನು ಕೊಟ್ಟಿದ್ದನು. ಇದೇ ಹೋಟಲಿನಲ್ಲಿ ಇಂದು ರಾತ್ರಿ ಸಿಕ್ಕುತ್ತೇನೆಂದು ಹೇಳಿದ್ದನು. ಇನ್ನೇನೂ ನನಗೆ ತಿಳಿಯದು"

ಬ್ಲೇಕ್—"ಒಳ್ಳೇದು. ಆಗೋ, ನೋಡಿರಿ. ಸೇಮೂರನು ಬಂದನು. ಪೋಲೀಸರೂ ಕೂಡಲೆ ಬರಬಹುದು."

ಬ್ಲೇಕನ ಮಾತು ನಿಜವಾಗಿದ್ದಿತು. ಸೇಮೂರನು ಫೋನಿನಿಂದ ಪೋಲೀಸ್ ಸ್ಟೇಷನ್ನಿಗೆ ತಿಳಿಸಿ ಹೋಟಲಿಗೆ ಹಿಂದಿರುಗಿ ಬರುವುದರೊಳಗಾಗಿಯೇ ಪೋಲೀಸರ ಮೋಟಾರು ಬಂದುಬಿಟ್ಟಿತು.

"ನೀವೂ ಇಲ್ಲಿಯೇ ಇರಬೇಕಾಗುವುದು, ಮಾಲಪಸ್! ಇವುಗಳೊಳಗೆ ಯಾವುದಾದರೊಂದು ವಜ್ರವು ಪತ್ತೆಯಾದರೆ, ಆಗ ನಿಮ್ಮಿಂದ ನನಗೆ ಬಹಳ ಸಹಾಯವಾಗಬಹುದು." ಎಂದು ಹೇಳುತ್ತಾ ಬ್ಲೇಕನು ಪೋಲೀಸ್ ಆಫೀಸರರೊಂದಿಗೆ ಮಾತನಾಡುವದಕ್ಕಾಗಿ ಅಲ್ಲಿಂದ ಹೊರಬಾಗಿಲಿನ ಕಡೆಗೆ ಹೋದನು.

---

## (೧೨)

ಟಿಂಕರನು ಬ್ಲೇಕನ ಸಂಕೇತವನ್ನರಿತು ಮೋಟಾರನ್ನು ಎಡಗಡೆಗೆ ತಿರುಗಿಸಿ ಬಲು ಚುರುಕಿನಿಂದ ಬೆನ್ನಟ್ಟಿದನು. ಸ್ವಲ್ಪ ದೂರ ಹೋಗುವುದರೊಳಗೇ ಮೋಟಾರ ಸೈಕಲ್ಲಿನ ಮೇಲೆ ತ್ವರೆಯಿಂದ ಓಡಿ ಹೋಗುತ್ತಿದ್ದ ಸ್ಲಿಮ್ ಟಾಮಿಯು ಕಾಣಿಸಿದನು. ಆಗ ಟಿಂಕರನ ವದನವು ಆನಂದದಿಂದ ಅರಳಿತು.

ಈ ತರಹದ ಕಾರ್ಯಗಳೇ ಟಿಂಕರನಿಗೆ ರುಚಿಸುತ್ತಿದ್ದವು. ಎಷ್ಟೋ ಹೆದ್ದಾರಿಗಳು, ಬೀದಿಗಳು, ಕರಡು ಮುರಡು ರಸ್ತೆಗಳು, ಏರು-ತಗ್ಗುಗಳು, ಮುಂತಾದವುಗಳನ್ನು ದಾಟಿ ಹೋಗಿ ಸ್ಲಿಮ್‌ಟಾಮಿಯು ಸುಮಾರು ಎರಡು ಗಂಟೆ ಕಾಲ ಟಿಂಕರನನ್ನು ಅಲ್ಲಿ ಇಲ್ಲಿ ಸುತ್ತಾಡಿಸಿ ಇನ್ನೂ ಮುಂದು ಮುಂದಕ್ಕೆ ಹೋಗುತ್ತಲೇ ಇದ್ದನು.

ಆದರೆ ಈಗ ಮಾತ್ರ ಅವನಿಗೂ ಇವನಿಗೂ ನಡುವೆ ಹೆಚ್ಚು ದೂರವಿರಲಿಲ್ಲ. ಟಿಂಕರನು ಬಹಳ ಹತ್ತರ ಬಂದುಬಿಟ್ಟಿದ್ದನು. ಇದನ್ನರಿತು ಸ್ಲಿಮ್ ಟಾಮಿಯು ಥಟ್ಟನೆ ಮೋಟಾರ್ ಸೈಕಲ್ಲಿನಿಂದ ಕೆಳಗೆ ದುಮುಕಿ ಬಲು ಚುರುಕಿನಿಂದ ಎತ್ತೋ ಓಡತೊಡಗಿದನು. ಕೂಡಲೆ ಟಿಂಕರನು ಮೋಟಾರನ್ನು ನಿಲ್ಲಿಸಿ, ತಾನೂ ಟಾಮಿಯನ್ನು ಬೆಂಬತ್ತಿ ಓಡತೊಡಗಿದನು. ಸ್ವಲ್ಪ ದೂರ ಅವನ ಹಿಂದೆ ಓಡಿ, ಅನಂತರ ಟಿಂಕರನು ಕೂಗಿ ಹೇಳಿದನು—"ಎಲೋ! ನಿಲ್ಲು; ಓಡದಿರು. ನಿಲ್ಲದೇ ಹೋದರೆ ಗುಂಡು ಹಾರಿಸುತ್ತೇನೆ."

ಆದರೆ ಟಾಮಿಯು ಟಿಂಕರನ ಗದರಿಕೆಯ ಮಾತಿನ ಮೇಲೆ ಸ್ವಲ್ಪವೂ ಗಮನಿಸದೆ ಇನ್ನೂ ವೇಗದಿಂದ ಓಡತೊಡಗಿದನು. ಇನ್ನು ಸುಮ್ಮನಿರ ಲಾಗದೆಂದು ಯೋಚಿಸಿ, ಟಿಂಕರನು ಜೇಬಿನಿಂದ ಪಿಸ್ತೂಲನ್ನು ಹೊರತೆಗೆದು ಟಾಮಿಯ ಮೇಲೆ ಗುರಿಯಿಟ್ಟು ಹಾರಿಸಿದನು. ಗುಂಡು ಸ್ವಲ್ಪವೂ ನಿದಾನಿ ಸದೆ, ಸ್ಲಿಮ್ ಟಾಮಿಯ ಕಾಲನ್ನು ತೂತು ಮಾಡಿಕೊಂಡೇ ಹೊರಟು ಹೋಯಿತು. ಟಾಮಿಯು ಚೀತ್ಕರಿಸುತ್ತ ನೆಲದ ಮೇಲೆ ಮುಗ್ಗರಿಸಿ ಬಿದ್ದನು. ಎರಡನೆಯ ಕ್ಷಣದಲ್ಲಿಯೇ ಟಿಂಕರನು ಆತನ ಬಳಿಗೆ ಬಂದು ಗದರಿಸಿದನು:—"ಮುಠ್ಠಾಳಾ! ನಿನಗೆ ನಾನು ಮುಂಚೆಯೇ ಎಚ್ಚರಿಕೆ ಕೊಟ್ಟಿರಲಿಲ್ಲವೆ? ಆದರೆ ನೀನು ನನ್ನ ಮಾತನ್ನು ತಿರಸ್ಕರಿಸಿ ಓಡಿದೆಯಲ್ಲವೆ? ಈಗದರ ಫಲವನ್ನು ಅನುಭವಿಸು ನಿನ್ನ ಮೇಲೆ ಪಿಸ್ತೂಲನ್ನು ಉಪ ಯೋಗಿಸಬಾರದೆಂದು ನಾನು ಯೋಚಿಸಿದ್ದೆನು; ಆದರೇನು ಮಾಡಲಿ? ನೀನದಕ್ಕೆ ಅವಕಾಶವನ್ನೀಯಲಿಲ್ಲ. ನಿನ್ನನ್ನು ಸೆರೆಹಿಡಿಯದೆ ನಾನು ಹಿಂದಿರುಗಲಾಗುತ್ತಿರಲಿಲ್ಲ."

ಟಾಮಿಯು ಏನೂ ಉತ್ತರವೀಯದೆ ನೆಲದ ಮೇಲೆ ಬಿದ್ದುಕೊಂಡು ಅಳತೊಡಗಿದನು. ಟಿಂಕರನು ತಿರಸ್ಕಾರ ದೃಷ್ಟಿಯಿಂದ ನೋಡುತ್ತ ಗರ್ಜಿ ಸಿದನು:—"ಛೀ! ಪಿಶಾಚಿ! ಬಾಯಿಮುಚ್ಚು."

ಅನಂತರ ಟಿಂಕರನು ಗುಂಡು ತಗಲಿದ ಸ್ಥಳದಲ್ಲಿನ ಆಚೆ-ಈಚೆಯ ಬಟ್ಟೆಯನ್ನು ಹರಿದು ನೋಡಿದನು. ಗುಂಡು ಕಾಲೊಳಗೆ ಹೊಕ್ಕು ಪಾರಾಗಿ ಹೋಗಿದ್ದಿತು. ಗಾಯವನ್ನು ಚೆನ್ನಾಗಿ ಪರೀಕ್ಷಿಸಿ, ಅದಕ್ಕೆ ಪಟ್ಟಿಕಟ್ಟಿ, ಆ ಮೇಲೆ ಹೇಳಿದನು:—"ಸರಿಯಾಗಿದೆ; ಟಾಮೀ! ನಾನು ಇಚ್ಛಿಸಿದಂತೆಯೇ ಆಗಿದೆ. ಗುಂಡು ಮೂಳೆಯನ್ನು ಮುಟ್ಟದೆ ಹಾಗೆಯೇ ಹೊರಟು ಹೋಗಿದೆ. ನಿನ್ನ ಪ್ರಾಣಕ್ಕೆ ಯಾವ ತರಹದ ಭಯವೂ ಇಲ್ಲ. ಸಾಕಿನ್ನು ಬಾಯಿ ಮುಚ್ಚು; ನಿನ್ನ ಕಿರುಚಾಟವನ್ನು ನಿಲ್ಲಿಸಿ ಬಿಡು"

ಟಾಮಿಯು ಹೇಳಿದನು:—"ಗಾಯಕ್ಕಾಗಿ ನಾನೀಗ ಅಳುತ್ತಿರುವುದಿಲ್ಲ. ಯಾವ ಸ್ಥಳಕ್ಕೆ ನಾನು ತಲ್ಪಬೇಕೆಂದಿದ್ದೆನೋ, ಅಲ್ಲಿಗೆ ತಲ್ಪಲಾಗಲಿಲ್ಲೆಂಬು ದಕ್ಕಾಗಿ ದುಃಖಿಸುತ್ತಿರುವೆನು."

ಟಿಂಕರನು ಉತ್ಸುಕತೆಯಿಂದ ಕೇಳಿದನು:—"ಹೇಳು-ಹೇಳು, ಟಾಮಿ! ನೀನು ಎಲ್ಲಿಗೆ ತಲುಪಬೇಕೆಂದು ಇಚ್ಛಿಸುತ್ತಿದ್ದಿ?"

ಟಾಮಿ:—"ಫೆಸಿಫಿಕ್ ಐಲೆಂಡ್ಸ್. ಆ ಸ್ಥಳವು ನನಗೆ ಬಹು ಮೆಚ್ಚಿಗೆ ಯದೂ ಆಗಿದ್ದಿತು. ಅವನು ನನ್ನನ್ನು ಅಲ್ಲಿಗೆ ಒಯ್ಯುವೆನೆಂದು ಹೇಳಿದ್ದನು."

ಟೆಂಕರ್:—"ಯಾರು ಹೇಳಿದ್ದರು?"

ಟಾಮಿಯು ಶಂಕಿಸುತ್ತಾ ಹೇಳಿದನು:—"ಆ ಸಂಗತಿಯನ್ನು ನಾನು ಬಾಯ್ಬಿಟ್ಟು ಹೇಳಿದೆನೆಂದರೆ, ಅವನು ನನ್ನನ್ನು ಎಂದೂ ಜೀವಸಹಿತವಾಗಿ ರಲು ಬಿಡುವುದಿಲ್ಲ."

ಟೆಂಕರ್:—"ಯಾರು ಜೀವ ಸಹಿತವಾಗಿ ಬಿಡುವದಿಲ್ಲ? ನೋಡು, ಟಾಮಿ! ನೀನು ನಮ್ಮ ಬ್ಲೇಕರ ಸ್ವಭಾವವನ್ನು ಚೆನ್ನಾಗಿ ಅರಿತವನೇ ಇರುವಿ. ನಿನಗೆ ತಿಳಿದಿರುವ ಪ್ರತಿಯೊಂದು ಸಂಗತಿಯನ್ನು ನೀನು ನಿಜ ವಾಗಿ ಹೇಳುವಿಯಾದರೆ, ಅವರು ನಿನಗೆ ಬೇಕಾದಂತಹ ಸಹಾಯ ಮಾಡ ಬಲ್ಲರು. ಈ ನಿಮ್ಮ ಖಿತೂರಿಗೆಲ್ಲ ಮುಖ್ಯ ಯಜಮಾನರ್ಯಾರು?"

ಟಾಮಿ:—'ನಾನು ಹೇಳಿಬಿಟ್ಟೇನು. ಆದರೆ ಅದನ್ನು ನಾನು ಬಾಯ್ಬಿಟ್ಟರೆ, ನಾನಿನ್ನು ಜೀವಂತವಾಗಿ ಉಳಿಯಲಾರೆನು."

ಟೆಂಕರ್:—"ಹಾ! ಅದೇನು?" ಎಂದು ಹೇಳುತ್ತಾ ಟೆಂಕರನು ಥಟ್ಟನೆ ಟಾಮಿಯ ಕೈಯನ್ನು ಬಲವಾಗಿ ಹಿಡಿದೆಳೆದನು. ಟಾಮಿಯು ಮಾತಿನ ನಡುವೆ ಏನೋ ಒಂದು ವಸ್ತುವನ್ನು ಬಹು ಬೇಗನೆ ಬಾಯಿಗೆ ಹಾಕಿಕೊಂಡು ನುಂಗಬೇಕೆಂದು ಇಚ್ಛಿಸುತ್ತಿದ್ದನು; ಆದರೆ ಟೆಂಕರನೆದುರಿಗೆ ಆ ಕೆಲಸವನ್ನು ನಡೆಸಲು ಸಾಧ್ಯವಾಗಲಿಲ್ಲ. ಹಿಡಿದುಕೊಂಡಿದ್ದ ಆ ಕೈಯ ಮುಷ್ಟಿಯೊಳಗೆ ಏನೋ ವಿಷವಿರಬಹುದೆಂದು ಭಾವಿಸಿ ಟೆಂಕರನು ಬಲಾತ್ಕಾರವಾಗಿ ಅದನ್ನು ಕಿತ್ತುಕೊಂಡು ನೋಡಿದನು; ಆದರೆ ಅದು ವಿಷವೇನೂ ಆಗಿರದೆ, ಅದಕ್ಕೆ ಬದಲಾಗಿ ಒಂದು ಚಿಕ್ಕ ಭೂಪಟವಾಗಿದ್ದಿತು. ಅದು ಪೆನ್ಸಿಲಿನಿಂದ ಬರೆಯಲ್ಪಟ್ಟದ್ದಾಗಿದ್ದು, ಅದರಲ್ಲಿ ದಿ ಓಲ್ಡ್ ಸ್ವೈನಿನ ಪೂರ್ವ ದಿಕ್ಕಿನ ಒಂದು ಸ್ಥಳದ ರಸ್ತೆಗಳು ಬರೆಯಲ್ಪಟ್ಟಿದ್ದವಲ್ಲದೆ, ಒಂದೆಡೆಯಲ್ಲಿ "X" ಎಂಬುದೊಂದು ಗುರುತೂ ಮಾಡಲ್ಪಟ್ಟಿದ್ದಿತು:

"ಈ ಭೂಪಟವು ಬಹಳ ಪ್ರಯೋಜನಕಾರಿಯಾಗಿರುವುದು." ಎಂದು ಹೇಳುತ್ತಾ ಟೆಂಕರನು ಅದನ್ನು ತನ್ನ ಜೇಬಿನೊಳಗಿಟ್ಟುಕೊಂಡು ಹೇಳಿದನು "ನೋಡು, ಟಾಮೀ! ಇನ್ನು ನೀನುಳಿಯಲು ಉಪಾಯವೆಂದರೆ, ನಿಜವಾದ ಸಂಗತಿಯನ್ನೆಲ್ಲಾ ಸ್ಪಷ್ಟವಾಗಿ ಹೇಳುವುದೊಂದೇ ಉಳಿದಿದೆ."

ತನ್ನ ಉಪಾಯಗಳೆಲ್ಲವೂ ವ್ಯರ್ಥವಾದುದನ್ನು ಕಂಡು ಟಾಮಿಯು ಬಡಬಡಿಸುತ್ತಾ ಹೇಳಿದನು:-"ಅದೇ ನಮ್ಮ ಹಿಂದಿನ ಸರ್ದಾರ. ಅವನೀಗ ತಿರುಗಿ ಬಂದಿರುವನು. ಇನ್ನು ಮುಂದೆ ನಿರ್ದೋಷ ಜೀವನದಲ್ಲಿಯೇ ಇರಬೇಕೆಂದು ನಾನು ಮುಂಚೆ ನಿಶ್ಚಯಮಾಡಿಕೊಂಡಿದ್ದೆನು; ಆದರೆ ಅವನು ಪುನಃ ಬಂದು

ಕರೆದಾಗ ಸುಮ್ಮನಿರಲಾಗದೆ ಮತ್ತೆ ಅವನನ್ನು ಹಿಂಬಾಲಿಸಿ, ಅವನಂದಂತೆ ಕೆಲಸ ಮಾಡಬೇಕಾಗಿ ಬಂದಿತು."

ಟೆಂಕರನು ವಿಸ್ಮಯದಿಂದ ಕೇಳಿದನು—"ಏನು? ಅದೇ ಹಿಂದಿನ ಸರ್ದಾರನೇ? ಡಾಕ್ಟರ್ ಫೆರಾರೊ!"

ಟಾಮಿ:—"ಹೌದು. ಅವನೇ ಪುನಃ ಬಂದಿರುವನು; ಆದರೆ ಈ ಸಲ ಅವನು ತನ್ನ ರೂಪವನ್ನೇ ಬದಲಾಯಿಸಿಕೊಂಡು ಬಿಟ್ಟಿರುವನು. ಮುಂಚೆ ಅವನನ್ನು ಚೆನ್ನಾಗಿ ನೋಡಿ ತಿಳಿದಿದ್ದವರೂ ಕೂಡ ಈಗ ಅವನನ್ನು ಗುರುತಿಸಲಾರರು. ಅವನ ಮುಖವೆಲ್ಲವೂ ಉರಿದು ಹೋಗಿದ್ದಿತು; ಆದರೆ ಈಗ ವನು ಹೇಗೆ ಹೊಸ ಮುಖವನ್ನು ತಯಾರಿಸಿಕೊಂಡನೋ, ಸೋಜಿಗವಾಗಿದೆ; ಈಗ ನಾನು ಎಲ್ಲಾ ವಿಷಯವನ್ನೂ ತಿಳಿಸಿಬಿಟ್ಟಂತಾಯಿತು. ಇನ್ನು ಮುಂದಿನದೆಲ್ಲವೂ ನಿಮ್ಮಧೀನವೇ ಇರುವುದು. ಈ ಸುದ್ದಿ ಎಲ್ಲಾದ್ಯರೂ ಅವನ ಕಿವಿಗೆ ಮುಟ್ಟಿತೆಂದರೆ, ನನ್ನನ್ನವನು ಎಂದಿಗೂ ಜೀವದಿಂದಿರಲು ಬಿಡಲಾರನು. ಯಾವಾಗಲೂ ಅವನ ಅಭ್ಯಾಸವೇ ಹೀಗಿದೆ. ತನಗೆ ಮೋಸ ಮಾಡಿದವರು ಜೀವಂತರಾಗಿ ಭೂಮಿಯಲ್ಲಿರಬಾರದೆಂದೇ ಅವನ ಅಭಿಪ್ರಾಯ."

ಟೆಂಕರ್—"ಓಹೋ! ಹಾಗಾದರೆ ಅವನೇ ರೇಡಿಯಮ್ಮನ್ನು ಕದ್ದವನಲ್ಲವೇ? ಇರಲಿ. ಯಾಕೆ ಕದ್ದನು?"

ಟಾಮಿ—"ಅದನ್ನು ನಾನು ತಿಳಿಯಲಾರದವನಾಗಿರುವೆನು. ನಾನು ಈ ವಿಷಯದಲ್ಲಿ ಇಷ್ಟು ಮಾತ್ರ ತಿಳಿದಿರುವೆನು—ಈ ಭೂಪಟದಲ್ಲಿನ '×' ಎಂಬ ಗುರುತು ಮಾಡಿದ ಸ್ಥಳಕ್ಕೆ ಅದನ್ನು ಒಯ್ದಿರುವರು."

ಟೆಂಕರ್—"ಅದಿರಲಿ, ಟಾಮೀ! ಹಿಂದೆ ನೀನೇ ಅಲ್ಲವೇ ಡಾಕ್ಟರ್ ಗ್ರೇಯ ಮೇಲೆ ವಿರುದ್ಧವಾದ ಸುದ್ದಿಯನ್ನು ಪೋಲೀಸರಿಗೆ ಕೊಟ್ಟವನು? ಗ್ರೇಯನ್ನು ಈ ರೀತಿಯಾಗಿ ದೂರವಿರಿಸಲು ವಿಶೇಷವಾದ ಕಾರಣವೇನಿದೆ?"

ಟಾಮಿ—"ಅದೇನೋ ನಾನರಿಯನು; ಆದರೆ ನಾನು ತಿಳಿದುಕೊಂಡಿರುವದೇನಂದರೆ--ರೇಡಿಯಮ್ ಯಾವ ಕೆಲಸಕ್ಕುಪಯೋಗವಾಗುವುದೆಂಬುದನ್ನು ಗ್ರೇಯೂ ತಿಳಿದಿರಬಹುದು. ಅದಲ್ಲದೆ ಈ ವಿಷಯದಲ್ಲಿ ಯಾರಿಗೂ ಸಂಶಯ ಕೂಡ ಬರಬಾರದೆಂದು ನಮ್ಮ ಸರ್ದಾರನ ಇಚ್ಛೆಯಿದ್ದಿತು."

ಟೆಂಕರ್—"ಹಾಗಾದರೆ ನೀನೀಗ ಬಲು ವಿಚಿತ್ರ ಸುದ್ದಿಯನ್ನು ತಿಳಿಸಿದೆ. ಒಳ್ಳೇದು. ಈಗ ನಾನು ನಿನ್ನನ್ನು ನಮ್ಮ ಯಜಮಾನರ ಬಳಿಗೊಯ್ಯುವೆನು; ಆದರೆ ಅಷ್ಟರೊಳಗೆ ನಿನ್ನ ಶರೀರವನ್ನೆಲ್ಲ ಒಮ್ಮೆ ಝಡತಿ ಮಾಡಬೇಕು."

ಟಾಮಿ—"ನನ್ನ ಬಳಿಯಲ್ಲಿ ಇನ್ನು ನಿಮಗೆ ಬೇಕಾದ ವಸ್ತುವಾವುದೂ ಇಲ್ಲ. ಈಗ ನಿಮ್ಮ ಹತ್ತಿರ ನಾನು ಯಾವ ವಿಚಾರವನ್ನೂ ಮುಚ್ಚಿಡುವದಿಲ್ಲ. ನಾನು ನಿಮ್ಮನ್ನು ಆ ಗುಡಸಿಲಿಗೆ ಕರೆದೊಯ್ಯುವೆನು. ಆ ಜನಗಳು ಕತ್ತಲೆಯಾಗುವದಕ್ಕಿಂತ ಮುಂಚೆ ಹೊರಟು ಹೋಗಲಾರರು. ಚುರುಕು ಮಾಡಿದರೆ, ಇನ್ನೂ ಸಮಯವಿದೆ. ಅವರು ಕೆಂಟಿನ ಸಮುದ್ರತೀರದ ಒಂದು ಸ್ಥಳದ ಕಡೆಗೆ ಹೋಗುವರು."

ಟೆಂಕರ್—"ಯಾರು?"

ಟಾಮಿ—"ಅದೇ ಪುಂಡರು. ಸ್ವೈನಿನ ಮುಖ್ಯ ಕೆಲಸಗಾರನಾದ ಪಾರಟ್ರಿಜನೂ ಕೂಡ ಅವರೊಡನೆ ಹೋಗುವನು. ಸೇಜನೂ ಹೋಗುವನು; ಆದರೆ ಇಷ್ಟರೊಳಗೆ ಅವರಲ್ಲೇನಾದರೂ ಗಡಿಬಿಡಿಯುಂಟಾಗದಿರದು. ಹೋಟಲಿನಲ್ಲಿ ಪಾರಟ್ರಿಜನೇ ನನಗೆ ಎಚ್ಚರಿಕೆ ಕೊಟ್ಟಿದ್ದನು. ಸ್ವಲ್ಪ ಗಲಭೆಯಾಗಬಹುದೆಂಬ ವಿಚಾರವನ್ನು ತಂಡದವರಿಗೆಲ್ಲ ತಿಳಿಸಿ, ಅವರಿಗೆಲ್ಲ ಎಚ್ಚರವೀಯುವಂತೆ ಪಾರಟ್ರಿಜನು ನನಗೆ ಆಜ್ಞೆಮಾಡಿದ್ದನು."

"ಹಾಗಾದರೆ ಇನ್ನಿಲ್ಲಿ ತಡಮಾಡುವದುಚಿತವಲ್ಲ." ಎಂದು ಹೇಳಿ, ಟಾಮಿಯನ್ನು ಮೋಟಾರಿನಲ್ಲಿ ಕುಳ್ಳಿರಿಸಿ, ಅಲುಗಾಡದಂತೆ ಕಟ್ಟಿಹಾಕಿದನು. ಮೋಟಾರು ಹಿಂತಿರುಗಿ ಬಲು ಚುರುಕಿನಿಂದ ಹೊರಟಿತು. ಟೆಂಕರನು ಟಾಮಿಯ ಮೇಲೆ ವಿಶೇಷವಾಗಿ ದೃಷ್ಟಿಯನ್ನಿಟ್ಟುಕೊಂಡೇ ಮೋಟಾರನ್ನು ನಡೆಸುತ್ತಿದ್ದನು.

ಇತ್ತ ಬ್ಲೇಕನು ಪೋಲೀಸರು ಹೋಟಲಿನೊಳಗೆ ಬಂದೊಡನೆ ನಡೆದ ವಿಚಾರವನ್ನೆಲ್ಲ ವಿವರಿಸಿದನು; ಆದರೆ ಈ ವರ್ತಮಾನವನ್ನು ಕೇಳಿದುದರಿಂದ ಪೋಲೀಸರಿಗೇನೂ ಸೋಜಿಗವೆನಿಸಲಿಲ್ಲ; ಯಾಕೆಂದರೆ, ದಿ ಓಲ್ಡ್ ಸ್ವೈನಿನ ಮೇಲೆ ಎಷ್ಟೋ ದಿನಗಳಿಂದ ಅವರಿಗೆ ಬಲವಾದ ಸಂದೇಹವಿದ್ದಿತು. ಯಾವುದಾದರೊಂದು ನೆವದಿಂದ ಆ ಹೋಟಲನ್ನು ಮುಚ್ಚಿಸಿಬಿಡಬೇಕೆಂದು ಮೊದಲಿನಿಂದಲೂ ಅವರು ಆಲೋಚಿಸಿದ್ದರು.

ಸ್ವಲ್ಪ ಹೊತ್ತಿನೊಳಗೇ ಟೆಲಿಫೋನ್ ಸರಿಯಾಯಿತು. ಬ್ಲೇಕನು ಕೂಡಲೆ ಹಾರ್ಕರನಿಗೆ ಫೋನ್ ಮಾಡಿದನು. ರೇಡಿಯಮ್ ಪುನಃ ಬಂದಿದೆ, ಎಂಬ ವಿಚಾರವನ್ನು ಹಾರ್ಕರನು ತಿಳಿಸಿದನಲ್ಲದೆ, ಕೂಡಲೆ ತಾನು ಇಲ್ಲಿಗೆ ಬರುವೆನೆಂದೂ ತಿಳಿಸಿದನು.

ಬ್ಲೇಕನು ಟೆಂಕರನ ಆಗಮನವನ್ನು ಪ್ರತೀಕ್ಷಿಸುತ್ತಿರುವಷ್ಟರಲ್ಲಿ ಟೆಂಕರನು ಟಾಮಿಯೊಡನೆ ಅಲ್ಲಿಗೆ ಬಂದೇಬಿಟ್ಟನು.

ಟಿಂಕರನಿಂದ ಸಂಗತಿಯನ್ನೆಲ್ಲ ಕೇಳಿದ ಮೇಲೆ ಬ್ಲೇಕನು ಟಾಮಿಯನ್ನು ಕೇಳಿದನು—"ನಿನ್ನ ಸರ್ದಾರನು ಈ ವೇಳೆಯಲ್ಲಿ ಎಲ್ಲಿರುವನು? ಅಥವಾ ಅವನು ವಾಸಿಸುವ ಸ್ಥಳವೆಲ್ಲಿ? ಎಂಬುದನ್ನು ನೀನೀಗ ತಿಳಿಸಲೇಬೇಕು."

ಟಾಮಿಯು ಹೆದರುತ್ತ ಹೇಳಿದನು:—"ಈ ವಿಷಯವು ನನಗೆ ತಿಳಿದಿದ್ದರೆ ಮುಂಚೆಯೇ ಹೇಳದೆ ಇದುವರೆಗೆ ಸುಮ್ಮನಿರುತ್ತಿದ್ದೆನೆ? ನಾನೆಂದರೆ ಕೇವಲ ಅಲ್ಲಿ ಇಲ್ಲಿ ತಿರುಗಾಡಲು, ನಾಲ್ಕೂಕಡೆ ದೃಷ್ಟಿಯಿಟ್ಟು ಕಾಯಲು ಮಾತ್ರವೇ ನೇಮಿಸಲ್ಪಟ್ಟವನಿದ್ದೇನೆ. ನನಗೆ ತಿಳಿದ ಪ್ರತಿಯೊಂದು ವಿಷಯವನ್ನು ನಾನು ಈ ಮುಂಚೆಯೇ ವಿವರವಾಗಿ ತಿಳಿಸಿಬಿಟ್ಟಿರುವೆನು. ಇನ್ನೇನೂ ಉಳಿದಿಲ್ಲ. ಇನ್ನು ಇದಕ್ಕಾಗಿ ತಾವು ನಮ್ಮ ಸರ್ದಾರನ ಕೈಯಿಂದ ನನ್ನ ಪ್ರಾಣವನ್ನುಳಿಸಿ ಕಾಪಾಡಬೇಕು."

ಬ್ಲೇಕ್—"ನಿಮ್ಮಂತಹ ನೀಚರ ಅಂತಿಮ ಪರಿಣಾಮವು ಇದೇ ಆಗಿರುವದು. ಹೆಡ್ ಕೂಂಬನು ಇದೇ ಗತಿಗಿಳಿದುಹೋದನು. ಆದರೂ ನಾನು ಸಾಧ್ಯವಾದಷ್ಟು ಎಚ್ಚರಿಕೆ ಇಟ್ಟು ನಿನ್ನನ್ನುಳಿಸಲು ಪ್ರಯತ್ನಿಸುವೆನು. ಅದಿರಲಿ ಸರ್ದಾರನ ಬಲಗೈಯಾಗಿ ಈಗ ಯಾರಿರುವರೆಂಬುದನ್ನಾದರೂ ನೀನು ತಿಳಿಸಬಲ್ಲೆಯಾ?"

ಟಾಮಿ—"ಇಲ್ಲ, ಸ್ವಾಮೀ! ನನಗೆ ತಿಳಿಯದು. ನನ್ನ ಮೇಲಿನ ಆಜ್ಞೆಗಳೆಲ್ಲವೂ ಸೇಜನ ಮೂಲಕವಾಗಿಯೇ ನನಗೆ ಜಾರಿಯಾಗುತ್ತಿದ್ದವು; ಆದರೆ........ಹೌದು; ಫ್ರಾಸ್ಟ್ ಎಂಬೊಬ್ಬ ಮನುಷ್ಯನಿರುವನು. ಅವನೇ ರೇಡಿಯಮ್ಮನ್ನು ಕದ್ದೊಯ್ದನು. ಅವನಿಗೂ ಸರ್ದಾರನಿಗೂ ಪರಸ್ಪರ ಸಂದರ್ಶನವಿದೆ, ಎಂದು ಕಾಣುತ್ತದೆ."

ಬೆರಗಾಗಿ ಬ್ಲೇಕನು ಹೇಳಿದನು—"ಏನು? ಫ್ರಾಸ್ಟನೇ! ಮೇಡೀನಾ ಮತ್ತು ವಿಂಟನರನ್ನು ಮೋಸಗೊಳಿಸಿ ರೇಡಿಯಮ್ಮನ್ನು ಕದ್ದೊಯ್ದ ಆದೇ ಡ್ರೈವರ್‌ನೇ!"

ಈಗ ಬ್ಲೇಕನಿಗೆ ಈ ಮೊಕದ್ದಮೆಯ ಒಂದೊಂದು ವಿಚಾರವೂ ಕ್ರಮವಾಗಿ ಹೊಳೆಯತೊಡಗಿತು. ಇನ್ನು ತಿಳಿಯಲು ಉಳಿದ ವಿಷಯವೆಂದರೆ, ರೇಡಿಯಮ್ಮನ್ನು ಕದಿಯುವದರಲ್ಲಿ ಯಾರ ಕೈ ಇದ್ದಿತು; ಮತ್ತು ಯಾವ ಉಪಯೋಗಕ್ಕಾಗಿ ಅದನ್ನು ಕದಿಯಲಾಯಿತು, ಎಂಬುದು ಮಾತ್ರ. ನಿಶ್ಚಯವಾಗಿಯೂ ಈ ಕೆಲಸವು ಫೆರಾರೋ ಮಾಡಿದುದೇ ಆಗಿದೆ ಎಂಬುದು ಬ್ಲೇಕನಿಗೆ ತಿಳಿಯಿತಲ್ಲದೆ, ಪ್ರಯೋಜನವಿಲ್ಲದೆ ಯಾವ ಕೆಲಸವನ್ನೂ ಫೇರಾರೋ ಮಾಡಿರಲಾರನೆಂಬುದೂ ಗೊತ್ತಾಯಿತು.

ಹಸರು ಬಣ್ಣದ ಹತ್ತು ವಜ್ರಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಬೆಲೆ ಬಾಳುವ ವಜ್ರವು ಈ ಸಮಯದಲ್ಲಿ ಬ್ಲೇಕನ ಅಂಗಿ ಜೇಬಿನಲ್ಲಿದ್ದಿತು. ಆ ವಜ್ರಗಳನ್ನು ಕೊಂಡುಕೊಳ್ಳುವದಕ್ಕಾಗಿ ಮೂವತ್ತು ಸಾವಿರ ಪೌಂಡನ್ನು ತೆಗೆದುಕೊಂಡು ತಾನಿಲ್ಲಿಗೆ ಬಂದಿರುವೆನೆಂದು ಮಾಲಪಸನು ಮುಂಚೆಯೇ ಹೇಳಿದ್ದನು; ಆದರೆ ಉಳಿದ ಆ ಒಂಭತ್ತು ವಜ್ರಗಳು ಈಗೆಲ್ಲಿರುವುವು? ರೇಡಿಯಮ್ಮನ್ನು ಒಯ್ದಿಟ್ಟಿದ್ದ ಆ ಗುಡಿಸಲಲ್ಲಿಯೇ ಇರಬಹುದೇ?"

ಆ ಗುಡಿಸಲು ದಿ ಓಲ್ಡ್ ಸ್ವೈನಿಗೆ ಸುಮಾರು ಹದಿನೈದು ಮೈಲು ದೂರದಲ್ಲಿ ಕೆಂಟ್‌ಪ್ರದೇಶದಲ್ಲಿ ಇದ್ದಿತು.

ಬ್ಲೇಕನು ಪುನಃ ಟಾಮಿಯನ್ನು ಕೇಳಿದನು—"ಒಳ್ಳೇದು ಟಾಮಿ! ರೇಡಿಯಮ್ಮನ್ನು ಯಾವ ಕೆಲಸದಲ್ಲುಪಯೋಗಿಸಲು ಕದ್ದಿದ್ದಾರೆಂಬ ವಿಷಯವನ್ನು ಸ್ವಲ್ಪವಾದರೂ ನೀನು ತಿಳಿದಿರಲಾರೆಯಾ?"

ಟಾಮಿ—"ಈ ವಿಷಯದಲ್ಲಿ ನನಗೆ ತಿಳಿದಿರುವದೆಂದರೆ, ಕೇವಲ ಇಷ್ಟು ಮಾತ್ರವೇ ಸರಿ—ಆ ಗುಡಿಸಲಿನಲ್ಲಿ ಆ ಪುಂಡರು ಇಡೀ ಹಗಲು ಇಡೀ ರಾತ್ರಿ ರೇಡಿಯಮ್ಮಿನಿಂದ ಏನೋ ಕೆಲಸಮಾಡಿಕೊಳ್ಳುತ್ತಿದ್ದರು ಆ ವೇಳೆಯಲ್ಲಿ ಅಲ್ಲಿ ಯಾದು ಯಾರು ಇದ್ದರೆಂಬ ವಿಷಯವೂ ಕೂಡ ನನಗೆ ಚೆನ್ನಾಗಿ ತಿಳಿಯದು; ಯಾಕೆಂದರೆ, ಅವರು ಗುಡಿಸಲಿನ ಹಿಂಭಾಗದ ದಾರಿಯಿಂದಲೇ ಹೊರಗೆ ಹೊರಟುಹೋದರು."

ಸ್ಲಿಮ್ ಟಾಮಿ ಎಂದರೆ ಕೇವಲ ದುರ್ಬಲಹೃದಯದ ಒಬ್ಬ ಮನುಷ್ಯ. ಅದರಿಂದಲೇ ಬ್ಲೇಕನು ಅವನಿಂದ ಅನೇಕ ಮುಖ್ಯ ವಿಷಯಗಳನ್ನು ಅರಿತನು.

ಅಷ್ಟು ಹೊತ್ತಿಗೆ ಹಾರ್ಕರನೂ ತನ್ನ ಪೋಲೀಸರ ಪಡೆಯೊಂದಿಗೆ ಅಲ್ಲಿಗೆ ಬಂದನು. ಡಾಕ್ಟರ್ ಫೆರಾರೋ ಪುನಃ ತನ್ನ ಅದ್ಭುತ ಸಾಹಸದೊಂದಿಗೆ ಪ್ರಕಟವಾಗಿರುವನೆಂದು ಕೇಳಿದೊಡನೆ ಹಾರ್ಕರನು ದಿಗಿಲು ಬಿದ್ದನು. ಕ್ರಮವಾಗಿ ಬ್ಲೇಕನಿಂದ ವಿಷಯವನ್ನೆಲ್ಲಾ ತಿಳಿದನು.

ಸ್ವಲ್ಪಹೊತ್ತಿನೊಳಗೇ ಎಲ್ಲರೂ ಆ ಗುಡಿಸಲಿನ ಕಡೆಗೆ ಹೊರಟರು. ಚುರುಕಾದ ಮೋಟಾರು ಹದಿನೈದು ಮೈಲು ದೂರ ಹೋಗುವದಕ್ಕೆ ಹೆಚ್ಚೇನೂ ಕಾಲ ಬೇಕಾಗಿರಲಿಲ್ಲ. ಅದೂ ಅಲ್ಲದೆ ದಾರಿಯನ್ನು ತೋರಿಸಲು ಆ ಸ್ಲಿಮ್ ಟಾಮಿಯನ್ನೂ ಜೊತೆಗೆ ಒಯ್ದಿದ್ದರು. ಹೋಟಲಿನಿಂದ ಗುಡಿಸಲಿರುವ ಸ್ಥಳದವರೆಗಿನ ದಾರಿಯ ಸಂಪೂರ್ಣ ವಿವರವಿರುವ ಟಾಮಿಯ ಭೂಪಟವೂ ಕೈಯಲ್ಲಿದ್ದಿತು. ಹೀಗಿದ್ದಮೇಲೆ ಕೇಳುವದೇನು? ಕೆಲ ಕ್ಷಣದೊಳಗೇ ತಲುಪಬೇಕಾದ ಸ್ಥಳವನ್ನು ತಲ್ಪಿದರು.

ಅಡವಿಯೊಳಗೆ ಗುಡಿಸಲುವಿದ್ದಿತು. ದೂರದಲ್ಲಿಯೇ ಮೋಟಾರನ್ನು ನಿಲ್ಲಿಸಿ ಬ್ಲೇಕನು ಇಳಿದನು. ಕಾಲ್ದಾರಿಯಿಂದ ಬ್ಲೇಕನು ಟಿಂಕರ್, ಹಾರ್ಕರ್ ಬ್ರೌನ್, ಲಿಪ್ಟನರನ್ನು ಮಾತ್ರ ಜೊತೆಗೆ ಕರೆದುಕೊಂಡು ಆ ಗುಡಿಸಲಿನ ಹಿಂಭಾಗಕ್ಕೆ ಹೋದನು.

ಗುಡಿಸಲಿನ ಕೆಳಭಾಗದಲ್ಲಿ ನಾಲ್ಕು ಕೋಣೆಗಳಿದ್ದವು. ಮೇಲ್ಭಾಗದಲ್ಲಿ ಎರಡು ಕೋಣೆಗಳಿದ್ದರೂ ಅಲ್ಲೀಗ ಕೇವಲ ನಿಶ್ಶಬ್ದತೆಯು ಹರಡಿದ್ದಿತು. ಎಲ್ಲಾ ಕೋಣೆಗಳೂ ತೆರೆದಿದ್ದವು.

ತಾವೆಲ್ಲಾ ಗುಡಿಸಲಿನ ಒಳಗೆ ಬರುವುದಕ್ಕಿಂತ ಮುಂಚೆಯೇ ಹಕ್ಕಿಯು ಅಲ್ಲಿಂದ ಹಾರಿ ಹೋಗಿದ್ದಿತೆಂದು ತಿಳಿಯಿತು. ಬ್ಲೇಕನು ಹೇಳಿದನು— "ನಾವು ಸ್ವಲ್ಪ ತಡವಾಗಿ ಬಂದೆವು. ನನಗಿಲ್ಲಿ ಆ ಪುಂಡರು ಸಿಕ್ಕುವ ಭರವಸೆಯೂ ಪೂರ್ಣವಾಗಿರಲಿಲ್ಲ; ಯಾಕೆಂದರೆ ಪಾರಟ್ರಿಜನು ಎಲ್ಲವನ್ನೂ ಆಗಲೆ ತಿಳಿದುಬಿಟ್ಟಿದ್ದನು ಅದರಿಂದಲೇ ಅವನು ಮೊದಲು ಹೆಡ್‌ಕೂಂಬನನ್ನು ಕೊಂದು, ಕೂಡಲೆ ಇಲ್ಲಿಗೆ ಬಂದು ಇಲ್ಲಿದ್ದವರನ್ನೆಲ್ಲಾ! ಎಚ್ಚರಿಸಿರಬಹುದು."

ಟಿಂಕರನು ಮುಂಭಾಗದ ಸ್ಥಳವನ್ನು ತೋರಿಸುತ್ತಾ ಹೇಳಿದನು— "ಇಗೋ, ಇಲ್ಲಿ ನೋಡಿರಿ. ಇಟಾಲಿಯಾ ಮೋಟಾರ್ ಟೈರಿನ ಗುರುತು ಸ್ಪಷ್ಟವಾಗಿ ಕಾಣಿಸುತ್ತದೆ."

ಬ್ಲೇಕ—"ಖಂಡಿತವಾಗಿಯೂ ಈಗ ಆ ಪುಂಡರು ಟಾಮಿಯು ತಿಳಿಸಿದ ಕೆಂಟಿನ ಸಮುದ್ರ ತೀರದ ಆ ಸ್ಥಳಕ್ಕೆ ಹೋಗಿರಬಹುದು. ನಾವು ಆಗಾಗ್ಗೆ ಫೆರಾರೋನನ್ನು ಬೆನ್ನಟ್ಟಿ ಬಂದಾಗೆಲ್ಲ ಆತನು ಈ ಸಮುದ್ರದ ದಾರಿಯಿಂದಲೇ ಓಡಿಹೋಗುತ್ತಿರುವನು; ಇದೇ ಅವನ ನಿತ್ಯದ ಅಭ್ಯಾಸವಾಗಿಬಿಟ್ಟಿದೆ. ಕ್ರೆಲಿಂಗ್ ಕ್ರೀಕ್ ಎಂದು ಆ ಸ್ಥಳದ ಹೆಸರು."

ಇಷ್ಟು ಮಾತನ್ನು ಹೇಳಿ ಬ್ಲೇಕನು ಹಾರ್ಕರನನ್ನು ನೋಡುತ್ತ ಹೇಳಿದನು:—"ಮಿಸ್ಟರ್ ಹಾರ್ಕರ್! ನೀವೀಗ ಎಲ್ಲ ಪೋಲೀಸ್ ಪಡೆಯೊಂದಿಗೆ ಕೂಡಲೆ ಕ್ರೆಲಿಂಗ್ ಕ್ರೀಕಿಗೆ ಹೊರಡಿರಿ. ನಮ್ಮ ಟಿಂಕರನೂ ನಿಮ್ಮ ಜೊತೆಗೆ ಬರುವನು. ನನ್ನ ಮೋಟಾರೊಂದು ಮಾತ್ರ ಇಲ್ಲಿ ಇರಲಿ ಉಳಿದವರೆಲ್ಲರೂ ಹೊರಡಲಿ. ನಾನು ಈ ಗುಡಿಸಲಲ್ಲಿ ಸ್ವಲ್ಪ ಹುಡುಕಿ, ಪರಿಶ್ಶೀಸಿ, ಅನಂತರ ಬರುವೆನು. ಇಲ್ಲಿ ಏನಾದರೂ ನಮಗೆ ಬೇಕಾದ ವಸ್ತುವು ದೊರಕಬಹುದೆಂದು ನನಗೆ ಭರವಸೆಯಿದೆ. ನೀವು ತಡಮಾಡದೆ ಕೂಡಲೆ ಹೋದರೆ, ಆ ಪುಂಡರ ತಂಡವು ನಿಮ್ಮ ಕೈಗೆ ಸಿಗದಿರಲಾರದು."

ಹಾರ್ಕರನು ಒಂದು ಸಾರಿ ಆ ಕೋಣೆಗಳೊಳಗೆ ದೃಷ್ಟಿಯನ್ನು ಹೊರ

ಳಿಸಿ ನೋಡಿದನು; ಆದರೆ ಒಣಗಿದ ಮಾಂಸದ ತುಂಡು, ಖಾಲಿಯಾದ ಟಿನ್ನಿನ ಡಬ್ಬಿ, ಕಾಗದದ ಚೂರು, ಮದ್ಯದ ಖಾಲೀ ಸೀಸೆ ಇವುಗಳಲ್ಲದೆ ಅಲ್ಲಿ ಇನ್ನೇನೂ ಕಾಣಿಸಲಿಲ್ಲ. ಮೇಜಿನ ಮೇಲೆ ಕೆಲವು ವರ್ತಮಾನ ಪತ್ರಿಕೆಗಳು ಅತ್ತಿತ್ತ ಬಿದ್ದು ಗಾಳಿಗೆ ಹೊರಳಾಡುತ್ತಿದ್ದವು. ಬ್ಲೇಕನ ಕಡೆಗೆ ತಿರುಗಿ ಹಾರ್ಕರನು ಹೇಳಿದನು:—"ಇಲ್ಲಿ ಇನ್ನೂ ಏನಾದರೂ ಹೊಸ ವಸ್ತುವು ದೊರಕಬಹುದಾಗಿ ನೀವು ಭರವಸೆ ಇಡುತ್ತೀರಾ?"

ಬ್ಲೇಕ್:—"ನಾನಿಲ್ಲಿ ಪರೀಕ್ಷಿಸಿದಾಗ ಎಲ್ಲವೂ ದೊರಕಬಹುದು; ಆದರೆ ನೀವು ಮಾತ್ರ ಹಾಗೆ ಹೀಗೆ ಮಾತಾಡುತ್ತ ಇಲ್ಲಿ ಸುಮ್ಮನೆ ಕಾಲ ಕಳೆಯುತ್ತಿರುವದು ಸರಿಯಲ್ಲ. ಹೀಗಿಲ್ಲಿ ವೇಳೆ ಹಾಳು ಮಾಡುತ್ತ ಕುಳಿತರೆ, ಒಂದು ಒಳ್ಳೆಯ ಸಂದರ್ಭವು ಕೈತಪ್ಪಿ ಹೋಗಬಹುದು. ಇನ್ನು ನೀವಿಲ್ಲಿಂದ ಬಹಳ ದೂರ ಹೋಗಬೇಕಾಗಿದೆ. ಈ ಸಮಯದ ಒಂದೊಂದು ನಿಮಿಷವೂ ಬಲು ಬೆಲೆ ಬಾಳುವುದೆಂದು ಅರಿತು ನೀವು ಕೆಲಸ ಮಾಡುವದು ಬಹಳ ಒಳ್ಳೆಯದು"

ಹಾರ್ಕರನು ಇನ್ನಲ್ಲಿಂದ ಹೊರಡಲು ಸಿದ್ಧನಾಗಿ ಮೋಟರ ಇದ್ದೆಡೆಗೆ ಹೊರಟನು. ಉಳಿದವರೂ ಅವನನ್ನು ಹಿಂಬಾಲಿಸಿದರು. ಟೆಂಕರನು ಮಾತ್ರ ಹೊರಡಲಿಲ್ಲ. ಯಜಮಾನನೊಬ್ಬನನ್ನೇ ಆ ಅಡವಿಯಲ್ಲಿ ಬಿಟ್ಟು ಹೋಗುವದು ಉಚಿತವಲ್ಲವೆಂದು ಭಾವಿಸಿ, ಟೆಂಕರನು ತನ್ನಿಚ್ಛೆಯನ್ನು ಬ್ಲೇಕನಿಗೆ ತಿಳಿಸಿದನು; ಆದರೆ ಬ್ಲೇಕನು ಟೆಂಕರನ ಅಭಿಪ್ರಾಯವನ್ನೊಪ್ಪದೆ ಹೇಳಿದನು:—"ಹಾರ್ಕರನು ಗುರಿ ಇಡುವುದರಲ್ಲಿ ಅಷ್ಟೇನೂ ನಿಪುಣನಲ್ಲ; ಅದಲ್ಲದೆ ಯಾವ ಪುಂಡರ ತಂಡವನ್ನೀಗ ಸೆರೆಹಿಡಿಯಬೇಕಾಗುವದೋ, ಅದು ಬಹಳ ಭಯಾನಕವಿರುವದು. ಆದ್ದರಿಂದ ಸಮಯದಲ್ಲಿ ನೀನು ಸರಿಯಾದ ಸಲಹೆ ಇತ್ತು, ಹಾರ್ಕರನೊಡನೆ ಕೆಲಸ ಮಾಡು...."

ನಿರುಪಾಯನಾಗಿ ಟೆಂಕರನೂ ಹಾರ್ಕರನ ಜೊತೆಗೆ ಹೊರಟನು.

ಎಲ್ಲರೂ ಹೋದ ನಂತರ ಬ್ಲೇಕನು ಗುಡಸಿಲಿನ ಹೊರಬಾಗಿಲನ್ನು ಮುಚ್ಚಿ ಒಳಗಡೆ ಹೋದನು. ಹಿಂಭಾಗದಲ್ಲಿನ ಕೋಣೆಗೆ ಹೋಗಿ ಅಲ್ಲಲ್ಲ ಪರೀಕ್ಷಿಸಿದನು. ಅನಂತರ ಕಿಟಕಿಯಲ್ಲಿ ತಲೆ ಹಾಕಿ ಹೊರಗೆ ನೋಡಿದನು. ಆ ಭಾಗದಲ್ಲಿ ಉದ್ಯಾನವನವಿದ್ದಿತು. ಅದರಲ್ಲಿ ಹೂಗಿಡಗಳೂ, ಬಳ್ಳಿಗಳೂ, ಸಾಧಾರಣ ರೀತಿಯ ಮರಗಳೂ ಬೆಳೆಯಿಸಲ್ಪಟ್ಟಿದ್ದವು.

ಆದರೆ ಅಲ್ಲೊಂದು ಹೊಸ ವಿಶೇಷವು ಕಾಣಿಸಿತು. ಕಿಟಕಿಯಿಂದ ಸುಮಾರು ಎಂಟು-ಹತ್ತು ಗಜ ದೂರದ ಮೇಲೆ ಇರತಕ್ಕ ನೆಲದ ಹುಲ್ಲು

ಮತ್ತು ಹೂಗಿಡಗಳೆಲ್ಲ ಏನೋ ಒಂದು ವಿಷಮಯವಾದ ವಸ್ತುವು ಬಿದ್ದರೆ ಹೇಗಾಗಬಹುದೋ ಹಾಗೆ ಒಣಗಿ ಸುಕ್ಕುಕಟ್ಟಿ ಹೋಗಿದ್ದವು.

ಬ್ಲೇಕನು ಕಿಟಕಿಯ ಚೌಕಟ್ಟಿನ ಮೇಲೆ ಕೈಯಿಟ್ಟು ನೋಡಿದನು. ಚೌಕಟ್ಟಿನ ಮರದ ಮೇಲ್ಭಾಗವು ಹುಡಿಹುಡಿಯಾಗಿ ಅವನ ಕೈಗೇ ಬಂದಿತು. ಅದೂ ಕೂಡ ಸುಟ್ಟುಕಪ್ಪಾಗಿ ಹೋಗಿದ್ದಿತು. ಕಿಟಕಿಯ ಹತ್ತಿರವಿದ್ದ ಮೇಜಿನ ಮೇಲ್ಮೈಯ ಸ್ವಲ್ಪ ಭಾಗವೂ ಕೂಡ ಇದೇ ಸ್ಥಿತಿಯಲ್ಲಿದ್ದುದು ಕಾಣಿಸಿತು. ಬ್ಲೇಕನು ಮನಸ್ಸಿನೊಳಗೇ ಹೇಳಿಕೊಂಡನು. "ನಿಜ. ರೇಡಿಯಮ್ ಇದೇ ಸ್ಥಳದಲ್ಲಿ ಇಡಲ್ಪಟ್ಟಿದ್ದಿತು. ರೇಡಿಯಮ್ಮಿನ ತೀಕ್ಷ್ಣ ಕಿರಣಗಳು ಕಿಟಕಿಯ ಚೌಕಟ್ಟಿನ ಮೇಲೂ ಹೊರಗಿನ ಹುಲ್ಲು, ಗಿಡಗಳ ಮೇಲೂ ಬಿದ್ದೇ ಅವುಗಳನ್ನು ಈ ಸ್ಥಿತಿಗೆ ತಂದಿಟ್ಟಿವೆ. ಹಾ! ಈಶ್ವರಾ! ರೋಗಗಳನ್ನು ವಾಸಿಮಾಡುವುದೊಂದರಲ್ಲಲ್ಲವೆ ಇನ್ನಾವುದರಲ್ಲಿಯೂ ರೇಡಿಯಮನ್ನು ಉಪಯೋಗಿಸಲ್ಪಟ್ಟಿರತಕ್ಕ ವಿಷಯವು ಇದುವರೆಗೆ ನನ್ನ ಕಿವಿಗೆ ಬಿದ್ದಿರಲಿಲ್ಲ; ಆದರೆ ಇಲ್ಲಿ ಯಾವ ಉಪಯೋಗಕ್ಕಾಗಿ ಅದನ್ನು ತಂದಿಟ್ಟಿರಬಹುದೋ ದೇವರೇ ಬಲ್ಲ! ಇರಲಿ. ನೋಡೋಣ."

ಬ್ಲೇಕನು ಕೆಳಗೆ ಆಚೆ ಈಚೆ ನೋಡಿ ಅನಂತರ ನೆಲದ ಮೇಲೆ ಬಿದ್ದಿದ್ದ ಕಾಗದದ ಚೂರುಗಳನ್ನು ತೆಗೆದುಕೊಂಡು ನೋಡತೊಡಗಿದನು. ಅವು ಯಾವುದೋ ನೋಟ್ ಬುಕ್ಕಿನ ಹಾಳೆಗಳ ಚೂರುಗಳಾಗಿದ್ದವು. ಡಾಕ್ಟರ್ ಗ್ರೇಯ ಕೋಣೆಯೊಳಗೆ ಯಾವ ತರಹದ ಮಶಿ ಇದ್ದಿತೋ, ಅದೇ ತರಹದ ಮಶಿಯಿಂದ ಬರೆಯಲ್ಪಟ್ಟಿದ್ದ ಸ್ಪಷ್ಟವಾದ ಬರವಣಿಗೆಯು ಆ ಕಾಗದದ ತುಂಡುಗಳಲ್ಲಿ ಕಾಣಿಸಿತು.

ಬ್ಲೇಕನ ತೀಕ್ಷ್ಣ ದೃಷ್ಟಿಯೂ, ತೀಕ್ಷ್ಣ ಬುದ್ಧಿಯೂ ಈಗ ಚುರುಕಾಗಿ ಕೆಲಸಮಾಡತೊಡಗಿದವು ಪ್ರಯತ್ನಪಟ್ಟು ಎಷ್ಟೋ ಚೂರುಗಳನ್ನೂ ಒಟ್ಟುಗೂಡಿಸಿದ ನಂತರ "ಓಹೋ! ಗ್ರೇಯ ಬರವಣಿಗೆಯೇ ಇದು." ಎಂದು ಬ್ಲೇಕನು ನಿಶ್ಚಯಿಸಿದನು ರೇಡಿಯಮ್ಮಿನ ಮೇಲೆ ತಾನು ಯಾವದೋ ಹೊಸದಾಗಿ ಕಂಡು ಹಿಡಿಯಲಾರಂಭಿಸಿದ್ದ ಕೆಲವು ವಿಚಾರಗಳನ್ನು ತನ್ನ ನೋಟ್‌ಬುಕ್ಕಿನಲ್ಲಿ ಬರೆದಿಟ್ಟಿದ್ದೆನೆಂದು ಹಿಂದೆ ಗ್ರೇ ಹೇಳಿದ್ದ ಮಾತು ಈಗ ಬ್ಲೇಕನಿಗೆ ನೆನಪಾಯಿತು. ಆ ನೋಟ್ ಬುಕ್ಕಿನ ಹಾಳೆಗಳೇ ಇವೆಂದು ಬ್ಲೇಕನು ಅರಿತನು ಕಾಗದದ ಚೂರುಗಳ ಮೇಲಿದ್ದ ಗ್ರೇಯ ಅಕ್ಷರಗಳು ಗ್ರೇಯ ಕೋಣೆಯೊಳಗಿದ್ದಂತಹ ಮಶಿಯಿಂದಲೇ ಬರೆಯಲ್ಪಟ್ಟಿದ್ದವೆಂಬದು ಕೂಡ ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಿದ್ದವು.

ಆದರೆ ಕಾಗದದ ಆ ಎಲ್ಲಾ ಚೂರುಗಳನ್ನೂ ಒಟ್ಟುಗೂಡಿಸಿ ಮುಂಚಿನಂತೆ ಒಂದು ಕಾಗದವಾಗಿ ಮಾಡಿಡುವುದು ಬಲು ಕಷ್ಟದ ಕೆಲಸವಾಗಿದ್ದಿತು ಹಾಗಿದ್ದರೂ ಬ್ಲೇಕನು ನಿರಾಶನಾಗದೆ, ಬಹಳ ಪ್ರಯತ್ನಪಟ್ಟು ನೆಲದ ಮೇಲೆ ಅಲ್ಲಿ-ಇಲ್ಲಿ, ಆಚೆ ಈಚೆ ಬಿದ್ದಿದ್ದ ಕಾಗದದ ಚೂರುಗಳನ್ನೆಲ್ಲಾ ಆರಿಸಿ ತೆಗೆದು, ಮೇಜಿನ ಮೇಲೆ ಹರಡಿ, ನಿಧಾನವಾಗಿ ಒಂದೊಂದಾಗಿ ಜೊತೆ ಗೂಡಿಸಿ ಒಂದೊಂದು ಪುಟವನ್ನಾಗಿ ಮಾಡತೊಡಗಿದನು. ಕೆಲಸವೇನೋ ಸುಲಭವಾಗಿರಲಿಲ್ಲ; ಆದರೆ ಬ್ಲೇಕನಿಗೆ ಅದೊಂದು ಅಷ್ಟು ಕಠಿಣವಾದ ಕಾರ್ಯವಾಗಿ ಕಾಣಿಸಲಿಲ್ಲ ಹೇಗೆಯೋ ಪ್ರಯತ್ನಪಟ್ಟು ಆತನು ಸ್ವಲ್ಪ ಹೊತ್ತಿನೊಳಗೆ ಎಲ್ಲವನ್ನೂ ಒಂದು ರೀತಿಗೆ ತಂದಿಟ್ಟನು. ಅನಂತರ ಕ್ರಮವಾಗಿ ಓದಿ ಅದರ ಅರ್ಥವನ್ನು ತಿಳಿಯತೊಡಗಿದನು. ಎಲ್ಲವನ್ನೂ ನೋಡಿಯಾದ ಮೇಲೆ ಬ್ಲೇಕನ ಮೊದುಳಿಗೆ ವಿಚಿತ್ರರೀತಿಯು ಬೆಳಕೊಂದು ಹೊಳೆಯಿತು. ಮನದೊಳಗೇ ನಸು ನಕ್ಕು ಹೇಳಿಕೊಂಡನು—"ಅಹಾ! ಎಲ್ಲವೂ ಸರಿಯಾಗಿದೆ. ಈಗೆಲ್ಲವೂ ವಿವರವಾಗಿ ತಿಳಿಯಿತು. ರತ್ನಗಳ ಬಣ್ಣವನ್ನು ಬದಲಾಯಿಸುವುದಕ್ಕಾಗಿ ರೇಡಿಯಮ್ಮನ್ನು ಉಪಯೋಗಿಸಿರುವರು. ಆದಕ್ಕಾಗಿಯೇ ಶೀಡ್ಮನ್ನನ ಖಜಾನೆಯು ಲೂಟಿಯಾಯಿತು. ಇರಲಿ. ಶೀಡ್ಮನ್ನನ ಖಜಾನೆಯಿಂದ ಕದ್ದೊಯ್ದ ಹಳದಿ ಬಣ್ಣದ ಇಪ್ಪತ್ತೇಳು ರತ್ನಗಳಲ್ಲಿ ಈಗ ಆ ಪುಂಡರು ಇಪ್ಪತ್ತಾರು ರತ್ನಗಳನ್ನು ಮಾತ್ರ ತೆಗೆದುಕೊಂಡು ಪತ್ತೆಯಿಲ್ಲದಾಗಿದ್ದಾರೆ. ಯಾವ ಪುಂಡರ ತಂಡವನ್ನು ಸೆರೆಹಿಡಿಯಲು ಹಾರ್ಕರನು ಹೋಗಿರುವನೋ, ಆ ಪುಂಡರ ಬಳಿಯಲ್ಲಿಯೇ ಆ ಇಪ್ಪತ್ತಾರು ರತ್ನಗಳ ಪತ್ತೆಯಾಗಬಹುದು. ಒಂದು ವೇಳೆ ಅವಷ್ಟೂ ರತ್ನಗಳನ್ನು ಫೇರಾರೋ ವಶಪಡಿಸಿಕೊಂಡಿರಲೂ ಬಹುದು. ಏನೇ ಇರಲಿ, ಯಾವ ಕಾರ್ಯಕ್ಕೀಗ ಹಾರ್ಕರನು ಪೋಲೀಸರ ಪಡೆಯೊಂದಿಗೆ ಹೋಗಿರುವನೋ, ಆ ಕಾರ್ಯವನ್ನು ಅವನ ಮೇಲೆ ಭರವಸೆ ಇಟ್ಟು ಬಿಡುವುದೇ ಲೇಸು. ಇಷ್ಟರೊಳಗೆ ನಾನು ಉಳಿದಿರುವ ಕಾರ್ಯವನ್ನು ಪೂರೈಸುವೆನು; ಆದರೆ ಈ ವೇಳೆಯಲ್ಲಿ ನಾನೂ ಕೂಡ ಬಲು ಚುರುಕಿನಿಂದಲೇ ಮುಂದುವರಿಯುವುದು ಒಳ್ಳೇದು."

ಇನ್ನು ಆ ಮನೆಯನ್ನು ಹೆಚ್ಚು ಪರೀಕ್ಷಿಸುವ ಅಗತ್ಯವೇನೂ ಉಳಿಯಲಿಲ್ಲವೆಂದು ತಿಳಿದು ಬ್ಲೇಕನು ಒಡನೆಯೇ ಅಲ್ಲಿಂದ ಹೊರಟು ಮೋಟರನ್ನು ಹತ್ತಿ ನೆಟ್ಟಗೆ ಲಂಡನ್ನಿಗೆ ಹಿಂದಿರುಗಿದನು. ರೇಡಿಯಮ್ಮನ್ನು ಯಾವ ಕಾರ್ಯದಲ್ಲಿ ಉಪಯೋಗಿಸಲಾಯಿತೆಂಬದು ಈಗ ಬ್ಲೇಕನಿಗೆ ಚೆನ್ನಾಗಿ ತಿಳಿದು ಹೋಗಿದ್ದಿತು. ಇಷ್ಟು ದಿನಗಳ ವರೆಗೆ ಮೃತನಾದಂತಿದ್ದು, ಅಕಸ್ಮಾತ್ತಾಗಿ

ಈಗ ಪ್ರಕಟನಾಗಿ ಪುನಃ ತನ್ನ ಕಾರ್ಯದಲ್ಲಿ ತೊಡಗಿರುವ ಡಾಕ್ಟರ್ ಫೆರಾರೋ ಎಂಬ ಭಯಂಕರ ಭೂತದ ಮೆದುಳಿನಿಂದಲೇ ಈ ಭೀಷಣ ಸಾಹಸದ ಕಾರ್ಯ ಕ್ರಮವು ನಡೆಯುತ್ತಿರುವುದು, ಎಂಬ ವಿಷಯದಲ್ಲಿ ಬ್ಲೇಕನಿಗೆ ಇನ್ನ್ಯಾವ ಸಂಶಯವೂ ಉಳಿಯಲಿಲ್ಲ.

ಫೆರಾರೋ ಏನು ಮಾಡುತ್ತಿರುವನೆಂಬುದನ್ನು ಅನುಭವವು ಬ್ಲೇಕನಿಗೆ ತಿಳಿಸಿದ್ದಿತು; ಆದರೆ ಅದನ್ನು ತಿಳಿಯುವ ವಿಷಯವೇ ಬೇರೆ, ಅವನನ್ನು ಸೆರೆ ಹಿಡಿಯುವ ವಿಷಯವೇ ಬೇರೆ. ಇದು ವರೆಗೆ ಎಷ್ಟೋ ಸಾರೆ ಬ್ಲೇಕನು ಅವನ ಮುಖವನ್ನು ನೋಡುತ್ತಿದ್ದಾಗಲೆ ಅವನು ಬಲು ಬುದ್ಧಿವಂತಿಕೆಯಿಂದ ತಪ್ಪಿಸಿಕೊಂಡು ಹೋಗಿಬಿಟ್ಟಿದ್ದನು. ಅವನ ಪ್ರಧಾನ ಉಪಾಯವೇನಂದರೆ, ತಾನು ಓಡಿ ಹೋಗುವ ಏರ್ಪಾಡನ್ನು ಅವನು ಮುಂಚೆಯೇ ಚೆನ್ನಾಗಿ ತಯಾರಿಸಿಟ್ಟುಕೊಂಡಿರುತ್ತಿದ್ದನು. ಹಾಗೆಯೇ ಈ ಸಾರಿಯಾದರೂ ಫೆರಾರೋ ತನ್ನ ಕೈಗೆ ಸಿಕ್ಕರೆ, ಕೂಡಲೆ ಓಡಿಹೋಗಬಹುದೆಂದು ಬ್ಲೇಕನು ತಿಳಿದಿದ್ದನು; ಆದರೆ ಫೆರಾರೋವಿನ ಜಾಣತನದಲ್ಲಿ ತಪ್ಪೊಂದು ಸೇರಿದ್ದಿತು---ಓಡಿಹೋಗು ವಾಗ ಪ್ರತಿಸಲವೂ ಅವನು ಒಂದೇ ತರಹದ ಯುಕ್ತಿಯನ್ನು ಉಪಯೋಗಿಸು ತ್ತಿದ್ದನು. ಅದರಂತೆ ಈ ಸಲವೂ ಫೆರಾರೋ ಆ ಮಾರ್ಗದಿಂದಲೇ ಓಡಿ ಹೋಗುವನೆಂದು ಬ್ಲೇಕನಿಗೆ ತಿಳಿದಿದ್ದಿತು. ಈ ಸಲ ಅವನನ್ನು ಖಂಡಿತವಾಗಿ ಹಿಡಿಯಬೇಕೆಂದು ಬ್ಲೇಕನು ಮನದೊಳಗೇ ಎಣಿಸುತ್ತಿದ್ದನು.

ಲಂಡನ್ನನ್ನು ತಲ್ಪಿದೊಡನೆಯೇ ಬ್ಲೇಕನು ನೆಟ್ಟಗೆ ಬೇಕರ್ ಸ್ಟ್ರೀಟಿಗೆ ಹೋಗಿ ತನ್ನ ಮನೆಯನ್ನು ಹೊಕ್ಕನು. ಒಳಗೆ ಹೋಗಿ ಮೇಜಿನ ಮೇಲೆ ಇಟ್ಟಿದ್ದ ಟಪಾಲನ್ನೆಲ್ಲ ಒಂದೊಂದಾಗಿ ಸರಸರನೆ ನೋಡತೊಡಗಿದನು. ಅವು ಗಳಲ್ಲಿ ಒಂದು ಕಾಗದವು ಮಾತ್ರ ಬ್ಲೇಕನ ಮನಸ್ಸನ್ನು ವಿಶೇಷವಾಗಿ ತನ್ನೆಡೆಗೆ ಆಕರ್ಷಿಸಿತು. ಕೂಡಲೆ ಬ್ಲೇಕನು ಅದನ್ನು ಓದತೊಡಗಿದನು: "ಮಿಸ್ಟರ್ ಬ್ಲೇಕ್! ತಮ್ಮ ಕಾಗದವು ತಲ್ಪಿದಂದಿನಿಂದ ನಾನಿಲ್ಲಿ ಬಹಳ ಶೋಧನೆ ನಡೆ ಸಿದೆನು. ವಿನ್ಸೆಂಟ್ ಮೋಡೀನನು ಎರಡು ವರ್ಷದ ಕಾಲ ಸೆವಾಯಿಲಿನಲ್ಲಿ ಡಾಕ್ಟರ್ ಪ್ರಾಕ್ಟೀಸನ್ನು ಮಾಡಿದ ನಂತರ ತಾನು ಕೆಲವು ವಿಚಾರಗಳನ್ನು ಪರೀಕ್ಷಿಸಿಕೊಂಡು ಬರಲು ಇಂಗ್ಲಂಡಿಗೆ ಹೋಗಬೇಕೆಂದಿರುವೆನೆಂದು ಜನರಲ್ಲಿ ತನ್ನ ನಿಶ್ಚಯವನ್ನು ಪ್ರಕಟಿಸಿದನು. ಆ ಮೇಲೆ ಕೇಡೀಜದಿಂದ ಹೊರಟೂ ಬಿಟ್ಟನು; ಆದರೆ ಅಲ್ಲಿಂದವನು ವಾಸ್ತವಿಕವಾಗಿ ಯಾವ ಕಡೆಗೆ ಹೋದನೆಂ ಬುದರ ವರ್ತಮಾನವನ್ನು ಅವನ ಒಬ್ಬ ಹಳೆಯ ಸೇವಕನಿಂದ ನಾನು ಕೇಳಿ ತಿಳಿದುಕೊಂಡೆನು. ಅವನು ಹಡಗಿನಲ್ಲಿ ಹೋಗಲಿಲ್ಲ. ಹಡಗಿನ ಮೇಲೆ

ಅವನ ಸ್ಥಾನವನ್ನು ಬಹಳ ಅಂಶದಲ್ಲಿ ಅವನಂತೆಯೇ ರೂಪವಿದ್ದ ಒಬ್ಬ ಮನುಷ್ಯನು ಆಕ್ರಮಿಸಿದನು. ಮೋಡೀನನಾದರೋ ಒಂದು ಹೇಸರಗತ್ತೆಯ ಮೇಲೆ ಕುಳಿತು "ಜೀರಾ ಮೋರೇನಾ"ದ ಜೀಬ್ರಾ ಎಂಬ ದೂರದ ಒಂದು ಗ್ರಾಮವನ್ನು ತಲ್ಪಿದನು ಆನಂತರ ಅವನು ಅದೇ ಊರಿನಲ್ಲಿ ತನ್ನ ಹೆಸರನ್ನು ಮಿಶೇಜ್ ಎಂದಿಟ್ಟುಕೊಂಡು, ಸ್ವಲ್ಪ ಜಮೀನನ್ನು ಕೊಂಡುಕೊಂಡು, ಅಲ್ಲಿಯೇ ವಾಸಮಾಡತೊಡಗಿದನು. ಈಗಲೂ ಕೂಡ ಅವನು ಆ ಊರಿನಲ್ಲಿಯೇ ಇರುವನೆಂಬುದು ವಿಶ್ವಾಸಾರ್ಹವಾದ ಕಡೆಯಿಂದ ನನಗೆ ತಿಳಿದುಬಂದಿದೆ. ಇವಿಷ್ಟು ಸಂಗತಿಯನ್ನು ಪತ್ತೆಹಚ್ಚಲು ಇಷ್ಟು ವಿಲಂಬವಾಯಿತು. ಅದಕ್ಕಾಗಿ ಕ್ಷಮಿಸಬೇಕು. ನನ್ನ ಈ ಅನ್ವೇಷಣೆಯಿಂದ ತಮಗೆ ತಕ್ಕಮಟ್ಟಿಗೆ ಸಹಾಯವೊದಗಬಹುದಾಗಿ ನಂಬಿದ್ದೇನೆ. ಇತಿ. ತಮ್ಮವ, ಫ್ರಾನ್ಸಿಸ್ಕೊ."

ಕಾಗದವನ್ನೋದಿ ಮುಗಿಸಿದೊಡನೆಯೇ ಬ್ಲೇಕನು ಒಂದು ಸಾರೆ ಗಡಿಯಾರನ್ನು ನೋಡಿ ಕೂಡಲೆ ವೆಂಟ್‌ವರ್ತ್ ಆಸ್ಪತ್ರೆಗೆ ಫೋನ್ ಮಾಡಿದನು: "ಡಾಕ್ಟರ್ ಮೋಡೀನರು ಈ ವೇಳೆಯಲ್ಲಿ ಮನೆಯೊಳಗೇ ಇರುವರೇ? ರೇಡಿಯಮ್ಮನ್ನು ಪುನಃ ತಮ್ಮ ಮನೆಗೆ ಒಯ್ದಿರುವರೇ? ಅದು ಹಿಂದಿರುಗಿ ಬಂದಿತೇ?"

ಡಾಕ್ಟರ್ ಫೆಂಟನನಿಂದ ಉತ್ತರವು ಬಂದಿತು--"ಹೌದು. ಇಂದು ಮಧ್ಯಾಹ್ನ ಅವರು ಆಸ್ಪತ್ರೆಯಿಂದ ರೇಡಿಯಮ್ಮನ್ನು ತಮ್ಮ ಮನೆಗೆ ಒಯ್ದಿರುತ್ತಾರೆ. ಅದರ ರಕ್ಷಣೆಗಾಗಿ ಯಾರ್ಡಿನ ಇಬ್ಬರು ಪತ್ತೇದಾರಿಗಳು ಅವರ ಜೊತೆಗೆ ಹೋಗಿದ್ದಾರೆ. ಎಲ್ಲರೂ ಸುಖವಾಗಿ ಮೋಡೀನರ ಮನೆಯನ್ನು ತಲ್ಪಿರುವರೆಂಬ ವರ್ತಮಾನವೂ ಬಂದಿದೆ. ಈ ವೇಳೆಯಲ್ಲಿ ಮೋಡೀನರು ಸರ್ ಕಥವರ್ಟರ ಚಿಕಿತ್ಸೆ ನಡೆಸುತ್ತ ಮನೆಯಲ್ಲಿಯೇ ಇರುವರು. ಇನ್ನೂ ಸುಮಾರು ಎರಡು ಗಂಟೆಯವರೆಗೆ ರೇಡಿಯಮ್ಮು ಇಲ್ಲಿಗೆ ಹಿಂದಿರುಗಿ ಬರುವುದಿಲ್ಲ. ತಮಗೆ ಇಷ್ಟರೊಳಗೆ ದುಷ್ಟರ ಯಾವುದಾದರೂ ಸುದ್ದಿಯು ತಿಳಿದು ಬಂದಿರುವದೇ?"

ಬ್ಲೇಕ್: "ಬಹಳ ಸ್ವಲ್ಪ ಸಂಗತಿಗಳು ಮಾತ್ರ ತಿಳಿದು ಬಂದಿವೆ. ನಿಶ್ಚಿತವಾಗಿ ಇನ್ನೂ ಏನೊಂದೂ ಹೇಳಲಿಚ್ಛಿಸುವದಿಲ್ಲ." ಹೀಗೆ ಹೇಳಿ ಬ್ಲೇಕನು ಟೆಲಿಫೋನಿನ ಕೊಳವೆಯನ್ನು ಕೆಳಗೆ ತೆಗೆದಿಟ್ಟನು. ಕೂಡಲೆ ಮೇಜಿನ ಡ್ರಾದಿಂದ ಒಂದು ಚಿಕ್ಕ ಹೊಸ ಪಿಸ್ತೂಲನ್ನು ತೆಗೆದು ಜೇಬಿನೊಳಗಿಟ್ಟುಕೊಂಡು ಮನೆಯಿಂದ ಬೇಗನೆ ಹೊರಹೊರಟನು. ಮೆ. ಬಾರ್ಡೇಲಳು ಊಟದ ತಟ್ಟೆಯನ್ನು ಹಿಡಿದುಕೊಂಡವಳು ಸುಮ್ಮನೆ ಹಾಗೆಯೇ ನಿಂತಿದ್ದಳು!

Z Z Z Z Z

ಹಾರ್ಕರನೂ ಟಿಂಕರನೂ ತಮ್ಮ ಸಂಗಡಿಗರೊಂದಿಗೆ ಸರಿಯಾದ ವೇಳೆಯಲ್ಲಿ ಕ್ರೇಲಿಂಗ್ ಕ್ರೀಕನ್ನು ತಲುಪಿದರು. ಇಲ್ಲಿಯೇ ಫೆರಾರೋವಿನ ಸಂಗಡಿಗರು ಸಿಗಬಹುದೆಂದು ಎಲ್ಲರೂ ನಿಶ್ಚಯಿಸಿ ಬಂದಿದ್ದರು. ಅವರ ಆಶೆಯು ಸಫಲವೂ ಆಯಿತು. ಸಮುದ್ರ ದಡದ ಬಂಗ್ಲೆಯಲ್ಲಿ ಆ ಪುಂಡರು ವಾಸವಾಗಿದ್ದರು.

ಪೋಲೀಸರು ಬಂಗ್ಲೆಯನ್ನು ಸಮೀಪಿಸುತ್ತಿದ್ದಾರೆಂದು ತಿಳಿದೊಡನೆಯೆ ಆ ಪುಂಡರು ಮೆಷಿನ್‌ಗನ್ನಿನಿಂದ ಸತ್ಕಾರ ಮಾಡತೊಡಗಿದರು. ಟಿಂಕರನು ಥಟ್ಟನೆ ಎಚ್ಚರಿಕೆಯಿಂದ ವರ್ತಿಸಿದನು. ಮೆಷಿನ್‌ಗನ್ನಿಗೆ ಹೆದರಿ, ಹಿಂದಕ್ಕೆ ಸರಿದರೆಂದು ನಟಿಸಿ ಟಿಂಕರನು ಪೋಲೀಸರಲ್ಲಿ ಎರಡು ತಂಡಗಳನ್ನು ಮಾಡಿ ಒಂದು ತಂಡದೊಂದಿಗೆ ಎದುರಿಗೆ ನಿಂತು ಯುದ್ಧ ಮಾಡಲು ಹಾರ್ಕರನಿಗೆ ಸಲಹೆಯಿತ್ತು, ಇನ್ನೊಂದು ತಂಡದೊಡನೆ ತಾನು ಇನ್ನೊಂದು ದಾರಿಯಿಂದ ಬಂಗ್ಲೆಯ ಹಿಂಭಾಗಕ್ಕೆ ಬಂದನು ಹಾರ್ಕರನು ಯುದ್ಧಮಾಡುವವನಂತೆ ನಟಿಸುತ್ತ ಮುಂದು ಮುಂದಕ್ಕೆ ಬಂದನು. ಪುಂಡರ ದೃಷ್ಟಿಯೆಲ್ಲವೂ ಈಗ ಹಾರ್ಕರನ ತಂಡದ ಮೇಲಿದ್ದಿತು. ಈ ಸುಸಮಯವನ್ನು ಉಪಯೋಗಿಸಿ ಕೊಂಡು ಟಿಂಕರನು ತನ್ನ ಸಂಗಡಿಗರೊಡನೆ ಹಿಂಭಾಗದಿಂದ ಒಳನುಗ್ಗಿ ಪುಂಡರ ಮೇಲೆ ಬಿದ್ದನು. ಸ್ವಲ್ಪ ಹೊತ್ತು ಗುಂಡುಗಳು ಹಾರಿದವು. ಎರಡೂ ಕಡೆಯಿಂದ ಪೋಲೀಸರು ಸುತ್ತುವರೆದರಾದ್ದರಿಂದ, ಪುಂಡರು ಸೋತು ಸೆರೆಹಿಡಿಯಲ್ಪಟ್ಟರು. ಪಾರಟ್ರಿಜನು ವಜ್ರಗಳಿರುವ ಒಂದು ಚರ್ಮದ ಚೀಲದೊಂದಿಗೆ ಕೈಸೆರೆಸಿಕ್ಕನು. ಹಸರು ಬಣ್ಣದ ವಜ್ರಗಳೆಲ್ಲವೂ ಪತ್ತೆಯಾದವು. ಎಷ್ಟೋ ವಿಧದಿಂದ ಕೇಳಿದರೂ ಪಾರಟ್ರಿಜನು ಒಂದಕ್ಕೂ ಸರಿಯಾಗಿ ಉತ್ತರ ಕೊಡಲಿಲ್ಲ; ಆದರೆ ಸೇಜನು ಇಂದು ರಾತ್ರಿ ಹತ್ತು ಗಂಟೆಗೆ ತನ್ನ ಸಂಗಡಿಗರೊಂದಿಗೆ ಇಲ್ಲಿಗೆ ಬರುವನೆಂಬುದೊಂದು ಮಾತು ಮಾತ್ರ ದೈವವಶಾತ್ತಾಗಿ ಪಾರಟ್ರಿಜನ ಬಾಯಿಂದ ಅಕಸ್ಮಾತ್ ಹೊರಬಿದ್ದಿತು. ಆ ಬಗ್ಗೆ ಆತನು ಆ ಮೇಲೆ ಬಹಳ ಪಶ್ಚಾತ್ತಾಪಪಟ್ಟನು; ಆದರೆ ಮುಂದೇನು ಮಾಡಬಲ್ಲನು?

ಸೇಜನನ್ನು ಸೆರೆ ಹಿಡಿಯುವದಕ್ಕಾಗಿ ಎಲ್ಲರೂ ಅಲ್ಲಿಯೇ ನಿಃಶಬ್ದವಾಗಿ ಅಡಗಿ ಕುಳಿತರು. ರಾತ್ರಿ ಹತ್ತು ಗಂಟೆಯೆಂದರೆ, ಇನ್ನೂ ಬಹಳ ಹೊತ್ತಿದ್ದಿತು. ಆದರೂ ಗತಿಯಿಲ್ಲದೆ ಅವರು ಸೇಜನ ಆಗಮನವನ್ನು ನಿರೀಕ್ಷಿಸುತ್ತ ಕುಳಿತಿರಬೇಕಾಯಿತು.

---

ಬ್ಲೇಕನು ಬಲು ಬೇಗನೆ ಎಂಬೋಲಾಂಗವನ್ನು ತಲ್ಪಿದನು. ಹೊರ ಬಾಗಿಲಲ್ಲಿ ಮೇಡೀನನ ಮೋಟರು ನಿಂತಿದ್ದಿತು. ಬ್ಲೇಕನು ಅದರ ಪಕ್ಕದಲ್ಲಿಯೇ ತನ್ನ ಮೋಟಾರನ್ನೂ ನಿಲ್ಲಿಸಿ, ತೆರೆದಿದ್ದ ಬಾಗಿಲಿನಿಂದ ಮನೆಯೊಳಗೆ ಪ್ರವೇಶಿಸಿದನು. ಎಲ್ಲಿಯೂ ಯಾವ ತರಹದ ತಡೆಯೂ ಬರಲಿಲ್ಲ. ಮನೆಯೊಳಗೆ ಸಂಪೂರ್ಣ ನಿಶ್ಯಬ್ದತೆಯು ಹರಡಿದ್ದಿತು. ಬ್ಲೇಕನು ಅಲ್ಲಿ-ಇಲ್ಲಿ ನೋಡುತ್ತ ಬಂದನು. ಒಂದು ಕೋಣೆಯಲ್ಲಿ ನೋಡಿದಾಗ ಒಂದು ಮೇಜಿನ ಬಳಿಯಲ್ಲಿ ಕುರ್ಚಿಯ ಮೇಲೆ ಇಬ್ಬರು ಕುಳಿತಿರುವುದು ಕಾಣಿಸಿತು. ಮೇಜಿನ ಮೇಲೆ ಅವರಿಗಾಗಿ ಊಟದ ತಟ್ಟೆಗಳಿಡಲ್ಪಟ್ಟದ್ದವು. ಇಬ್ಬರೂ ಗಾಢನಿದ್ರೆಯಲ್ಲಿದ್ದರು. ಬ್ಲೇಕನು ಹತ್ತಿರ ಹೋಗಿ ನೋಡಿದಾಗ ವಿಷಯವೇನೆಂದು ತಿಳಿಯಿತು. ಅವರಿಬ್ಬರೂ ಯಾರ್ಡಿನ ಕುಶಲ ಪತ್ತೆದಾರಿಗಳಿದ್ದರು. ಒಬ್ಬನು ವಿಂಟನ್, ಇನ್ನೊಬ್ಬ ರಾಜರ್ಸ್. ರೇಡಿಯಮ್ಮಿನ ರಕ್ಷಣೆಗಾಗಿ ಇವರಿಬ್ಬರು ಮೇಡೀನನ ಜೊತೆಗೆ ಬಂದವರಾಗಿದ್ದರು.

ಬ್ಲೇಕನು ಅವರ ಸ್ಥಿತಿಯನ್ನು ಕಂಡು ನಸುನಕ್ಕನು. ಆ ಕೋಣೆಯ ಪಕ್ಕದಲ್ಲಿಯೇ ಮೇಡೀನನ ಔಷಧಶಾಲೆ ಇದ್ದಿತು. ಬ್ಲೇಕನು ಮೆಲ್ಲನೆ ಆ ಔಷಧ ಶಾಲೆಗೆ ಹೋದನು. ಸಾಲುಸಾಲಾದ ಬೀರುಗಳಲ್ಲಿ ತರತರಹದ ಶೀಸೆಗಳಲ್ಲಿ ಔಷಧವಿಡಲ್ಪಟ್ಟದ್ದಿತು. ಅವುಗಳ ಮೇಲೆ ಹಚ್ಚಿದ್ದ ಪಟ್ಟಿಯನ್ನು ಓದಿಕೊಂಡು ಬ್ಲೇಕನು ಎಮೋನಿಯಾ ಔಷಧದ ಶೀಸೆಯನ್ನೆತ್ತಿಕೊಂಡು ಆ ಪತ್ತೆದಾರಿಗಳಿಗಿದ್ದ ಕೋಣೆಗೆ ಹಿಂದಿರುಗಿದನು. ಕಿಟಕಿಯ ಬಾಗಿಲುಗಳನ್ನೆಲ್ಲಾ ಇಕ್ಕಿ ಆ ಶೀಸೆಯ ಬಾಯಿಯನ್ನು ತೆರೆದು ಪತ್ತೆದಾರಿಗಳಿಬ್ಬರ ಬಳಿಯಲ್ಲಿ ಇಟ್ಟು ಕೋಣೆಯ ಬಾಗಿಲನ್ನು ಮುಚ್ಚಿಕೊಂಡು ಹೊರಗೆ ಬಂದನು.

ಅಲ್ಲಿಂದ ಬ್ಲೇಕನು ಮೆಲ್ಲನೆ ಉಪ್ಪರಿಗೆಯನ್ನು ಹತ್ತಿದನು. ಅಲ್ಲಿ-ಇಲ್ಲಿ ನೋಡಿ ಒಂದು ಕೋಣೆಯ ಹತ್ತಿರ ಹೋದನು. ಬಾಗಿಲು ಇಕ್ಕಿದ್ದಿತು. ಸ್ವಲ್ಪ ಹೊತ್ತು ಬಾಗಿಲಿಗೆ ಕಿವಿಗೊಟ್ಟು ಒಳಗಿನ ಶಬ್ದವನ್ನು ಆಲಿಸಿದ ಮೇಲೆ, ಬ್ಲೇಕನು ಬಾಗಿಲನ್ನು ನೂಕಿದನು ಬಾಗಿಲು ತೆರೆಯಿತು.

ಕಿಟಕಿಯ ಬಳಿಯಲ್ಲಿ ಒಂದು ಆರಾಮ ಕುರ್ಚಿಯ ಮೇಲೆ ಒಬ್ಬನು ಅರ್ಧ ಮಲಗಿದ್ದನು. ಅವನ ತಲೆಯು ಚರ್ಮದ ಟೋಪಿಯಿಂದ ಮುಚ್ಚಿದ್ದಿತು. ಕುತ್ತಿಗೆಯು ಮಾತ್ರ ತೆರೆದಿದ್ದಿತು. ಸ್ವಲ್ಪ ಬಿಟ್ಟಿದ್ದ ಆತನ ಮುಖವನ್ನು ನೋಡುತ್ತಲೇ ಬ್ಲೇಕನು ಗುರುತಿಸಿದನು. ಸರ್ ಕಥವರ್ಟನಾವೆಲ್ಸನೇ ಅವನಾಗಿದ್ದನು. ಈ ವೇಳೆಯಲ್ಲಿ ಆತನು ನಿಸಂಜ್ಞಾವಸ್ಥೆಯಲ್ಲಿ ಇದ್ದನು.

ಅವನೆದುರಿಗಿರುವ ಒಂದು ಸ್ಟೂಲಿನ ಮೇಲೆ ರೇಡಿಯಮ್‌ಪ್ರೊಜೆಕ್ಟರ್ ಅಗತ್ಯವಾದಾಗ ಮೇಲೆ ಕೆಳಗೆ ತಿರುಗಿಸಲನುಕೂಲವಾಗುವಂತೆ ಇಡಲ್ಪಟ್ಟಿದ್ದಿತು ಅದರ ಮುಖವು ನೇರಾಗಿ ಸರ್ ಕಥವರ್ಟ್ ನಾವೆಲ್ಸನ ಕುತ್ತಿಗೆಯ ಕಡೆಗೆ ಇದ್ದಿತು. ಪ್ರೊಜೆಕ್ಟರಿನ ಪಕ್ಕದಲ್ಲಿ ಡಾಕ್ಟರ್ ಮೋಡೀನನು ಗಡಿಯಾರವನ್ನು ಕೈಯಲ್ಲಿ ಹಿಡಿದುಕೊಂಡು ತೀಕ್ಷ್ಣದೃಷ್ಟಿಯಿಂದ ಕಥವರ್ಟನ ಕುತ್ತಿಗೆಯನ್ನು ನೋಡುತ್ತಿದ್ದನು.

ಬ್ಲೇಕನು ಒಳಗಿನ ಇದಿಷ್ಟು ಸ್ಥಿತಿಯನ್ನು ನೋಡಿಕೊಂಡೇ ಒಳಗೆ ಪ್ರವೇಶಿಸಿದ್ದನು.

ಮೋಡೀನನು ಹಿಂದಕ್ಕೆ ತಿರುಗಿದನು. ಅಕಸ್ಮಾತ್ತಾಗಿ ಒಳಗೆ ಬಂದ ಬ್ಲೇಕನನ್ನು ಕಂಡೊಡನೆ ಆತನ ಹೃದಯವು ಒಂದು ಸಲ ನಡುಗಿಬಿಟ್ಟಿತು; ಆದರೂ ಅದನ್ನು ಹೊರಗೆ ತೋರಿಸದೆ, ಪ್ರಸನ್ನತೆಯನ್ನು ತೋರಿಸುತ್ತ ನಸುನಕ್ಕು ಹೇಳಿದನು —"ವಾಹವ್ವಾ! ಮಿಸ್ಟರ್ ಬ್ಲೇಕ್! ನೀವೀಗ ಒಳ್ಳೆಯ ವೇಳೆಗೇ ಇಲ್ಲಿಗೆ ಬಂದಿರಿ. ಇಲ್ಲೀಗ ನನ್ನ ಸೇವಕರು ಒಬ್ಬರೂ ಕಾಣಿಸುವದಿಲ್ಲ. ಒಂದು ವೇಳೆ ಎಲ್ಲರೂ ನನ್ನನ್ನೀ ಸಮಯದಲ್ಲಿ ತೊಲಗಿ ಹೋಗಿರಬಹುದಾಗಿದೆ. ಏನೋ ಒಂದು ವಿಚಿತ್ರಘಟನೆಯು ಬಲು ಬೇಗನೆ ಸಂಘಟಿಸಬಹುದಾಗಿ ನನ್ನ ಮನಸ್ಸಿಗೀಗ ತೋರುತ್ತಿದೆ."

ಬ್ಲೇಕನೂ ಹಾಗೆಯೇ ನಗುತ್ತಲೇ ಉತ್ತರವಿತ್ತನು:—"ಆದರೆ ಡಾಕ್ಟರ್ ಮೋಡೀನರೇ! ನೀವು ಆ ರೇಡಿಯಮ್ಮ ಬ್ಯಾಟರಿಯ ಪೂರ್ಣ ಶಕ್ತಿಯನ್ನು ಸರ್ ಕಥವರ್ಟ್ ನಾವೆಲ್ಸರ ಕುತ್ತಿಗೆಗೆ ಬಿಡುತ್ತಿರುವಿರಿ. ನನ್ನ ಉತ್ಸುಕತೆಯನ್ನು ಕ್ಷಮಿಸಿರಿ. ನಾನೂ ಕೂಡ ಬಹಳ ಕಾಲ ಡಾಕ್ಟರೀ ವಿದ್ಯೆಯನ್ನು ಕಲಿಯುತ್ತಿದ್ದೆನು. ಆ ಸಮಯದಲ್ಲಿ ರೇಡಿಯಮ್ಮ ಇಷ್ಟು ಪ್ರಚುರವಾಗಿರಲಿಲ್ಲವೆಂಬುದೇನೋ ನಿಜ; ಆದರೂ ಅಂದಿನಿಂದ ರೇಡಿಯಮ್ಮಿನ ಮೇಲೆ ಆಗುತ್ತಿರುವ ಪ್ರತಿಯೊಂದು ಆವಿಷ್ಕಾರವನ್ನು ನಾನು ನೋಡುತ್ತಲೇ ಬಂದಿದ್ದೇನೆ. ನನ್ನ ಈ ಅನುಭವದಿಂದಲೇ ನಾನು ಹೇಳುತ್ತೇನೆ—ರೇಡಿಯಮ್ಮಿನ ಇಷ್ಟು ಶಕ್ತಿಯನ್ನು ಅವರ ಮೇಲೆ ಪ್ರಯೋಗಿಸುವುದೂ ಕೂಡ ಘಾತುಕ ಕೃತ್ಯವೆನಿಸಬಹುದು."

ನಗುತ್ತ ಮೋಡೀನನಂದನು:—"ಮಿಸ್ಟರ ಬ್ಲೇಕ್ ನೀವನ್ನುವದು ನಿಜ. ನಾನು ಮುಂಚೆಯೇ ಎಷ್ಟೋ ತರಹದ ಇಂಜೆಕ್ಷನ್‌ಗಳನ್ನು ಕೊಟ್ಟು ಈ ಪ್ರಯೋಗಕ್ಕೆ ತಕ್ಕಂತೆ ಸಿದ್ಧಮಾಡಿಕೊಳ್ಳದೇ ಇದ್ದಿದ್ದರೆ, ನೀವಂದಂತೆ ಈಗ ಈ ಕೃತ್ಯವು ಘಾತುಕವೇ ಆಗುವದು ನಿಜ. ನಾನು ರೇಡಿಯಮ್ಮನ್ನು

ಪ್ರಯೋಗ ಮಾಡುವ ನವೀನ ಆವಿಷ್ಕಾರವೆಂದರೆ ಇದೇ ಆಗಿದೆ, ಮಿಸ್ಟರ್ ಬ್ಲೇಕ್! ಯಾವ ವಸ್ತುವನ್ನು ನಾನು ಇಂಜೆಕ್ಷನ್ನಿನ ಮೂಲಕವಾಗಿ ರೋಗಿಯ ಶರೀರದಲ್ಲಿ ಪ್ರವೇಶಗೊಳಿಸುತ್ತಿರುವೆನೋ, ಆ ವಸ್ತುವು ಕೇವಲ ಸ್ವಸ್ಥವಾದ ನರಗಳಲ್ಲಿಯೇ ಪ್ರವೇಶಿಸಿ, ಅವುಗಳನ್ನು ರೇಡಿಯಮ್ಮಿನ ತೀಕ್ಷ್ಣ ಕಿರಣಗಳಿಂದ ಸುರಕ್ಷಿತವಾಗಿಡುತ್ತದೆ ಕೆನ್ಸರ್ ರೋಗದಿಂದ ಆಕ್ರಾಂತವಾಗಿರುವ ನರಗಳು ಆ ವಸ್ತುವನ್ನು ಗ್ರಹಿಸಲಾರವು. ರೇಡಿಯಮ್ಮಿನ ಕಿರಣಗಳು ಕೆನ್ಸರ್ ರೋಗದ ಕೀಡಾಣುಗಳ ಮೇಲೆ ಅವಿಚಲಭಾವದಿಂದ ಬಿದ್ದು ಕ್ರಮವಾಗಿ ಅವುಗಳನ್ನು ನಾಶಪಡಿಸಲು ತೊಡಗುವವು. ಆದ್ದರಿಂದಲೇ ನಾನು ರೇಡಿಯಮ್ಮು ಬ್ಯಾಟರಿಯ ಇಷ್ಟು ದೊಡ್ಡ ಶಕ್ತಿಯನ್ನು ಇವರ ಕುತ್ತಿಗೆಯ ಮೇಲೆ ಪ್ರಯೋಗಿಸುತ್ತಿರುವೆನು ಒಂದು ವೇಳೆ ಅರಕ್ಷಿತವಾದ, ಸ್ವಸ್ಥ ಶರೀರದ ಮೇಲೆ ಇದನ್ನು ಪ್ರಯೋಗಿಸಿದರೆ, ಶೀಘ್ರವಾಗಿಯೇ ಬಹು ಕಷ್ಟದಾಯಕವಾದ ಮರಣಕ್ಕೆ ಕಾರಣವಾಗಬಲ್ಲುದು. ಉದಾಹರಣೆಗಾಗಿ ನಾನು ಈಗ ಈ ಶಕ್ತಿಯನ್ನು ನಿಮ್ಮ ಸ್ವಸ್ಥವಾದ ಶರೀರದ ಮೇಲೆ ಪ್ರಯೋಗಿಸಿದರೆ, ಆ ಮೇಲೆ ಪ್ರಪಂಚದ ಯಾವ ಶಕ್ತಿಯೂ ಕೂಡ ನಿಮ್ಮ ಪ್ರಾಣವನ್ನುಳಿಸಲಾರದು.''

ಹೀಗೆ ಹೇಳುತ್ತಿದ್ದಾಗಲೇ ಮೇಡೀನನ ಕೈ ರೇಡಿಯಮ್ ಪ್ರೊಜಕ್ಟರಿನ ಕೀಲು ಮೊಳೆಯ ಕಡೆಗೆ ಹೋಯಿತು ಆ ಕೀಲು ಮೊಳೆಯನ್ನು ಒತ್ತಿಬಿಟ್ಟರೆ ಬ್ಯಾಟರಿಯ ಮುಖವು ಬೇಕಾದ ಕಡೆಗೆ ತಿರುಗಬಹುದಾಗಿದ್ದಿತು.

ಆದರೆ ಇಂತಹ ಪುಂಡ-ಪೋಕರಿಗಗಳಾಷ್ಟೋ ಮಂದಿಗೆ ಏಳು ಕೆರೆಗಳ ನೀರು ಕುಡಿಸಿದ್ದ ಬ್ಲೇಕನು ಈ ಮೇಡೀನನ ಅಭಿಪ್ರಾಯವನ್ನು ತಿಳಿಯಲಾರನೇ? ಬ್ಲೇಕನು ಮೊದಲಿನಿಂದಲೇ ವಿಶೇಷ ಜಾಗರೂಕನಾಗಿದ್ದನು. ಬ್ಯಾಟರಿಯ ಮುಖವನ್ನು ತನ್ನ ಕಡೆಗೆ ತಿರುಗಿಸುತ್ತಾನೆಂದು ತಿಳಿದೊಡನೆಯೇ ಬ್ಲೇಕನು ಥಟ್ಟನೆ ಪಿಸ್ತೂಲನ್ನು ಹಿಡಿದು ಮೇಡೀನನೆದೆಗೆ ಗುರಿಯಿಟ್ಟು ಹೇಳಿದನು—''ಹುಷಾರ್! ಅನಂತ ಧನ್ಯವಾದಗಳು ನಿನ್ನ ಮೆದುಳಿಗೆ! ನನ್ನ ಈ ಪಿಸ್ತೂಲಿನ ಗುಂಡಿಯನ್ನೊತ್ತಿದೆನೆಂದರೆ, ರೇಡಿಯಮ್ ಬ್ಯಾಟರಿಯ ಮುಖವು ಇತ್ತಕಡೆಗೆ ತಿರುಗುವುದಕ್ಕಿಂತ ಮುಂಚೆಯೇ ನಿನ್ನ ಬಲು ಬೆಲೆ ಬಾಳುವ ಎದೆ ಗುಂಡಿಗೆಯು ಥಟ್ಟನೆ ಒಡೆದು ಚೂರುಚೂರಾಗಿ ಹೋಗುವದೆಂದು ತಿಳಿ, ದುಷ್ಟ ಫೆರಾರೋ!''

ನಸುನಗುತ್ತಾ ಸ್ಥಿರಭಾವದಿಂದ ಮೇಡೀನನು ಹೇಳಿದನು:—''ಆದರೆ ನಾನೀಗ ಒಂದು ಪ್ರಶ್ನೆ ಮಾಡಲೊ? ಕೊನೆಗೂ ನೀವು ಈ ನವೀನ ನಿಷ್ಕರ್ಷಕ್ಕೆ

ತಲುಪಿದುದು ಹೇಗೆ? ಡಾಕ್ಟರ ಫೆರಾರೋವಿನ ಹೆಸರನ್ನು ನಾನೂ ಕೂಡ ಕೇಳಿರುವೆನು; ಆದರೆ ನನಗೆ ನೆನಪಿರುವಷ್ಟರ ಮಟ್ಟಿಗೆ ಹೇಳುವುದಾದರೆ, ಫೆರಾರೋ ಎಂದೋ ಸತ್ತು ಹೋಗಿರುವನು.''

ಬ್ಲೇಕ್:—"ಹೌದು. ಇದುವರೆಗೆ ನನ್ನ ಅಭಿಪ್ರಾಯವೂ ಹಾಗೆಯೇ ಇದ್ದಿತು; ಆದರೆ ನಿಜವಾದ ಡಾಕ್ಟರ್ ಮೆಡೀನನು ಸ್ಪೇನಿನ ಯಾವುದೋ ಒಂದು ದೂರದ ಗ್ರಾಮದಲ್ಲಿ ವಿಶೇಜ ಎಂಬ ಹೆಸರಿನಿಂದ ವಾಸಿಸುತ್ತಿರುವ ನೆಂದೂ ಅವನಂತೆಯೇ ಇದ್ದ ಇನ್ನೊಬ್ಬ ಮನುಷ್ಯನು ಅವನ ಸ್ಥಾನವನ್ನು ಆಕ್ರಮಿಸಿ ಇಂಗ್ಲೆಂಡಿಗೆ ಬಂದಿರುವನೆಂದೂ ಯಾವಾಗ ನನಗೆ ತಿಳಿಯಿತೋ, ಆಗ ನಾನು ನನ್ನ ಮುಂಚಿನ ಅಭಿಪ್ರಾಯವನ್ನು ಬದಲಾಯಿಸಬೇಕಾಯಿತು; ಆದರೆ ಫೆರಾರೋ! ನಿನಗೆ ಇಂತಿಂತಹ ಅತ್ಯದ್ಭುತವಾದ, ಅದ್ವಿತೀಯವಾದ ಮೆದುಳಿದ್ದರೂ ಕೂಡ ನೀನು ಗೌರವದಿಂದ ಜೀವಿಸದೆ, ಈ ಕೇವಲ ಅಲ್ಪ ತರದ, ನೀಚತನದ ಕೆಲಸದ ಮೇಲೆಯೇ ನಿನ್ನ ಬುದ್ಧಿಯು ಏಕೆ ಓಡುತ್ತದೆ? ಈಗಿರುವ ನಿನ್ನ ಉದ್ಯೋಗದಲ್ಲಾದರೂ ನಿನಗೆ ಹಣಕ್ಕೇನೂ ಕಡಿಮೆ ಇರಲಿಲ್ಲ. ತಕ್ಕಷ್ಟು ಆದಾಯವೂ ಇದ್ದಿತು. ಅಷ್ಟಿದ್ದರೂ ಈ ತರಹದ ಹುಚ್ಚುತನ ದಲ್ಲಿಯೇ ಏಕೆ ತೊಳಲುತ್ತಿರುವೆ?"

ಫೆರಾರೋ ಗಂಭೀರನಾಗಿ ಹೇಳಿದನು:—"ನೀನು ಸರಿಯಾಗಿ ಹೇಳಿದೆ ಮಿಸ್ಟರ್ ಬ್ಲೇಕ್! ಒಂದು ದಿನ ನಾನು ಹುಚ್ಚನೇ ಆಗುವ ಸಂಭವವೂ ಇದೆ; ಆದರೆ ಪೊಲೀಸರನ್ನೆದುರಿಸುವುದರಲ್ಲಿಯೇ ಏಕೆ ನನಗೊಂದು ವಿಶೇಷ ತರಹದ ಆನಂದವೆನಿಸುತ್ತಿರುವದೋ ತಿಳಿಯದು. ಈ ಸಾರೆ ನೀನು ಈ ವ್ಯವಹಾರದಲ್ಲಿ ಕೈಹಾಕದೆ ಇದ್ದಿದ್ದರೆ, ಪೋಲೀಸರು ರೇಡಿಯಮ್ಮನ್ನು ಪತ್ತೆ ಹಚ್ಚುವದಕ್ಕಾಗಿ ಸುಮ್ಮನೆ ಅತ್ತಿತ್ತ ಅಲೆದಾಡುತ್ತಿದ್ದರು. ನಾನು ಆಸ್ಪತ್ರೆ ಯಲ್ಲಿ ಉದ್ಯೋಗದಲ್ಲಿಯೇ ಇದ್ದು ಅದನ್ನು ನೋಡುತ್ತ ಆನಂದಿಸುತ್ತಿದ್ದೆನು."

ಬ್ಲೇಕ್:—"ಮತ್ತು ಆ ಹಸರು ಬಣ್ಣದ ವಜ್ರಗಳನ್ನು ಮಾರಿ, ಅದ ರಿಂದ ದೊರೆವ ಹಣವನ್ನು ಜೇಬಿನಲ್ಲಿಟ್ಟುಕೊಂಡು ಸುಖವಾಗಿ ಜೀವಿಸುತ್ತಿದ್ದೆ ಯಲ್ಲವೆ?''

ಫೆರಾರೋ ಥಟ್ಟನೆ ಬೆಚ್ಚಿಬಿದ್ದು ತನ್ನ ಕೈಗಡಿಯಾರವನ್ನು ನೋಡಿ ಕೊಂಡು ಪುನಃ ಮೊದಲಿನಂತೆ ಸ್ಥಿರವಾಗಿ ನಸುನಗುತ್ತ ಹೇಳಿದನು:— "ಈ ಸುದ್ದಿಯನ್ನೆಲ್ಲ ಹೇಗೆ ಪತ್ತೆ ಹಚ್ಚಿದಿ ಬ್ಲೇಕ್? ಈ ಸಂಬಂಧವಾಗಿ ನಾನು ಡಾಕ್ಟರ್ ಗ್ರೇಯ ನವೀನ ಆವಿಷ್ಕಾರದಿಂದ ಲಾಭ ಪಡೆದುಕೊಂಡೆನು. ರತ್ನ ಗಳ ಬಣ್ಣಗಳನ್ನು ಬದಲಾಯಿಸಲು ಸಾಧ್ಯವಿರುವುದೆಂಬದಷ್ಟನ್ನು ಮಾತ

ನಾನು ಮುಂಚೆಯೇ ಅರಿತಿದ್ದೆನು. ಆ ಮೇಲೆ ಡಾಕ್ಟರ್ ಗ್ರೇ ಬಂದು ತನ್ನ ನವೀನ ಆವಿಷ್ಕಾರದಿಂದ ನನ್ನ ಆಶೆಯನ್ನು ಫಲೋನ್ಮುಖವಾಗಿ ಮಾಡಿ ಕೊಟ್ಟನು. ಗ್ರೇ ತನ್ನ ಬುದ್ಧಿಯನ್ನು ಖರ್ಚು ಮಾಡಿ ಅದನ್ನು ಕಂಡು ಹಿಡಿದನು; ನಾನು ಅದರ ಫಲವನ್ನು ಮಾತ್ರ ಅನುಭವಿಸಿದೆನು."

ಬ್ಲೇಕ್: —"ಆದರೆ ಫೆರಾರೋ! ಗ್ರೇಯನ್ನು ನಿನ್ನ ದಾರಿಯಿಂದ ದೂರವಿರಿಸುವದಕ್ಕಾಗಿ ಅವನ ಮೇಲೆ ಅಂತಹ ಆರೋಪವನ್ನು ಹೊರಿಸುವ ಅಗತ್ಯವೇನಿದ್ದಿತು? ಅವನನ್ನು ಸೆರೆ ಹಿಡಿದು ಕೆಲವು ಕಾಲ ಎಲ್ಲಾದರೂ ಬಂಧಿಸಿಟ್ಟಿದ್ದರೂ ನಿನ್ನ ಕಾರ್ಯವು ಕೈಗೂಡಬಹುದಾಗಿದ್ದಿತಲ್ಲವೆ?"

ಫೆರಾರೊ: —"ಉಹುಂ. ನನಗೆ ಅವನ ಮೇಲೆ ಇನ್ನೂ ಇತರ ವಿಚಾರ ದಲ್ಲಿ ವೈರವಿದ್ದಿತು ನನ್ನನ್ನು ಅವನು ಸಂಪೂರ್ಣವಾಗಿ ಹಳಿಯುತ್ತಿದ್ದನು. ಹೇಗಾದರೂ ಮಾಡಿ ಅವನ ಹೆಸರಿಗೆ ಕಳಂಕ ಹಚ್ಚಬೇಕೆಂದೇ ನಾನುಇಚ್ಛಿ ಸಿದ್ದೆನು. ನೀನು ನಡುವೆ ಬಂದು ತಡೆಯುಂಟು ಮಾಡದೆ ಇದ್ದಿದ್ದರೆ, ನನ್ನ ಕಾರ್ಯವೆಲ್ಲವೂ ನಡೆದು ಹೋಗುತ್ತಿದ್ದಿತು."

ಬ್ಲೇಕ್: —"ಒಳ್ಳೇದು. ಆಸ್ಪತ್ರೆಯಲ್ಲೊಬ್ಬ ರೋಗಿಗೆ ಕೆನ್ಸರ್ ರೋಗ ವುಂಟಾಗುವಂತೆ ಮಾಡಿದುದೇಕೆ?"

ವ್ಯಂಗವಾಗಿ ನಕ್ಕು, ಫೆರಾರೋ ಹೇಳಿದನು:-"ಹಾಗೆ ನಾನು ಮಾಡದೇ ಇದ್ದಿದ್ದರೆ, ಈ ನವೀನ ಆವಿಷ್ಕಾರದ ಪರೀಕ್ಷೆಯಾಗುವುದಾದರೂ ಹೇಗೆ? ಅದ ರಲ್ಲಿ ನಾನು ಸಫಲನಾದೆನು. ಆದ್ದರಿಂದಲೇ ಬಹಳ ಸುಲಭವಾಗಿ ನಾವೆಲ್ಲರ ಶರೀರದೊಳಗೂ ಕೆನ್ಸರ್ ರೋಗವನ್ನು ಪ್ರವೇಶಗೊಳಿಸಿ ಬಿಟ್ಟೆನು. ಪೋಲೀಸ್ ಚೀಫ್ ಕಮೀಷನರರ ದೇಹದೊಳಗೆ ಈ ಭಯಂಕರ ರೋಗವನ್ನು ತಂದಿಟ್ಟು, ನಾನು ಉಳಿದುಕೊಳ್ಳುವ ದಾರಿಯನ್ನು ಮೊದಲಿನಿಂದಲೇ ತೆರೆದಿಟ್ಟುಕೊಂಡಿರು ವೆನು; ಆದರೆ ಇವರ ರೋಗದ ವಿಚಾರದಲ್ಲಿ ಯಾರೂ ಚಿಂತಿಸುವ ಅಗತ್ಯ ವಿಲ್ಲ. ಇನ್ನು ಮೂರು-ಮೂರು ನಾಲ್ಕು-ನಾಲ್ಕು ಸಾರೆ ಹೀಗೆ ರೇಡಿಯಮ್ಮ ನ್ನು ಪ್ರಯೋಗಿಸಿದೊಡನೆ ಇವರು ಪೂರ್ಣ ಸ್ವಸ್ಥರಾಗುವರು. ಆಸ್ಪತ್ರೆಯ ರೇಡಿಯಮ್ಮ ಕೂಡ ಸುರಕ್ಷಿತವಾಗಿದೆ ಇನ್ನು ನಿನ್ನ ಪಿಸ್ತೂಲನ್ನು ಸ್ವಲ್ಪ ಹಿಂದಕ್ಕೆ ಸರಿಸಿಕೋ ನೋಡೋಣ."

ಬ್ಲೇಕನು ಆವೇಶದಿಂದ ಹೇಳಿದನು:—"ಫೆರಾರೋ ನಿಶ್ಚಯವಾಗಿಯೂ ನಾನು ನಿನ್ನನ್ನು ಸೆರೆಹಿಡಿದಿಡುವೆನು. ಎಲ್ಲ ಅನರ್ಥಕ್ಕೂ ನೀನೇ ಮೂಲ ಕಾರಣನಿರುವಿ. ಇಲ್ಲಿ ಯಾರ್ಡಿನ ಆ ಇಬ್ಬರು ನಿರಪರಾಧಿಗಳನ್ನು ನಿಃಸಂಜ್ಞ ರನ್ನಾಗಿ ಮಾಡಿ ಒಂದೆಡೆ ಕುಳ್ಳಿರಿಸಿ ಬಿಟ್ಟಿರುವೆ."

ಬ್ಲೇಕನ ಮಾತನ್ನು ತಡೆಯುತ್ತ ಫೆರಾರೋ ಹೇಳಿದನು:—"ಆದರೆ ಮಿಸ್ಟರ, ನನ್ನನ್ನು ಸೆರೆಹಿಡಿದಿಟ್ಟು ಆ ಮೇಲೆ ಈ ಕಥವರ್ಟ ಸಾಹೇಬರಿಗೆ ಏನು ಮಾಡಬಲ್ಲೆ? ಕೇವಲ ಫೆರಾರೋವನ್ನು ಸೆರೆಹಿಡಿದು ಪ್ರಶಂಸಾಪತ್ರ ವನ್ನು ಪಡೆಯುವದಕ್ಕಾಗಿಯೇ ಪೋಲೀಸ ಚೀಫ್ ಕಮೀಷನರನ್ನು ಭೀಷಣ ಮೃತ್ಯುಮುಖದಲ್ಲಿ ಕೆಡಹುವಿಯಾ?"

ನಿರುಪಾಯನಾಗಿ ಬ್ಲೇಕನಂದನು:—"ನಿನ್ನ ಮಾತಿನ ಅಭಿಪ್ರಾಯ ವೇನು?"

ಫೆರಾರೋ:—"ಇವರ ಚಿಕಿತ್ಸೆಯನ್ನು ನಾನು ಇತ್ತೀಚೆಗೆ ಆರಂಭಿಸಿರು ವೆನು. ಇವರು ಗುಣಮುಖರಾಗಲು, ಇನ್ನೂ ಎಷ್ಟೋ ಸಾರೆ ನನ್ನ ನವೀನ ಆವಿಷ್ಕಾರದ ವಸ್ತುವನ್ನು ಇವರ ನರಗಳಲ್ಲಿ ಪ್ರವೇಶಗೊಳಿಸಬೇಕಾದುದು ಅತ್ಯಗತ್ಯವಾಗಿದೆ. ಇಂಜೆಕ್ಷನ್ನಿನ ಈ ನವೀನ ವಸ್ತುವಿನ ರಹಸ್ಯವು ನನ ಗೊಬ್ಬನಿಗಲ್ಲದೆ ಪ್ರಪಂಚದಲ್ಲಿ ಇನ್ನಾ್ಯರಿಗೂ ತಿಳಿದಿಲ್ಲ. ನನ್ನ ನವೀನ ಆವಿ ಷ್ಕಾರದ ವಸ್ತುವಿಗೆ "ಸ್ವಾತಂತ್ರ್ಯದ ಬಲಿ" ಎಂದು ನಾನು ಹೆಸರಿಟ್ಟಿರುವೆನು. ಮಿಸ್ಟರ್ ಬ್ಲೇಕ್! ಇವರ ದೇಹದೊಳಗೆ ಕೆನ್ಸರ್ ರೋಗವನ್ನು ನಾನು ಏಕೆ ಉಂಟು ಮಾಡಿದ್ದೆನೆಂಬುದನ್ನು ಈಗಾದರೂ ಚೆನ್ನಾಗಿ ಅರಿತೆಯಾ?"

ಅಪ್ರತಿಭನಾಗಿ ಬ್ಲೇಕನು ಕೇಳಿದನು:-"ಹಾಗಾದರೆ ನಿನ್ನ ಅಭಿಪ್ರಾಯ ವೇನು? ನಾನೀಗ ನಿನ್ನನ್ನು ಸೆರೆ ಹಿಡಿದರೆ ಇವರ ಪ್ರಾಣವುಳಿಯುವದರಲ್ಲಿ ಸಂಶಯುವೆ?"

ಫೆರಾರೋ ನಿಶ್ಚಯುಸ್ವರದಿಂದ ಹೇಳಿದನು:—"ಈ ವಿಷಯುದಲ್ಲಿ ಮನ ಸ್ಸಿಗೆ ನಿಶ್ಚಯುಮಾಡಿಕೊಳ್ಳಬೇಕೆಂದಿದ್ದರೆ, ಪಿಸ್ತೂಲಿನ ಗುರಿಯನ್ನು ಹಿಡಿದು ಕೊಂಡೇ ಸ್ವಲ್ಪ ಬೊಗ್ಗಿ ಇವರ ಕುತ್ತಿಗೆಯ ಸ್ಥಿತಿಯನ್ನು ನೀನೇ ನಿನ್ನ ಕಣ್ಣಿ ನಿಂದ ನೋಡು."

ಬ್ಲೇಕನು ಪಿಸ್ತೂಲನ್ನು ಮೊದಲಿನಂತೆಯೇ ಹಿಡಿದುಕೊಂಡು ಬೊಗ್ಗಿ ನೋಡಿದನು. ಆಗ ಫೆರಾರೊ ಸರ್ ಕಥವರ್ಟನ ಬಾಯನ್ನು ತೆರೆದು ಎಲೆ ಕ್ಟ್ರಿಕ್ ದೀಪದ ಬೆಳಕನ್ನು ಒಳಗೆ ಹಿಡಿದನು. ಬ್ಲೇಕನು ಪೂರ್ಣವಾಗಿ ನೋಡಿ ತಿರಸ್ಕಾರಪೂರ್ಣವಾದ ಸ್ವರದಿಂದ ಹೇಳಿದನು:—"ಆಹಾ! ಫೆರಾರೋ, ಬಹಳ ಭಯಂಕರವಾದ ರೋಗವನ್ನು ನೀನು ಇವರ ಕುತ್ತಿಗೆಯಲ್ಲಿ ಉಂಟು ಮಾಡಿರುತ್ತೀ. ನಿಜವಾಗಿ ನೀನೊಬ್ಬ ನರಪಿಶಾಚಿಯೇ ಸರಿ."

ಫೆರಾರೋ:—"ಅಷ್ಟೇನೂ ಭಯಂಕರವಾಗಿಲ್ಲ. ರೋಗವೀಗ ಗುಣ ವಾಗತೊಡಗಿದೆ. ಕೆಲವು ಸಾರಿ ರೇಡಿಯಮ್ಮನ್ನು ಪ್ರಯೋಗಿಸಿದರೆ ತಾನಾಗಿ

ಗುಣವಾಗುವದು. ನನ್ನ ಈ ನವೀನ ಆವಿಷ್ಕಾರದ ಎಲ್ಲ ವಿವರವನ್ನೂ ಒಂದೆಡೆ ಬರೆದಿಟ್ಟಿರುವೆನು. ಡಾಕ್ಟರ್ ಗ್ರೇಗೆ ನನ್ನ ಈ ಆವಿಷ್ಕಾರದ ಸಂಪೂರ್ಣ ಪರಿಚಯವೂ ಇದೆ. ನಾನು ಕಂಡು ಹಿಡಿದಿರುವ ಇಂಜೆಕ್ಷನ್ನವನ್ನು ಹೇಗೆ ತಯಾರಿಸಬೇಕೆಂಬುದನ್ನು ಗ್ರೇಗೆ ತಿಳಿಸಿದರೆ, ಅವನು ಸರ್ ಕಥವರ್ಟರನ್ನು ಸುಲಭವಾಗಿ ಗುಣಪಡಿಸಬಲ್ಲನು. ಇಂಜೆಕ್ಷನ್ ವಸ್ತುವಿನ ತಯಾರಿಕೆಯ ವಿಧಾನವನ್ನು ಬರೆದು ಒಂದು ಸ್ಥಳದಲ್ಲಿ ಮುಚ್ಚಿಟ್ಟಿರುವೆನು. ನಾನೀಗ ಸ್ವತಂತ್ರನಾಗಿ ಹೊರಟು ಹೋಗಬಹುದೆಂದು ನೀನು ಮಾತು ಕೊಟ್ಟರೆ, ಆ ರಹಸ್ಯ ಸ್ಥಳವನ್ನು ನಿನಗೆ ತಿಳಿಸುವೆನು.''

ಬ್ಲೇಕ್:—''ಒಳ್ಳೇದು. ಮಿಸ್ ಎಂಡರ್ಬಿ ಮತ್ತು ಗ್ರೇ?''

ಫೆರಾರೋ:—''ಅವರಿಬ್ಬರೂ ಕ್ಷೇಮವಾಗಿರುವರು. ಇಂದು ರಾತ್ರಿ ಅವರು ಸ್ವತಂತ್ರರಾಗಿ ಬಿಡಲ್ಪಡುವರು. ಮೊದಲು ಈಗ ಇದನ್ನು ಹೇಳು, ನೀನು ನನ್ನ ಶರತ್ತನ್ನು ಒಪ್ಪುವೆಯಾ?''

ಗತ್ಯಂತರವಿಲ್ಲದೆ ಬ್ಲೇಕ್ ಹೇಳಿದನು:—''ಸರಿ. ಆಗಲಿ. ಇಲ್ಲಿಂದ ನೀನು ಹೊರಟು ಹೋಗಲು ನಿನಗೆ ಅರ್ಧಗಂಟೆ ಕಾಲ ಅವಕಾಶನೀಯುವೆನು; ಆದರೆ ನೆನಪಿಟ್ಟುಕೋ. ಅರ್ಧ ಗಂಟೆಯ ನಂತರ ಮಾತ್ರ ನಾನು ನಿನ್ನನ್ನು ಬೆನ್ನಹತ್ತಿ ಬರಲು ನನ್ನ ಪೂರ್ಣ ಶಕ್ತಿಯನ್ನು ವ್ಯಯಮಾಡದಿರಲಾರೆನು.''

ಫೆರಾರೋ ನಗುತ್ತ ಹೇಳಿದನು: - "ಓಹೋ! ಅರ್ಧ ಗಂಟೆಯ ನಂತರ ಯಾವ ರೀತಿಯಿಂದ ಬೇಕಾದರೂ ನೀನು ನನ್ನನ್ನು ಬೆನ್ನಟ್ಟಿ ಬರಬಹುದು. ಸರಿ ಮೊದಲು ಈ ರೇಡಿಯಮ್ಮನ್ನು ಪೆಟ್ಟಿಗೆಯೊಳಗೆ ತೆಗೆದಿಡಲು ಅವಕಾಶ ಕೊಡು. ನೀನೇ ಇದನ್ನು ಆಸ್ಪತ್ರೆಗೆ ತಲುಪಿಸಿಬಿಡು."

ಅನಂತರ ಫೆರಾರೋ ರೇಡಿಯಮ್ಮು ಬ್ಯಾಟರಿಯನ್ನು ಮೊದಲಿನಂತೆ ಪೆಟ್ಟಿಗೆಯೊಳಗಿಟ್ಟು ಬೀಗ ಹಾಕಿದನು. ಬ್ಲೇಕನ ಸಹಾಯದಿಂದ ಸರ್ ಕಥವರ್ಟನನ್ನು ಎತ್ತಿ ಹಾಸಿಗೆಯ ಮೇಲೆ ಮಲಗಿಸಿದನು ಇಷ್ಟು ಹೊತ್ತಿಗೆ ವಿಂಟನ್ ಮತ್ತು ರಾಜರ್ಸ್ ಇವರಿಬ್ಬರೂ ಕಣ್ಣನ್ನು ಉಜ್ಜಿಕೊಳ್ಳುತ್ತ ಅಲ್ಲಿಗೆ ಬಂದರು. ಎಮೋನಿಯಾ ಔಷಧವು ಅವರ ಮೂರ್ಛೆಯನ್ನು ದೂರಪಡಿಸಿದ್ದಿತು.

ರೇಡಿಯಮ್ಮು ಪೆಟ್ಟಿಗೆಯನ್ನು ತನ್ನ ಮೋಟಾರಿನೊಳಗಿಡಿಸಿ ಬ್ಲೇಕನು ಫೆರಾರೋನನ್ನು ಕುರಿತು ಹೇಳಿದನು:—''ಒಳ್ಳೇದು. ಫೆರಾರೋ! ನೀನಿನ್ನು ನಿನ್ನ ಮೋಟಾರನ್ನು ಹತ್ತಿ ಕುಳಿತುಕೋ. ನಿನ್ನ ಶರತ್ತಿನಂತೆ ನಿನ್ನ ನವೀನ ಆವಿಷ್ಕಾರದ ರಹಸ್ಯವನ್ನು ಹೇಳಿ ಹೊರಡು.''

ಫೆರಾರೊ—“ಹೊರಟೆನು. ಇನ್ನು ಅರ್ಧಗಂಟೆಕಾಲ ಅವಕಾಶವಿರಬೇಕು. ಇನ್ನು ಆ ರಹಸ್ಯವನ್ನು ಕೇಳು—ನನ್ನ ಇಂಜೆಕ್ಷನ್ ವಸ್ತುವಿನ ತಯಾರಿಕೆಯ ವಿಧಾನವನ್ನು ಬರೆದಿಟ್ಟಿರುವ ಕಾಗದವು ಯಾರ ಲಕ್ಷ್ಯವೂ ಹೋಗದಿರುವಂತಹ ಸ್ಥಳದಲ್ಲಿ ಇಡಲ್ಪಟ್ಟಿದೆ. ವೆಂಟ್‌ವರ್ತ್ ಆಸ್ಪತ್ರೆಯಲ್ಲಿ ಡಾಕ್ಟರ್ ಗ್ರೇಯ ಮೇಜಿನ ಡ್ರಾದೊಳಗೇ ಆ ಕಾಗದವನ್ನು ಅಡಗಿಸಿಟ್ಟಿರುವೆನು ಸರಿ. ಎಲ್ಲವನ್ನೂ ಹೇಳಿಯಾಯಿತಷ್ಟೆ? ಡಾಕ್ಟರ್ ಸ್ಟೆಂಟನರಿಗೆ ನನ್ನ ನಮಸ್ಕಾರವನ್ನು ತಿಳಿಸುವದಲ್ಲದೆ, ರೇಡಿಯಮ್ಮ ವಿಷಯದಲ್ಲಿ ನಾನವರಿಗಿತ್ತ ಕಷ್ಟಕ್ಕಾಗಿ ಕ್ಷಮೆಯನ್ನು ಯಾಚಿಸಿದೆನೆಂದು ತಿಳಿಸಬೇಕು. ರತ್ನಗಳ ಬಣ್ಣವನ್ನು ಬದಲಾಯಿಸಿ ಅದನ್ನು ಸ್ಥಿರಪಡಿಸಲು, ಸುಮಾರು ಇಪ್ಪತ್ತುನಾಲ್ಕು ಗಂಟೆಯ ಕಾಲ ರೇಡಿಯಮ್ಮನ್ನು ನನ್ನ ಹತ್ತಿರ ಇಟ್ಟುಕೊಳ್ಳಬೇಕಾಯಿತು. ಈಗ ನಾನು ಆ ವಜ್ರಗಳನ್ನು ಅನುಭವಿಸುವದಕ್ಕಾಗಿ ಹೋಗುತ್ತೇನೆ. ನಿನ್ನ ಸಂದರ್ಶನದಿಂದ ಸಂತೋಷವಾಯಿತು. ಸರಿ. ಮಿಸ್ಟರ್ ಬ್ಲೇಕ್! ನಮಸ್ಕಾರಗಳು. ಹೋಗಿಬರುವೆನು.”

ನೋಡುತ್ತಿದ್ದಂತೆಯೇ ಡಾಕ್ಟರ್ ಫೆರಾರೋ ತನ್ನ ಮೋಟಾರಿನೊಡನೆ ಅಲ್ಲಿಂದ ಕ್ಷಣದೊಳಗೆ ಮಾಯವಾದನು

ಬ್ಲೇಕನು ಒಂದು ಸಲ ಗಡಿಯಾರದ ಕಡೆಗೆ ನೋಡಿ, ಕೂಡಲೆ ಮೋಟಾರನ್ನು ಹತ್ತಿ ವೆಂಟ್‌ವರ್ಥ ಆಸ್ಪತ್ರೆಗೆ ಹೊರಟನು. ಮೋಟಾರು ಬಲು ವೇಗದಿಂದ ಹೋಗುತ್ತಿದ್ದಿತು. ಫೆರಾರೋವಿಗೆ ಕೊಟ್ಟಿದ್ದ ಮಾತನ್ನು ಅಕ್ಷರಶಃ ಪಾಲಿಸಲು ಬ್ಲೇಕನು ಸಿದ್ಧನಾಗಿದ್ದನು; ಆದರೆ ತಾನು ಕೊಟ್ಟ ಅವಕಾಶಕ್ಕಿಂತ ಹೆಚ್ಚಿಗೆ ಒಂದು ಕ್ಷಣವನ್ನೂ ಮತ್ತವನಿಗೆ ಕೊಡಲಾರದವನಾಗಿದ್ದನು.

## (೧೪)

ಬ್ಲೇಕನ ಮೋಟಾರು ಈ ವೇಳೆಯಲ್ಲಿ ಬಲು ಚುರುಕಿನಿಂದ ಸಮುದ್ರದ ಕಡೆಗೆ ಹೋಗುತ್ತಿದ್ದಿತು. ಸಮುದ್ರದ ತೀರವನ್ನು ತಲ್ಪಿದಾಗ ಸೂರ್ಯಾಸ್ತವಾಗಿ ಹೋಗಿದ್ದಿತು. ಕತ್ತಲೆಯು ನಾಲ್ಕೂ ದಿಕ್ಕಿನಲ್ಲಿ ತನ್ನ ಪ್ರಭಾವವನ್ನು ಬೀರಿದ್ದಿತು.

ಬ್ಲೇಕನು ತನ್ನ ಜೀವನ ಕಾಲದಲ್ಲಿ ಇದುವರೆಗೆ ಎಷ್ಟೋ ಸಾರಿ ಡಾಕ್ಟರ್ ಫೆರಾರೋವನ್ನು ಎದುರಿಸಿದ್ದನು; ಆದರೆ ಪ್ರತಿ ಸಲವೂ ಆತನು ಆ ಸಮುದ್ರದ ದಾರಿಯಿಂದಲೇ ಓಡಿ ಹೋಗಿದ್ದನು. ಪ್ರತಿಸಾರಿಯೂ ಯಾವ ಸ್ಥಳದಿಂದ ಅವನು ಓಡಿಹೋಗುವ ಅಭ್ಯಾಸವಿದ್ದಿತೋ, ಸಮುದ್ರತೀರದ ಆ ಸ್ಥಳಕ್ಕೆ ಈಗ

ಬ್ಲೇಕನು ಬಂದಿದ್ದನು. ಆ ಕಡೆಗೆ ಫೆರಾರೋವಿನ ಮೋಟಾರು ಬಂದಿರುವ ಚಿಹ್ನೆಯನ್ನೂ ಕೂಡ ಬ್ಲೇಕನು ಕಂಡಿದ್ದನು. ಫೆರಾರೋ ಯಾವಾಗಲೂ ತಾನು ಓಡಿಹೋಗತಕ್ಕ ಕ್ರಮದಲ್ಲಿ ಯಾವ ಬದಲಾವಣೆಯನ್ನು ಮಾಡದಿರುತ್ತಿದ್ದರೂ, ತನ್ನ ಸಾಹಸಗಳಲ್ಲಿ ಮಾತ್ರ ಹೊಸ ಹೊಸದಾದ ಯಾವುದಾದರೂ ಆವಿಷ್ಕಾರಗಳನ್ನು ಉಪಯೋಗಿಸದಿರುತ್ತಿರಲಿಲ್ಲ.

ಎಂದಿನಂತೆ ಈ ಸಲವೂ ಫೆರಾರೊ ಸಮುದ್ರ ಮಾರ್ಗದಿಂದಲೇ ಓಡಿಹೋಗಬಹುದೆಂದು ತಿಳಿದಿದ್ದರೂ ಕೂಡ ಯಾವುದಾದರೂ ಹಡಗನ್ನು ಹತ್ತಿ ಓಡಿಹೋಗುವಷ್ಟು ಅವಕಾಶವು ಈ ಸಾರಿ ಅವನಿಗೆ ದೊರೆಯಲಾರದೆಂದು ಬ್ಲೇಕನು ಅರಿತಿದ್ದನು.

ಬ್ಲೇಕನು ದೂರದಲ್ಲಿಯೇ ಮನೆಯೊಂದನ್ನು ನೋಡಿದನು. ಮನೆಯ ಮುಂಭಾಗದಲ್ಲಿ ಜನರಿರುವದು ಕಾಣಿಸಿತು. ನಿಶ್ಚಯವಾಗಿಯೂ ಫೆರಾರೋ ಇಲ್ಲಿಯೇ ಇರುವನೆಂದು ಬ್ಲೇಕನು ನಿಶ್ಚಯಿಸಿದನು; ಆದರೆ ಎದುರಿಗೆ ಬೆಳಕು ಇರುವಾಗ ಆ ಮನೆಯನ್ನು ಸಮೀಪಿಸುವ ಧೈರ್ಯವು ಬ್ಲೇಕನಿಗೆ ಆಗಲಿಲ್ಲ.

ಫೆರಾರೋ ಎಂದರೆ ಒಬ್ಬ ಭಯಂಕರ ಮನುಷ್ಯನಿದ್ದನು. ಯುದ್ಧರಂಗಕ್ಕಿಳಿದಾಗ ಅತ್ತಿತ್ತ ನೋಡದೆ, ಅವನು ಪಿಸ್ತೂಲಿನಿಂದ ಗುಂಡಿನ ಸುರಿಮಳೆಯನ್ನು ಕರೆಯಲು ತತ್ಪರನಿದ್ದನು. ಇದಕ್ಕಾಗಿ ಬ್ಲೇಕನು ದೂರದಿಂದಲೇ ಕತ್ತಲೆಯಲ್ಲಡಗಿ ಮೆಲ್ಲಮೆಲ್ಲನೆ ಕತ್ತಲೆಯಲ್ಲಿಯೇ ಹೆಜ್ಜೆಯಿಡುತ್ತಾ ಮನೆಯ ಒಂದು ಪಾರ್ಶ್ವಕ್ಕೆ ಬಂದು ದೂರದಲ್ಲಿಯೇ ಪೊದೆಗಳ ಹಿಂದೆ ಅವಿತುಕೊಂಡು, ಬಂಗ್ಲೆಯ ಮೇಲೆ ತೀಕ್ಷ್ಣದೃಷ್ಟಿಯಿಟ್ಟು ನೋಡತೊಡಗಿದನು ಆದರೆ ಕತ್ತಲೆಯು ದಟ್ಟವಾಗಿ ಕವಿಯುತ್ತಾ ಬಂದುದರಿಂದ, ಫೇರಾರೋವನ್ನು ಸೆರೆಹಿಡಿಯುವ ಆತನ ಆಶೆಯು ಕುಗ್ಗುತ್ತಾ ಬಂದಿತು.

ಬ್ಲೇಕನು ಇನ್ನೂ ಇಂತಹ ಆಲೋಚನೆಯಲ್ಲಿ ಮುಳುಗಿರುವಾಗಲೆ ನಿಸ್ತಬ್ಧವಾದ ಆ ಬಂಗ್ಲೆಯ ಒಂದು ಉಲ್ಲಾರದಿಂದ ಥಟ್ಟನೆ ಹೊಗೆಯಂತಹ ಒಂದು ತೆಳುವಾದ ರೇಖೆಯು ಆಕಾಶದ ಕಡೆಗೆ ಹಾರತೊಡಗಿತು. ಬ್ಲೇಕನು ಅದನ್ನು ಕಂಡು ಇದೇನೋ ಒಂದು ಸಂಕೇತವೆಂದು ಭಾವಿಸಿ, ಹೇಗಾದರೂ ಈ ವೇಳೆಯಲ್ಲಿ ತಾನು ಮುಂದುವರಿಯುವುದು ಅಗತ್ಯವೆಂದು ನಿರ್ಧರಿಸಿದನು. ಗಿಡಗಳ ಪೊದೆಗಳ ಹಿಂದೆ ಅಡಗುತ್ತಾ-ಅಡಗುತ್ತಾ ಬಂಗ್ಲೆಯ ಉದ್ಯಾನವನ್ನು ತಲ್ಪಿ ಅದರ ಗೋಡೆಯನ್ನು ಮೆಲ್ಲನೆ ಹತ್ತಿ ಒಳಗಿಳಿದು ಮುಂದುವರಿದನು. ಇನ್ನು ಬಂಗ್ಲೆಯು ಸುಮಾರು ಮುನ್ನೂರು ಗಜ ದೂರ ಮಾತ್ರ ಉಳಿಯಿತು; ಆದರೆ ಅಷ್ಟರೊಳಗೆ ಅಕಸ್ಮಾತ್ತಾಗಿ ಹತ್ತಿರದ ಪೊದೆಗಳಲ್ಲಿದ್ದ ಕೆಲವು ಹಕ್ಕಿಗಳು

ಕೂಗುತ್ತಾ, ರೆಕ್ಕೆ ಬಡಿಯುತ್ತಾ ಹಾರಿ ಹೋದವು. ಆ ಸಪ್ಪಳ ಕೇಳಿ ಬಂಗ್ಲೆಯೊಳಗಿದ್ದವರು ಹೊರಗೆ ಯಾರೋ ಬಂದಿರಬಹುದೆಂದು ಸಂದೇಹಿಸದೆ ಇರಲಾರರೆಂದು ಬ್ಲೇಕನು ಥಟ್ಟನೇ ಅರಿತನು; ಆದರೆ ಇನ್ನು ಮಾಡುವುದೇನು? ಕೂಡಲೆ ದಟ್ಟವಾದ ಒಂದು ಪೊದೆಯ ಹಿಂದಕ್ಕೆ ಸರಿದು ಅಡಗಿ ಕುಳಿತನು. ಮುಂದೇನು ನಡೆಯುವುದೆಂಬದನ್ನು ತಿಳಿಯಲು ಉಸಿರುಕಟ್ಟಿ ಬಂಗ್ಲೆಯ ಕಿಟಕಿಯ ಕಡೆಗೆ ನಿರೀಕ್ಷಿಸತೊಡಗಿದನು.

ಯಾರದ್ದೋ ತಲೆಯೊಂದು ಕಿಟಕಿಯಿಂದ ಹೊರಗೆ ಬಂದಿತು. ಸ್ವಲ್ಪ ಹೊತ್ತು ಆ ಮನುಷ್ಯನು ಉದ್ಯಾನದ ಮೇಲೆಲ್ಲ ದೃಷ್ಟಿಯನ್ನು ಪ್ರಸರಿಸಿ ನೋಡತೊಡಗಿದನು. ಬ್ಲೇಕನು ಆಗ ಸ್ವಲ್ಪವೂ ಅಲುಗದೆ, ಕುಳಿತಲ್ಲಿಯೇ ಶಬ್ದಮಾಡದೆ ಕುಳಿತನು.

ಇಷ್ಟರಲ್ಲಿ ಒಂದು ಮೋಟಾರ್ ಬೋಟಿನ ಚಗ್-ಚಗ್ ಎಂಬ ಶಬ್ದವು ಸಮುದ್ರದ ಕಡೆಯಿಂದ ಬರುತ್ತಿರುವದು ಬ್ಲೇಕನ ಕಿವಿಗೆ ಬಿದ್ದಿತು. ಫೆರಾರೊ ಓಡಿಹೋಗಲು ಇನ್ನೇನೂ ತಡವಿಲ್ಲವೆಂದು ಬ್ಲೇಕನು ಅರಿತನು. ಇನ್ನು ಈ ಸ್ಥಳದಲ್ಲಿ ಕ್ಷಣಕಾಲ ಕೂಡ ಸುಮ್ಮನೆ ಅಡಗಿ ಕುಳಿತಿರುವದು ತಪ್ಪೆಂದು ಅವನು ನಿಶ್ಚೈಸಿದನು.

ಕಿಟಕಿಯಲ್ಲಿ ತಲೆಹಾಕಿ ನೋಡುತ್ತಿದ್ದ ಮನುಷ್ಯನು ಸ್ವಲ್ಪಹೊತ್ತು ನಿಂತಿದ್ದು, ಅನಂತರ ಒಳಗೆ ನಡೆದನು. ಕಿಟಕಿಯೂ ಮುಚ್ಚಲ್ಪಟ್ಟಿತು. ಇನ್ನು ವಿಲಂಬಿಸಬಾರದೆಂದು ಭಾವಿಸಿ, ಬ್ಲೇಕನು ಅಲ್ಲಿಂದೆದ್ದು ಕತ್ತಲೆಯಿರುವ ಸ್ಥಳದಲ್ಲಿಯೇ ಮೆಲ್ಲಮೆಲ್ಲನೆ ಮುಂದುವರಿದು ಬಂಗ್ಲೆಯ ಹತ್ತಿರ ಹೋದನು. ತೆರೆದಿದ್ದ ಒಂದು ಕಿಟಕಿಯಹತ್ತಿರ ಮೆಲ್ಲನೆ ಹೋಗಿ ಒಳಗೆ ನೋಡಿದನು.

ಯಾರೋ ಇಬ್ಬರು ಮೇಜಿನ ಬಳಿಯಲ್ಲಿ ಕುಳಿತು, ಏನೋ ಮಾತನಾಡುತ್ತಿದ್ದರು; ಆದರೆ ಅವರಿಬ್ಬರೂ ಕೂಡ ಕುಳಿತಿದ್ದ ಕುರ್ಚಿಯೊಂದಿಗೆ ಕಟ್ಟಿಹಾಕಲ್ಪಟ್ಟಿದ್ದರು. ಅವರಿಬ್ಬರು ಇನ್ನ್ಯಾರೂ ಆಗಿರದೆ, ಗ್ರೇ ಮತ್ತು ಎಂಡರ್ಬಿ ಎಂದು ಬ್ಲೇಕನು ತಿಳಿದುಕೊಂಡನು; ಆದರೆ ಅವರ ಹಿಂಭಾಗದ ಕತ್ತಲಲ್ಲಿ ಯಾರು ನಿಂತಿದ್ದರೋ, ಅವರ್‍ಯಾರೆಂದು ತಿಳಿಯಲು ಸಾಧ್ಯವಾಗಲಿಲ್ಲ.

ಕತ್ತಲೆಯಲ್ಲಿ ನಿಂತಿದ್ದ ಆ ಮನುಷ್ಯನು ತನ್ನ ಎರಡು ಕೈಯಲ್ಲಿಯೂ ಎರಡು ಪಿಸ್ತೂಲುಗಳನ್ನು ಹಿಡಿದುಕೊಂಡು ಎದುರಿಗಿರುವ ದಿನ್ನೆಯ ಕಡೆಗೆ ನೋಡುತ್ತ, ತನ್ನ ಬಳಿಗೆ ಬಂದ ಇನ್ನೊಬ್ಬ ಮನುಷ್ಯನೊಂದಿಗೆ ಮಾತನಾಡುತ್ತಿದ್ದನು. ಇವನೇ ಫೆರಾರೋ ಇರಬಹುದೆ? ಎಂದು ಬ್ಲೇಕನು ಯೋಚಿಸುತ್ತಿದ್ದನು. ಇತ್ತ ಸಮುದ್ರದಲ್ಲಿಯ ಮೋಟಾರ್ ಬೋಟಿನ ಶಬ್ದವು ಕ್ರಮವಾಗಿ

ಹತ್ತಿರಕ್ಕೆ ಬಂದಿತು; ಮತ್ತು ಚಗ್-ಚಗ್ ಶಬ್ದವೂ ನಿಂತಿತು.

"ಆದರೆ ಸರ್ದಾರ್! ನಾನು ನೋಡಿದಮಟ್ಟಿಗೆ ಹೇಳುವುದಾದರೆ, ಆ ಪಕ್ಕದಲ್ಲಿ ಒಬ್ಬ ಮನುಷ್ಯನ ನೆರಳನ್ನು ನಾನು ನಿಶ್ಚಯವಾಗಿಯೂ ನೋಡಿದೆನು" ಎಂದು ಒಬ್ಬನು ಹೇಳಿದುದು ಬ್ಲೇಕನಿಗೆ ಕೇಳಿಸಿತು. ಅದಕ್ಕುತ್ತರವಾಗಿ ಇನ್ನೊಬ್ಬನು ಏನು ಹೇಳಿದನೋ ಅದನ್ನು ಮಾತ್ರ ಬ್ಲೇಕನು ಸರ್ವಥಾ ಕೇಳಲಾಗಲಿಲ್ಲ; ಆದರೆ ಅದೇ ವೇಳೆಯಲ್ಲಿ ಆ ಮನುಷ್ಯನು ಥಟ್ಟನೆ ನೆಗೆದು, ಸಮುದ್ರದ ಕಡೆಯಿರುವ ಕಿಟಕಿಯಿಂದ ಹೊರಗೆ ಹಾರಿದನು. ಇನ್ನೊಬ್ಬನು ಪಕ್ಕದ ಕೋಣೆಯೊಳಗೆ ಓಡಿಹೋದನು.

ಕೆಲಸ ಕೆಟ್ಟಿತೆಂದು ಭಾವಿಸಿ ಬ್ಲೇಕನು ಕೂಡಲೆ ಕಿಟಕಿಯಿಂದ ಒಳಗೆ ಹತ್ತಿ ಆ ಕಡೆಗೇ ಓಡಿದನು. ಹೊರ ದಿನ್ನೆಯಲ್ಲಿ ಆಗ ಇನ್ನೂ ಕೆಲವರು ನಿಂತಿರುವದು ಬ್ಲೇಕನಿಗೆ ಕಾಣಿಸಿತು. "ಕೈ ಮೇಲೆತ್ತು" ಎಂದೆನ್ನುತ್ತ ಬ್ಲೇಕನು ಓಡಿ ಬಂದನು; ಆದರೆ ಬ್ಲೇಕನ ಮಾತನ್ನು ಯಾರೂ ಲಕ್ಷಿಸದೆ, ಕತ್ತಲೆಯಲ್ಲಿ ಮೋಟಾರ ಬೋಟಿದ್ದೆಡೆಗೆ ಚುರುಕಿನಿಂದ ಓಡಿಹೋದರು. ಎರಡನೆಯ ಕ್ಷಣದಲ್ಲಿಯೇ ಬ್ಲೇಕನ ಪಿಸ್ತೂಲಿನಿಂದ ಹೊರಟ ಒಂದು ಗುಂಡು ಅವರೊಳಗೊಬ್ಬನ ಕಾಲಿಗೆ ತಗಲಿತು. ಆದರೂ ಆತನು ಕುಂಟುತ್ತ ಕುಗ್ಗುತ್ತ ಉಳಿದವರೊಂದಿಗೆ ಫರಾರಿಯಾದನು.

ಕೂಡಲೆ ಪುನಃ ಮೋಟಾರ್‌ಬೋಟಿನ ಚಗ್-ಚಗ್ ಶಬ್ದವಾಗಹತ್ತಿರುವುದು ಬ್ಲೇಕನಿಗೆ ಕೇಳಿಸಿತು. ಎಲ್ಲರೂ ಫರಾರಿಯಾದರೆಂದು ಅರಿತು ಬ್ಲೇಕನು ಪುನಃ ಬಂಗ್ಲೆಗೆ ಬಂದನು. ಬಂಗ್ಲೆಯೊಳಗೆ ಇನ್ನೂ ಕೆಲವರು ಸಿಗಬಹುದೆಂದು ಭಾವಿಸಿ, ಹೊಕ್ಕು ನೋಡಿದನು; ಆದರೆ ಅಷ್ಟರೊಳಗೆ ಉದ್ಯಾನದ ಒಂದು ಪಾರ್ಶ್ವದಲ್ಲಿ ಒಂದು ಶಬ್ದವಾಗುತ್ತಿರುವುದು ಕೇಳಿಸಿತು. ಮರುಕ್ಷಣದಲ್ಲಿಯೇ ಒಂದು ಚಿಕ್ಕ ವಿಮಾನವು ಶಬ್ದಮಾಡುತ್ತ ಆಕಾಶದ ಕಡೆಗೆ ಹಾರಿಹೋಯಿತು.

ಫೆರಾರೋ ಕೊನೆಗೂ ತನ್ನ ದುರಿಗೆ ಮಾಯವಾಗಿ ಹೋದನೆಂದು ಭಾವಿಸಿ ಬ್ಲೇಕನು ಈಗ ಡಾಕ್ಟರ್ ಗ್ರೇಯ ಹತ್ತಿರ ಬಂದು ಹೇಳಿದನು: "ಹತಭಾಗಿಯೇ! ನನ್ನ ಮಾತನ್ನು ಲಕ್ಷಿಸದೆ ಇದ್ದುದಕ್ಕಾಗಿ ನೀನು ಈ ಸಂಕಟಕ್ಕೆ ಸಿಲುಕಿದಿ."

ಬ್ಲೇಕನು ಅವರಿಬ್ಬರನ್ನೂ ಬಿಡಿಸಿ ಅವರೊಂದಿಗೆ ಲಂಡನ್ನಿಗೆ ಹಿಂದಿರುಗಿದನು. ದಾರಿಯಲ್ಲಿ ಬ್ಲೇಕನು ಡಾಕ್ಟರ್ ಮೇಡೀನಾ ಅಥವಾ ಡಾಕ್ಟರ್ ಫೆರಾರೋ ಮಾಡಿದ್ದ ಭೀಷಣಸಾಹಸವನ್ನೆಲ್ಲ ಅವರಿಬ್ಬರಿಗೆ ವಿವರಿಸಿ ಹೇಳಿದನು.

o o o o o

ಬಂಗ್ಲೆಯೊಳಗೆ ಮಲಗಿದ್ದ ಟಿಂಕರನು ಧಿಗ್ಗನೆ ಎದ್ದು ಹಾರ್ಕರನನ್ನು ಎಬ್ಬಿಸುತ್ತ ಹೇಳಿದನು—"ಏಳಿರಿ-ಏಳಿರಿ ಬೇಗ. ಯಾವುದೋ ಮೋಟಾರ್ ಬೋಟು ಇಲ್ಲಿಗೇ ಬರುತ್ತಿರುವಂತೆ ಶಬ್ದ ಕೇಳಿಸುತ್ತದೆ."

ಕಣ್ಣನ್ನು ತಿಕ್ಕಿಕೊಂಡು ಏಳುತ್ತ ಹಾರ್ಕರನು ಹೇಳಿದನು:-"ಉಹುಂ, ಅಲ್ಲ. ನನಗೇನೋ ಯಾವುದೋ ವಿಮಾನವು ಬರುತ್ತಿರುವ ಶಬ್ದದಂತೆ ತೋರುತ್ತದೆ; ಆದರೆ ಈ ದಟ್ಟವಾದ ಕತ್ತಲೆಯಲ್ಲಿ ಅದು ಹೇಗೆ ಬರುತ್ತಿರುವುದೋ!"

ಟಿಂಕರ್—"ನಿಮಗೆ ಕೇಳಿರುವುದೂ ನಿಜವಿರಬಹುದು; ಆದರೆ ಈಗ ಒಂದು ಮೋಟಾರ್‌ಬೋಟೂ ಕೂಡ ಇಲ್ಲಿಗೆ ಬರುತ್ತಿರುವುದು ನಿಜ. ಹುಂ, ನಾವಿನ್ನು ಚುರುಕು ಮಾಡೋಣ. ವಿಲಂಬವಾದರೆ ಆ ಮೋಟಾರ್ ಬೋಟು ನಮ್ಮ ಕೈತಪ್ಪಿಹೋಗಬಹುದು."

ಎಲ್ಲರೂ ಮುಂದಿನ ಕಾರ್ಯಕ್ಕೆ ಸಜ್ಜಾಗಿ ನಿಂತರು. ಅಕಸ್ಮಾತ್ತಾಗಿ ಆಕಾಶದಿಂದ ಒಂದು ಶಬ್ದವಾಗಿ ಧಗಧಗಿಸುತ್ತಿರುವ ಯಾವುದೋ ಒಂದು ಅಗ್ನಿಜ್ವಾಲೆಯು ಆ ಮೇಲಿನಿಂದ ಬಂದು ಭೂಮಿಯ ಮೇಲೆ ಬಿದ್ದಿತು. ದೂರದಿಂದ ಬಂದು ಬಿದ್ದಿದ್ದರೂ ಅದು ನೊಂದಿ ಹೋಗದೆ, ಬಹು ಹೊತ್ತಿನ ವರೆಗೆ ಹಾಗೆಯೇ ಉರಿಯುತ್ತಿದ್ದಿತು. ಆಕಾಶದಲ್ಲಿ ಹಾರಾಡುತ್ತಿದ್ದ ವಿಮಾನದ ಕೆಳಗಡೆ ಒಂದು ಕೆಂಪು ಬೆಳಕು ನೇತಾಡುತ್ತಿದ್ದಿತು. ಅದು ಬಹು ದೂರದ ವರೆಗೆ ಹರಡಿ, ವಿಮಾನಕ್ಕೆ ದಾರಿಯನ್ನು ತೋರಿಸುತ್ತಿದ್ದಿತು. ವಿಮಾನವು ಆಕಾಶದಲ್ಲಿ ಹಾರುತ್ತ ಮೋಟಾರ್ ಬೋಟಿನ ಮೇಲೆ ಬಂದು ಸ್ವಲ್ಪ ಹೊತ್ತು ಹಾರಾಡಿ, ಬಲು ವೇಗದಿಂದ ಸಮುದ್ರದ ಮೇಲೆ ಹೊರಟು ಹೋಯಿತು.

ಇಷ್ಟರೊಳಗೆ ಟಿಂಕರನೂ, ಹಾರ್ಕರನೂ ತಮ್ಮ ಸಂಗಡಿಗರೊಂದಿಗೆ ದಡದಲ್ಲಿದ್ದ ತಮ್ಮ ಮೋಟಾರ್ ಬೋಟನ್ನು ಹತ್ತಿ, ಎದುರುಕಡೆಯಿಂದ ಮುಂದಕ್ಕೆ ಹೋಗುತ್ತಿದ್ದ ಆ ಮೋಟಾರ್ ಬೋಟನ್ನು ಬೆಂಬತ್ತಿ ಹೊರಟರು. ಸ್ವಲ್ಪ ಹೊತ್ತಿನ ಒಳಗೇ ಇವರ ಮೋಟಾರ್ ಬೋಟು ಅದನ್ನು ಸಮೀಪಿಸಿತು. ಕೂಡಲೆ ಹಾರ್ಕರನು ಆ ಬೋಟಿನ ಮೇಲೆ ಗುಂಡಿನ ಮಳೆಯನ್ನು ಸುರಿಯಿಸತೊಡಗಿದನು; ಆದರೆ ಕೂಡಲೆ ಆ ವಿಮಾನವು ಪುನಃ ಹಿಂದಿರುಗಿ ವೇಗವಾಗಿ ಕೆಳಗೆ ಬಂದಿತು. ವಿಮಾನದಿಂದ ಒಂದು ಉರಿಯುತ್ತಿರುವ ವಸ್ತುವು ಕೆಳಗೆ ಬಂದು ಇವರ ಮೋಟಾರ್ ಬೋಟಿನ ಹತ್ತಿರವೇ ನೀರಿನ ಮೇಲೆ ಬಿದ್ದಿತು. ಅದು ಬಿದ್ದೊಡನೆಯೇ ಸಮುದ್ರದ ನೀರೆಲ್ಲಾ ಅಲ್ಲೋಲಕಲ್ಲೋಲವಾಯಿತು. ಥಟ್ಟನೆ ಹಾರ್ಕರನ ಬಾಯಿಂದ ಹೊರಟಿತು.—"ಓಃ! ಅದು ಸಿಡಿಗುಂಡು. ಅಗೋ ನೋಡಿರಿ, ವಿಮಾನವು ಬಾಂಬನ್ನು ಚೆಲ್ಲುತ್ತಿದೆ."

ವಿಮಾನವು ಬಹಳ ಕೆಳಗೆ ಬಂದಿತು. ವಿಮಾನದೊಳಗಿನಿಂದ ಒಂದು ತೀಕ್ಷ್ಣವಾದ ಎಚ್ಚರಿಕೆಯು ಇವರಿಗೆ ಬಂದಿತು.-"ಹಿಂದಿರುಗಿ ಓಡಿರಿ. ಇಲ್ಲದಿದ್ದರೆ ಬಾಂಬು ನಿಮ್ಮನ್ನು ನುಚ್ಚುನೂರುಮಾಡಿ ಸಮುದ್ರದೊಳಗೆ ಮುಳುಗಿಸುವದು."

ಬೇರೆ ಗತಿ ಕಾಣದೆ ಇವರೆಲ್ಲರೂ ಕೂಡಲೆ ಹಿಂದಿರುಗಿದರು.

ಅತ್ತ ವಿಮಾನವೂ, ಮೋಟಾರ್ ಬೋಟೂ ಶಬ್ದಮಾಡುತ್ತ ಹೊರಟೇ ಹೋದವು.

z z z z

ಮಾಲಪಸನು ಹೇಳಿದನು--"ಈ ವಜ್ರಗಳು ನಿಜವಾಗಿದ್ದಿದ್ದರೆ ಇವುಗಳ ಬೆಲೆಯು ಒಂದು ಲಕ್ಷ ಪೌಂಡಿಗಿಂತಲೂ ಹೆಚ್ಚಾಗುತ್ತಿದ್ದಿತು."

ಬ್ಲೇಕ್—"ಮಿಸ್ಟರ್ ಶೀಡ್ಮನ್ನರ ಖಜಾನೆಯಿಂದ ಕದ್ದೊಯ್ದ ರತ್ನಗಳೇ ಇವು. ಇವುಗಳ ಬಣ್ಣವನ್ನು ರೇಡಿಯಮ್ಮಿನ ಕಿರಣಗಳ ಮೂಲಕವಾಗಿ ಮಾರ್ಪಡಿಸಲಾಗಿದೆ; ಆದರೆ ಈ ಬಣ್ಣವೇ ಸ್ಥಿರವಾಗಿ ನಿಲ್ಲಬಲ್ಲುದಲ್ಲವೇ ಡಾಕ್ಟರ್!"

ಡಾಕ್ಟರ್ ಗ್ರೇ—"ಹಾಗೆಂದೇ ನನ್ನ ಅಭಿಪ್ರಾಯವಿದೆ ಅದಲ್ಲದೆ ಈಗ ಇವುಗಳು ಕೃತ್ರಿಮವಾದವುಗಳೆಂದು ಹೇಗೆ ಹೇಳಲಾದೀತು? ನಿಶ್ಚಯವಾಗಿಯೂ ಇವುಗಳೀಗ ನಿಜವಾದ ವಜ್ರಗಳಾಗಿವೆ. ಇವುಗಳ ಬೆಲೆಯನ್ನು ನಿಶ್ಚಯವಾಗಿ ತಿಳಿಯಬೇಕೆಂದಿದ್ದರೆ, ಇವನ್ನು ನೀವು ನಿಮ್ಮ ಡೈಮಂಟ್ ಎಕ್ಸ್ಛೇಂಜಿಗೆ ಕಳುಹಿಸಬಹುದಲ್ಲವೇ ಮಾಲಪಸ್!"

ಶೀಡ್ಮನ್--"ಅವರು ಕಟ್ಟಿದ ಬೆಲೆಯನ್ನು ಒಪ್ಪಲು ನಾನು ಸಿದ್ಧನಿರುವೆನು. ಹಿಂದೆ ಇವುಗಳಿಗಿದ್ದ ಬೆಲೆಗಿಂತಲೂ ಈಗ ಬಹಳ ಹೆಚ್ಚಾಗಿರುವುದೇನೋ ನಿಜ. ಈ ಕಳವು ವಾಸ್ತವಿಕವಾಗಿ ಕೊನೆಗೆ ನನಗೆ ಹಿತಕರವಾಗಿಯೇ ಪರಿಣಮಿಸಿತು.

ಅವರೆಲ್ಲರೂ ಈಗ ಯಾರ್ಡಿನ ಒಂದು ಕೋಣೆಯಲ್ಲಿ ಕುಳಿತು ಮಾತಾಡುತ್ತಿದ್ದರು

ಶೀಡ್ಮನ್ನನು ಎದ್ದು ನಿಂತು ಗ್ರೇಯ ಮುಖವನ್ನು ನೋಡಿ ನಸುನಗುತ್ತಾ ಹೇಳಿದನು—"ಈ ಡಾಕ್ಟರ್ ಗ್ರೇಯವರ ಬುದ್ಧಿಬಲದಿಂದಲೇ ನನ್ನ ರತ್ನಗಳಿಗೆ ಈಗ ಬೆಲೆ ಏರಿತು; ಆದರೆ ಈ ಸುದ್ದಿಯು ಒಂದು ವೇಳೆ ನಾಲ್ಕೂಕಡೆಗೆ ಹರಡಿದರೆ, ನೀಲೀ ರತ್ನಗಳೂ ಕೂಡ ಹಳದೀ ರತ್ನಗಳಂತೆ ಅಗ್ಗವಾಗಿ ಬಿಡಬಹುದೆಂದು ನನಗನಿಸುತ್ತದೆ."

ಎಂದು ಹೇಳಿ ಶೀಡ್ಮನ್ನನು ಆ ವಜ್ರಗಳಲ್ಲಿಯು ಎಲ್ಲಕ್ಕಿಂತ ದೊಡ್ಡದಾದ ಮತ್ತು ಹೆಚ್ಚು ಬೆಲೆ ಬಾಳುವ ವಜ್ರವೊಂದನ್ನು ತೆಗೆದು ಗ್ರೇಗೆ ಕೊಡುತ್ತಾ ಹೇಳಿದನು—''ಡಾಕ್ಟರ್ ಗ್ರೆ! ದಯವಿಟ್ಟು ಇದನ್ನು ನಿಮ್ಮ ಮದುವೆಯ ಕೈ ಕಾಣಿಕೆಯಾಗಿ ಸ್ವೀಕರಿಸಿರಿ."

ಒಂದು ವಾರದ ನಂತರ ಟಪ್ಪಾಲಿನಿಂದ ಬ್ಲೇಕನಿಗೊಂದು ಕಾಗದ ಬಂದು ಅದರಿಂದ ಈ ಭೀಷಣ ಸಾಹಸವು ಕೊನೆಗಂಡಿತು.

ಕಾಗದದ ಬರವಣಿಗೆಯು ಈ ಮೇರೆಗೆ ಇದ್ದಿತು—''ಮಿಸ್ಟರ್ ಬ್ಲೇಕ್! ಈ ಸಾರೆ ನನ್ನ ಸಂಗಡಿಗರ ಕೆಲವು ಪ್ರಮಾದಗಳಿಂದ ನೀನು ಲಾಭವನ್ನು ಹೊಂದಿ ವಿಜಯಮಾಲಿಕೆಯನ್ನು ಧರಿಸಿದಿ. ಇರಲಿ. ಇನ್ನೊಂದು ಸಾರೆ ನಿನ್ನ ಗೃಧ್ರದೃಷ್ಟಿಯಿಂದ ತಪ್ಪಿಸಿಕೊಳ್ಳುವದಕ್ಕಾಗಿ ನಾನು ಮತ್ತೊಮ್ಮೆ ಹೊಸ ರೂಪ ಧರಿಸಿ ಬರಬೇಕಾಗುವದು. ಅದಕ್ಕಾಗಿ ಇನ್ನು ಎಷ್ಟೋ ಕಾಲ ವ್ಯರ್ಥಮಾಡ ಬೇಕಾಗಿ ಬಂದಿತು. ಆಗಲಿ. ಏನೂ ಹಾನಿ ಇಲ್ಲ. ಮುಂದಿನ ಸಾರೆ ಫಿಲಿಫೈನಿ ನಲ್ಲಿ ನಮ್ಮ ನಿಮ್ಮ ಸಂದರ್ಶನವಾಗುವದು. ಮಿಸ್ಟರ್ ಕಥವರ್ಟ್ ನಾವೆಲ್ಲ ರಿಗೆ ನನ್ನ ಪರವಾಗಿ ಕ್ಷಮೆಯನ್ನು ಕೇಳಿಬಿಡು. ಯಾರಿಗೆ ಏನೇ ಆಗಿದ್ದರೂ ಕೂಡ ನನ್ನ ಈ ನವೀನ ಆವಿಷ್ಕಾರದಿಂದ ಪ್ರಪಂಚಕ್ಕೊಂದು ದೊಡ್ಡ ಉಪ ಕಾರವಾದಂತಾಯಿತು. ಇತಿ ನಿನ್ನ ಫೆರಾರೊ."

ಟಿಂಕರನ ಕಡೆ ನೋಡುತ್ತ ಬ್ಲೇಕನು ಹೇಳಿದನು—''ಅವನ ಮೆದುಳು ಎಂದಿಗೂ ಸರಿಯಾಗಲಾರದು."

ಇತಿ ಶಂ ।

ಸಂಪೂರ್ಣ.

## ಫಿರಂಗಿಗಳ ಉತ್ಪಾತ

ಲೇಖಕ, ಭಿ. ಪ. ಕಾಳೆ. ಫಿರಂಗಿ ಪಾದ್ರಿಗಳು ಶಹಾಜಹಾನ ಬಾದಶಹನ ಕಾಲದಲ್ಲಿ ನಮ್ಮ ಭಾರತೀಯರನ್ನು ಎಷ್ಟು ಪರಿಯಿಂದ ಹಿಂಸಿಸುತ್ತಿದ್ದರು, ಮೊಗಲರ ದರ್ಬಾರ, ಅಂತಃಪುರದೊಳಗಿನ ಅನನ್ವಿತ ಕೃತ್ಯ ಇವುಗಳು ಇದರಲ್ಲಿ ಚೆನ್ನಾಗಿ ಬಣ್ಣಿಸಲ್ಪಟ್ಟವೆ. ಡೆಮ್ಮಿ ಪುಟ ೧೮೦. ಬೆಲೆ ೧ ರೂಪಾಯಿ

## ಭಗವಾನ್‌ದಾಸ

ಲೇಖಕ ಭಿ. ಪ. ಕಾಳೆ, ಪುಟ ೧೮೮ ಇದೊಂದು ಸುಂದರವಾದ ಪತ್ತೇದಾರೀ ಕಾದಂಬರಿಯು. ರಹಸ್ಯವನ್ನು ತಿಳಿಯಬೇಕಾದರೆ ಎಷ್ಟು ಮಾರ್ಮಿಕತೆ ಬೇಕೆಂಬುದನ್ನು ತಿಳಿಸುವದಲ್ಲದೆ, ಪ್ರಾಯದ ಸ್ತ್ರೀಯರು ವಿದ್ಯಾಭ್ಯಾಸದ ನೆವದಿಂದ ಪಟ್ಟಣವನ್ನು ಸೇರಿ ಹೇಗೆ ಶೀಲಭ್ರಷ್ಟರಾಗುವರೆಂಬದನ್ನೂ ಇದು ಬಹು ಸರಸವಾಗಿ ಬೋಧಿಸುತ್ತದೆ. ೨ ನೇ ಆವೃತ್ತಿ ಬೆಲೆ ೧ ರೂ

## ಸದ್ಗುಣಿ ಕಮಲಾ

(೨ ನೇ ಆ.) ಲೇಖಕ ವೀರಪ್ಪ ರುದ್ರಪ್ಪ ಜಡಿ, ಪುಟ ೧೨೮ ಇದೊಂದು ಮನೋಹರವಾದ ಕಾದಂಬರಿ. ನೀಚರಾದ ಅಣ್ಣ-ತಮ್ಮಂದಿರು ಎಷ್ಟು ಬಗೆಯಿಂದ ಕಾಡಿದರೂ, ಸದ್ಗುಣಿಗಳು ಸಹನ ಮಾಡಿ, ಕಡೆಗೆ ಹೇಗೆ ಕಲ್ಯಾಣವನ್ನು ಹೊಂದುವರೆಂಬದು ಈ ಕಥಾನಕದಲ್ಲಿ ವಿವರಿಸಿದೆ. ಬೆಲೆ ೧ ರೂ.

## ಜಕಣಾಚಾರ್ಯ

(೨ ನೇ ಆವೃತ್ತಿ) ಲೇಖಕ ಶಂ. ಅ. ಕುಲಕರಣಿ ಪುಟ ೧೮೦. ಶಿಲ್ಪಿಗರ ಸಮ್ರಾಟನಾದ ಜಕಣಾಚಾರ್ಯನಿಗೆ ಸಂಬಂಧಿಸಿದ ಕಾದಂಬರಿಯು. ಅತ್ಯುತ್ತಮವಾಗಿದೆ ಬೆಲೆ ೧೪ ಆಣೆ

## ಸಂತ ತುಕಾರಾಮ

(೨ ನೇ ಆ.) ಲೇಖಕ ವಾಸುದೇವಾಗ್ರಜ ಪುಟ ೧೫೨ ಶ್ರೀ ಪಾಂಡುರಂಗನ ಪರಮ ಭಕ್ತ ಶಿಖಾಮಣಿಯಾದ ಸಂತ ತುಕಾರಾಮನ ದಿವ್ಯ ಚರಿತ್ರವು. ಭಕ್ತಿಪೂರ್ಣವೂ ವೈರಾಗ್ಯಪರವೂ ಇರುವದು. ಬೆಲೆ ೧ ರೂ.

## ಜ್ವರ ಪ್ರಕರಣ

ಅನುವಾದಕ, ಭಿ. ಪ. ಕಾಳೆ. ಡೆಮ್ಮಿ ಪುಟ ೨೦೮. ಬೆಲೆ ೧ ರೂ.

ಸರ್ವ ಬೇನೆಗಳಿಗೂ ಮೂಲವಾದ ಜ್ವರದ ವಿವರಣ, ನಿದಾನ, ದೇಶೀ ಹಾಗು ವಿದೇಶಿ ಔಷಧಗಳನ್ನೊಳಗೊಂಡ ವಿಸ್ತೃತವಾದ ಈ ವೈದ್ಯಕೀಯ ಪುಸ್ತಕವನ್ನು ಪ್ರತಿಯೊಬ್ಬನೂ ಸಂಗ್ರಹಿಸಲು ತಕ್ಕದ್ದಾಗಿದೆ.

ವಿಳಾಸ:—ಶ್ರೀಶೇಷಾಚಲ ಗ್ರಂಥಮಾಲೆ, ಆನಂದವನ, ಡಿ ಧಾರವಾಡ